ಶನಿವಾರ, ಅಕ್ಟೋಬರ್ 4, 2025| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಿಮ್ರನ್‌ಗೆ ಚಿನ್ನ

ನವದೆಹಲಿಯಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 100 ಮೀಟರ್ಸ್ ಟಿ12 (ದೃಷ್ಟಿದೋಷ) ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಸಿಮ್ರನ್ ಸಂಭ್ರಮ





ಕೈಚಳಕ...

ಬೆಂಗಳೂರಿನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ನಡೆದ 'ಗಾಂಧಿ ಸ್ಮೃತಿ ಸಂಗೀತೋತ್ಸವ'ದಲ್ಲಿ ಮಾಸ್ಟರ್ ಪ್ರದ್ಯುಮ್ನ ಕರ್ಪೂರ್ ತಬಲಾ ಕಾರ್ಯಕ್ರಮ ನೀಡಿದರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ

ಇಂದಿನಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ

ಎಷ್ಟು ಮನೆಗಳು?

50,57,469 ಜಿಬಿಎ ವ್ಯಾಪ್ತಿಯಲ್ಲಿರುವ ಒಟ್ಟು ಮನೆಗಳು

14,65,684 ಪಶ್ಚಿಮ ನಗರ ಪಾಲಿಕೆಯ 64 ವಾರ್ಡ್ ವ್ಯಾಪ್ತಿಯ ಮನೆಗಳು

10,94,793 ದಕ್ಷಿಣ ನಗರ ಪಾಲಿಕೆಯ 34 ವಾರ್ಡ್ ವ್ಯಾಪ್ತಿಯ ಮನೆಗಳು

10,22,926 ಉತ್ತರ ನಗರ ಪಾಲಿಕೆಯ 41 ವಾರ್ಡ್ ವ್ಯಾಪ್ತಿಯ ಮನೆಗಳು

9,12,713 ಪೂರ್ವ ನಗರ ಪಾಲಿಕೆಯ 17 ವಾರ್ಡ್ ವ್ಯಾಪ್ತಿಯ ಮನೆಗಳು

5,61,353 ಕೇಂದ್ರ ನಗರ ಪಾಲಿಕೆಯ 42 ವಾರ್ಡ್ ವ್ಯಾಪ್ತಿಯ ಮನೆಗಳು

17,500 ಸಮೀಕ್ಷೆದಾರರಿಗೆ ತರಬೇತಿ

34 ನೋಡಲ್ ಅಧಿಕಾರಿಗಳಾಗಿ ಕೆಎಎಸ್ ಅಧಿಕಾರಿಗಳು

15ರಿಂದ 20 ಸಮೀಕ್ಷೆದಾರರಿಗೆ ಒಬ್ಬ ಉಪ ಮೇಲ್ವಿಚಾರಕ

ಎಲ್ಲಾ ರೀತಿಯ ತಯಾರಿ ಪೂರ್ಣ: ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯವನ್ನು ಅಕ್ಟೋಬರ್ 4ರಿಂದ ಆರಂಭಿಸಲಾಗುತ್ತದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ವರ್ಚ್ಯುವಲ್ ಮೂಲಕ ಶುಕ್ರವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.



ಸಮೀಕ್ಷೆ ನಡೆಸಲು ವಿವಿಧ ಇಲಾಖೆಗಳಿಂದ ನಿಯೋಜಿಸಲಾದ ಸಮೀಕ್ಷಾದಾರರಿಗೆ ಆಯಾ ನಗರ ಪಾಲಿಕೆಗಳಲ್ಲಿ ಎರಡು ಬಾರಿ ತರಬೇತಿ ನೀಡಲಾಗಿದ್ದು, ಸಮೀಕ್ಷಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಆಯುಕ್ತರ ಮೇಲ್ವಿಚಾರಣೆಯಲ್ಲಿ ಸಮೀಕ್ಷಾ ಕಾರ್ಯ ಜರುಗಲಿದ್ದು, ಹೆಚ್ಚುವರಿ ಆಯುಕ್ತರು, ಜಂಟಿ ಆಯುಕ್ತರು ಮತ್ತು ಉಪ ಆಯುಕ್ತರು ಸಮೀಕ್ಷಾ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದರು.

ನೋಡಲ್ ಅಧಿಕಾರಿ: ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಬ್ಬರಂತೆ ಕೆಎಎಸ್ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳೆಂದು ಸರ್ಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ. ಅದರಂತೆ ಒಟ್ಟು 34 ಕೆಎಎಸ್ ಅಧಿಕಾರಿಗಳು ಸಮೀಕ್ಷಾ ಕಾರ್ಯವನ್ನು ಸುಗಮವಾಗಿ ನಿರ್ವಹಿಸಲು, ಸಮೀಕ್ಷಾದಾರರು ಮತ್ತು ಸರ್ಕಾರದ ಮಧ್ಯೆ ಸಮನ್ವಯತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರತಿ ವಾರ್ಡ್‌ಗೆ ಒಬ್ಬರಂತೆ ಗ್ರೂಪ್- ಎ ವೃಂದದ ಅಧಿಕಾರಿಗಳನ್ನು ವಾರ್ಡ್ ಮೇಲ್ವಿಚಾರಕರಾಗಿ/ಚಾರ್ಜ್ ಅಧಿಕಾರಿಗಳೆಂದು ನೇಮಿಸಲಾಗಿದ್ದು, ಅವರು ಆ ವಾರ್ಡ್‌ನ ಸಮೀಕ್ಷೆಯ ಸಂಪೂರ್ಣ ಮೇಲ್ವಿಚಾರಣೆಯನ್ನು ನಿರ್ವಹಿಸಲಿದ್ದಾರೆ ಎಂದರು.

ನಾಗರಿಕರಲ್ಲಿ ಮನವಿ: ಜಿಬಿಎ ವ್ಯಾಪ್ತಿಯಲ್ಲಿ ಶನಿವಾರದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯ ಆರಂಭವಾಗಲಿದ್ದು, ನಗರದ ಎಲ್ಲಾ ನಾಗರಿಕರು ಅಗತ್ಯ ದಾಖಲೆಗಳನ್ನು (ಆಧಾರ್ ಕಾರ್ಡ್/ರೇಷನ್ ಕಾರ್ಡ್ ಸೇರಿದಂತೆ ಇತರೆ ದಾಖಲೆಗಳು) ಸಿದ್ಧವಾಗಿಟ್ಟುಕೊಂಡು ಸಮೀಕ್ಷಾದಾರರಿಗೆ ಸಹಕರಿಸಬೇಕು ಎಂದು ಮಹೇಶ್ವರ್ ರಾವ್ ಮನವಿ ಮಾಡಿಕೊಂಡರು.

300 ಮನೆಗಳಿಗೆ ಒಬ್ಬ ಸಮೀಕ್ಷಾದಾರ

ಜಿಬಿಎ ವ್ಯಾಪ್ತಿಯಲ್ಲಿ ಪ್ರತಿ 300 ಮನೆಗಳಿಗೆ ಒಬ್ಬರಂತೆ ಸಮೀಕ್ಷಾದಾರರನ್ನು ನಿಯೋಜಿಸಲಾಗಿದ್ದು, ಅವರು ತಮ್ಮ ವ್ಯಾಪ್ತಿಯ ಮನೆಮನೆಗಳಿಗೆ ಭೇಟಿ ನೀಡಿ ಸಮೀಕ್ಷಾ ಕರ್ತವ್ಯವನ್ನು ನಿರ್ವಹಿಸಲಿದ್ದಾರೆ. ಪ್ರತಿ 15 ರಿಂದ 20 ಸಮೀಕ್ಷಾದಾರರ ಕಾರ್ಯವನ್ನು ಪರಿಶೀಲಿಸಲು ಒಬ್ಬ ಉಪ ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದು ಮಹೇಶ್ವರ್ ರಾವ್ ತಿಳಿಸಿದರು.

ಸಮೀಕ್ಷಾ ಕಾರ್ಯಕ್ಕಾಗಿ ಸರ್ಕಾರಿ ನೌಕರರು, ನಿಗಮ ಮಂಡಳಿಗಳ ಅಧಿಕಾರಿ/ನೌಕರರನ್ನು ನಿಯೋಜಿಸಲಾಗಿದೆ. ಸೆಪ್ಟೆಂಬರ್ 29ರಂದು ನಡೆದ ಮೊದಲನೇ ಸುತ್ತಿನಲ್ಲಿ 33 ತರಬೇತಿ ಕೇಂದ್ರಗಳಲ್ಲಿ 17,500 ಅಧಿಕಾರಿ/ನೌಕರರಿಗೆ ತರಬೇತಿ ನೀಡಲಾಗಿತ್ತು. ಶುಕ್ರವಾರ ಮತ್ತೊಂದು ಬಾರಿ ಸಮೀಕ್ಷಾದಾರರಿಗೆ ತರಬೇತಿ ನೀಡಿದ್ದು, ಪ್ರತಿ ಸಮೀಕ್ಷಾದಾರರಿಗೆ ಸಮೀಕ್ಷೆ ನಡೆಸಲು ವಾರ್ಡ್‌ಗಳನ್ನು ಹಂಚಿಕೆ ಮಾಡಲಾಗಿದೆ ಎಂದರು.

ಸಮೀಕ್ಷಾದಾರರಿಗೆ ಗುರುತಿನ ಚೀಟಿ, ಕ್ಯಾಪ್, ಬ್ಯಾಗ್, ಕೈಪಿಡಿ, ಸ್ವಯಂ ಘೋಷಣಾ ಪತ್ರ, ಮನೆಯಲ್ಲಿ ಯಾರೂ ಇಲ್ಲದಿದ್ದರೆ ಎರಡನೇ ಬಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮನೆಗೆ ಬೀಗ ಹಾಕಿದ್ದರೆ ಅಂಟಿಸುವ ಚೀಟಿ ಹಾಗೂ ಇತರ ಸಾಮಗ್ರಿಗಳ ಕಿಟ್ ವಿತರಿಸಲಾಗಿದೆ ಎಂದು ಹೇಳಿದರು.



ಚಿಕಿತ್ಸೆ, ವಿದ್ಯಾರ್ಥಿಗಳ ಕಲಿಕೆಗೆ ತೊಡಕು

ಸಮೀಕ್ಷೆಗೆ ವೈದ್ಯರ ಬಳಕೆ

300 ಸರ್ಕಾರಿ ಆಯುರ್ವೇದ ಆಸ್ಪತ್ರೆ ಹೊಂದಿರುವ ಹಾಸಿಗೆಗಳು

250 ಸರ್ಕಾರಿ ಹೋಮಿಯೋಪಥಿ ಆಸ್ಪತ್ರೆ ಹೊಂದಿರುವ ಹಾಸಿಗೆಗಳು

• ವರುಣ ಹೆಗಡೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ವೈದ್ಯರನ್ನೂ ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ರೋಗಿಗಳಿಗೆ ಚಿಕಿತ್ಸೆ ಹಾಗೂ ವಿದ್ಯಾರ್ಥಿಗಳ ಕಲಿಕೆಗೆ ತೊಡಕಾಗಲಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಈ ಸಮೀಕ್ಷೆ ನಡೆಸಲು ರಾಜ್ಯದಾದ್ಯಂತ ಶಿಕ್ಷಕರನ್ನು ಬಳಸಿಕೊಳ್ಳಲಾಗಿದೆ. ಆದರೆ, ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷಕರ ಕೊರತೆಯಿಂದಾಗಿ, ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯ, ಬಸವೇಶ್ವರನಗರದಲ್ಲಿರುವ ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯನ್ನು ಸಮೀಕ್ಷೆಗೆ ನಿಯೋಜಿಸಲಾಗಿದೆ. ಈ ಸಂಬಂಧ ಈಗಾಗಲೇ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಇದೇ 23ರಂದು ನೇಮಕಾತಿ ಆದೇಶ ಹೊರಡಿಸಿದ್ದಾರೆ. ಇದೇ ಮೊದಲ ಬಾರಿಗೆ ಸರ್ಕಾರದ ಸಮೀಕ್ಷೆಯೊಂದರಲ್ಲಿ ವೈದ್ಯರನ್ನೂ ಬಳಸಿಕೊಳ್ಳಲಾಗುತ್ತಿದೆ.

ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದಡಿ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. ಈ ವೈದ್ಯಕೀಯ ವಿದ್ಯಾಲಯದ ಪ್ರಾಧ್ಯಾಪಕರು ಬೋಧನೆ ಜತೆಗೆ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆಯನ್ನೂ ಒದಗಿಸುತ್ತಿದ್ದಾರೆ. ಈ ಆಸ್ಪತ್ರೆಯಿಂದ ತಲಾ ಹತ್ತು ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಯನ್ನು ಸಮೀಕ್ಷಕರನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಅದೇ ರೀತಿ, ಸರ್ಕಾರಿ ಹೋಮಿಯೋಪಥಿ ಆಸ್ಪತ್ರೆ ಮತ್ತು ಕಾಲೇಜಿನಿಂದಲೂ ತಲಾ ಹತ್ತು ವೈದ್ಯರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಸೇವೆ ವ್ಯತ್ಯಯ: ಸಮೀಕ್ಷಕರಾಗಿ ನಿಯೋಜನೆಗೊಂಡ ವೈದ್ಯರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಗೆ ತರಬೇತಿಯನ್ನೂ ನೀಡಲಾಗಿದೆ. ಗೊತ್ತುಪಡಿಸಲಾದ ವೈದ್ಯರು ಮತ್ತು ಸಿಬ್ಬಂದಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದರಿಂದ, ಈಗಾಗಲೇ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಎದುರಿಸುತ್ತಿರುವ ಈ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ವ್ಯತ್ಯಯವಾಗುವ ಸಾಧ್ಯತೆಯಿದೆ. ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಹೊರರಾಜ್ಯಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಾರೆ.

‘ನಮ್ಮ ಕರ್ತವ್ಯವು ಅಗತ್ಯ ಸೇವೆಯಡಿ ಬರುತ್ತದೆ. ಆದರೂ ವಿದ್ಯಾರ್ಥಿಗಳು ಹಾಗೂ ರೋಗಿಗಳ ಬಗ್ಗೆ ಯೋಚಿಸದೆ ಇದೇ ಮೊದಲ ಬಾರಿ ಸಮೀಕ್ಷೆಗೆ ನಿಯೋಜಿಸಲಾಗಿದೆ. ಈ ಸಮೀಕ್ಷೆಯಲ್ಲಿ ಸಮೀಕ್ಷಕರನ್ನಾಗಿ ನಿಯೋಜಿಸುವುದರಿಂದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಎದುರಾಗಲಿದೆ. ನಿಗದಿತ ಅವಧಿಯಲ್ಲಿ ಸಮೀಕ್ಷೆ ಮುಗಿಸುವುದು ಕಷ್ಟಸಾಧ್ಯ ಎಂಬ ಕಾರಣಕ್ಕೆ ನಮ್ಮನ್ನು ನಿಯೋಜಿಸಲಾಗಿದೆ. ಸಮೀಕ್ಷೆ ಅವಧಿಯಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ವ್ಯತ್ಯಯವಾಗುವ ಜತೆಗೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೂ ತೊಡಕಾಗಲಿದೆ’ ಎಂದು ಸಮೀಕ್ಷಕರಾಗಿ ನೇಮಕಗೊಂಡಿರುವ ವೈದ್ಯರು ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಮುಖ ಸರ್ಕಾರಿ ಆಸ್ಪತ್ರೆ

ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಪ್ರತಿನಿತ್ಯ ಸರಾಸರಿ 300ರಿಂದ 400 ಹೊರ ರೋಗಿಗಳು ಭೇಟಿ ನೀಡುತ್ತಿದ್ದಾರೆ. 150ಕ್ಕೂ ಅಧಿಕ ಮಂದಿ ಒಳ ರೋಗಿಗಳಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಒಂದಾದ ಪಂಚಕರ್ಮ ಚಿಕಿತ್ಸೆಗೆ ಇಲ್ಲಿ ಬೇಡಿಕೆ ಹೆಚ್ಚಿದ್ದು, ರಾಜ್ಯದ ವಿವಿಧ ಭಾಗಗಳಿಂದ ರೋಗಿಗಳು ಬರುತ್ತಾರೆ. ನೆರೆಯ ತಮಿಳುನಾಡು, ಆಂಧ್ರಪ್ರದೇಶ ಸೇರಿ ವಿವಿಧ ರಾಜ್ಯದವರು ದಾಖಲಾಗಿ, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಅಮಾನತು ಎಚ್ಚರಿಕೆ

ಸಮೀಕ್ಷೆಗೆ ಸಂಬಂಧಿಸಿದಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಪ್ರತ್ಯೇಕ ನೇಮಕಾತಿ ಆದೇಶವನ್ನು ನಿಯೋಜನೆಗೊಂಡವರಿಗೆ ನೀಡಿದ್ದಾರೆ. ‘ಒಂದು ವೇಳೆ ಈ ಆದೇಶವನ್ನು ಉಲ್ಲಂಘಿಸಿ, ತರಬೇತಿ ಮತ್ತು ಸಮೀಕ್ಷಾ ಕಾರ್ಯದಲ್ಲಿ ಗೈರಾದರೆ ತಮ್ಮನ್ನು ಅಮಾನತು ಮಾಡಿ, ಜಿಬಿಎ ವತಿಯಿಂದ ಶಿಸ್ತುಕ್ರಮ ಕೈಗೊಳ್ಳಲಾಗುವುದು’ ಎಂದು ನೇಮಕಾತಿ ಆದೇಶದಲ್ಲಿ ಎಚ್ಚರಿಸಿದ್ದಾರೆ.

ಸಮೀಕ್ಷೆಗೆ ತೆರಳಿದ್ದ ಶಿಕ್ಷಕನಿಗೆ ಧಮ್ಕಿ

ದಾಬಸ್‌ಪೇಟೆ: ಸಮೀಕ್ಷೆಗೆ ತೆರಳಿದ್ದ ಶಿಕ್ಷಕರೊಬ್ಬರಿಗೆ ವ್ಯಕ್ತಿಯೊಬ್ಬರು ಧಮ್ಕಿ ಹಾಕಿರುವ ಪ್ರಕರಣ ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಪಟ್ಟಣದಲ್ಲಿ ನಡೆದಿದೆ. ಇದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಮೀಕ್ಷೆ ಮಾಡಲು ಮನೆಗೆ ಬಂದಾಗ ಮುಸ್ಲಿಂ ಸಮುದಾಯದಲ್ಲಿ ಉಪಜಾತಿಗಳ ಬಗ್ಗೆ ನಿಖರವಾಗಿ ಮಾಹಿತಿ ದಾಖಲಿಸಬೇಕು. ಕೇವಲ ಶೇಕ್ ಎಂದು ನಮೂದಿಸುತ್ತಿದ್ದು ಉಪ ಜಾತಿಗಳ ಬಗ್ಗೆ ಕೇಳಿ ನಮೂದಿಸಬೇಕು ಎಂದು ತ್ಯಾಮಗೊಂಡ್ಲು ಪಟ್ಟಣದ ಎಂ.ನೂರ್ ಖಾನ್ ಅವರು ಶಿಕ್ಷಕರಿಗೆ ಜೋರಾಗಿಯೇ ಗದರಿದ್ದಾರೆ.

ಕರ್ತವ್ಯನಿರತ ಶಿಕ್ಷಕ ವೀರನಗೌಡರ್ ಅವರು ‘ನೀವು ಹೇಳಿದ್ದನ್ನು ನಮೂದಿಸಲಾಗುವುದು’ ಎಂದು ತಿಳಿಸಿದ್ದರೂ ಅವರಿಗೆ ಮರು ಮಾತನಾಡಲು ಅವಕಾಶ ನೀಡಿಲ್ಲ.

ಫೇಸ್‌ಬುಕ್ ಲೈವ್‌ನಲ್ಲಿ ನೂರ್ ಖಾನ್ ಅವರು ವಿಡಿಯೊ ಚಿತ್ರೀಕರಣ ಮಾಡುತ್ತಾ, ‘ನೀವು ಹೆಚ್ಚು ಮಾತನಾಡಿದರೆ ಪೊಲೀಸರನ್ನು ಕರೆಸುತ್ತೇನೆ’ ಎಂದು ಶಿಕ್ಷಕರಿಗೆ ಬೆದರಿಸಿದ್ದಾರೆ ಎನ್ನಲಾಗಿದೆ.

ಗಾಯನ ಸುಧೆ...

ಪ್ರಜಾವಾಣಿ ಚಿತ್ರ



ಸ್ವರ ಫೌಂಡೇಷನ್ ಹಾಗೂ ಅಕಾಡೆಮಿ ಆಫ್ ಮ್ಯೂಸಿಕ್ ಜಂಟಿಯಾಗಿ ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಗಾಂಧಿ ಸ್ಮೃತಿ’ ಸಂಗೀತೋತ್ಸವದಲ್ಲಿ ಮುದ್ದು ಮೋಹನ್ ಮತ್ತು ಕೆ.ಎಸ್. ವೈಶಾಲಿ ಅವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಪ್ರಸ್ತುತಪಡಿಸಿದರು

‘ಬಿಜೆಪಿ ಹಿಂದೆ ಮತ ಕಳ್ಳರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮತ ಕಳುವಿನ ಹಿಂದೆ ಇರುವವರು ಬಿಜೆಪಿ ಜತೆ ನಿಂತಿದ್ದಾರೆ. ಅಕ್ರಮದ ವಿರುದ್ಧ ಜನಾಭಿಪ್ರಾಯ ರೂಪಿಸಬೇಕು. ಬೆಂಗಳೂರಿನ ಪುಲಕೇಶಿ ನಗರದಲ್ಲಿ ಎದ್ದಿರುವ ದನಿ ಇಡೀ ದೇಶಕ್ಕೆ ಕೇಳಿಸಬೇಕು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಮತ ಕಳವು ವಿರುದ್ಧ ಬೆಂಗಳೂರಿನ ಪುಲಿಕೇಶಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಒಂದೊಂದು ಮನೆಯಲ್ಲಿ ಐವತ್ತಕ್ಕೂ ಹೆಚ್ಚು ಜನ ಮತದಾರರು ವಾಸವಿದ್ದಾರೆ. ಅಕ್ರಮವನ್ನು ಪ್ರಶ್ನೆ ಮಾಡಬೇಕು. ಬಯಲಿಗೆ ಎಳೆಯಬೇಕು. ಜನರ ಹಕ್ಕನ್ನು ಕಾಪಾಡುವಂತೆ ಪ್ರೇರೇಪಿಸಬೇಕು’ ಎಂದರು.

‘ನೂರಾರು ಸ್ವಾತಂತ್ರ್ಯ ಹೋರಾಟಗಾರರು ದೇಶದಲ್ಲಿ ಕ್ರಾಂತಿಯ ಕಿಡಿ ಹೊತ್ತಿಸಿದ್ದಾರೆ. ಅವರಿಂದಾಗಿಯೇ ಪಡೆದ ಸ್ವಾತಂತ್ರ್ಯವನ್ನು ಮತ ಕಳವು ಮೂಲಕ ವ್ಯವಸ್ಥಿತವಾಗಿ ಕದಿಯಲಾಗುತ್ತಿದೆ. ಸಂವಿಧಾನದ ಜತೆ ಪ್ರಜಾಪ್ರಭುತ್ವವನ್ನು ನಾಶ ಮಾಡಲಾಗುತ್ತಿದೆ. ಇದು ಕೇವಲ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಸಂಘರ್ಷವಲ್ಲ. ರಾಜಕೀಯ ಉದ್ದೇಶದ ಹೋರಾಟವಲ್ಲ. ಈ ದೇಶದ ಸಾಮಾನ್ಯ ಜನರ ಸಂಘರ್ಷ’ ಎಂದು ಬಣ್ಣಿಸಿದರು.



ರಣದೀಪ್ ಸಿಂಗ್ ಸುರ್ಜೇವಾಲಾ ಸಹಿ ಹಾಕುವ ಮೂಲಕ ಮತ ಕಳವು ವಿರುದ್ಧದ ಅಭಿಯಾನಕ್ಕೆ ಚಾಲನೆ ನೀಡಿದರು

‘ಮತ ಕಳವು ಎಂಬುದು ಈ ದೇಶದ ಮಹಿಳೆಯರು, ಕೂಲಿ ಕಾರ್ಮಿಕರು, ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪಂಗಡ, ಸಣ್ಣ ಉದ್ದಿಮೆದಾರರು, ದಿನಸಿ ಅಂಗಡಿ ಮಾಲೀಕರು, ಬೀದಿಬದಿ ವ್ಯಾಪಾರಿಗಳು ಸೇರಿ ಸಮಾಜದ ಎಲ್ಲ ವರ್ಗದವರ ಮೇಲಿನ ದಾಳಿ. ಮಹದೇವಪುರ ಹಾಗೂ ಆಳಂದ ಕ್ಷೇತ್ರದಲ್ಲಿ ಮತ ಕಳವು ನಡೆದಂತೆ ಪ್ರತಿಯೊಂದು ವಿಧಾನಸಭಾ, ಲೋಕಸಭಾ ಕ್ಷೇತ್ರಗಳಲ್ಲೂ ನಡೆಯುತ್ತಿದೆ. ಇದರ ವಿರುದ್ಧ ಐದು ಕೋಟಿಗೂ ಹೆಚ್ಚು ಸಹಿಗಳನ್ನು ಸಂಗ್ರಹಿಸಿ ಚುನಾವಣಾ ಆಯೋಗಕ್ಕೆ ಕಳುಹಿಸಲಾಗುವುದು’ ಎಂದರು.

> **ಒಬ್ಬ ವ್ಯಕ್ತಿ–ಒಂದು ಮತ ಎಂದು ಸಂವಿಧಾನ ಹೇಳಿದೆ. ಇದ್ದನ್ನು ಮೀರಿ ಮತ ಕಳವು ನಡೆಯುತ್ತಿದೆ**
> **ರಣದೀಪ್ ಸಿಂಗ್ ಸುರ್ಜೇವಾಲಾ**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

ಬನಶಂಕರಿ ಉದ್ಯಾನದ ಸ್ಥಿತಿ ಶೋಚನೀಯ: ಬಿಕೆಸಿ

ಹಸಿರು ತಾಣದಲ್ಲಿ ಶೆಡ್‌ಗಳು, ಮನರಂಜನೆ ತಾಣ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬನಶಂಕರಿ 2ನೇ ಹಂತದಲ್ಲಿನ ಉದ್ಯಾನದ ಸ್ಥಿತಿ ಶೋಚನೀಯವಾಗಿದ್ದು, ಉದ್ಯಾನದಲ್ಲಿ ಕಾವಲುಗಾರನ ಒಂದು ಶೆಡ್ ಜೊತೆಗೆ ಇನ್ನೆರಡು ಶೆಡ್‌ಗಳು ಇತ್ತೀಚೆಗೆ ತಲೆ ಎತ್ತಿವೆ’ ಎಂದು ಕಾಂಗ್ರೆಸ್ ನಾಯಕ ಬಿ.ಕೆ. ಚಂದ್ರಶೇಖರ್ ಆರೋಪಿಸಿದ್ದಾರೆ.

‘ಸರಿ ಸುಮಾರು 25 ವರ್ಷಗಳ ಹಿಂದೆ ಬನಶಂಕರಿ 2ನೇ ಹಂತದ ಮಧ್ಯಭಾಗದಲ್ಲಿ ನಿರ್ಮಿಸಿದ್ದ ಉದ್ಯಾನ ಹಸಿರಿನಿಂದ ಕಂಗೊಳಿಸುತ್ತಿತ್ತು. ಇದೀಗ, ಉದ್ಯಾನದ ಒಳಭಾಗದಲ್ಲಿ ಮನರಂಜನೆಗಾಗಿ ಕಾರಂಜಿಗಳನ್ನೂ ನಿರ್ಮಿಸಲಾಗಿದೆ. ಉದ್ಯಾನಗಳು ಮನರಂಜನಾ ತಾಣಗಳಲ್ಲ. ಹೀಗೆ ವಿರೂಪಗೊಳಿಸಿರುವುದರಲ್ಲಿ ಸ್ಥಳೀಯ ಶಾಸಕ ಆರ್. ಅಶೋಕ ಪಾತ್ರ ಇರಲು ಸಾಧ್ಯವಿಲ್ಲ’ ಎಂದಿದ್ದಾರೆ.

‘ಕರ್ನಾಟಕ ಉದ್ಯಾನಗಳ ಕಾಯ್ದೆ–1985ರ’ ಪ್ರಕಾರ ಉದ್ಯಾನದ ಒಟ್ಟು ವಿಸ್ತೀರ್ಣ ಎರಡು ಹೆಕ್ಟೇರ್‌ಗಿಂತ ಕಡಿಮೆಯಿದ್ದರೆ ಕಾವಲುಗಾರರಿಗೂ ವಸತಿ ಗೃಹಗಳನ್ನು ನಿರ್ಮಿಸುವಂತಿಲ್ಲ. ಉದ್ಯಾನ ಎಂದರೆ ಯಾವುದೇ ಕಟ್ಟಡಗಳಿಲ್ಲದ ಭೂಮಿಯ ತುಂಡು. ಮರಗಳು, ಸಸ್ಯಗಳು, ಹುಲ್ಲುಗಾವಲು ಅಥವಾ ಹೂವಿನ ಹಾಸಿಗೆಗಳನ್ನು ಹೊಂದಿರುವ ಸ್ಥಳವನ್ನಾಗಿರಿಸಿ ಸಾರ್ವಜನಿಕರಿಗೆ ಗಾಳಿ ಅಥವಾ ಬೆಳಕಿಗಾಗಿ ನಿರ್ವಹಿಸಬೇಕು. ಈ ಷರತ್ತುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದೆ’ ಎಂದು ದೂರಿದ್ದಾರೆ.

‘ಉದ್ಯಾನದ ಜಾಗವನ್ನು ಟೆಲಿಫೋನ್ ಕೇಬಲ್ ಉಗ್ರಾಣಕ್ಕಾಗಿ ಬಿಡಿಎ ಹಂಚಿಕೆ ಮಾಡಿದ್ದ ಜಾಗವನ್ನು ಅಂದಿನ ಕೇಂದ್ರದ ದೂರಸಂಪರ್ಕ ಸಚಿವರಾಗಿದ್ದ ಎಚ್.ಎನ್. ಬಹುಗುಣ ಅವರ ನೆರವಿನೊಂದಿಗೆ ವಾಪಸ್ ಪಡೆಯಲಾಯಿತು. ಬಿಡಿಎ ಮತ್ತು ನಗರ ಪಾಲಿಕೆಯ ಅಧಿಕಾರಿಗಳಾಗಿದ್ದ ಎ. ರವೀಂದ್ರ, ಜೆ. ಅಲೆಕ್ಸಾಂಡರ್, ಎಂ.ಆರ್. ಶ್ರೀನಿವಾಸ ಮೂರ್ತಿ ಅವರ ಸಹಕಾರದೊಂದಿಗೆ ಒಂದು ವರ್ಷದಲ್ಲಿ ಪಾರ್ಕ್ ನಿರ್ಮಾಣ ಮಾಡಿದೆವು’ ಎಂದು ತಿಳಿಸಿದ್ದಾರೆ.

ಹೆಸರಿಡಲು ಪ್ರಸ್ತಾಪ



‘ಅಭಿವೃದ್ಧಿಯಾದ ಉದ್ಯಾನಕ್ಕೆ ನನ್ನ ಹೆಸರಿಡಲು ಸ್ಥಳೀಯ ಮುಖಂಡರು ಪ್ರಸ್ತಾಪಿಸಿದ್ದರು. ನಾನು ತಿರಸ್ಕರಿಸಿದ್ದೆ. ಅಂದಿನ ಬಿಬಿಎಂಪಿ ಸದಸ್ಯ ಬಸವರಾಜು ಅವರು ‘ಬನಶಂಕರಿ ಬೃಂದಾವನ’ ಎಂದು ಹೆಸರಿಡುವ ಸಲಹೆಗೆ ತಕ್ಷಣ ಒಪ್ಪಿದ್ದೆ. ಆದರೆ, ಕೇಂದ್ರದ ಮಾಜಿ ಸಚಿವ ದಿವಂಗತ ಅನಂತಕುಮಾರ್, ಸಂಸದ ತೇಜಸ್ವಿ ಸೂರ್ಯ ಹಾಗೂ ಆರ್. ಅಶೋಕ ಅವರ ಹೆಸರಿರುವ ಕಲ್ಲನ್ನು ಸಂಕೋಚವೇ ಇಲ್ಲದೆ ನೆಟ್ಟಿದ್ದಾರೆ. ಒಂದು ದೊಡ್ಡ ಪಕ್ಷವಾಗಿರುವ ಬಿಜೆಪಿಗೆ ಈ ಸಣ್ಣತನ ಯಾಕೆ’ ಎಂದು ಕಾಂಗ್ರೆಸ್ ನಾಯಕ ಬಿ.ಕೆ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

ಬಸ್ ಪ್ರಯಾಣ: ಇತರರಿಗೆ ತೊಂದರೆ ಮಾಡುವಂತಿಲ್ಲ ಎಂಬ ನಿಯಮ ಇದ್ದರೂ ಪಾಲನೆ ಇಲ್ಲ


ಮೊಬೈಲ್‌ನಲ್ಲಿ ನಿಲ್ಲದ ಹಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸ್‌ಗಳಲ್ಲಿ ಸಹಪ್ರಯಾಣಿಕರಿಗೆ ತೊಂದರೆಯಾಗುವಂತೆ ಮೊಬೈಲ್‌ನಲ್ಲಿ ಹಾಡು, ವಾರ್ತೆಗಳನ್ನು ಹಾಕುವಂತಿಲ್ಲ’ ಎಂದು ನಿಯಮ ಇದ್ದರೂ ಜೋರಾಗಿ ಹಾಡು ಹಾಕಿ ಇತರರಿಗೆ ಕಿರಿಕಿರಿ ಉಂಟು ಮಾಡುವುದು ನಿಂತಿಲ್ಲ ಎಂದು ಪ್ರಯಾಣಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ನಾನು ಕೆಎಸ್‌ಆರ್‌ಟಿಸಿ ಕೆಂಪು ಬಸ್‌ನಲ್ಲಿ ಆಗಾಗ ಓಡಾಡುತ್ತೇನೆ. ಪ್ರತಿ ಸಾರಿ ಒಬ್ಬರಲ್ಲ ಒಬ್ಬರು ಹಾಡು ಅಥವಾ ರೀಲ್ಸ್‌ಗಳನ್ನು ದೊಡ್ಡ ಧ್ವನಿಯಲ್ಲಿ ಹಾಕಿರುತ್ತಾರೆ. ಶಬ್ದ ಕಡಿಮೆ ಮಾಡಿ ಎಂದರೆ ಕೆಲವರು ಕಡಿಮೆ ಮಾಡುತ್ತಾರೆ. ಇನ್ನೂ ಕೆಲವರು ಜಗಳಕ್ಕೆ ನಿಂತು ಬಿಡುತ್ತಾರೆ. ಹಲವರು ನಾವು ಹೇಳಿದ್ದು ಕೇಳಿಸಿಯೇ ಇಲ್ಲ ಎನ್ನುವಂತೆ ನಡೆದುಕೊಳ್ಳುತ್ತಾರೆ’ ಎಂದು ಉದ್ಯೋಗದ ಕಾರಣ ಸದ್ಯಕ್ಕೆ ಚಲ್ಲಘಟ್ಟದಲ್ಲಿರುವ ಮಂಗಳೂರಿನ ಕುಮುದಾ ನಾಯಕ್ ದೂರಿದರು.

‘ಇಯರ್ ಫೋನ್ ಹಾಕಿಕೊಂಡು ಅವರಿಗೆ ಬೇಕಾದುದನ್ನು ಕೇಳಲಿ, ನೋಡಲಿ. ಅದು ಬಿಟ್ಟು ಎಲ್ಲರಿಗೆ ಕೇಳಿಸುವಂತೆ ಜೋರಾಗಿ ಹಾಡು ಹಾಕಿಕೊಂಡಿರುತ್ತಾರೆ. ಬಸ್ ನಿರ್ವಾಹಕರಲ್ಲಿ ಕೆಲವರು ಬಂದು ಅವರಿಗೆ ತಿಳಿ ಹೇಳುತ್ತಾರೆ. ಅವರು ಅತ್ತ ಹೋದಾಗ ಮತ್ತೆ ಸದ್ದು ಶುರುವಾಗುತ್ತದೆ.



ಮೊಬೈಲ್‌ಗಳಲ್ಲಿ ಜೋರಾಗಿ ಹಾಡುಹಾಕದಂತೆ ಸೂಚಿಸುವ ಸ್ಟಿಕ್ಕರ್ ಬಿಎಂಟಿಸಿ ಬಸ್‌ಗಳಲ್ಲಿ ಅಂಟಿಸಿದರು

ಅಲ್ಲದೇ ಕೆಲವರು ಫೋನ್‌ನಲ್ಲಿ ಮಾತಾಡುವಾಗ ತಾವು ಬಸ್‌ನಲ್ಲಿರುವುದನ್ನು ಮರೆತು ಜೋರಾಗಿ ಮಾತನಾಡುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಹೇಗಿರಬೇಕು ಎಂಬುದೇ ಗೊತ್ತಿಲ್ಲ’ ಎಂದು ಬಸ್ ಪ್ರಯಾಣಿಕರಾದ ಜಯನಗರದ ನಳಿನಿ ತಿಳಿಸಿದರು.

‘ನಿಗಮದ ಬಸ್‌ಗಳಲ್ಲಿ ಮೊಬೈಲ್ ಮೂಲಕ ಜೋರು ಶಬ್ದ ಮಾಡುವುದನ್ನು ನಿರ್ಬಂಧಿಸಿ ನಾಲ್ಕು ವರ್ಷಗಳ ಹಿಂದೆಯೇ ಆದೇಶ ಹೊರಡಿಸಲಾಗಿದೆ. ಈ ಬಗ್ಗೆ, ಪ್ರಯಾಣಿಕರಿಗೆ ಕರ್ತವ್ಯ ನಿರತ ಸಿಬ್ಬಂದಿ ತಿಳಿವಳಿಕೆ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಜೋರು ಶಬ್ದ ಮಾಡದಂತೆ ಮನವಿ ಮಾಡಿದರೂ ಸ್ಪಂದಿಸದೇ ಇದ್ದರೆ ಅಂಥವರನ್ನು ಬಸ್‌ನಿಂದ ಇಳಿಸಲು ಅವಕಾಶವಿದೆ. ಮಾನವೀಯ ದೃಷ್ಟಿಯಿಂದ ನಾವು ಇಳಿಸಲು ಹೋಗುವುದಿಲ್ಲ. ಪ್ರಯಾಣಿಕರು ಇದನ್ನು ಅರ್ಥ ಮಾಡಿಕೊಂಡು ಹಾಡು, ಸದ್ದುಗಳನ್ನು ಕಡಿಮೆ ಮಾಡಿಕೊಳ್ಳಬೇಕು’ ಎಂದು ಕೆಎಸ್‌ಆರ್‌ಟಿಸಿ ನಿರ್ವಾಹಕ ಗೋಪಾಲ ತಿಳಿಸಿದರು.

‘ಇತ್ತೀಚೆಗೆ ಪ್ರಯಾಣಿಕರಲ್ಲಿ ಜಾಗೃತಿ ಬಂದಿದೆ. ರಾತ್ರಿ ಪ್ರಯಾಣದಲ್ಲಿ ಜೋರು ಸದ್ದು ಮಾಡುವುದು ಕಡಿಮೆಯಾಗಿದೆ. ಹಗಲು ಪ್ರಯಾಣದಲ್ಲಿ ಈಗಲೂ ಕೆಲವರು ಜೋರು ಶಬ್ದ ಇಟ್ಟುಕೊಂಡು ಎಫ್‌ಎಂ ಕೇಳುವುದು, ವಿಡಿಯೊ ನೋಡುವುದು, ಸಿನಿಮಾ ನೋಡುವುದು, ಹಾಡು ಕೇಳುವುದು, ರೀಲ್ಸ್ ನೋಡುವುದು ಮಾಡುತ್ತಿದ್ದಾರೆ’ ಎಂದು ನಿರ್ವಾಹಕರೊಬ್ಬರು ತಿಳಿಸಿದರು.

‘ಇಯರ್ ಫೋನ್ ಬಳಸಿ’

ಬಸ್‌ಗಳಲ್ಲಿ ಮೊಬೈಲ್‌ನಲ್ಲಿ ಜೋರಾಗಿ ಸದ್ದು ಮಾಡಿದರೆ ಕ್ರಮ ಕೈಗೊಳ್ಳಲು ಕಾನೂನಿನಡಿ ಅವಕಾಶ ಇದೆ. ಸಹಪ್ರಯಾಣಿಕರಿಗೆ ತೊಂದರೆಯಾಗದಂತೆ ಇಯರ್‌ಫೋನ್ ಬಳಸಿಕೊಂಡು ಕೇಳಿಸಿಕೊಳ್ಳಲಿ. ತೊಂದರೆ ನೀಡಿದರೆ ಕಟ್ಟುನಿಟ್ಟಾಗಿ ನಿಯಮ ಪಾಲನೆ ಮಾಡಲು ನಿಗಮದ ಸಿಬ್ಬಂದಿಗೆ ಸೂಚಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಮೆಟ್ರೊ ನಿಲ್ದಾಣ: ಸಾಹಿತಿಗಳ ಹೆಸರಿಡಲು ಮನವಿ

ಬೆಂಗಳೂರು: ನಗರದ ವಿವಿಧ ಮೆಟ್ರೊ ನಿಲ್ದಾಣಗಳಿಗೆ ಸಾಹಿತಿಗಳ ಹೆಸರಿಡುವಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಸಾಹಿತಿಗಳ ಹಾಗೂ ಮೆಟ್ರೊ ನಿಲ್ದಾಣಗಳ ಹೆಸರನ್ನು ಒಳಗೊಂಡ ಪಟ್ಟಿ ಸಿದ್ಧಪಡಿಸಿ, ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕರಿಗೆ ಆಗಸ್ಟ್ ತಿಂಗಳಲ್ಲಿ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಅವರ ವಿಶೇಷ ಕರ್ತವ್ಯಾಧಿಕಾರಿ ಎಂ. ಶಾಂತಪ್ಪ ಅವರು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಯಾವೆಲ್ಲ ಹೆಸರು?: ರಾಜಾಜಿನಗರ ಮೆಟ್ರೊ ನಿಲ್ದಾಣಕ್ಕೆ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಇಂದಿರಾನಗರ ಮೆಟ್ರೊ ನಿಲ್ದಾಣಕ್ಕೆ ಬಿ.ಎಂ. ಶ್ರೀ, ಎನ್‌.ಜಿ.ಇ.ಎಫ್ ಮೆಟ್ರೊ ನಿಲ್ದಾಣಕ್ಕೆ ಶ.ರಂ. ಕೃಷ್ಣೇಗೌಡ, ಮೈಸೂರು ರಸ್ತೆ ಮೆಟ್ರೊ ನಿಲ್ದಾಣಕ್ಕೆ ಎಚ್.ಎಲ್. ನಾಗೇಗೌಡ, ಬಸವನಗುಡಿ ಮೆಟ್ರೊ ನಿಲ್ದಾಣಕ್ಕೆ ಟಿ.ಆರ್. ಶಾಮಣ್ಣ, ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣಕ್ಕೆ ಎಚ್. ನರಸಿಂಹಯ್ಯ, ವಿಜಯನಗರ ಅಥವಾ ಅತ್ತಿಗುಪ್ಪೆ ಮೆಟ್ರೊ ನಿಲ್ದಾಣಕ್ಕೆ ರಾಜೇಗೌಡ ಹೊಸಹಳ್ಳಿ ಅವರ ಹೆಸರಿಡುವಂತೆ ಮುಕುಂದರಾಜ್ ಮನವಿ ಮಾಡಿದ್ದಾರೆ.

ಕೆ.ಆರ್. ಮಾರುಕಟ್ಟೆ ಅಥವಾ ಚಾಮರಾಜಪೇಟೆ ಮೆಟ್ರೊ ನಿಲ್ದಾಣಕ್ಕೆ ಜಿ. ನಾರಾಯಣ, ಮಲ್ಲೇಶ್ವರ ಮೆಟ್ರೊ ನಿಲ್ದಾಣಕ್ಕೆ ಎಂ.ಪಿ.ಎಲ್. ಶಾಸ್ತ್ರಿ, ಮಹಾಲಕ್ಷ್ಮೀ ಲೇಔಟ್ ಮೆಟ್ರೊ ನಿಲ್ದಾಣಕ್ಕೆ ಕ.ರಾ.ಕೃ, ಶ್ರೀರಾಮಪುರ ಮೆಟ್ರೊ ನಿಲ್ದಾಣಕ್ಕೆ ಎಂ.ಎಚ್. ಕೃಷ್ಣಯ್ಯ, ಬನಶಂಕರಿ ಮೆಟ್ರೊ ನಿಲ್ದಾಣಕ್ಕೆ ಜಿ.ಎಸ್. ಶಿವರುದ್ರಪ್ಪ, ಜಯನಗರ ಮೆಟ್ರೊ ನಿಲ್ದಾಣಕ್ಕೆ ಪಿ. ಲಂಕೇಶ್, ಜೆ.ಪಿ. ನಗರ ಮೆಟ್ರೊ ನಿಲ್ದಾಣಕ್ಕೆ ಜಿ. ನಾರಾಯಣ ಕುಮಾರ್ ಹಾಗೂ ಆರ್.ವಿ. ಕಾಲೇಜು ಮೆಟ್ರೊ ನಿಲ್ದಾಣಕ್ಕೆ ಕಿ.ರಂ. ನಾಗರಾಜ ಹೆಸರನ್ನು ಸೂಚಿಸಿದ್ದಾರೆ.

ಹಳದಿ ಮಾರ್ಗ: ತಲುಪಿದ ಬೋಗಿಗಳು



ಬೆಂಗಳೂರು: ‘ನಮ್ಮ ಮೆಟ್ರೊ’ ಹಳದಿ ಮಾರ್ಗಕ್ಕೆ ಐದನೇ ರೈಲಿನ ಎಲ್ಲ ಆರು ಬೋಗಿಗಳು ಬೆಂಗಳೂರಿಗೆ ತಲುಪಿವೆ. ಅಕ್ಟೋಬರ್ ಕೊನೇ ವಾರದಲ್ಲಿ ಐದನೇ ರೈಲಿನ ಸಂಚಾರ ಆರಂಭವಾಗಲಿದೆ.

ಹೆಬ್ಬಗೋಡಿ ಡಿಪೊದಲ್ಲಿ ಆರು ಬೋಗಿಗಳನ್ನು ಜೋಡಿಸಿದ ಬಳಿಕ ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಪರೀಕ್ಷೆಗಳು ನಡೆಯಲಿವೆ. ಆ ನಂತರ ಎರಡು ವಾರ ರಾತ್ರಿ ವೇಳೆಯಲ್ಲಿ ವಾಣಿಜ್ಯ ಮಾರ್ಗದಲ್ಲಿ ಪರೀಕ್ಷಾ ಸಂಚಾರ ನಡೆಯಲಿದೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ಅವರು ಶುಕ್ರವಾರ ಬೋಗಿಗಳನ್ನು ವೀಕ್ಷಿಸಿ ಅಧಿಕಾರಿಗಳಿಂದ ವಿವರ ಪಡೆದರು. ಐದನೇ ರೈಲು ಸಂಚಾರ ಆರಂಭಗೊಂಡಾಗ ಹಳದಿ ಮಾರ್ಗದಲ್ಲಿ ಪ್ರತಿ ಟ್ರಿಪ್‌ನ ಅಂತರ 15 ನಿಮಿಷಕ್ಕೆ ಇಳಿಯಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಬೆಂಗಳೂರು ಡ್ರೀಮ್ ಯುನೈಟೆಡ್ ತಂಡದ ಲಕ್ಷ್ಮಿಕಾಂತ್ ಬಿ.ಎಸ್.(ಎಡ) ಹಾಗೂ ಕೊಡಗು ಎಫ್‌ಸಿ ತಂಡದ ಟಿ.ಜೇಮ್ಸ್ ಅವರು ಚೆಂಡಿಗಾಗಿ ಸೆಣಸಿದರು –ಚಿತ್ರ: ಬಿ.ಕೆ.ಜನಾರ್ದನ

ಕೊಡಗು ಎಫ್‌ಸಿ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಹಮ್ಮದ್ ಉನೈಸ್ ಎಂ. (22ನೇ ನಿ. ಹಾಗೂ 36ನೇ ನಿ.) ಮತ್ತು ಬಿ.ಎಸ್. ಮೃಣಾಲ್ ಮುತುನ್ನಾ (45ನೇ ನಿ. ಹಾಗೂ 65ನೇ ನಿ.) ಅವರ ಅವಳಿ ಗೋಲುಗಳ ನೆರವಿನಿಂದ ಕೊಡಗು ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಡ್ರೀಮ್ ಯುನೈಟೆಡ್ ತಂಡದ ಕೆ. ಲಾಲರಿನ್‌ಫೆಲಾ (70ನೇ ನಿ.) ಏಕೈಕ ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ 5–0 ಗೋಲುಗಳಿಂದ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ವಿರುದ್ಧ ಗೆದ್ದಿತು.

ಬಿ.ಎಸ್ಸಿ ನರ್ಸಿಂಗ್ ಅಂತಿಮ ಸುತ್ತು: ಆಯ್ಕೆಗೆ ಅವಕಾಶ

ಬೆಂಗಳೂರು: ಬಿ.ಎಸ್ಸಿ ನರ್ಸಿಂಗ್, ಬಿ.ಫಾರ್ಮ, ಫಾರ್ಮ-ಡಿ ಕೋರ್ಸ್‌ಗಳಿಗೆ ಅಂತಿಮ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಅ.6ರ ಬೆಳಿಗ್ಗೆ 11ರ ಒಳಗೆ ಹೊಸದಾಗಿ ತಮ್ಮ ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಸರ್ಕಾರಿ ಕಾಲೇಜುಗಳಲ್ಲಿರುವ ಸೀಟುಗಳು ಹಾಗೂ ಖಾಸಗಿ ಕಾಲೇಜುಗಳ ‘ಜಿ’ ಸೀಟುಗಳು ಈ ಹಂಚಿಕೆ ವ್ಯಾಪ್ತಿಗೆ ಒಳಪಡುತ್ತವೆ. ಅಭ್ಯರ್ಥಿಗಳು ಈ ಹಿಂದಿನ ಸುತ್ತುಗಳಲ್ಲಿ ದಾಖಲಿಸಿದ ಆಯ್ಕೆಗಳನ್ನು ಈ ಹಂತದ ಹಂಚಿಕೆಗೆ ಪರಿಗಣಿಸುವುದಿಲ್ಲ. ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಕಾಲೇಜು, ವರ್ಗ ಮತ್ತು ಕೋರ್ಸ್‌ವಾರು ವಿವರ ನೋಡಿಕೊಂಡು ಆಯ್ಕೆ ನಮೂದಿಸಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಸೂಚಿಸಿದ್ದಾರೆ.

ಪಿಜಿ ನೀಟ್‌ಗೆ ಅ.4ರಿಂದ ಅರ್ಜಿ ಸಲ್ಲಿಕೆ: ಸ್ನಾತಕೋತ್ತರ ವೈದ್ಯಕೀಯ ಪದವಿ, ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು, ಅ.4ರಿಂದ ಅ.9 ಬೆಳಿಗ್ಗೆ 11ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಶನಿವಾರ, ಅಕ್ಟೋಬರ್ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 274 | ಪುಟ 24

prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ವೀರಗಾಸೆ ಬಾಲಕ
ಸಾಯಿಬಾಬಾ ಪುಣ್ಯಾರಾಧನೆ ನಿಮಿತ್ತ ದಾವಣಗೆರೆಯಲ್ಲಿ ಶುಕ್ರವಾರ ಶ್ರೀಸಾಯಿ ಟ್ರಸ್ಟ್ ಆಯೋಜಿಸಿದ್ದ ಮೆರವಣಿಗೆಯಲ್ಲಿ ಗಮನಸೆಳೆದ ವೀರಗಾಸೆ ವೇಷಧಾರಿ ಬಾಲಕ



ಮೀರಾಬಾಯಿಗೆ ಬೆಳ್ಳಿ
ನಾರ್ವೆಯಲ್ಲಿ ನಡೆಯುತ್ತಿರುವ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಮೀರಾಬಾಯಿ ಚಾನು ಅವರು ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದರು

ಸೆನ್ಸೆಕ್ಸ್ 81,207 | ನಿಫ್ಟಿ 24,894 | $/₹ 88.70

ದೇವರಿಗಾಗಿ ಕಾಳಗ: ಇಬ್ಬರ ಸಾವು

ಕರ್ನೂಲು ಜಿಲ್ಲೆಯ ದೇವರಗಟ್ಟದಲ್ಲಿ ಆಚರಣೆ • 100ಕ್ಕೂ ಅಧಿಕ ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಸಿರುಗುಪ್ಪ (ಬಳ್ಳಾರಿ): ರಾಜ್ಯದ ಗಡಿಗೆ ಹೊಂದಿಕೊಂಡಿರುವ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ದೇವರಗಟ್ಟ (ದೇವರಗಟ್ಟು) ಗ್ರಾಮದ ಮಾಳ ಮಲ್ಲೇಶ್ವರಸ್ವಾಮಿ ಬನ್ನಿ ಉತ್ಸವದ ಅಂಗವಾಗಿ ಗುರುವಾರ ತಡರಾತ್ರಿ ನಡೆದ ದೊಣ್ಣೆಗಳಿಂದ ಹೊಡೆದಾಡುವ ಆಚರಣೆಯ ವೇಳೆ ಇಬ್ಬರು ಮೃತಪಟ್ಟಿದ್ದಾರೆ.

'ಆದೋನಿ ತಾಲ್ಲೂಕಿನ ಆಂಜನೇಯಲು (50), ಹರಕೇರಿ ಗ್ರಾಮದ ತಿಮ್ಮಪ್ಪ (40) ಮೃತರು. 100ಕ್ಕೂ ಹೆಚ್ಚು ಜನರಿಗೆ ಪೆಟ್ಟಾಗಿದೆ. 40 ಜನರಿಗೆ ತೀವ್ರ ಗಾಯಗಳಾಗಿದ್ದು, ಐವರ ಸ್ಥಿತಿ ಗಂಭೀರವಾಗಿದೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ' ಎಂದು ಆಲೂರು ಪೊಲೀಸ್ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ರಾಜು ವೆಂಕಟೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ದೇವರಗಟ್ಟದಲ್ಲಿ ಮಲ್ಲೇಶ್ವರ ಸ್ವಾಮಿ ಮತ್ತು ಮಾಳಮ್ಮ ದೇವಿಯ ಕಲ್ಯಾಣೋತ್ಸವ ಮಧ್ಯರಾತ್ರಿ ಜರುಗಿತು. ರಾಜಬೀದಿಯಲ್ಲಿ ಚೈತ್ರಯಾತ್ರೆ ಆರಂಭವಾದಾಗ ದೇವರ ವಿಗ್ರಹಗಳನ್ನು ಒಯ್ಯಲು ವಿವಿಧ ಗ್ರಾಮಗಳ ಎರಡು ಗುಂಪುಗಳು ಪೈಪೋಟಿ ನಡೆಸಿದವು. ಈ ಪ್ರಕ್ರಿಯೆಯಲ್ಲಿ ಕೋಲುಗಳಿಂದ ಕಾದಾಟ ನಡೆಯಿತು.

ದೇವರಿಗಾಗಿ ಹೊಡೆದಾಡುವುದೇ ಆಚರಣೆ: ದೇವರಗಟ್ಟದಲ್ಲಿ ವಿಜಯದಶಮಿಯನ್ನು ಮಾಳಮ್ಮ ಮತ್ತು ಮಲ್ಲೇಶ್ವರ ಸ್ವಾಮಿಯ ಕಲ್ಯಾಣೋತ್ಸವವಾಗಿ ಆಚರಿಸಲಾಗುತ್ತದೆ. ಕಲ್ಯಾಣೋತ್ಸವದ ಬಳಿಕ ದೇವರ ವಿಗ್ರಹವನ್ನು ಪಾದಯಗಟ್ಟು, ರಾಕ್ಷಸಪಾದ, ಶಮಿವೃಕ್ಷ ಮತ್ತು ಉತ್ತುಬಸವನ ದೇವಾಲಯದ ಮೂಲಕ ಮೆರವಣಿಗೆಯಲ್ಲಿ ಒಯ್ಯಲಾಗುತ್ತದೆ.

'ಉತ್ಸವಮೂರ್ತಿಗಳನ್ನು ಗ್ರಾಮಕ್ಕೆ ಒಯ್ಯಲು ಗ್ರಾಮಸ್ಥರು ಯತ್ನಿಸುತ್ತಾರೆ. ದೊಣ್ಣೆಗಳಿಂದ ಹೊಡೆ ದಾಟ ತಾರಕಕ್ಕೇರುತ್ತದೆ. ಒಂದು ಗುಂಪಿನಲ್ಲಿ ನೇರಣಿಕಿ, ನೇರಣಿಕಿತಾಂಡ, ಕೊತ್ತಪೇಟ ಗ್ರಾಮದವರು ಇದ್ದರೆ, ಮತ್ತೊಂದು ಗುಂಪಿನಲ್ಲಿ ಅರಿಕೇರ, ಸುಳುವಾಯಿ, ಎಳ್ಳಾರ್ತಿ, ಬಿಳೇಹಾಳ್, ನಿದ್ರವತ್ತಿ, ಆಲೂರು ಗ್ರಾಮದವರು ಇರುತ್ತಾರೆ' ಎಂದು ಸ್ಥಳೀಯರು ತಿಳಿಸಿದರು.

▶ 7



ದೇವರಗಟ್ಟ ಗ್ರಾಮದ ಮಾಳ ಮಲ್ಲೇಶ್ವರಸ್ವಾಮಿ ಬನ್ನಿ ಉತ್ಸವದಲ್ಲಿ ದೊಣ್ಣೆಗಳನ್ನು ಹಿಡಿದು ಬಡಿದಾಟಕ್ಕೆ ನಿಂತಿದ್ದ ಗ್ರಾಮಸ್ಥರು

ಧ್ವನಿವರ್ಧಕ ಬಂದ್: ರಸ್ತೆಯಲ್ಲಿ ದೇವರಿಟ್ಟು ಪ್ರತಿಭಟನೆ

ಉಳ್ಳಾಲ (ದಕ್ಷಿಣ ಕನ್ನಡ): ನವರಾತ್ರಿ ಶೋಭಾಯಾತ್ರೆಗೆ ಸ್ತಬ್ಧಚಿತ್ರಗಳಲ್ಲಿ ಅಳವಡಿಸಿದ್ದ ಧ್ವನಿವರ್ಧಕವನ್ನು ಗುರುವಾರ ತಡರಾತ್ರಿ ವೇಳೆ ಬಂದ್ ಮಾಡಿಸಿದ್ದ ಪೊಲೀಸರ ಜೊತೆಗೆ ಯುವಕರು ವಾಗ್ವಾದ ನಡೆಸಿದರು.

ಅಲ್ಲದೆ, ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದನ್ನು ಖಂಡಿಸಿ ಭಕ್ತರು, ತಡರಾತ್ರಿ ಸುಮಾರು ಎರಡೂವರೆ ಗಂಟೆ ಕಾಲ ಪೊಲೀಸ್ ಠಾಣೆ ಮುಂಭಾಗದಲ್ಲಿ ಕುಳಿತು ಪ್ರತಿಭಟಿಸಿದರು.

ಸಾರ್ವಜನಿಕ ನವರಾತ್ರಿ, ಶಾರದಾ ಉತ್ಸವ ಸಮಿತಿ 78ನೇ ವರ್ಷದ ಶಾರದೋತ್ಸವ ಆಯೋಜಿಸಿತ್ತು. ಮೆರವಣಿಗೆ ರಾತ್ರಿ 1ರ ವೇಳೆಗೆ ಅಬ್ಬಕ್ಕ ವೃತ್ತ ತಲುಪಿತು. ಆಗ ಧ್ವನಿವರ್ಧಕ ಸ್ಥಗಿತಕ್ಕೆ ಉಳ್ಳಾಲ ಪಿಎಸ್‌ಐ ಸೂಚಿಸಿದರು. ಆಗ ಕೆಲ ಯುವಕರು ಪೊಲೀಸರ ನಡುವೆ ವಾಗ್ವಾದ ನಡೆಯಿತು.

ರಕ್ಷಿತ್, ಆಶಿಶ್ ಮತ್ತು ಅಶ್ವತ್ಥ್ ಹಾಗೂ ಕೆಲ ಪರಿಕರಗಳನ್ನು ವಶಕ್ಕೆ ಪಡೆದ ಪೊಲೀಸರ ಕ್ರಮದಿಂದ ಆಕ್ರೋಶಗೊಂಡ ಮಹಿಳೆಯರು ಸೇರಿದಂತೆ ಹಲವರು ಉಳ್ಳಾಲ ಪೊಲೀಸ್ ಠಾಣೆ ಮುಂದೆ ಸೇರಿ ಶಾರದಾ ವಿಗ್ರಹವನ್ನು ರಸ್ತೆಯಲ್ಲೇ ನಿಲ್ಲಿಸಿ ಪ್ರತಿಭಟನೆ ಆರಂಭಿಸಿದರು.

▶ 7

ತ್ರಿವಳಿ ಶತಕ 'ಸಂಭ್ರಮ'

ಅಹಮದಾಬಾದಿನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶುಕ್ರವಾರ ಭಾರತ ತಂಡದ ಮೂವರು ಬ್ಯಾಟರ್‌ಗಳು ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ಶತಕ ದಾಖಲಿಸಿದರು. ಅವರೆಲ್ಲರೂ ವಿಭಿನ್ನ ರೀತಿಯಲ್ಲಿ ಸಂಭ್ರಮಿಸಿದರು. ಕೆ.ಎಲ್. ರಾಹುಲ್ ಮಗುವಿನಂತೆ ತಮ್ಮ ಬಾಯಲ್ಲಿ ಬೆರಳುಗಳನ್ನಿಟ್ಟು ಸಂತಸವ್ಯಕ್ತಪಡಿಸಿದರು. ಧ್ರುವ ಜುರೇಲ್ 'ಆರ್ಮಿ ಸೆಲ್ಯೂಟ್' ಮಾಡಿದರು. ರವೀಂದ್ರ ಜಡೇಜ ತಮ್ಮ ಬ್ಯಾಟ್ ಅನ್ನೇ ಖಡ್ಗದಂತೆ ತಿರುಗಿಸಿದರು.



ಕೆ.ಎಲ್. ರಾಹುಲ್


100	ರನ್
197	ಎಸೆತ
12	ಬೌಂಡರಿ

▶ 11



ಧ್ರುವ ಜುರೇಲ್

ರನ್	125
ಎಸೆತ	210
ಬೌಂಡರಿ	15
ಸಿಕ್ಸರ್	3



ರವೀಂದ್ರ ಜಡೇಜ

ರನ್; ಔಟಾಗದೇ	104
ಎಸೆತ	176
ಬೌಂಡರಿ	6
ಸಿಕ್ಸರ್	5

- 9 ವರ್ಷಗಳ ನಂತರ ಸ್ವದೇಶದಲ್ಲಿ ಶತಕ ದಾಖಲಿಸಿದ ಕೆ.ಎಲ್. ರಾಹುಲ್
- ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಗಳಿಸಿದ ಧ್ರುವ ಜುರೇಲ್
- ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಂದ ತಮ್ಮ ವೃತ್ತಿಜೀವನದ ಆರನೇ ಶತಕ

'ಪಾಕ್‌ನ 12 ವಿಮಾನ ಧ್ವಂಸ'

ಪಾಕ್‌ಗೆ ಆದ ನಷ್ಟದ ಮಾಹಿತಿ ನೀಡಿದ ಏರ್‌ಚೀಫ್ ಮಾರ್ಷಲ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಎಫ್‌–16, ಜೆಎಫ್‌–17 ಸೇರಿದಂತೆ 11ರಿಂದ 12 ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂದು ಏರ್‌ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಹೇಳಿದರು.

93ನೇ ವಾಯುಪಡೆ ದಿನದ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಕಾರ್ಯಾಚರಣೆ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಆದ ನಷ್ಟ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಗುಪ್ತಚರ ವರದಿ ಮತ್ತು ಎಲೆಕ್ಟ್ರಾನಿಕ್ ಕಣ್ಗಾವಲು ಸಾಧನಗಳಿಂದ ಸಂಗ್ರಹಿಸಿದ ದಾಖಲೆಯ ಪ್ರಕಾರ, ಭಾರತದ ದಾಳಿಯಿಂದ ಆ ದೇಶದ 11ರಿಂದ 12 ವಿಮಾನಗಳು ಮತ್ತು ವಾಯುಗಾಮಿ ಎಚ್ಚರಿಕೆ ಮತ್ತು ನಿಯಂತ್ರಣ ವ್ಯವಸ್ಥೆ (ಎಡಬ್ಲ್ಯುಎಸಿಎಸ್) ನಾಶವಾಗಿವೆ ಅಥವಾ ಹಾನಿಗೊಳಗಾಗಿವೆ' ಎಂದು ತಿಳಿಸಿದರು.



ಭಾರತವು ನಿರ್ದಿಷ್ಟ ಗುರಿಯೊಂದಿಗೆ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಆರಂಭಿಸಿತು. ಜಗತ್ತಿಗೆ ಸಂದೇಶ ರವಾನಿಸುವ ಉದ್ದೇಶ ಈಡೇರಿದ ಬಳಿಕ ಸಂಘರ್ಷ ಶಮನಗೊಂಡಿತು

ಎ.ಪಿ.ಸಿಂಗ್, ಏರ್‌ಚೀಫ್ ಮಾರ್ಷಲ್

ಭಾರತದ ಸೇನಾಪಡೆಗಳು ನಡೆಸಿದ ದಾಳಿಯಲ್ಲಿ ಪಾಕಿಸ್ತಾನದ ಅನೇಕ ಉಗ್ರ ನೆಲೆಗಳೂ ಧ್ವಂಸಗೊಂಡಿವೆ. ಜೊತೆಗೆ ನಾಲ್ಕು ಸ್ಥಳಗಳಲ್ಲಿದ್ದ ರೆಡಾರ್‌ಗಳು, ಎರಡು ಕಡೆಗಳಲ್ಲಿನ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರಗಳು, ಎರಡು ವಾಯುನೆಲೆಗಳ ರನ್‌ವೇ ಮತ್ತು ಮೂರು ಹ್ಯಾಂಗರ್‌ಗಳು ಹಾನಿಗೊಳಗಾಗಿವೆ ಎಂದು ಮಾಹಿತಿ ನೀಡಿದರು.

'ನಮ್ಮ ವಾಯುನೆಲೆಗಳಲ್ಲಿ ಯಾವುದಾದರೂ ವಸ್ತುವಿಗೆ ಹಾನಿಯಾಗಿರುವ ಬಗ್ಗೆ ಒಂದೇ ಒಂದು ಫೋಟೊ ಲಭ್ಯವಿದೆಯೇ? ನಾವು ಪಾಕಿಸ್ತಾನದಲ್ಲಿ ಆದ ಹಾನಿಯ ಹಲವು ಫೋಟೊಗಳನ್ನು ಬಿಡುಗಡೆ ಮಾಡಿದ್ದೇವೆ. ಹೀಗಾಗಿ ಭಾರತದ ಯುದ್ಧವಿಮಾನಗಳನ್ನು ಹೊಡೆದು-ರುಳಿಸಲಾಗಿದೆ ಎಂಬ ಪಾಕಿಸ್ತಾನದ ಹೇಳಿಕೆಯು ಕಪೋಲಕಲ್ಪಿತ ಕಥೆಯಾಗಿದೆ. ಹಾಗೆಯೇ ಹೇಳಿಕೊಂಡು ಸಂತೋಷವಾಗಿರಲಿ' ಎಂದು ವ್ಯಂಗ್ಯ-ವಾಡಿದರು. ಆಪರೇಷನ್ ಸಿಂಧೂರದ ಬಳಿಕ ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಗಳು ತಮ್ಮ ನೆಲೆಗಳನ್ನು ಖೈಬರ್ ಪಖ್ತುಂಖ್ವಾಕ್ಕೆ ಸ್ಥಳಾಂತರಿಸಿವೆ ಎಂಬ ವರದಿಗೆ ಪ್ರತಿಕ್ರಿಯಿಸಿದ ಅವರು, 'ಅದು ನಿರೀಕ್ಷಿತ. ಆದರೆ ಅವರ ಅಡಗುದಾಣಗಳ ಮೇಲೆ ನಿಖರವಾಗಿ ದಾಳಿ ನಡೆಸುವ ಸಾಮರ್ಥ್ಯ ಭಾರತದ ವಾಯುಪಡೆಗಿದೆ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



2021ನೇ ಸಾಲಿನ ಚಲನಚಿತ್ರ ಪ್ರಶಸ್ತಿ: 'ದೊಡ್ಡಹಟ್ಟಿ ಬೋರೇಗೌಡ' ಅತ್ಯುತ್ತಮ ಚಿತ್ರ

ರಕ್ಷಿತ್, ಅರ್ಚನಾ ಅತ್ಯುತ್ತಮ ನಟ–ನಟಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: 2021ನೇ ಸಾಲಿನ ಕರ್ನಾಟಕ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಶುಕ್ರವಾರ ಪ್ರಕಟಗೊಂಡಿದ್ದು, ರಕ್ಷಿತ್ ಶೆಟ್ಟಿ ಅವರು 'ಚಾರ್ಲಿ 777' ಚಿತ್ರಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದು, ಅರ್ಚನಾ ಜೋಯಿಸ್ 'ಮ್ಯೂಟ್' ಚಿತ್ರಕ್ಕಾಗಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ 'ಯುವರತ್ನ' ಅತ್ಯುತ್ತಮ ಮನರಂಜನಾ ಚಿತ್ರ' ಎಂಬ ಹಿರಿಮೆಗೆ ಪಾತ್ರವಾಗಿದೆ.



'ಚಾರ್ಲಿ' ಚಿತ್ರದಲ್ಲಿ ರಕ್ಷಿತ್ ಶೆಟ್ಟಿ

ರಘು ಕೆ.ಎಂ ನಿರ್ದೇಶನದ 'ದೊಡ್ಡಹಟ್ಟಿ ಬೋರೇಗೌಡ' ಮೊದಲನೇ ಅತ್ಯುತ್ತಮ ಚಿತ್ರವಾಗಿದ್ದು, ಕಿರಣ್ ರಾಜ್ ನಿರ್ದೇಶನದ 'ಚಾರ್ಲಿ 777' ಎರಡನೇ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿದೆ.



ಅರ್ಚನಾ ಜೋಯಿಸ್

ಹೃದಯ ಶಿವ ನಿರ್ದೇಶನದ 'ಬಿಸಿಲು ಕುದುರೆ' ಮೂರನೇ ಅತ್ಯುತ್ತಮ ಚಿತ್ರವಾಗಿದೆ. ಕೃಷ್ಣಮೂರ್ತಿ ಚಮರಂ ನಿರ್ದೇಶನದ 'ಭಾರತೀಯ ಪ್ರಜೆಗಳಾದ ನಾವು' ಅತ್ಯುತ್ತಮ ಸಾಮಾಜಿಕ ಕಳಕಳಿಯ ಚಿತ್ರವಾಗಿ ಆಯ್ಕೆಗೊಂಡಿದೆ.

'ರತ್ನನ್ ಪ್ರಪಂಚ' ಚಿತ್ರಕ್ಕಾಗಿ ಪ್ರಮೋದ್ ಅತ್ಯುತ್ತಮ ಪೋಷಕ ನಟ ಹಾಗೂ ಉಮಾಶ್ರೀ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪತ್ರಕರ್ತ ಸದಾಶಿವ ಶೆಣೈ ಅಧ್ಯಕ್ಷತೆಯಲ್ಲಿ ಆಯ್ಕೆ ಸಲಹಾ ಸಮಿತಿ ರಚಿಸಲಾಗಿತ್ತು.

ಪ್ರಶಸ್ತಿ ಪಟ್ಟಿ ▶ 11

ಮಹಾರಾಣಿ ಕ್ಲಸ್ಟರ್ ವಿ.ವಿ ಘಟಿಕೋತ್ಸವದಲ್ಲಿ ಸಬಿಹಾ ಸಲಹೆ

‘ಕೌಶಲದ ಜತೆ ವೈಚಾರಿಕ ಪಠ್ಯವಿರಲಿ’

ಪ್ರಜಾವಾಣಿ ವಾರ್ತೆ



ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಅಂತರರಾಷ್ಟ್ರೀಯ ಮಹಿಳಾ ಕ್ರಿಕೆಟ್ ಆಟಗಾರ್ತಿ ವೇದ ಕೃಷ್ಣಮೂರ್ತಿ, ಲೇಖಕಿ ದು.ಸರಸ್ವತಿ , ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ನಟಿ ಭಾರತಿ ವಿಷ್ಣುವರ್ಧನ್ , ಹೋಮಿಯೋಪಥಿ ವೈದ್ಯ ಡಾ.ಬಿ.ಟಿ.ರುದ್ರೇಶ್, ಶಿಕ್ಷಣ ತಜ್ಞೆ ಎಚ್.ಎನ್.ಉಷಾ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಉದ್ಯೋಗ, ಕೌಶಲ ಆಧಾರಿತ ಶಿಕ್ಷಣ ನೀಡುವ ಜತೆಗೆ ಹೆಣ್ಣು ಮಕ್ಕಳನ್ನು ವೈಚಾರಿಕವಾಗಿ ಬೆಳೆಸುವ ಪಠ್ಯ ಅಳವಡಿಸಬೇಕು’ ಎಂದು ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ ಸಲಹೆ ನೀಡಿದರು.

ಶುಕ್ರವಾರ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ 2 ಹಾಗೂ 3ನೇ ಘಟಿಕೋತ್ಸವದಲ್ಲಿ ಅವರು ಭಾಷಣ ಮಾಡಿದರು.

‘ಮಹಿಳಾ ವಿಶ್ವವಿದ್ಯಾಲಯಗಳ ಪಠ್ಯವು ಮಹಿಳೆಯರ ಸಬಲೀಕರಣಕ್ಕೆ, ಅವರನ್ನು ವೈಚಾರಿಕರನ್ನಾಗಿ ಮಾಡುವುದಕ್ಕೆ ಪೂರಕವಾಗಿ ಇದೆಯೇ? ಮಹಿಳಾ ಲೋಕದೃಷ್ಟಿ, ಅವರ ಪರಂಪರಾಗತ ಜ್ಞಾನ ಗುರುತಿಸಿ, ಶೈಕ್ಷಣಿಕ ವಲಯದಲ್ಲಿ ಅವುಗಳಿಗೆ ಮಾನ್ಯತೆ ದೊರೆಯುವಂಥ ಕೆಲಸದಲ್ಲಿ ತೊಡಗಿದೆಯೇ?, ಇತರೆ ವಿಶ್ವವಿದ್ಯಾಲಯಗಳ ಪಠ್ಯದ ಮಾದರಿಯನ್ನೇ ಅವು ಅನುಸರಿಸುತ್ತಿವೆಯೇ ಎನ್ನುವ ಬಗ್ಗೆ ಮುಕ್ತ ಚರ್ಚೆ ಆಗಬೇಕಿದೆ’ ಎಂದರು.

‘ಸಾವಿತ್ರಿ ಬಾಯಿ ಫುಲೆ ಸೇರಿದಂತೆ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದ ನಮ್ಮ ಪೂರ್ವಜರ ಪ್ರಯತ್ನ, ಅಭಿವೃದ್ಧಿಯ ಪರಿಕಲ್ಪನೆಯ ಕನಸು ಇಂದು ನಮಗೂ ಹೊಸ ಸಾಮಾಜಿಕ ಕನಸು ಕಟ್ಟಲು ಪ್ರೇರಣೆಯಾಗಬೇಕಿದೆ. ಈಗಿನ ಕಾಲಘಟ್ಟಕ್ಕೆ ತಕ್ಕಂತೆ ದೇಶದಾದ್ಯಂತ ಸರ್ಕಾರಿ ಹಾಗೂ ಖಾಸಗಿ ಮಹಿಳಾ ವಿಶ್ವವಿದ್ಯಾನಿಲಯಗಳು ಆರಂಭವಾಗಿವೆ. ಆದರೆ, ಹೆಣ್ಣುಮಕ್ಕಳ ಯೋಚನೆಯಲ್ಲಿನ ಸ್ಪಷ್ಟತೆ, ಅಭಿವ್ಯಕ್ತಿಯಲ್ಲಿನ ತಾಜಾತನ, ನಿರ್ಭಿಡೆಯ ನಡಿಗೆ ವಾತಾವರಣ ಬಲಪಡಿಸುವುದು ಶಿಕ್ಷಣದೊಂದಿಗೆ ಹೆಚ್ಚೆಚ್ಚು ಆಗಬೇಕಿದೆ’ ಎಂದು ನುಡಿದರು.

ಪದವಿ ಪ್ರದಾನ ಮಾಡಿದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ಹೆಣ್ಣು ಮಕ್ಕಳಿಗೆ ಶಿಕ್ಷಣದ ಜತೆಗೆ ಉದ್ಯೋಗ ಪಡೆಯುವ ಅವಕಾಶಗಳು ಈಗ ಮೊದಲಿಗಿಂತಲೂ ಹೆಚ್ಚಿವೆ. ಸರ್ಕಾರದಿಂದ ಸೌಲಭ್ಯಗಳು ಸಿಗುತ್ತಿದ್ದು, ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಕುಲಪತಿ ಟಿ.ಎಂ.ಮಂಜುನಾಥ್ ಮಾತನಾಡಿ, ‘ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರಿಗೆ ಶಿಕ್ಷಣದ ಜತೆಗೆ ಉದ್ಯೋಗ ಸೃಷ್ಟಿಸುವ ಪುರಾತತ್ವ-ಶಾಸ್ತ್ರ, ಪ್ರವಾಸೋದ್ಯಮ ನಿರ್ವಹಣೆ ಕೋರ್ಸ್ ಆರಂಭಿಸಲಾಗುತ್ತಿದೆ’ ಎಂದರು.

2ನೇ ಘಟಿಕೋತ್ಸವ (2023–24)	
ಪದವಿ ಪಡೆದವರು	1,827
ರ‍್ಯಾಂಕ್ ವಿಜೇತರು	51
ಸ್ವರ್ಣ ಪದಕ ಪಡೆದವರು	24
3ನೇ ಘಟಿಕೋತ್ಸವ (2024–25)	
ಪದವಿ ಪಡೆದವರು	1,746
ರ‍್ಯಾಂಕ್ ಪಡೆದವರು	56
ಸ್ವರ್ಣ ಪದಕ ಪಡೆದವರು	28

ಮಹಾರಾಣಿ ಕಾಲೇಜು ಕ್ಲಸ್ಟರ್ ವಿ.ವಿ ಆದ ಮೇಲೆ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆಯಾಗಿದೆ. ಹಲವು ಸೌಲಭ್ಯಗಳೊಂದಿಗೆ ವಿದ್ಯಾರ್ಥಿನಿಯರ ಪ್ರಮಾಣ ಹೆಚ್ಚಿಸಲಾಗುತ್ತಿದೆ

ಡಾ.ಎಂ.ಸಿ.ಸುಧಾಕರ್,
ಉನ್ನತ ಶಿಕ್ಷಣ ಸಚಿವ

ಕುಲಸಚಿವರಾದ ಸೀಮಾ ನಾಯಕ್, ಎಸ್.ಸತೀಶ್, ಹಣಕಾಸು ಅಧಿಕಾರಿ ಎಂ.ಎಸ್.ಚೇತನ್ ಕುಮಾರ್, ವಿವಿಧ ವಿಭಾಗಗಳ ಡೀನ್‌ಗಳು, ಸಿಂಡಿಕೇಟ್ ಸದಸ್ಯರು ಹಾಜರಿದ್ದರು.

ಇನ್ನೂ ರಚನೆಯಾಗದ ಶೋಧನಾ ಸಮಿತಿ

ಮಹಾರಾಣಿ ಕ್ಲಸ್ಟರ್, ನೃಪತುಂಗ ವಿವಿ ಕುಲಪತಿಗಳ ಹುದ್ದೆ 11 ತಿಂಗಳಿಂದ ಖಾಲಿ

● ಎ.ಎಂ.ಸುರೇಶ

ಬೆಂಗಳೂರು: ಐದು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿಗಳು ನಿವೃತ್ತಿಯಾಗಿ 11 ತಿಂಗಳಾಗಿದೆ. ಆದರೆ, ನೂತನ ಕುಲಪತಿಗಳ ನೇಮಕ ಸಂಬಂಧ ಇದುವರೆಗೆ ಶೋಧನಾ ಸಮಿತಿಯೇ ರಚನೆಯಾಗಿಲ್ಲ.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ (ಎಂಸಿಯು) ಕುಲಪತಿಯಾಗಿದ್ದ ಪ್ರೊ.ಎಲ್.ಗೋಮತಿ ದೇವಿ, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಡಾ.ಶ್ರೀನಿವಾಸ ಬಳ್ಳಿ ಅವರು 2024ರ ನವೆಂಬರ್ 8ರಂದು ನಿವೃತ್ತಿಯಾಗಿದ್ದಾರೆ. ಅಂದಿನಿಂದ ಎರಡೂ ವಿ.ವಿಗಳ ಕುಲಪತಿ ಹುದ್ದೆ ಖಾಲಿ ಇದ್ದು, ಹೊಸಬರ ನೇಮಕ ಪ್ರಕ್ರಿಯೆಗೆ ಇನ್ನೂ ಚಾಲನೆ ಸಿಕ್ಕಿಲ್ಲ.

ಎಂಸಿಯುನಲ್ಲಿ ಕಳೆದ ನವೆಂಬರ್‌ನಿಂದ ಈ ವರ್ಷದ ಜೂನ್‌ವರೆಗೆ ಪ್ರೊ.ಸಿ.ಉಷಾದೇವಿ, ಪ್ರೊ.ಬಿ.ಕೆ.ಮೀರಾ ಅವರು ಹಂಗಾಮಿ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರೊ.ಟಿ.ಎಂ.ಮಂಜುನಾಥ ಅವರು ಈ ವರ್ಷದ ಜುಲೈ ಒಂದರಿಂದ ಹಂಗಾಮಿ ಕುಲಪತಿ ಯಾಗಿದ್ದಾರೆ. ಪ್ರೊ.ಫಜೀಹಾ ಸುಲ್ತಾನ ಅವರು ನೃಪತುಂಗ ವಿ.ವಿ.ಯ ಹಂಗಾಮಿ ಕುಲಪತಿಯಾಗಿದ್ದು ಆದಷ್ಟು ಬೇಗ ಕಾಯಂ ಕುಲಪತಿಯ ನೇಮಕ ಮಾಡಬೇಕು ಎಂಬ ಬೇಡಿಕೆ ಶೈಕ್ಷಣಿಕ ವಲಯದಲ್ಲಿ ಕೇಳಿಬಂದಿದೆ.

> **ತಡವಾಗಿಯಾದರೂ ವಿವಿ ನಿಯಮಗಳಿಗೆ ಒಪ್ಪಿಗೆ ನೀಡಿರುವುದು ಒಳ್ಳೆಯ ಬೆಳವಣಿಗೆ. ಸರ್ಕಾರ ಆದಷ್ಟು ಬೇಗ ಶೋಧನಾ ಸಮಿತಿ ರಚಿಸಿ, ಕುಲಪತಿ ನೇಮಕ ಮಾಡಿದರೆ ಅನುಕೂಲವಾಗಲಿದೆ.**
> **ಟಿ.ಎಂ.ಮಂಜುನಾಥ್,** ಹಂಗಾಮಿ ಕುಲಪತಿ, ಮಹಾರಾಣಿ ಕ್ಲಸ್ಟರ್ ವಿ.ವಿ

‘ಕಾಯಂ ಕುಲಪತಿಗಳು ಇಲ್ಲದೆ ಇರುವುದರಿಂದ ಪ್ರಮುಖವಾದ ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಸ್ಥಳೀಯರೇ ಹಂಗಾಮಿ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಾರೆ. ಅವರ ಸೂಚನೆ/ನಿರ್ದೇಶನಗಳನ್ನು ಸಹೋದ್ಯೋಗಿಗಳು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಅಲ್ಲದೆ ಇದು ತಾತ್ಕಾಲಿಕ ಹೊಣೆಗಾರಿಕೆ ಎಂಬುದು ಅವರಿಗೂ ಗೊತ್ತಿರುತ್ತದೆ. ಹೀಗಾಗಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಮುಂದಾಗುವುದಿಲ್ಲ’ ಎಂದು ಕುಲಸಚಿವರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಹೊಸ ಯೋಜನೆಗಳು ಜಾರಿಯಾಗಬೇಕಾದರೆ, ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಕಾಯಂ ಕುಲಪತಿ ಇರಬೇಕು. ಹಂಗಾಮಿ ಕುಲಪತಿ ದೈನಂದಿನ ಆಡಳಿತ ನೋಡಿಕೊಳ್ಳುತ್ತಾರೆ ಅಷ್ಟೇ. ಅವರಿಂದ ಹೆಚ್ಚಿನ ನಿರೀಕ್ಷೆ ಮಾಡುವಂತಿಲ್ಲ. ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಆದಾಯ ಮೂಲಗಳು ಇರುವುದಿಲ್ಲ. ಶುಲ್ಕ ಹೆಚ್ಚಳ ಮಾಡಲು ಹೋದರೆ ವಿದ್ಯಾರ್ಥಿಗಳು ಗಲಾಟೆ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಹಂಗಾಮಿ ಕುಲಪತಿ ತೊಂದರೆ ತೆಗೆದುಕೊಳ್ಳಲು ಹೋಗುವುದಿಲ್ಲ, ಕಾಯಂ ಕುಲಪತಿ ಇದ್ದರೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮನವೊಲಿಕೆ ಮೂಲಕ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿದೆ’ ಎಂದು ಅವರು ವಿವರಿಸಿದರು.

‘ಸಾಮಾನ್ಯವಾಗಿ ಹಾಲಿ ಕುಲಪತಿಯ ನಿವೃತ್ತಿಗೂ ಮೊದಲೇ, ಹೊಸ ಕುಲಪತಿ ನೇಮಕಕ್ಕೆ ಶೋಧನಾ ಸಮಿತಿ ರಚಿಸಿ ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ. ನಿವೃತ್ತಿಯಿಂದ ತೆರವಾಗಿದ್ದ ಐದು ವಿಶ್ವವಿದ್ಯಾಲಯಗಳಿಗೆ ಈಗಾಗಲೇ ಕುಲಪತಿಗಳ ನೇಮಕವಾಗಿದೆ. ಆದರೆ, ಮಹಾರಾಣಿ ಕ್ಲಸ್ಟರ್ ಮತ್ತು ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಕ್ರಮಕೈಗೊಳ್ಳದೆ ಇರುವುದು ಸರಿಯಲ್ಲ’ ಎಂದು ಪ್ರಾಧ್ಯಾಪಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ವಿಲೀನದ ಗುಮ್ಮ!

ಬಿಜೆಪಿ ಸರ್ಕಾರದ ಅವಧಿಯಲ್ಲಿ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸಿದ್ದು, ಬಹುತೇಕ ಈಗ ಜಿಲ್ಲೆಗೊಂದು ವಿಶ್ವವಿದ್ಯಾಲಯಗಳಿವೆ. ಸಿಬ್ಬಂದಿ, ಅನುದಾನ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸದೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಆರಂಭಿಸುವ ಅಗತ್ಯವಿದೆಯೇ ಎಂಬ ಪ್ರಶ್ನೆ ಕೆಲವು ತಿಂಗಳುಗಳ ಹಿಂದೆ ಕೇಳಿ ಬಂದಿತ್ತು.

ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಕುರಿತು ಚರ್ಚೆ ನಡೆದಾಗ, ಬಿಜೆಪಿ ಇದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಆಗ ಪ್ರತಿಕ್ರಿಯಿಸಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಿಲ್ಲ. ವಿಲೀನ ಮಾಡುತ್ತೇವೆ’ ಎಂದು ತಿಳಿಸಿದ್ದರು.

ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ, ಆದರೆ, ಇನ್ನೂ ವರದಿ ನೀಡಿಲ್ಲ. ನೃಪತುಂಗ ಹಾಗೂ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದೊಂದಿಗೆ ವಿಲೀನ ಮಾಡಲಾಗುತ್ತದೆ. ಇದರಿಂದಾಗಿಯೇ ಕುಲಪತಿಗಳ ನೇಮಕಕ್ಕೆ ಶೋಧನಾ ಸಮಿತಿ ರಚಿಸಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಆದರೆ, ಯಾರಿಗೂ ಈ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ನಿಯಮಗಳಿಗೆ ರಾಜ್ಯಪಾಲರ ಒಪ್ಪಿಗೆ

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ನಿಯಮಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ. ಈಗ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ತಾಂತ್ರಿಕವಾಗಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಇದ್ದು, ಅವರಲ್ಲಿ ವಿಶ್ವವಿದ್ಯಾಲಯದಲ್ಲಿ ಉಳಿಯುವವರು ಯಾರು? ಹೊರಗೆ ಹೋಗುವವರು ಯಾರು? ಎಂಬುದು ಕೆಲವೇ ದಿನಗಳಲ್ಲಿ ನಿರ್ಧಾರವಾಗಲಿದೆ.

‘ವಿಶ್ವವಿದ್ಯಾಲಯದಲ್ಲಿ ಉಳಿಯುವ ಅಥವಾ ಹೊರಗೆ ಹೋಗುವ ಆಯ್ಕೆಯ ಅವಕಾಶವನ್ನು ಸಿಬ್ಬಂದಿಗೆ ನೀಡಿದ್ದು, ಅವರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿದೆ. ಶೇ 75ರಷ್ಟು ಸಿಬ್ಬಂದಿ ವಿಶ್ವವಿದ್ಯಾಲಯದಲ್ಲಿ ಉಳಿಯಲು ನಿರ್ಧರಿಸಿದ್ದಾರೆ’ ಎಂದು ಹಂಗಾಮಿ ಕುಲಪತಿ ಟಿ.ಎಂ.ಮಂಜುನಾಥ್ ತಿಳಿಸಿದರು.

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ





ಮಳೆಗಾಲಕ್ಕೆ ಕೊಕ್ ನೀಡಿ ಚಳಿಗಾಲ ದಾಂಗುಡಿ ಇಡುವ ದಿನಗಳಲ್ಲಿ ಬರುವ 'ಭೂಮಿ ಹುಣ್ಣಿಮೆ'ಯು ಭೂರಮೆಗೆ ಸೀಮಂತ ಮಾಡುವ ಸಂಭ್ರಮದ ಹಬ್ಬ. ಹಸಿರ ಸಿರಿಯಲ್ಲಿ ಕಂಗೊಳಿಸುವ ಭೂತಾಯಿಯ ಬಸಿರಿನ ಬಯಕೆ ತೀರಿಸಲು ಅಂದು ಬಗೆಬಗೆ ತಿನಿಸುಗಳು ತಯಾರಾಗುತ್ತವಾದರೂ ಸಿಹಿಗುಂಬಳದ ಖಾದ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ

ಭೂಮಿತಾಯಿಗೆ ಕಡುಬಿನ ಬಾನ



ಭೂಮಿಪೂಜೆಯಲ್ಲಿ ನಿರತವಾದ ಮಹಿಳೆ   ಸಂಗ್ರಹ ಚಿತ್ರಗಳು

• ಸುಮಾ ಬಿ.

'ಚಿನ್ನಿಕಾಯಿ ಸಿಕ್ತಾ?'.

'ಇಲ್ಲ... ಆಚೆ ಮನೆ ಜಯಕ್ಕಂಗೆ ಹೇಳಿನಿ. ಹ್ವಾದ್ವರ್ಷ ತಿಂಗ್ಳ್ ಮುಂಚೆ ಹೇಳಿದ್ರೂ ಸಿಗ್ಲಿಲ್ಲ. ಈ ವರ್ಷಾದ್ರೂ ತೆಗ್ದಿಡು ಅಂತ. ನೋಡ್ಬೇಕು, ಈ ಸರಿನಾದ್ರೂ ಸಿಗ್ತದೋ, ಇಲ್ಲ ಅದ್ನೂ ಯಾರಾದ್ರೂ ಕಿತ್ಕಂಡು ಹೋಗ್ತಾರೋ ಗೊತ್ತಿಲ್ಲ. ನಿಂಗೆ?'

'ಈ ಸರಿ ನಮ್ಮನೆಯವ್ರಿಗೇ ಹೇಳ್ಬಿಟ್ಟಿನಿ. ಎಲ್ಲಿಂದನಾದ್ರೂ ಆಯ್ತು ತಗಬಾ. ತಂದ್ರೆ ಅಷ್ಟೇ ಕಡುಬು ಕಟ್ಟದು ಅಂತ. ವರ್ಷಾವರ್ಷಾ ನಾವೆಲ್ಲಿಂದ ಹೊಂಚ್‌ಕಂಡು ಹೋಗಿ ತಗಬರದು ಬಿಡು...'

'ಭೂಮಿ ಹುಣ್ಣಿಮೆ' ಇನ್ನೂ ವಾರ, ಹದಿನೈದು ದಿನ ಇರುವಾಗಲೇ ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಚಿನ್ನಿಕಾಯಿಗೆ (ಸಿಹಿಗುಂಬಳ) ಹೀಗೆ 'ಮುಂಗಡ ಬುಕಿಂಗ್' ಶುರುವಾಗುತ್ತದೆ. ಹುಣ್ಣಿಮೆ ದಿನ ಎಲ್ಲರ ಮನೆಯಲ್ಲೂ ಚಿನ್ನಿಕಾಯಿಯಿಂದ ಮಾಡಿದ 'ಕಡುಬು' ಘಮಗುಡಲೇಬೇಕು. ಏಕೆಂದರೆ ಅದು 'ಭೂಮಿತಾಯಿ'ಯ ಇಷ್ಟದ ಖಾದ್ಯವಂತೆ! ಈ ಕಡುಬಿನ ತಯಾರಿಗಾಗಿ, ಕುಂಬಳಬಳ್ಳಿ ಇದ್ದವರ ಮನೆಗೆ ಹದಿನೈದು ದಿನ, ತಿಂಗಳ ಮುಂಚಿತವಾಗೇ 'ಆರ್ಡರ್'ಗಳು ಬರುತ್ತವೆ. ಎಲ್ಲೂ ಸಿಗದಿದ್ದರೆ ಹಬ್ಬದ ಹಿಂದಿನ ದಿನ ಕುಂಬಳಕಾಯಿಗಾಗಿ ಅಲೆದಾಟ ಶುರುವಾಗುತ್ತದೆ.

ಮಳೆಗಾಲ ಕೊನೆಗೊಳ್ಳುವ, ಚಳಿಗಾಲದ ಶುರುವಿನ ದಿನಗಳಲ್ಲಿ ಬರುವ 'ಭೂಮಿ ಹುಣ್ಣಿಮೆ' ಹಸಿರುಟ್ಟ ಭೂರಮೆಗೆ ಸೀಮಂತ ಮಾಡುವ ಹಬ್ಬ. ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆಯ ಕೆಲ ಭಾಗಗಳಲ್ಲಿ ಹಾಗೂ ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಸೀಮಂತ ಕಾರ್ಯದ ಸಂಭ್ರಮ ಮೇಳೈಸಿರುತ್ತದೆ. ಪ್ರಕೃತಿಯೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಂಡಿರುವ ರೈತರು ಈ ಹಬ್ಬದ ಮೂಲಕ ನಿಸರ್ಗ ಪ್ರೀತಿ ಸಾರುತ್ತಾರೆ. ಮಲೆನಾಡಿನ ಭಾಗದಲ್ಲಿ ಭೂಮಣ್ಣಿಹಬ್ಬ, ಭೂಮಿ ಹುಣ್ಣಿಮೆ, ಭೂಮ್ತ್ಯವ್ವನ ಹಬ್ಬವೆಂದು ಜನಜನಿತವಾಗಿದ್ದರೆ, ಉತ್ತರ ಕರ್ನಾಟಕದ ಮಂದಿಗೆ ಇದು ಶೀಗೆ ಹಬ್ಬ, ಸೀಗೆ ಹುಣ್ಣಿಮೆ. ಮುಂಗಾರಿನಲ್ಲಿ ಬಿತ್ತಿರುವ ಬೀಜ ಹೊಡೆ ಹಾಯುವ ಸಮಯದಲ್ಲಿ ಭೂಮಿತಾಯಿಯನ್ನು ತುಂಬು ಗರ್ಭಿಣಿ ಎಂದು ಭಾವಿಸಿ, ಆಕೆಯ ಬಯಕೆಯನ್ನು ಈಡೇರಿಸಲು ಅಂದು ಬಗೆಬಗೆ ತಿನಿಸುಗಳು ತಯಾರಾಗುತ್ತವೆ.

ಚಿನ್ನಿಕಾಯಿ ಕಡುಬು, ಕರಿಗಡುಬು, ಬಳ್ಳಿಹುಗ್ಗಿ, ಅಕ್ಕಿ ಹುಗ್ಗಿ, ಕೇಸರಿಬಾತ್, ಹೆಸರುಕಾಳು ಉಂಡೆ, ಮೊಸರು ಬುತ್ತಿ, ಕರಿ ಬುತ್ತಿ, ಬಿಳಿ ಬುತ್ತಿ, ಉದ್ದಿನ ವಡೆ, ಕಜ್ಜಾಯ, ಪಾಯಸ, ರೊಟ್ಟಿ, ಅನ್ನ–ಸಾಂಬಾರ್, ಮೂರ್ನಾಲ್ಕು ಬಗೆಯ ಪಲ್ಯಗಳು, ಕೋಸಂಬರಿ, ಉಪ್ಪಿನಕಾಯಿ, ಹಪ್ಪಳ–ಸಂಡಿಗೆ; ಮಾಂಸಾಹಾರ ಸವಿಯುವವರ ಮನೆಗಳಲ್ಲಿ ಇವುಗಳ ಜೊತೆಗೆ ಮೀನಿನ ಸಾರು, ಕೋಳಿಯಿಂದ ಮಾಡಿದ ಖಾದ್ಯಗಳೂ ನೈವೇದ್ಯಕ್ಕೆ ಅಣಿಯಾಗುತ್ತವೆ.

ಇವುಗಳಲ್ಲಿ ಯಾವುದು ತಪ್ಪಿದರೂ ಅಭ್ಯಂತರ ಇಲ್ಲ, ಆದರೆ ಕುಂಬಳಕಾಯಿ ಕಡುಬಿನ ಹಾಜರಿ ಇರಲೇಬೇಕು. ಅದಿಲ್ಲದಿದ್ದರೆ ಭೂತಾಯಿಯ ಸೀಮಂತ ಕಾರ್ಯ ಪೂರ್ಣಗೊಳ್ಳದು ಎನ್ನುವ ಭಾವನೆ ಇದೆ. ಶಿವಮೊಗ್ಗದ ಶಿಕಾರಿಪುರ, ಸೊರಬ ಭಾಗದಲ್ಲಂತೂ ಈ ಕಡುಬಿನ ನೈವೇದ್ಯ ಕಡ್ಡಾಯ. ನೈವೇದ್ಯಕ್ಕೆ ಇರಿಸಿದ ಕಡುಬನ್ನು ಪೂಜೆಯೆಲ್ಲ ಸಂಪನ್ನವಾದ ಬಳಿಕ ಭೂಮಿಯಲ್ಲಿ ಗುಂಡಿ ತೆಗೆದು ಹುಗಿಯುತ್ತಾರೆ. ಅದು ಎಷ್ಟು ದಿನಗಳಾದರೂ ಕೆಡದೆ ಹಾಗೇ ಇರುತ್ತದೆ ಎನ್ನುವ ನಂಬಿಕೆಯೊಂದು ಈ ಭಾಗದಲ್ಲಿದೆ.



ಮನೆಯ ಹಿಂದಿನ ತಿಪ್ಪೆಯಲ್ಲೋ ಗದ್ದೆಯಲ್ಲೋ ಹುಟ್ಟಿ ಬೆಳೆಯುವ ಕುಂಬಳಕಾಯಿ ಬಳ್ಳಿಗೆ ಆರೈಕೆಯ ಅಗತ್ಯವಿಲ್ಲ. ಆದರೆ, ಕಾಯಿ ಬಲಿತ ನಂತರ ಅದನ್ನು ಕಾಪಿಟ್ಟುಕೊಳ್ಳುವುದೇ ಸವಾಲು. ಹಿಂದೆಲ್ಲ, ಬಳ್ಳಿಯಲ್ಲಿನ ಕುಂಬಳಕಾಯಿಗಳು ರಾತ್ರೋರಾತ್ರಿ ಮಾಯವಾಗುತ್ತಿದ್ದವು. ಇಡೀ ಊರಿಗೆ ಅಗತ್ಯವಿರುವಷ್ಟು ಕುಂಬಳಕಾಯಿ ಪೂರೈಕೆ ಆಗ ಇರುತ್ತಿರಲಿಲ್ಲ. ಈಗಾದರೆ ಮಾರುಕಟ್ಟೆಯಲ್ಲಿ ಕುಂಬಳಕಾಯಿ ಸಿಗುತ್ತದೆ. ಗ್ರಾಮೀಣ ಭಾಗದಲ್ಲಷ್ಟೇ ಈ ಚಿನ್ನಿಕಾಯಿ ಸಿಗುತ್ತಿತ್ತು. ಬಳ್ಳಿ ಹೂಬಿಟ್ಟು, ಕಾಯಿಯು ಹಿಡಿಯಷ್ಟು ದಪ್ಪವಾಗುತ್ತಿದ್ದಂತೆ 'ಮುಂಗಡ ಬುಕಿಂಗ್' ಶುರುವಾಗುತ್ತಿತ್ತು. ದೊಡ್ಡ ಎಲೆಗಳ ಬಳ್ಳಿಯ ಸಂದಿನಲ್ಲಿ ಯಾರಿಗೂ ಕಾಣದಂತೆ ಕಾಯಿಯನ್ನು ಮರೆಮಾಚಲಾಗುತ್ತಿತ್ತು. ಆದರೂ ಬಳ್ಳಿಯಿಂದ ಕುಂಬಳಕಾಯಿ ಮಾಯವಾಗಿರುತ್ತಿತ್ತು. ಎಷ್ಟೋ ಬಾರಿ ಹಿತ್ತಲಲ್ಲಿ ಬಳ್ಳಿ ಇದ್ದರೂ ಅದರ ಮಾಲೀಕರಿಗೇ ಒಂದು ಕಾಯಿಯೂ ದಕ್ಕದ ದೌರ್ಭಾಗ್ಯ ಒದಗುತ್ತಿತ್ತು. ಅಷ್ಟರಮಟ್ಟಿಗೆ ಈ ಕುಂಬಳಕಾಯಿಗೆ ಬೇಡಿಕೆ ಇರುತ್ತಿತ್ತು. ಕುಂಬಳಕಾಯಿ ಸಿಕ್ಕ ಬಳಿಕ ಕಡುಬಿನ ತಯಾರಿ ಶುರುವಾಗುತ್ತಿತ್ತು. ಗದ್ದೆ, ತೋಟಗಳಲ್ಲಿ ಸಿಗುತ್ತಿದ್ದ ಅರಸಿನದ ಎಲೆಗಳನ್ನು ತಂದು, ಅವಕ್ಕೆ ನೀರಿನಲ್ಲಿ ಮಜ್ಜನ ಮಾಡಿಸಿದರೆಂದರೆ ಹುಣ್ಣಿಮೆ ಹಿಂದಿನ ದಿನದ ಹಬ್ಬದ ತಯಾರಿ ಚುರುಕುಗೊಳ್ಳುತ್ತಿತ್ತು.

ಅಕ್ಕಿ ಹುರಿದು, ಬೀಸುವ ಕಲ್ಲಿನಲ್ಲಿ ರವೆ ಮಾಡಿ, ಅದನ್ನು ಸಾಣಿಸಿ, ಅದಕ್ಕೊಂದಿಷ್ಟು ಗೋಧಿ ರವೆ (ಕಾಲು ಭಾಗದಷ್ಟು) ಬೆರೆಸಿ ಬದಿಗಿಡುತ್ತಿದ್ದರು. ಕುಂಬಳಕಾಯಿಯ ದಪ್ಪ ಸಿಪ್ಪೆಯನ್ನು ಹೆರೆದು ತೆಗೆದು ತುರಿಯಬೇಕು. ಈ ತುರಿಗೆ ಹುರಿದು ಸಿದ್ಧಪಡಿಸಿದ ರವೆ, ಕರಿಎಳ್ಳು, ಏಲಕ್ಕಿ–ಶುಂಠಿ ಪುಡಿ, ರುಚಿಗೆ ತಕ್ಕಷ್ಟು ಬೆಲ್ಲ ಹಾಕಿ ಚೆನ್ನಾಗಿ ಮಿಶ್ರಣ ಮಾಡಬೇಕು. ರವೆ ಅರಳಿಕೊಳ್ಳಲು ಅರ್ಧ ಗಂಟೆ ಹಾಗೇ ಬಿಡಬೇಕು. ಬಳಿಕ, ತೊಳೆದಿಟ್ಟ ಅರಸಿನದ ಎಲೆಯನ್ನು ಬಟ್ಟೆಯಲ್ಲಿ ಒರೆಸಿಕೊಂಡು, ಎರಡು ಎಲೆಗಳನ್ನು ಪ್ಲಸ್ ಚಿಹ್ನೆಯ ರೀತಿ ಇಟ್ಟು, ಮಧ್ಯಕ್ಕೆ ಮಿಶ್ರಣ ಇಟ್ಟು ನಾಲ್ಕೂ ಭಾಗದಿಂದ ಮಡಚಬೇಕು. ಹೀಗೆ ಮಿಶ್ರಣ ಖಾಲಿಯಾಗುವವರೆಗೂ ಎಲೆಗಳನ್ನು ಬಳಸಿ ಕಡುಬು ಕಟ್ಟಬೇಕು. ಅವುಗಳನ್ನು ಇಡ್ಲಿ ಪಾತ್ರೆ ಅಥವಾ ದಪ್ಪ ತಳದ ಪಾತ್ರೆಯಲ್ಲಿ ಕೆಳಕ್ಕೆ ನೀರು ಹಾಕಿ, ಮಧ್ಯಕ್ಕೆ ಚಿಬ್ಬಲ ಅಥವಾ ತೂತು ಇರುವ ತಟ್ಟೆ ಇಟ್ಟು ಅದರ ಮೇಲೆ ಕಡುಬುಗಳನ್ನು ಇಟ್ಟು 40ರಿಂದ 50 ನಿಮಿಷ ಬೇಯಿಸಬೇಕು. ಕಡುಬು ಬೆಂದಿರುವ ಖಾತರಿಗೆ ಕೆಲವರು ಒಂದು ಚಿಕ್ಕ ಬಟ್ಟಲಿಗೆ ಅಕ್ಕಿ ಹಾಗೂ ನೀರು ಹಾಕಿ ಕಡುಬಿನ ಮೇಲ್ಭಾಗದಲ್ಲಿ ಇಡುತ್ತಾರೆ. ಅಕ್ಕಿ ಬೆಂದು ಚೆನ್ನಾಗಿ ಅನ್ನ ಆಗಿದ್ದರೆ ಕಡುಬು ಬೆಂದಿದೆಯೆಂಬ ಖಾತರಿ. ಅರಸಿನದೆಲೆ, ಕಡುಬಿನ ಘಮ ಮನೆ ತುಂಬಾ ವ್ಯಾಪಿಸುತ್ತಿತ್ತು. ಹಬೆಯಲ್ಲಿ ಬೇಯುವ ಕಡುಬು ಸ್ವಾದಿಷ್ಟ ಹಾಗೂ ಪೌಷ್ಟಿಕಾಂಶಯುಕ್ತ ಖಾದ್ಯ. ಭೂಮಿ ಹುಣ್ಣಿಮೆ ದಿನ ಇದನ್ನು ಸವಿಯಲೆಂದೇ ಮನೆಮಂದಿಯೆಲ್ಲ ತುದಿಗಾಲಲ್ಲಿ ನಿಂತಿರುತ್ತಾರೆ.

ಕುಂಬಳಕಾಯಿಯು ಹೇರಳ ಪೌಷ್ಟಿಕಾಂಶದ ಕಾರಣಕ್ಕೆ ಈಗ ಬಹಳಷ್ಟು ಖ್ಯಾತಿ ಪಡೆದಿದೆ. ಗದ್ದೆಯಲ್ಲಿ ಇದನ್ನು ಬೆಳೆದು ರಾಜ್ಯದಿಂದ ರಾಜ್ಯಕ್ಕೆ, ವಿದೇಶಕ್ಕೆ ರವಾನಿಸುವ ಆರ್ಥಿಕ ಮೂಲವಾಗಿಯೂ ಕುಂಬಳಕಾಯಿ ಪಾರಮ್ಯ ಸಾಧಿಸಿದೆ. ಅಂತೆಯೇ ಗಾರ್ಗಿ, ಹಲ್ವಾ, ಚಟ್ನಿ, ಪಲ್ಯ, ಚೀನಿಕಾಯಿ ಕೊಟ್ಟಿಗೆ (ಇಡ್ಲಿ) ಹೀಗೆ ತರಹೇವಾರಿ ಖಾದ್ಯಗಳೂ ಇದರೊಟ್ಟಿಗೆ ಬೆಸೆದುಕೊಂಡು ಆಹಾರಪ್ರಿಯರ ಜಿಹ್ವಾಚಾಪಲ್ಯ ತಣಿಸುತ್ತಿವೆ.



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

ಚಟ ಬಿಡಿಸೋಣ

• ಮಗನಿಗೆ 14 ವರ್ಷ. ಗಂಡ– ಹೆಂಡತಿ ಇಬ್ಬರೂ ಸಾಫ್ಟ್‌ವೇರ್ ಕೆಲಸದಲ್ಲಿದ್ದೇವೆ. ಈಗೀಗ ಮಗನ ನಡವಳಿಕೆಯ ಬಗ್ಗೆ ಚಿಂತೆ ಆಗಿದೆ. ಅವನು ಬಾತ್‌ರೂಂಗೆ ಹೋದರೆ ಒಂದು ಗಂಟೆಯಾದರೂ ಹೊರಗೆ ಬರುವುದಿಲ್ಲ. ಶಾಲಾ ಚಟುವಟಿಕೆಗೆಂದು ಮೊಬೈಲ್ ಬಳಸುತ್ತಾನೆ. ಆದರೆ, ಎಲ್ಲದರಲ್ಲಿಯೂ ಗೂಗಲ್ ಹಿಸ್ಟರಿ, ಸರ್ಚ್ ಹಿಸ್ಟರಿಯನ್ನು ಡಿಲೀಟ್ ಮಾಡುತ್ತಾನೆ. ಆತ ಅಶ್ಲೀಲ ವಿಡಿಯೊಗಳನ್ನು ನೋಡುವ ಚಟ ಹತ್ತಿಸಿಕೊಂಡಿದ್ದಾನೆ ಎಂದು ಮನಸ್ಸು ಬಲವಾಗಿ ಹೇಳುತ್ತಿದೆ. ಒಂದೊಮ್ಮೆ ಅಪರೋಕ್ಷವಾಗಿ ಸಿಕ್ಕಿಬಿದ್ದಿದ್ದಾನೆ. ಗಲಾಟೆ ಮಾಡಿ, ಅವನ ಮನಸ್ಸನ್ನು ಗಾಸಿಗೊಳಿಸಲು ಇಷ್ಟವಿಲ್ಲ. ಈ ಬಗ್ಗೆ ಅವನಲ್ಲಿ ಮುಕ್ತವಾಗಿ ಮಾತನಾಡುವುದು ಹೇಗೆ ಎಂಬುದು ತೋಚುತ್ತಿಲ್ಲ. ಅವನನ್ನು ಆ ಚಟದಿಂದ ಹೊರತರುವುದು ಹೇಗೆ?

ಹೆತ್ತವರು ಏನು ಮಾಡಬೇಕು ಎಂಬುದನ್ನು ಮೊದಲು ವಿವೇಚಿಸಬೇಕು. ಗಲಾಟೆ ಮಾಡಲೇ ಬೇಕಾಗಿಲ್ಲ. ಆದರೆ, ಈ ಕುರಿತು ಮುಕ್ತವಾಗಿ ಚರ್ಚೆ ಮಾಡುವ ಅಗತ್ಯವಂತೂ ಇದ್ದೇ ಇದೆ. ಅದು ಅಷ್ಟು ಸುಲಭವಲ್ಲದಿದ್ದರೂ ಸತ್ಯವನ್ನು ಎದುರಿಸುವ ಅನಿವಾರ್ಯ ಇದೆ. ನೀವು ಆತನನ್ನು ಕೂರಿಸಿಕೊಂಡು ಮಾತನಾಡುವುದು ಬಹಳ ಮುಖ್ಯ.

ಆತನಿಗೆ ಈ ಚಟ ಎಲ್ಲಿಂದ ಬಂತು ಎನ್ನುವುದನ್ನು ತಿಳಿದುಕೊಳ್ಳುವುದು ಅಗತ್ಯ. ಆ ರೀತಿಯ ಚಟ ಯಾಕೆ ಒಳ್ಳೆಯದಲ್ಲ ಎಂಬುದನ್ನು ಅವನಿಗೆ ಮನಗಾಣಿಸಬೇಕು. ಜೊತೆಗೆ, ಅದನ್ನು ಸರಿಪಡಿಸುವುದಕ್ಕೆ ಮನಃಶಾಸ್ತ್ರಜ್ಞರಿಂದ ಚಿಕಿತ್ಸೆಯನ್ನೂ ಕೊಡಿಸಬೇಕು. ಚಟವನ್ನು ನಿವಾರಿಸುವುದು ಒಂದೆರಡು ದಿನಗಳಲ್ಲಿ ಆಗುವ ಕೆಲಸವಲ್ಲದಿದ್ದರೂ ತಾಳ್ಮೆಯಿಂದ ನಿಧಾನವಾಗಿ ಆತನನ್ನು ಹೊರತರುವ ಕಡೆಗೆ ಗಮನ ಹರಿಸಬೇಕು.

ಹೆತ್ತವರಿಗೆ ಒಂದಿಷ್ಟು ಸಲಹೆ: ಮಕ್ಕಳಿಗೆ ಸಾಧ್ಯವಾದಷ್ಟೂ ಮೊಬೈಲ್ ಕೊಡದಿದ್ದರೆ ಒಳ್ಳೆಯದು. ಅನೇಕ ದೇಶಗಳಲ್ಲಿ ಸುಮಾರು 12 ವರ್ಷಗಳವರೆಗೆ ಮಕ್ಕಳಿಗೆ ಮೊಬೈಲ್ ಕೊಡುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಕೊಡುವುದು ಅನಿವಾರ್ಯವೇ ಆದರೆ, ಸಾಧ್ಯವಾದಷ್ಟೂ ಕೀ-ಪ್ಯಾಡ್ ಇರುವಂತಹ ಸಣ್ಣ ಫೋನ್ ಕೊಡಿ. ಸ್ಮಾರ್ಟ್‌ಫೋನ್ ಕೊಡುವುದು ಅನಿವಾರ್ಯವಾದರೆ, 'ಪೇರೆಂಟಲ್ ಕಂಟ್ರೋಲ್' ಆಯ್ಕೆಯನ್ನು ಹಾಕಿಡಿ. ಆಗ ಮಕ್ಕಳು ಏನೆಲ್ಲಾ ನೋಡುತ್ತಿದ್ದಾರೆ ಎಂಬುದು ನಿಮಗೆ ಆಗಿಂದಾಗ್ಗೆ ತಿಳಿಯುತ್ತಿರುತ್ತದೆ. ಈಗ ನಡೆಯುತ್ತಿರುವ ಸೈಬರ್ ಅಟ್ಯಾಕ್‌ನಂತಹ ವಿಚಾರಗಳ ಕುರಿತು ಅವರಲ್ಲಿ ಅರಿವು ಮೂಡಿಸಿ. ಮಕ್ಕಳ ಜೊತೆಗೆ ನೀವು ಕೂಡ ಸ್ಕ್ರೀನ್ ಟೈಮ್ ಕಡಿಮೆ ಮಾಡಿ. ಪ್ರಕೃತಿಯ ನಡುವೆ ಸಮಯ ಕಳೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಇಂದಿನ ಎ.ಐ. ಯುಗದಲ್ಲಿ, ಮಕ್ಕಳ ಪಾಲನೆ- ಪೋಷಣೆಯ ವಿಷಯದಲ್ಲಿ ಬಹಳ ಜಾಗರೂಕರಾಗಿರುವ ಅಗತ್ಯವಿದೆ. ಈಗಿನ ಪೋಷಕರು ತಮ್ಮ ಹೆತ್ತವರ ವರ್ತನೆಗಳ ಅನುಸಾರ ನಡೆದುಕೊಂಡರೆ ಸರಿಯಾಗದು. ಕಾಲಕ್ಕೆ ತಕ್ಕಂತೆ ತಮ್ಮ ವಿಧಾನಗಳನ್ನು ಬದಲಾಯಿಸಿಕೊಳ್ಳಬೇಕು.

ಬಾಣಂತನ ಅಮ್ಮನಿಗೆ ಸಾಟಿಯಿಲ್ಲ

ಬಾಣಂತನ ಯಾರ ಕೈಯಲ್ಲಿ ಮಾಡಿಸಿಕೊಳ್ಳುವುದು ಸೂಕ್ತ? ತಾಯಿಯಿಂದಲೋ ಅತ್ತೆಯಿಂದಲೋ? ಯಾರಾದರೂ ಈ ಪ್ರಶ್ನೆ ಕೇಳಿದರೆ, 'ಅಯ್ಯೋ ಅದರಲ್ಲಿ ಕೇಳುವುದೇನಿದೆ? ಅಮ್ಮನ ಕೈಲಿ ಬಾಣಂತನ ಮಾಡಿಸಿಕೊಳ್ಳುವುದು ಎಲ್ಲ ಹೆಣ್ಣುಮಕ್ಕಳ ಕನಸಲ್ಲವೇ? ಅಷ್ಟಕ್ಕೂ ಅದು ಅವರ ಜನ್ಮಸಿದ್ಧ ಹಕ್ಕು ಸಹ' ಎಂಬ ಉತ್ತರ ಬಹುತೇಕ ಹೆಂಗಳೆಯರಿಂದ ಬರುತ್ತದೆ.

ಇತರರು ಎತ್ತಿಕೊಳ್ಳಲೂ ಭಯಪಡುವ ಪುಟ್ಟ ಕಂದಮ್ಮನಿಗೆ ಎಣ್ಣೆ ತಿಕ್ಕಿ, ಸ್ನಾನ ಮಾಡಿಸಿ ಕಣ್ರೆಪ್ಪೆಯಂತೆ ಕಾಪಾಡುವುದರಿಂದ ಹಿಡಿದು, ಹಸಿ ಬಾಣಂತಿಗೆ ಪಥ್ಯದೂಟ ಕೊಟ್ಟು, ಶೀತ ಹಿಡಿಯದಂತೆ ಬೆಚ್ಚಗೆ ಇರಿಸುವವರೆಗೂ ನಿದ್ದೆಗೆಟ್ಟು ಆರೈಕೆ ಮಾಡಲು ಅಮ್ಮನಿಗಿಂತ ಹೆಚ್ಚಿನ ಬಂಧು ಬೇರೆ ಯಾರಾದರೂ ಇರಲು ಸಾಧ್ಯವೇ ಎಂದು ಮರುಪ್ರಶ್ನಿಸುವವರೂ ಇದ್ದಾರೆ.

ಹೌದು, ಇಂತಹವರ ನಂಬಿಕೆ ಖಂಡಿತ ಸುಳ್ಳಲ್ಲ ಎಂದು ಹೇಳುತ್ತಿದೆ, ಈ ದಿಸೆಯಲ್ಲಿ ನಡೆದ ಅಧ್ಯಯನವೊಂದು. ಅಷ್ಟೇ ಅಲ್ಲ, ತಾಯಿಯಿಂದ ಆರೈಕೆ ಮಾಡಿಸಿಕೊಳ್ಳುವ ಬಾಣಂತಿಯರ ಆರೋಗ್ಯವು ಅತ್ತೆಯಿಂದ ಬಾಣಂತನ ಮಾಡಿಸಿಕೊಳ್ಳುವವರ ಆರೋಗ್ಯಕ್ಕಿಂತಲೂ ಉತ್ತಮವಾಗಿರುತ್ತದೆ ಎಂದು ಸಹ ಇದು ಹೇಳಿದೆ. 'ಅಯ್ಯೋ ಇಂತಹ ಮಾತಿನ ಹಿಂದೆ, ಅತ್ತೆಯ ಜೊತೆ ಕಾದಾಡಿಕೊಂಡ ಸೊಸೆಯಂದಿರ ಕರಾಮತ್ತು ಇರಬಹುದು' ಎಂದು ಯಾರೂ ಮೂಗು ಮುರಿಯುವಂತಿಲ್ಲ.

ಏಕೆಂದರೆ, ಅತ್ತೆಗೆ ಹೋಲಿಸಿದರೆ, ತಾಯಿಯಿಂದ ಆರೈಕೆ ಮಾಡಿಸಿಕೊಂಡವರು ಹೆಚ್ಚು ಆರೋಗ್ಯಪೂರ್ಣವಾಗಿ ಇದ್ದುದು ಈ ಅಧ್ಯಯನದಿಂದ ದೃಢಪಟ್ಟದೆ.

ದೇಶದ ವಿವಿಧೆಡೆಯ ತಾಯಿ-ಆರೈಕೆದಾರರನ್ನು ಒಳಗೊಂಡ 551 ಜೋಡಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಈ ಅಂಶ ಸ್ಪಷ್ಟವಾಗಿದೆ. ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವ ವಿದ್ಯಾಲಯ, ಯೋಸ್‌ಐಯ್ಡ್ ಇನೊವೇಷನ್ ಫೌಂಡೇಷನ್ ಹಾಗೂ ಬೆಂಗಳೂರಿನ ನೂರಾ ಹೆಲ್ತ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಈ ಅಧ್ಯಯನವು ಇನ್ನಿತರ ಕೆಲವು ಸಂಗತಿಗಳ ಬಗ್ಗೆಯೂ ಬೆಳಕು ಚೆಲ್ಲಿದೆ.

'ಪಿಎಲ್‌ಒಎಸ್' ನಿಯತಕಾಲಿಕದಲ್ಲಿ ಈ ಎಲ್ಲ ವಿಷಯಗಳನ್ನು ಒಳಗೊಂಡ ಅಧ್ಯಯನ ವರದಿ ಪ್ರಕಟವಾಗಿದೆ.



ಕರ್ನಾಟಕವೂ ಭಾಗಿ

ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಪಂಜಾಬ್‌ನ 28 ಜಿಲ್ಲಾ ಆಸ್ಪತ್ರೆಗಳಲ್ಲಿ 2018ರ ಸೆಪ್ಟೆಂಬರ್‌ನಿಂದ 2020ರ ಮೇ ನಡುವಿನ ಅವಧಿಯಲ್ಲಿ ಮಗುವಿಗೆ ಜನ್ಮ ನೀಡಿದ 18,436 ತಾಯಂದಿರನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ನಂತರ, ಈ ಪೈಕಿ 551 ತಾಯಿ-ಆರೈಕೆದಾರ ಜೋಡಿಗಳಿಗೆ ಸಂಬಂಧಿಸಿದ ಅಧ್ಯಯನದ ಅಂಶಗಳನ್ನು ಅಂತಿಮ ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಹೆರಿಗೆಯಾಗಿ ಆಸ್ಪತ್ರೆಯಿಂದ ಮನೆಗೆ ಬಂದ ಒಂದು ತಿಂಗಳ ನಂತರ, ತಾಯಂದಿರಿಂದ ಉತ್ತರ ಹಾಗೂ ಪ್ರತಿಕ್ರಿಯೆಗಳನ್ನು ಪಡೆಯಲಾಯಿತು.

ಶಿಶುವಿನ ಆರೈಕೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿಯು ಕುಟುಂಬಗಳಲ್ಲಿ ಯಾವ ರೀತಿ ಹಂಚಿಕೆಯಾಗುತ್ತದೆ ಎಂಬ ಬಗ್ಗೆ ಇಲ್ಲಿ ಹೊಸ ಹೊಳಹುಗಳು ಸಿಕ್ಕಿವೆ. ನವಜಾತ ಶಿಶು ಅಥವಾ ತನ್ನದೇ ಆರೈಕೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ, ಜನ್ಮ ನೀಡಿದ ತಾಯಂದಿರು ಭಾಗಿಯಾಗುವುದು ಬಹಳ ಸೀಮಿತ ಪ್ರಮಾಣದಲ್ಲಿದೆ. ಇದು ಮೂರನೇ ಒಂದರಷ್ಟಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿದೆ ಎಂಬುದನ್ನು ತಂಡದ ತಜ್ಞರು ದಾಖಲಿಸಿದ್ದಾರೆ.

ಇದನ್ನೆಲ್ಲಾ ತಿಳಿದ ಮೇಲೆ, ಸೊಸೆಯನ್ನು ಮಗಳಂತೆಯೇ ಕಾಣುವ ಅತ್ತೆಯಂದಿರು ಪೆಚ್ಚಾಗಬೇಕಿಲ್ಲ. ತಾಯ್ತನ ಎನ್ನುವುದು ಕರುಳಿನ ಸಂಬಂಧವನ್ನೂ ಮೀರಿದ್ದು. ಅಂತಹದ್ದೊಂದು ಭಾವನೆಗೆ ಹೆತ್ತಮ್ಮನೇ ಆಗಬೇಕೆಂದಿಲ್ಲ. ಮಗನ ಬದುಕಿನಲ್ಲಿ ಸೊಸೆಯ ಪ್ರಾಮುಖ್ಯವನ್ನು ಅರಿತ ಅತ್ತೆಯು ಮಗ–ಸೊಸೆಯ ನಡುವೆ ಎಂದಿಗೂ ಭೇದ ಎಣಿಸಲಾರಳು. ಹಾಗಾಗಿ, ಸೊಸೆಯಲ್ಲಿ ಮಗಳನ್ನು ಕಾಣುವ ಅತ್ತೆಯ ಕಕ್ಕುಲಾತಿಯು ಹೆತ್ತಮ್ಮನ ಕಳಂಕರಹಿತ ವಾತ್ಸಲ್ಯವನ್ನೇ ಉಣಬಡಿಸಬಲ್ಲದು ಎಂಬುದು ಅನುಭವದ ಮಾತು. ಈ ಮಾತಿನ ಹಿಂದೆ ಸಾರ್ವಕಾಲಿಕವಾದ ಸತ್ಯ ಅಡಗಿದೆ ಎನ್ನುತ್ತಾರೆ ಪ್ರಾಜ್ಞರು.

ಆಧಾರ: ಪಿಟಿಐ



ಮೈ–ಮನಕ್ಕೆ ಹಿತ ನಿಂಬೆಹುಲ್ಲಿನ ಟೀ

• ವಾತ್ಸಲ್ಯ ಎಚ್.ಬಿ.

ಈಗಿನ ಒತ್ತಡದ ಜೀವನಶೈಲಿಯಲ್ಲಿ, ಕೆಲಸ ಮುಗಿಸಿ ಮನೆಗೆ ಬಂದಾಗ ಪ್ರತಿಯೊಬ್ಬರಿಗೂ ಮೊದಲು ಬೇಕೆನಿಸುವುದು ಮನಸ್ಸಿಗೆ ಮುದ ನೀಡುವ ಬಿಸಿಬಿಸಿಯಾದ ಪಾನೀಯ. ಆದರೆ ಅದು ಟೀ, ಕಾಫಿಯ ಬದಲು ಆರೋಗ್ಯಕರ ಪಾನೀಯವಾಗಿದ್ದರೆ ಮನಸ್ಸಿಗೆ ಮತ್ತು ಮೈಗೆ ಎರಡಕ್ಕೂ ಉತ್ತಮವಾಗಿರುತ್ತದೆ. ಅಂತಹ ಕೆಲವು ಪಾನೀಯಗಳಲ್ಲಿ ನಿಂಬೆಹುಲ್ಲಿನ ಟೀ ಒಂದು. ನಮ್ಮ ಮನೆಯ ಕೈತೋಟದಲ್ಲಿ ಬೆಳೆಸಿರುವ ನಿಂಬೆಹುಲ್ಲು, ಮನೆಯವರೆಲ್ಲರೂ ತಮ್ಮ ದಿನಚರಿಯನ್ನು ಉತ್ತಮ ಸ್ವಾದದೊಂದಿಗೆ ಪ್ರಾರಂಭಿಸುವಂತೆ ಮಾಡಿದೆ.

ನಿಂಬೆಹುಲ್ಲಿನ ಟೀ ಉಪಯೋಗಗಳು ಹೀಗಿವೆ:

- **ಜೀರ್ಣಕ್ರಿಯೆ ಸುಧಾರಣೆ**– ಅಜೀರ್ಣ, ಉಬ್ಬಸ, ಅಸ್ವಸ್ಥತೆ ಕಡಿಮೆ ಮಾಡುತ್ತದೆ.
- **ರಕ್ತದ ಒತ್ತಡ ನಿಯಂತ್ರಣ**– ನಿಯಮಿತವಾಗಿ ಸೇವಿಸಿದರೆ ಬಿ.ಪಿ. ನಿಯಂತ್ರಣಕ್ಕೆ ಸಹಾಯಕ.
- **ರೋಗನಿರೋಧಕ ಶಕ್ತಿ ಹೆಚ್ಚಳ**– ವಿಟಮಿನ್ ಸಿ ಹಾಗೂ ಆ್ಯಂಟಿ ಆಕ್ಸಿಡೆಂಟ್ಸ್ ಇರುವುದರಿಂದ ಜ್ವರ, ಶೀತ ತಡೆಯುತ್ತದೆ.
- **ಮಾನಸಿಕ ಶಾಂತಿ**– ಒತ್ತಡ, ಆತಂಕ ಕಡಿಮೆ ಮಾಡಿ ಮನಸ್ಸಿಗೆ ಶಾಂತಿ ನೀಡುತ್ತದೆ.
- **ತೂಕ ನಿಯಂತ್ರಣ**– ಕೊಬ್ಬು ಕರಗಿಸಲು ಹಾಗೂ ಮೆಟಬಾಲಿಸಂ ಹೆಚ್ಚಿಸಲು ಸಹಾಯ ಮಾಡುತ್ತದೆ.
- **ಚರ್ಮ ಮತ್ತು ಕೂದಲು ಆರೋಗ್ಯ**– ರಕ್ತ ಶುದ್ಧಿಯಾಗುವುದರಿಂದ ಚರ್ಮ ತಾಜಾ ಆಗಿ ಕಾಣಿಸುತ್ತದೆ, ಕೂದಲು ಉದುರುವಿಕೆ ಕಡಿಮೆ ಆಗುತ್ತದೆ.
- **ವಿಷನಾಶಕ**– ದೇಹದ ಅಜೀರ್ಣ ವಸ್ತುಗಳನ್ನು ಹೊರಹಾಕಲು ಸಹಾಯ ಮಾಡುತ್ತದೆ.

ಗಮನಿಸಿ: ಗರ್ಭಿಣಿಯರು, ಹಾಲೂಡಿಸುವ ತಾಯಂದಿರು ಅಥವಾ ದೀರ್ಘಕಾಲದ ಆರೋಗ್ಯ ಸಮಸ್ಯೆ ಇರುವವರು ವೈದ್ಯರ ಸಲಹೆಯಿಲ್ಲದೆ ಹೆಚ್ಚು ಸೇವಿಸಬಾರದು. ಇತರರಿಗೆ ದಿನಕ್ಕೆ 1–2 ಕಪ್ ಸಾಕು, ಹೆಚ್ಚು ಸೇವಿಸಿದರೆ ತಲೆನೋವು ಅಥವಾ ಹೊಟ್ಟೆ ತೊಂದರೆ ಉಂಟಾಗಬಹುದು.

ರಸಾಸ್ವಾದ

ತಯಾರಿಸುವ ಸರಳ ವಿಧಾನ

ಸಾಮಗ್ರಿ: ನಿಂಬೆಹುಲ್ಲಿನ ನಾಲ್ಕೈದು ತಾಜಾ ಎಳೆಗಳು. ನೀರು– 2 ಕಪ್, ಜೇನು/ಬೆಲ್ಲ– ರುಚಿಗೆ ತಕ್ಕಂತೆ, ಸ್ವಲ್ಪ ಶುಂಠಿ ಅಥವಾ ಏಲಕ್ಕಿ.

ವಿಧಾನ: ನೀರನ್ನು ಒಂದು ಪಾತ್ರೆಯಲ್ಲಿ ಕುದಿಸಬೇಕು. ಅದಕ್ಕೆ ನಿಂಬೆಹುಲ್ಲಿನ ಎಲೆಗಳನ್ನು ಚೂರು ಮಾಡಿ ಹಾಕಿ. ಬೇಕಿದ್ದರೆ ಸ್ವಲ್ಪ ಶುಂಠಿ ಅಥವಾ ಏಲಕ್ಕಿ ಸೇರಿಸಬಹುದು. 5–7 ನಿಮಿಷ ಕುದಿಸಿ. ಇಷ್ಟವಾದರೆ ಜೇನುತುಪ್ಪ ಅಥವಾ ಬೆಲ್ಲ ಸೇರಿಸಿ ಬಿಸಿಯಾಗಿ ಇರುವಾಗಲೇ ಕುಡಿಯಿರಿ. ಬೆಳಿಗ್ಗೆ ಮತ್ತು ಸಂಜೆ ಕುಡಿದರೆ ಶರೀರ ಹಗುರವಾಗುತ್ತದೆ, ಮನಸ್ಸು ಚುರುಕಾಗುತ್ತದೆ.



ಬೇಕಾಗಿದ್ದಾರೆ ನ್ಯಾಯದೇವತೆಯರು

• ಮೈತ್ರೇಯಿ ಸಚ್ಚಿದಾನಂದ ಹೆಗಡೆ



ಸಮಾನತೆಯ ತಳಹದಿ ಇಲ್ಲದ ಸಾಮಾಜಿಕ ವ್ಯವಸ್ಥೆಯು ಪಾಲುದಾರರಾಗಿರುವ ಎಲ್ಲರನ್ನೂ ಕ್ರಮೇಣ ಬಾಧಿಸುತ್ತದೆ. ಇದಕ್ಕೆ, ವ್ಯವಸ್ಥೆಯಿಂದ ಲಾಭ ಪಡೆಯುವ ಪುರುಷಪ್ರಧಾನ ಸಮಾಜ, ಜಾತಿ ಪದ್ಧತಿ ಅನುಸರಿಸುವವರೂ ಹೊರತಲ್ಲ. ತುಳಿತಕ್ಕೆ ಒಳಪಡುವವರು ಅವಕಾಶ, ಹಣ ಮತ್ತು ಹಲವು ಸವಲತ್ತುಗಳಿಂದ ವಂಚಿತರಾಗಿ ನೊಂದರೆ, ವ್ಯವಸ್ಥೆಯನ್ನು ವೈಭವೀಕರಿಸುವವರು ಕಠೋರ ನಿಲುವಿನ ಪಾತ್ರಧಾರಿಗಳು ಸೃಷ್ಟಿಸುವ ಸ್ವಾತಂತ್ರ್ಯರಹಿತ ಸ್ಥಿತಿ, ಸಮಾಜದ ನಿರೀಕ್ಷೆಗಳ ಭಾರದ ಸುಳಿಯಲ್ಲಿ ಸಿಲುಕಿಕೊಳ್ಳುತ್ತಾರೆ. ಹಾಗಾಗಿ, ಸಮಾನತೆಯು ಬರೀ ಶೋಷಿತರ ಹಿತಕ್ಕಾಗಿ ಸಾಧಿಸಬೇಕಾದ ಗುರಿಯಲ್ಲ.

ಇಂತಹ ಸಮಾನತೆಯು ದೇಶದ ನ್ಯಾಯ ನಿರ್ಣಯ ಮಾಡುವ ನ್ಯಾಯಮೂರ್ತಿಗಳ ವಿಷಯದಲ್ಲೇ ಕಾಣಸಿಗದಿದ್ದರೆ ಹೇಗೆ?

ಈಗ ನಮ್ಮ ಸುಪ್ರೀಂ ಕೋರ್ಟ್‌ನ ಪರಿಸ್ಥಿತಿಯೂ ಇದೇ ಆಗಿದೆ. ಅಲ್ಲಿ ಇರುವ 38 ನ್ಯಾಯಮೂರ್ತಿಗಳ ಪೈಕಿ, ಕರ್ನಾಟಕದಿಂದ ಪದೋನ್ನತಿ ಹೊಂದಿರುವ ಬಿ.ವಿ.ನಾಗರತ್ನ ಏಕೈಕ ಮಹಿಳೆಯಾಗಿದ್ದಾರೆ. ಸುಪ್ರೀಂ ಕೋರ್ಟ್‌ಗೆ 2021ರ ನಂತರ ಮಹಿಳಾ ನ್ಯಾಯಮೂರ್ತಿಗಳ ನೇಮಕವೇ ಆಗಿಲ್ಲ. ಉತ್ತರಾಖಂಡ, ತ್ರಿಪುರಾ, ಮೇಘಾಲಯ ಮತ್ತು ಮಣಿಪುರ ಹೈಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳೇ ಇಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯವಾದಿಗಳ ಸಂಘ ಇತ್ತೀಚೆಗೆ ಹೊರಡಿಸಿದ ಪ್ರಕಟಣೆಯಲ್ಲಿ ಉಲ್ಲೇಖಿಸಿದೆ. ದೇಶದಾದ್ಯಂತ ಹೈಕೋರ್ಟ್‌ಗಳಲ್ಲಿ 670 ಪುರುಷ ನ್ಯಾಯಮೂರ್ತಿಗಳಿದ್ದರೆ, ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ 103 ಮಾತ್ರ.

ಹಾಗಾದರೆ ಮಹಿಳಾ ನ್ಯಾಯಮೂರ್ತಿಗಳು ಸರಿ ಸಂಖ್ಯೆಯಲ್ಲಿ ನ್ಯಾಯಪೀಠಕ್ಕೆ ಬಂದ ಮಾತ್ರಕ್ಕೆ ಅಸಮಾನತೆ ದೂರವಾಗುವುದೇ? ಇಲ್ಲ, ಮಹಿಳೆಯರೆಲ್ಲರೂ ಯಾವಾಗಲೂ ಲಿಂಗ ಅಸಮಾನತೆಯನ್ನು ತೊಡೆದುಹಾಕುವತ್ತ ಗಮನಹರಿಸುತ್ತಾರೆ ಎಂದು ಹೇಳುವುದು ಅಸಾಧ್ಯ. ಕೇರಳದಲ್ಲಿ ಇದ್ದ ಮಾತೃಪ್ರಧಾನ ಕೂಡು ಕುಟುಂಬದ ಪದ್ಧತಿಯನ್ನು ರದ್ದುಗೊಳಿಸಿ ಕಾನೂನು ಹೊರಡಿಸಿದ್ದು ರಾಣಿ ಸೇತು ಲಕ್ಷ್ಮಿಬಾಯಿ. ಬ್ರಿಟಿಷ್ ಶಿಕ್ಷಣ ಪಡೆದಿದ್ದ ರಾಣಿಯ ದೃಷ್ಟಿಯಲ್ಲಿ ಮಾದರಿ ಕುಟುಂಬದ ಪರಿಕಲ್ಪನೆಯು ಮಾತೃಪ್ರಧಾನ ಕುಟುಂಬದ ಪ್ರತೀಕವಾದ 'ಮರುಮಕ್ಕತಾಯ' ಪದ್ಧತಿಗಿಂತ ಭಿನ್ನವಾಗಿತ್ತು. ಹಾಗಾಗಿ, ಇಂಗ್ಲಿಷ್ ಶಿಕ್ಷಣ ಪಡೆದ ನಾಯರ್ ಪುರುಷ ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿಯಲು ರಾಣಿಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಜಪಾನ್‌ನಲ್ಲಿ ಮದುವೆಯಾದ ಜೋಡಿಗೆ ಒಂದೇ ಅಡ್ಡ ಹೆಸರಿಡಬೇಕು ಎಂಬ ಕಾನೂನನ್ನು 2015 ಮತ್ತು 2021ರಲ್ಲಿ ಪ್ರಶ್ನೆ ಮಾಡಲಾಗಿತ್ತು. ಆ ಕಾನೂನನ್ನು ಎತ್ತಿ ಹಿಡಿದವರಲ್ಲಿ ಮಹಿಳಾ ನ್ಯಾಯಮೂರ್ತಿಗಳೂ ಇದ್ದರು.

ಭಾರತದಲ್ಲಿ ಶಬರಿಮಲೆ ದೇವಸ್ಥಾನಕ್ಕೆ, ಋತುಮತಿಯಾಗುವ ವಯಸ್ಸಿನ ಮಹಿಳೆಯರಿಗೆ ಪ್ರವೇಶದ ಹಕ್ಕಿಲ್ಲ ಎಂದು ತೀರ್ಪಿತ್ತು, ಪ್ರವೇಶದ ಪರವಾಗಿ ನಿಂತ ಬಹುಮತದ ತೀರ್ಪಿನ ವಿರುದ್ಧ ವಿಧಿ ಬರೆದ ಏಕಮಾತ್ರ ನ್ಯಾಯಮೂರ್ತಿ ಇಂದು ಮಲ್ಹೋತ್ರಾ. ಹುಡುಕುತ್ತಾ ಹೋದರೆ ಇಂತಹ ಅವೆಷ್ಟೋ ಉದಾಹರಣೆಗಳು ನಮಗೆ ಕಾಣಸಿಗುತ್ತವೆ. ಹೀಗಾಗುವುದಕ್ಕೆ ಕಾರಣಗಳು ಹಲವು.

ನ್ಯಾಯಮೂರ್ತಿಯು ಮಹಿಳೆಯೇ ಆಗಿದ್ದರೂ ಅವರು ಸವಲತ್ತು, ಅಧಿಕಾರ, ಮೇಲ್ವರ್ಗದ ಹಿನ್ನೆಲೆಯವರಾಗಿದ್ದರೆ, ಅವರ ಮೇಲೆ ಈ ಸಂಗತಿಗಳು ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಇಂಗ್ಲೆಂಡಿನ ವಲಸಿಗ ಮಹಿಳಾ ನ್ಯಾಯಮೂರ್ತಿಯೊಬ್ಬರು, 'ಎಲ್ಲಿ ನಾನು ಪಕ್ಷಪಾತಿಯಾಗಿ ವರ್ತಿಸಿಬಿಡುತ್ತೇನೆಯೋ ಎಂಬ ಚಿಂತೆಯಿಂದ ಕೆಲವೊಮ್ಮೆ ನಾನು ಶ್ವೇತವರ್ಣದ ಇತರ ನ್ಯಾಯಮೂರ್ತಿಗಳಿಗಿಂತಲೂ ಕಠೋರವಾಗಿ ವರ್ತಿಸುತ್ತೇನೆ' ಎಂದು ಹೇಳಿದ್ದನ್ನು ಕ್ವೀನ್ ಮೇರಿ ವಿಶ್ವವಿದ್ಯಾಲಯದ ಪ್ರೊಫೆಸರ್ ರೋಸ್ಮೇರಿ ಹಂಟರ್ ತಮ್ಮ ಬರಹವೊಂದರಲ್ಲಿ ಪ್ರಸ್ತಾಪಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯ ಸಂದರ್ಭದಲ್ಲಿ, ಮಹಿಳಾ ಪಕ್ಷಪಾತಿ ಎಂಬ ಟೀಕೆಗೆ ಗುರಿಯಾಗಬಹುದು ಎಂಬ ಆತಂಕದಿಂದ ಮಹಿಳಾ ನ್ಯಾಯವಾದಿಗಳ ಬಳಿ ಒರಟಾಗಿ ನಡೆದುಕೊಳ್ಳುವ ಮಹಿಳಾ ನ್ಯಾಯಮೂರ್ತಿಗಳನ್ನು ನಾನೂ ನೋಡಿದ್ದೇನೆ. ಅಷ್ಟೇ ಅಲ್ಲದೆ, ಕಾನೂನಿನ ಮಾದರಿಗಳು ಎಂದಿಗೂ ಸಾಕ್ಷಿಗಳು, ಮುಂಚಿನ ತೀರ್ಪುಗಳನ್ನು ಅವಲಂಬಿಸಿರುತ್ತವೆ, ವ್ಯವಸ್ಥೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವ ರೀತಿಯಲ್ಲಿ ಇರುತ್ತವೆ. ಹೀಗಾಗಿ, ಇವುಗಳನ್ನು ಮಹಿಳಾವಾದದ ದೃಷ್ಟಿಕೋನದಿಂದ ನೋಡಿ, ವ್ಯವಸ್ಥೆಯನ್ನು ಕೆಡವಿ ಕಟ್ಟುವಂತಹ ಮಹತ್ತರ ಮಾರ್ಪಾಡುಗಳನ್ನು ತರುವುದು ಕಷ್ಟವೇ ಸರಿ. ಹಾಗಾಗಿ, ಮಹಿಳೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನ್ಯಾಯ ವ್ಯವಸ್ಥೆಗೆ ಕರೆತಂದ ಮಾತ್ರಕ್ಕೆ ಸಮಾನತೆ ಬರುವುದಿಲ್ಲ.

ಆದರೆ, ಪ್ರಾತಿನಿಧ್ಯ ಮತ್ತು ವೈವಿಧ್ಯವು ಮೇಲ್ನೋಟಕ್ಕೆ ಪೂರಕವಾದ ಮೌಲ್ಯಗಳ ರೀತಿಯಲ್ಲಿ ಕಂಡರೂ ಅವೆರಡನ್ನೂ ಒಂದೇ ಎಂಬಂತೆ ನೋಡಲಾಗದು. ಪ್ರಾತಿನಿಧ್ಯವನ್ನು ಲಿಂಗ ಅಸಮಾನತೆ, ಜಾತಿ ತಾರತಮ್ಯವನ್ನು ಅಳಿಸಿಹಾಕುವ ದಾರಿಯಾಗಿ ನೋಡಬಾರದು. ಅವನ್ನು ಬೇರೆ ಬೇರೆಯಾಗಿ ಮತ್ತು ಸಮಾನಾಂತರವಾಗಿ ತರುವ ಪ್ರಯತ್ನಗಳು ನಡೆದಾಗಲೇ ನಿಜವಾದ ಅರ್ಥದಲ್ಲಿ ಸಮಾನತೆಯನ್ನು ಹೊಂದುವುದು ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೋರ್ಟುಗಳಲ್ಲಿ ಇರಬೇಕಾದದ್ದು ಅಗತ್ಯವಾಗಿದೆ.

2010–20ರ ಅವಧಿಯಲ್ಲಿ ಅಮೆರಿಕ, ಆಸ್ಟ್ರೇಲಿಯಾ, ಅಷ್ಟೇ ಏಕೆ ಪಾಕಿಸ್ತಾನ ಮತ್ತು 2018ರಲ್ಲಿ ಭಾರತ ಸಹ 'ಫೆಮಿನಿಸ್ಟ್ ಜಡ್ಜ್‌ಮೆಂಟ್ಸ್ ಪ್ರಾಜೆಕ್ಟ್' (ಮಹಿಳಾವಾದಿ ತೀರ್ಪುಗಳ ಯೋಜನೆ) ಎಂಬ ಹೊಸ ಪರಿಕಲ್ಪನೆಯನ್ನು ಸೃಷ್ಟಿಸಿದ್ದವು. ಈ ಯೋಜನೆಯು ನ್ಯಾಯಾಲಯಗಳು ಹೊರಡಿಸಿದ ತೀರ್ಪುಗಳನ್ನು ಆಯ್ಕೆ ಮಾಡಿಕೊಂಡು, ಅವುಗಳಿಗೆ ಪರ್ಯಾಯವಾದ ತೀರ್ಪನ್ನು ಮಹಿಳಾವಾದದ ಕನ್ನಡಿಯಲ್ಲಿ ನೋಡಿ ಬರೆಯುವುದಾಗಿತ್ತು. ಮಹಿಳೆಯರ ದೃಷ್ಟಿಕೋನವು ತೀರ್ಪುಗಳನ್ನು ಹೇಗೆ ಪ್ರಭಾವಿಸಬಹುದು ಎಂಬುದನ್ನು ಈ ಯೋಜನೆ ತೋರಿಸಿಕೊಟ್ಟಿತ್ತು. ಇಂತಹ ಪ್ರಯತ್ನಗಳು ಇನ್ನಷ್ಟು ನಡೆಯಬೇಕಾಗಿದೆ. ಅಲ್ಲದೆ, ನ್ಯಾಯವ್ಯವಸ್ಥೆಯಲ್ಲಿ ಎಲ್ಲ ಗುಂಪುಗಳನ್ನೂ ಒಳಗೊಳ್ಳುವ ಸಲುವಾಗಿ 2006ರಿಂದ 14ರವರೆಗೆ ಇಂಗ್ಲೆಂಡ್ ಮತ್ತು ವೇಲ್ಸ್ ಹಲವು ಸಮಿತಿಗಳನ್ನೂ ಸಂಸ್ಥೆಗಳನ್ನೂ ರಚಿಸಿ, ಬಿರುಸಾಗಿ ಬದಲಾವಣೆಗಳನ್ನು ತರಲು ಮಾಡಿದ ಪ್ರಯತ್ನಗಳು ನಮಗೂ ಮಾದರಿಯಾಗಬಹುದು.

ಅಸಮಾನತೆಯನ್ನು ತೊಡೆದುಹಾಕಲು ಹಲವು ದೇಶಗಳು ಮಾಡಿರುವ ಪ್ರಯತ್ನಗಳಲ್ಲಿ ಅನುಭವದ ಪಾಠಗಳು ಬಹಳಷ್ಟಿವೆ. ನಮ್ಮ ವ್ಯವಸ್ಥೆಯನ್ನೂ ಈ ಅನುಭವಗಳ ಸಾಣೆಗೆ ಒಡ್ಡಿ ತೀಕ್ಷ್ಣವಾಗಿಸುವುದು ಇಂದು ಹಿಂದೆಂದಿಗಿಂತಲೂ ಅನಿವಾರ್ಯವಾಗಿದೆ.

ಲೇಖಕಿ: ವಕೀಲೆ, ಕೇರಳ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್

ವಿವರವಾದ ಅವಲೋಕನ

2021ರಲ್ಲಿ ನಾಲ್ವರು ಮಹಿಳಾ ನ್ಯಾಯಮೂರ್ತಿಗಳಿದ್ದ ನಮ್ಮ ಸುಪ್ರೀಂ ಕೋರ್ಟ್‌ನಲ್ಲಿ ಆ ಸಂಖ್ಯೆ ಈಗ ಒಂದಕ್ಕೆ ಇಳಿದಿದೆ. ಈ ವಿಚಾರದಲ್ಲಿ ಮೆಲಿಸಾ ಕ್ರಾಚ್ ಅವರು ಸಂಕಲನ ಮಾಡಿದ 'ವಿಮೆನ್ ಆ್ಯಂಡ್ ಜುಡಿಷಿಯರಿ ಇನ್ ದ ಏಷ್ಯಾ ಪೆಸಿಫಿಕ್' ಎಂಬ ಪುಸ್ತಕ ಗಮನಾರ್ಹ.

ಭಾರತ, ಇಂಡೊನೇಷ್ಯಾ, ಮಲೇಷ್ಯಾ, ನೇಪಾಳ, ಶ್ರೀಲಂಕಾ, ಥಾಯ್ಲೆಂಡ್ ಮತ್ತು ಫಿಲಿಪ್ಪೀನ್ಸ್ ದೇಶಗಳಲ್ಲಿನ ನ್ಯಾಯ ವ್ಯವಸ್ಥೆಯನ್ನು ಮತ್ತು ಅವುಗಳಲ್ಲಿ ಮಹಿಳೆಯರ ಪಾತ್ರವನ್ನು ಈ ಪುಸ್ತಕದಲ್ಲಿ ಬಹಳ ವಿವರವಾಗಿ ಅವಲೋಕನ ಮಾಡಲಾಗಿದೆ.

ಕೊರತೆ ಇಂದಿಗೂ ಪ್ರಸ್ತುತ!

ಮಹಿಳಾ ನ್ಯಾಯಮೂರ್ತಿಗಳ ಕೊರತೆಗೆ ಸಂಬಂಧಿಸಿದಂತೆ 2019ರಲ್ಲಿ ನಾನು ಇದೇ ಪತ್ರಿಕೆಯಲ್ಲಿ ಬರೆದಿದ್ದ ಬರಹ ತಾತ್ವಿಕವಾಗಿ ಇಂದಿಗೂ ಪ್ರಸ್ತುತವೇ ಆಗಿರುವುದು ನೋವಿನ ಸಂಗತಿ. ಅದರ ನಂತರ ನೆರೆಯ ದೇಶಗಳಲ್ಲಿ ಮತ್ತು ನಮ್ಮಲ್ಲಿ ಒಂದಿಷ್ಟು ಮೊದಲುಗಳು ಸಂಭವಿಸಿವೆಯಾದರೂ ಸನ್ನಿವೇಶದಲ್ಲಿ ದೊಡ್ಡದಾದ ಬದಲಾವಣೆಯೇನೂ ಆಗಿಲ್ಲ. ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯದ ನ್ಯಾಯಪೀಠದಲ್ಲಿ ಸದ್ಯಕ್ಕೆ ಇರುವ ನ್ಯಾಯಮೂರ್ತಿಗಳ ಪೈಕಿ 11 ಮಂದಿ ಮಹಿಳೆಯರು ಮತ್ತು ಏಳು ಪುರುಷರು. ಥಾಯ್ಲೆಂಡ್ ಸುಪ್ರೀಂ ಕೋರ್ಟ್‌ನಲ್ಲಿ 2020ರ ನಂತರ ನಾಲ್ವರು ಮಹಿಳಾ ನ್ಯಾಯಮೂರ್ತಿಗಳ ನೇಮಕವಾಗಿದೆ.

ಇಂಡೊನೇಷ್ಯಾದ ಸಿವಿಲ್ ನ್ಯಾಯಾಲಯಗಳಲ್ಲಿ ಈ ಸಂಖ್ಯೆ ಶೇಕಡ 29ಕ್ಕೆ ಏರಿದೆ. ಪಾಕಿಸ್ತಾನದ ಸುಪ್ರೀಂ ಕೋರ್ಟ್‌ನಲ್ಲಿ 2021-22ರ ಅವಧಿಯಲ್ಲಿ ಇಬ್ಬರು ಮಹಿಳಾ ನ್ಯಾಯಮೂರ್ತಿಗಳ ನೇಮಕ ಆಗಿದೆ. ಆದರೆ ಆ ಬಳಿಕ ಈ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ. 2021-23ರ ಅವಧಿಯಲ್ಲಿ ಈ ವಿಷಯದಲ್ಲಿ ಸುಧಾರಣೆ ಕಂಡುಬಂದಿದ್ದ ಜಪಾನ್, ತೈವಾನ್ ಮತ್ತು ಮಂಗೋಲಿಯಾ ದೇಶಗಳಲ್ಲಿ ನಂತರ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ.



BIGGEST Deepavali SALE
FESTIVAL OF SAVINGS
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
GST 28% 18%
ನಿಶ್ಚಿತ ಕಡಿಮೆ ಬೆಲೆಯಲ್ಲಿ
ಮಳಿಗೆಗಳು: 10AM - 10PM ತೆರೆದಿರುತ್ತದೆ (4 - 26 OCTOBER 2025)
ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಮೇಲಿನ ಜಿಎಸ್‌ಟಿ ಕಡಿಮೆಯಾಗಿದೆ*
ಕ್ಯಾಶ್‌ಬ್ಯಾಕ್ ಬೊನಾಂಜಾ Upto ₹50,000 ಕ್ಯಾಶ್ ಬ್ಯಾಕ್*
HDFC BANK We understand your world 10% INSTANT CASH BACK ON CC & DC EMI* MIN TXN ₹17,000 MAX CAP ₹3,000 *T&C
10% INSTANT DISCOUNT* SBI card
*Min. Trxn.: ₹20,000; Max. Discount: ₹3,000 per card; Valid only on EMI Trxns.; Validity: 27 Sep - 31 Oct 2025. T&C Apply.
UPTO 5% OFF INSTANT CASH BACK DBS YES BANK HSBC one card scapia FEDERAL BANK kotak Bank of Baroda MIN TXN ₹10,000 MAX CAP ₹7,500 *T&C
1 ಇ.ಎಮ್.ಐ ಉಚಿತ*
ಎಕ್ಸ್‌ಚೇಂಜ್ ಬೊನಾಂಜಾ UPTO ₹25,000 ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು ಎಕ್ಸ್‌ಚೇಂಜ್ ಮೇಲೆ*
SAMSUNG 100 CLASS NEO QLED SMART TV 100QN80F 20% CASH BACK ಹಳೆಯ ಬೆಲೆ ₹6,67,220 ಹೊಸ ಬೆಲೆ ₹6,15,093
SONY 98 BRAVIA 4K ULTRA HD SMART MINI LED GOOGLE TV 98XR55A 10% CASH BACK ಹಳೆಯ ಬೆಲೆ ₹6,17,490 ಹೊಸ ಬೆಲೆ ₹5,69,250
Haier 98 QLED 144HZ GOOGLE TV WITH HANDS FREE VOICE CONTROL & LOCAL DIMMING 98S9QT 25% CASH BACK ಹಳೆಯ ಬೆಲೆ ₹4,58,610 ಹೊಸ ಬೆಲೆ ₹2,79,990 ಉಚಿತ: HAIER 43 4K UHD LED TV WORTH ₹52490
LG 75 4K ULTRA HD SMART LED NANOCELL TV 75NANO83A6A 26% CASH BACK ಹಳೆಯ ಬೆಲೆ ₹1,09,100 ಹೊಸ ಬೆಲೆ ₹1,00,580
NY LOWEST PRICE CHALLENGE 55 4K LED 52% OFF 10% CASH BACK ಹಳೆಯ ಬೆಲೆ ₹37,500 ಹೊಸ ಬೆಲೆ ₹27,990
realme 14X 10% CASH BACK EFFECTIVE PRICE ₹13,390* Onwards (PRICE AFTER CASH BACK) EMI ₹1,199 Onwards ಉಚಿತ: BT NECKBAND WORTH ₹1649
OPPO F31 10% CASH BACK EFFECTIVE PRICE ₹21,290* (PRICE AFTER CASH BACK) EMI ₹1,374 Onwards ಉಚಿತ: BT NECKBAND WORTH ₹1649
xiaomi NOTE 14 PRO/ PRO+ 10% CASH BACK EFFECTIVE PRICE ₹20,999* (PRICE AFTER CASH BACK) EMI ₹1,834 Onwards ಉಚಿತ: BT NECKBAND WORTH ₹1649
SAMSUNG A56 FESTIVAL PRICE ₹38,499 EMI ₹1,605 Onwards TWS EAR BUDS ₹2590 @ ₹99
vivo X200FE 10% CASH BACK EFFECTIVE PRICE ₹49,499* (PRICE AFTER CASH BACK) EMI ₹3,056 Onwards AUDIO BT SPEAKERS ₹2590 @ ₹99
LG 26% CASH BACK 14 PLACE SETTIN FREESTANDING DISHWASHER DFB532FP ಹಳೆಯ ಬೆಲೆ ₹53,330 ಹೊಸ ಬೆಲೆ ₹49,160
Haier 25% CASH BACK 230 LITRES, SINGLE DOOR HARD TOP CONVERTIBLE DEEP FREEZER OLD PRICE ₹29,390 ಹೊಸ ಬೆಲೆ ₹27,790
DELL 3530 • 13TH GEN i5 • 16GB RAM, 512GB SSD • 15.6 FHD • WIN 11 MSO 24 10% CASH BACK EMI ₹4,249 ಹಬ್ಬದ ಬೆಲೆ ₹50,990 ಉಚಿತ: BAG-FREE GIFTS- 64GB PENDRIVE + W/L MOUSE + QUICKHEAL INTERNET SECURITY WORTH ₹3990
hp VICTUS • RYZEN 5 5600H • 16GB, 512GB SSD • 4GB GFX • 15.6 FHD, WIN 11 10% CASH BACK EMI ₹4,416 ಹಬ್ಬದ ಬೆಲೆ ₹52,990 ಉಚಿತ: BAG - FREE GIFTS- 64GB PENDRIVE + W/L COMBO KEYBOARD MOUSE + QUICKHEAL INTERNET SECURITY WORTH ₹4990
Lenovo SLIM 3I • 13TH GEN i7 • 16GB RAM, 512GB SSD • 15.6 WXGA • WIN 11 MSO 24 10% CASH BACK EMI ₹4,999 ಹಬ್ಬದ ಬೆಲೆ ₹59,990 ಉಚಿತ: BAG-FREE GIFTS- 64GB PENDRIVE + W/L MOUSE + QUICKHEAL INTERNET SECURITY WORTH ₹3990
20% CASH BACK SAMSUNG 653 LTRS SIDE BY SIDE SMART REFRIGERATOR RS76CB81A333HL ಹಳೆಯ ಬೆಲೆ ₹1,13,980 FESTIVAL PRICE ₹1,08,410
10% CASH BACK Godrej 600LTRS TOUGHENED GLASS DOOR SIDE BY SIDE REFRIGERATOR ಹಳೆಯ ಬೆಲೆ ₹72,390 FESTIVAL PRICE ₹68,940
DAIKIN 2.02 TON 3 STAR, INVERTER SPLIT AC 10% CASH BACK ಹಳೆಯ ಬೆಲೆ ₹67,470 ಹೊಸ ಬೆಲೆ ₹62,200
10% CASH BACK BOSCH 9 KG FULLY AUTOMATIC FRONT LOAD WASHING MACHINE ಹಳೆಯ ಬೆಲೆ ₹44,990 ಹೊಸ ಬೆಲೆ ₹42,290
10% CASH BACK IFB DEEPCLEAN® 6.5 KG TOP LOAD WASHING MACHINE ಹಳೆಯ ಬೆಲೆ ₹19,490 ಹಬ್ಬದ ಬೆಲೆ ₹18,390
GEYSER UPTO 60% OFF BAJAJ Haier V-GUARD Racold HAVELLS KENSTAR Symphony
MIXER GRINDER UPTO 63% OFF Preethi Panasonic V-GUARD Prestige BAJAJ BOSCH HÄFELE HAVELLS Butterfly Tefal
CHIMNEY UPTO 50% OFF KAFF FABER HÄFELE Crompton Prestige BOSCH
WATER PURIFIER UPTO 53% OFF EUREKA FORBES LG BRITA Livpure RO KA EXPERT HAVELLS
Panasonic 23 ಲೀ ಕನ್‌ವೆಕ್ಷನ್ ಮೈಕ್ರೋವೇವ್ 10% CASH BACK ಹಳೆಯ ಬೆಲೆ ₹15,210 ಹಬ್ಬದ ಬೆಲೆ ₹14,480
PHILIPS SOUNDBAR TAB4518, 5.1 CH, 240W, WIRELESS SUBWOOFER 10% CASH BACK ಹಳೆಯ ಬೆಲೆ ₹20,990 ಹಬ್ಬದ ಬೆಲೆ ₹11,750
LG SAMSUNG SONY Haier Panasonic NY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL
BLUE STAR HÄFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.
179 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

‘ತೆರಿಗೆ ಪಾಲು: ಅಗತ್ಯಬಿದ್ದರೆ ಕೋರ್ಟ್‌ಗೆ’

ಉತ್ತರ ಪ್ರದೇಶಕ್ಕೆ ಶೇ 18, ರಾಜ್ಯಕ್ಕೆ ಕೇವಲ ಶೇ 3.5 ಹಂಚಿಕೆ • ಇದು ಅನ್ಯಾಯ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ‘ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಮತ್ತೆ ಅನ್ಯಾಯವಾಗಿದೆ. ಹೀಗಾಗಿ, ಕಳೆದ ಬಾರಿಯಂತೆ ಈ ಸಲವೂ ಅಗತ್ಯಬಿದ್ದರೆ ನ್ಯಾಯಾಲಯದ ನೆರವಿನಲ್ಲಿ ನಮ್ಮ ಅನುದಾನ ಪಡೆದುಕೊಳ್ಳುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶುಕ್ರವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ರಾಜ್ಯಕ್ಕೆ ಸಾಕಷ್ಟು ಅನುದಾನ ಖೋತಾ ಆಗಿದೆ. ಉತ್ತರಪ್ರದೇಶಕ್ಕೆ ಶೇ 18ರಷ್ಟು ನೀಡಿದ್ದು, ರಾಜ್ಯಕ್ಕೆ ಕೇವಲ ಶೇ 3.5ರಷ್ಟು ಕೊಟ್ಟಿರುವುದು ಅನ್ಯಾಯ. ಕರ್ನಾಟಕ ₹ 4.5 ಲಕ್ಷ ಕೋಟಿಯನ್ನು ತೆರಿಗೆ ರೂಪದಲ್ಲಿ ಕೇಂದ್ರಕ್ಕೆ ನೀಡಿದೆ. ನಮಗೆ ರೂಪಾಯಿಗೆ 14 ಪೈಸೆ ಮಾತ್ರ ಸಿಗುತ್ತಿದೆ’ ಎಂದು ದೂರಿದರು.

‘15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ನೀಡಲಾಗಿದ್ದ ವಿಶೇಷ ಅನುದಾನವನ್ನು ಕೇಂದ್ರ ವಿತ್ತ ಸಚಿವರು ರದ್ದುಪಡಿಸಿದರು. ಆಯೋಗದ ಶಿಫಾರಸಿನಂತೆ ₹ 5,490 ಕೋಟಿ ಹಾಗೂ ಕೆರೆಗಳ ಅಭಿವೃದ್ಧಿಗೆ ₹3 ಸಾವಿರ ಕೋಟಿ, ರಸ್ತೆ ನಿರ್ಮಾಣಕ್ಕೆ ₹ 3 ಸಾವಿರ ಕೋಟಿ, ಭದ್ರಾ ಮೇಲ್ದಂಡೆ ಯೋಜನೆಗೆ ₹5 ಸಾವಿರ ಕೋಟಿ ಅನುದಾನವನ್ನು ನಮಗೆ ಕೊಟ್ಟೇ ಇಲ್ಲ. ಒಟ್ಟಾರೆ ನಮಗೆ ಬರಬೇಕಾದ ₹17 ಸಾವಿರ ಕೋಟಿ ಖೋತಾ ಆಗಿದೆ’ ಎಂದು ತಿಳಿಸಿದರು.

ಬೆನ್ನು ತಟ್ಟಿಕೊಳ್ಳುತ್ತಿರುವ ಕೇಂದ್ರ: ‘ಜಿಎಸ್‌ಟಿ ಉತ್ಸವ’ ಆಚರಿಸುವಂತೆ ಕೇಂದ್ರ ಸರ್ಕಾರ ತಿಳಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘2017ರಲ್ಲಿ ಕೇಂದ್ರವೇ ಜಿಎಸ್‌ಟಿ ಜಾರಿಗೆ ತಂದಿತ್ತು. ಕಳೆದ 8 ವರ್ಷ ಹೆಚ್ಚಿನ ತೆರಿಗೆ ಪಡೆದಿರುವ ಕೇಂದ್ರ, ಆ ಹಣವನ್ನು ಮರಳಿಸುವುದೇ? ತಾನೇ ಹೆಚ್ಚಿಸಿದ ಜಿಎಸ್‌ಟಿ ದರವನ್ನು ಈಗ ಕಡಿಮೆ ಮಾಡಿ ಬೆನ್ನು ತಟ್ಟಿಕೊಳ್ಳುತ್ತಿದೆ’ ಎಂದು ಟೀಕಿಸಿದರು.

ಅಶೋಕ್‌ಗೆ ಏನ್ ಗೊತ್ತು?: ‘ರೈತರ ಸಮಸ್ಯೆ ಬಗೆಹರಿಸದಿದ್ದರೆ ಸರ್ಕಾರ ಇದ್ದರೂ ಸತ್ತಂತೆಯೇ’ ಎಂಬ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿಕೆಗೆ, ‘ಅವನಿಗೆ ನಾಡಿನ, ರೈತನ ಸಮಸ್ಯೆ ಏನು ಗೊತ್ತು?’ ಪ್ರಶ್ನಿಸಿದರು.



ಜಿಎಸ್‌ಟಿ ಸರಳೀಕರಣದಿಂದ ರಾಜ್ಯಗಳು ಹೆಚ್ಚು ನಷ್ಟ ಎದುರಿಸಲಿವೆ. ಆದರೆ, ರಾಜ್ಯದ ಬಿಜೆಪಿ ಸಂಸದರಿಗೆ ನರೇಂದ್ರ ಮೋದಿ ಅವರನ್ನು ಹೊಗಳುವುದೇ ಕೆಲಸ. ನಾಡಿನ ಹಿತಚಿಂತನೆ ಮಾಡುತ್ತಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಡಿಸೆಂಬರ್‌ಗೆ ಹೊಸ ಮನೆಗೆ ಪ್ರವೇಶ: ಸಿಎಂ

‘ಮೈಸೂರಿನಲ್ಲಿ ನಿರ್ಮಿಸಿರುವ ಹೊಸ ಮನೆಯ ಪ್ರವೇಶ ಡಿಸೆಂಬರ್‌ಗೆ ಮಾಡುತ್ತೇನೆ. ಯಾರನ್ನೂ ಆಹ್ವಾನಿಸುವುದಿಲ್ಲ. ಕುಟುಂಬದವರು ಮಾತ್ರ ಸೇರಿ ಕಾರ್ಯಕ್ರಮ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಮೈಸೂರಿನಲ್ಲಿ ನಾನಿರುವ ಮನೆ ನನ್ನದಲ್ಲ, ಮರಿಸ್ವಾಮಿ ಅವರದ್ದು. ಆತನೇ ನನಗೆ ಹಾಗೂ ನನ್ನ ಮಗನಿಗೆ ಅನ್ನದಾತ. ಗೃಹ ಪ್ರವೇಶ ಆದ ಮೇಲೆ ಹೊಸ ಮನೆಗೆ ಹೋಗುತ್ತೇನೆ. ಈ ಮನೆಯನ್ನು ಮರಿಸ್ವಾಮಿ ಖಾಲಿ ಇಟ್ಟರೆ ಜನರ ಭೇಟಿಗೆ ಇದನ್ನೇ ಬಳಸಿಕೊಳ್ಳುತ್ತೇನೆ’ ಎಂದು ಹೇಳಿದರು.

‘ಸಮೀಕ್ಷೆ: ಅಗತ್ಯ ಬಿದ್ದರೆ ಅವಧಿ ವಿಸ್ತರಣೆ’

‘ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಅ. 7ರೊಳಗೆ ಮುಗಿಸುವ ಭರವಸೆ ಇದೆ. ಈಗ 80 ಲಕ್ಷ ಮನೆಗಳಿಂದ 3 ಕೋಟಿ ಜನರ ಸಮೀಕ್ಷೆ ಆಗಿದೆ. 1.80 ಕೋಟಿ ಕುಟುಂಬಗಳ ಸಮೀಕ್ಷೆ ನಡೆಯಬೇಕಿದೆ. ಅಗತ್ಯಬಿದ್ದರೆ ಅವಧಿ ವಿಸ್ತರಿಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಮತಾಂತರ ಹಾಗೂ ಜಾತಿ ಒಡೆಯಲು ಸಮೀಕ್ಷೆ ನಡೆಸುತ್ತಿದೆ’ ಎಂಬ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿಕೆಗೆ, ‘ಕೇಂದ್ರ ನಡೆಸಲಿರುವ ಜಾತಿ ಸಮೀಕ್ಷೆಯ ಉದ್ದೇಶವನ್ನು ಅವರು ತಿಳಿಸಲಿ’ ಎಂದು ಹೇಳಿದರು.

‘ಕೇಂದ್ರಕ್ಕೂ ಜಾತಿ, ಧರ್ಮ ಒಡೆಯುವ ಉದ್ದೇಶವಿದೆಯೇ? ಕರ್ನಾಟಕದಲ್ಲಿ ಆರ್ಥಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದೆ. ನಮಗೆ ಜಾತಿ ಒಡೆಯುವ ಉದ್ದೇಶವಿಲ್ಲ. ಜನರು ಸ್ವಯಂಪ್ರೇರಿತರಾಗಿ ಜಾತಿ ನಮೂದಿಸಿದರೆ ಅದಕ್ಕೆ ಸರ್ಕಾರ ಜವಾಬ್ದಾರಿಯಲ್ಲ. ಜನರ ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ’ ಎಂದು ದೂರಿದರು.

ಸುದ್ದಿ 2 ನಿಮಿಷ

‘ಡಿಸೆಂಬರ್‌ನಲ್ಲಿ ಕ್ರಾಂತಿ ನಿಶ್ಚಿತ’

ಬೆಳಗಾವಿ: ‘ಸಿದ್ದರಾಮಯ್ಯ ಈಗ ನಿರ್ಗಮನ ಹಂತದಲ್ಲಿರುವ ಮುಖ್ಯಮಂತ್ರಿ. ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ರಾಜ್ಯದಲ್ಲಿ ಕ್ರಾಂತಿಯಾಗುವುದು ನಿಶ್ಚಿತ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ನವೆಂಬರ್‌ಗೆ ಕ್ರಾಂತಿಯಾಗಲಿದೆ ಎಂದಿದ್ದ ರಾಜಣ್ಣ ಸಚಿವ ಸ್ಥಾನ ಕಳೆದುಕೊಂಡಿದ್ದಾರೆ. ಅಧಿಕಾರಕ್ಕಾಗಿ ಈಗ ಜಗಳ ಆರಂಭವಾಗಿದೆ. ಅತ್ತ ಸಿದ್ದರಾಮಯ್ಯ ಅಧಿಕಾರ ಬಿಡಲ್ಲ, ಇತ್ತ ಡಿ.ಕೆ.ಶಿವಕುಮಾರ್ ಹಠ ಬಿಡಲ್ಲ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಮುಂದೆ ಯಾವ ರೀತಿ ಸರ್ಕಾರ ರಚನೆಯಾಗುವುದೋ ಗೊತ್ತಿಲ್ಲ. ನಾವಂತೂ ಮೈತ್ರಿ ಸರ್ಕಾರ ರಚಿಸಲ್ಲ. ಆಪರೇಷನ್ ಕಮಲದ ವಿಚಾರವೂ ಇಲ್ಲ. ರಾಜ್ಯದಲ್ಲಿ ಚುನಾವಣೆ ಎದುರಿಸಲು ನಾವು ಸಿದ್ಧರಿದ್ದೇವೆ’ ಎಂದರು.

ಸರ್ಕಾರವೇ ಬದಲಾಗಬೇಕು: ಇದೇ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ‘ಸಿದ್ದರಾಮಯ್ಯ ಬದಲು ಮತ್ತೊಬ್ಬರು ಸಿ.ಎಂ ಆದರೆ ಸಾಲದು. ಒಬ್ಬ ಭ್ರಷ್ಟ ಹೋದರೆ, ಮತ್ತೊಬ್ಬ ಬರುತ್ತಾರೆ. ಕಾಂಗ್ರೆಸ್ ಅಧಿಕಾರದಿಂದ ಕೆಳಗಿಳಿಯಬೇಕು’ ಎಂದರು.

‘ನಮಗೆ ಯಾರು ಮುಖ್ಯಮಂತ್ರಿ ಎಂಬುದು ಮುಖ್ಯವಲ್ಲ. ಸರ್ಕಾರ ಜನರ ಕಷ್ಟಕ್ಕೆ ಸ್ಪಂದಿಸಬೇಕು’ ಎಂದು ತಿಳಿಸಿದರು.

‘ಜನಸಂಪರ್ಕ ಕಳೆದುಕೊಂಡಿರುವ ಕೆಲ ಸಚಿವರು ಸಹಕಾರ ಸಂಘಗಳ ಚುನಾವಣೆ ಯಲ್ಲಿ ಮುಳುಗಿದ್ದಾರೆ. ಅವರಿಗೆ ಸಂಕಷ್ಟ ಆಲಿಸುವ ಸಂವೇದನೆ ಇಲ್ಲ‘ ಎಂದು ಟೀಕಿಸಿದರು.



ಕಲಾತಂಡ: ಉಡುಪಿ ಪ್ರಥಮ

ಮೈಸೂರು: ಉಡುಪಿ ಜಿಲ್ಲೆಯ ಪಡುಬೈಲೂರಿನ ‘ಇಷ್ಟ ಮಹಾಲಿಂಗೇಶ್ವರ ಹುಲಿವೇಷ ತಂಡ’ವು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಮೊದಲ ಬಹುಮಾನ ಪಡೆದಿದೆ. ನಾಗರಾಜ ಐತಾಳ್ ನೇತೃತ್ವದ ಈ ತಂಡ ₹ 15 ಸಾವಿರ ಗಳಿಸಿದೆ.

ಮೆರವಣಿಗೆ ಮತ್ತು ಪಂಜಿನ ಕವಾಯತು ಉಪಸಮಿತಿಯ ಉಪವಿಶೇಷಾಧಿಕಾರಿ ಸೀಮಾ ಲಾಟ್ಕರ್ ಬಹುಮಾನಿತ ಕಲಾತಂಡಗಳ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ.

ದ್ವಿತೀಯ ಬಹುಮಾನವನ್ನು ‘ಗೊರವರ ಕುಣಿತ’ಕ್ಕೆ ಸಿಕ್ಕಿದ್ದು, ಚಾಮರಾಜನಗರ ಜಿಲ್ಲೆಯ ‘ಭಕ್ತ ಕನಕದಾಸರ ಗೊರವರ ಕುಣಿತ ಕಲಾಸಂಘ’ದ ಆರ್.ಎಂ.ಶಿವಮಲ್ಲು, ಮೈಸೂರಿನ ಕುವೆಂಪುನಗರದ ‘ಸರಪಣಿ ಮೈಲಾರ ಲಿಂಗೇಶ್ವರ ಗೊರವರ ತಂಡ’ದ ಚನ್ನಮಲ್ಲೇಗೌಡ ಹಂಚಿಕೊಂಡಿದ್ದಾರೆ. ತಲಾ ₹ 5 ಸಾವಿರ ನಗದು ಬಹುಮಾನಕ್ಕೆ ಪಾತ್ರವಾಗಿದ್ದಾರೆ.

ಬೀದರ್‌ನ ಪಾರ್ವತಿ ಮಲ್ಲಪ್ಪ ಸಂಗೋಳಗೆ ಹಾಗೂ ಯಾದಗಿರಿಯ ಕಮಲಿಬಾಯಿ ಚಂದ್ರ ಚವ್ಹಾಣ ಅವರ ‘ಲಂಬಾಣಿ’ ನೃತ್ಯಕ್ಕೆ 3ನೇ ಬಹುಮಾನ ದೊರೆತಿದ್ದು, ತಲಾ ₹ 2,500 ದೊರೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚಿಟಿಕೆ ಸುದ್ದಿ

ಸಮೀಕ್ಷೆ: ಶೇ 63ರಷ್ಟು ಪೂರ್ಣ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಶುಕ್ರವಾರದವರೆಗೆ ಶೇ 63.03 ರಷ್ಟು ಪ್ರಗತಿಯಾಗಿದೆ.

1.43 ಕೋಟಿ ಮನೆಗಳ ಸಮೀಕ್ಷೆ ನಡೆಸಬೇಕಿದ್ದು, 81.27 ಲಕ್ಷ ಮನೆಗಳ ಸಮೀಕ್ಷೆ ಗುರುವಾರ ಸಂಜೆಗೆ ಮುಗಿದಿತ್ತು. ಶುಕ್ರ ವಾರ 9.35 ಲಕ್ಷ ಮನೆಗಳ ಸಮೀಕ್ಷೆಯಾಗಿದೆ. 3.42 ಲಕ್ಷ ಜನರ ವಿವರ ಸಂಗ್ರಹಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅ.4ರಿಂದ ಸಮೀಕ್ಷೆ ಆರಂಭವಾಗಲಿದೆ.

ಹುಲಿಗೆ ರಕ್ತದ ರುಚಿ ಸಿಕ್ಕಿದೆ: ಬಿ.ಎಲ್. ಸಂತೋಷ್

ಉಡುಪಿ: ‘ಧರ್ಮಸ್ಥಳ ಕ್ಷೇತ್ರದ ಮೇಲೆ ನಡೆಯುತ್ತಿರುವ ವೈಚಾರಿಕ ಆಕ್ರಮಣ ನಾವು ಎದುರಿಸುತ್ತಿರುವ ಸವಾಲು. ಮುಂದೆ ಬೇರೆ ಬೇರೆ ದೇವಸ್ಥಾನಗಳ ಮೇಲೂ ಆಕ್ರಮಣಗಳು ನಡೆಯಬಹುದು, ಏಕೆಂದರೆ ಹುಲಿಗೆ ರಕ್ತದ ರುಚಿ ಸಿಕ್ಕಿದೆ’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದರು.

ನಗರದ ಗುಂಡಿಬೈಲ್‌ನಲ್ಲಿ ಬಿಜೆಪಿ ಉಡುಪಿ ಜಿಲ್ಲಾ ಕಚೇರಿಯ ನೂತನ ಕಟ್ಟಡದ ಭೂಮಿ ಪೂಜೆಯನ್ನು ಶುಕ್ರವಾರ ನೆರವೇರಿಸಿ ಅವರು ಮಾತನಾಡಿದರು.

‘ಈವರೆಗೂ ನಡೆದಿರತಕ್ಕ ಆಕ್ರಮಣಗಳಿಗೆ ಏನು ಶಿಕ್ಷೆ ಆಗಬೇಕೋ ಅದು ಆಗಬೇಕು. ಜೊತೆಗೆ ನಡೆಯುತ್ತಿರುವ ಅಪಪ್ರಚಾರಗಳಿಗೂ ತಕ್ಕನಾದ ಶಿಕ್ಷೆಯಾಗಬೇಕು’ ಎಂದು ಹೇಳಿದರು.

‘ಕುಂಭಮೇಳ ಕುರಿತು ಸಾಕಷ್ಟು ಅಪಪ್ರಚಾರ ನಡೆದವು. ಆದರೆ ದೇಶದಲ್ಲಿ ಗಟ್ಟಿಯಾದ ನಂಬಿಕೆ ಇದೆ. ಅಪ ಪ್ರಚಾರ ಮಾಡಿದಷ್ಟೂ ಅಲ್ಲಿಗೆ ಹೆಚ್ಚು ಜನರು ಹೋಗಿದ್ದಾರೆ’ ಎಂದರು.

‘ದೇಶಕ್ಕೆ, ಸಂಸ್ಕೃತಿಗೆ ಎದುರಾಗುವ ಸವಾಲುಗಳಿಗೆ ನಾವು ತಕ್ಕ ಉತ್ತರವನ್ನು ಕೊಡುತ್ತೇವೆ’ ಎಂದೂ ಹೇಳಿದರು.

ಸಿಲಿಂಡರ್ ಸ್ಫೋಟ: ಇಬ್ಬರ ಸಾವು

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಗಾದಿಗನೂರಿನಲ್ಲಿ ಈಚೆಗೆ ಸಂಭವಿಸಿದ್ದ ಅಡುಗೆ ಅನಿಲ ಸಿಲಿಂಡರ್ ಸ್ಫೋಟದಲ್ಲಿ ಗಾಯಗೊಂಡಿದ್ದ ‘ವಕೀಲ ಹಾಲಪ್ಪ (43), ಅವರ ತಾಯಿ ಗಂಗಮ್ಮ(80) ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ.



ಹಾಲಪ್ಪ



ಗಂಗಮ್ಮ

ಅವಘಡದಲ್ಲಿ ಒಟ್ಟು 11 ಜನರು ಗಾಯಗೊಂಡಿದ್ದರು. ಹಾಲಪ್ಪ ಅವರ ಪತ್ನಿ ಕವಿತಾ (35) ಅವರ ಸ್ಥಿತಿ ಈಗಲೂ ಗಂಭೀರವಾಗಿದೆ’ ಎಂದು ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

‘ಮೃತರ ಕುಟುಂಬದವರಿಗೆ ಸರ್ಕಾರದಿಂದ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು. ಹಾನಿಗೊಂಡ ಮನೆಯನ್ನು ವೈಯಕ್ತಿಕವಾಗಿ ದುರಸ್ತಿ ಮಾಡಿಸಿಕೊಡಲಾಗುವುದು’ ಎಂದರು.

ಗಾಂಧಿ ವಿರುದ್ಧ ಅವಹೇಳನ; ಬಂಧನ

ಹುಬ್ಬಳ್ಳಿ: ಮಹಾತ್ಮ ಗಾಂಧೀಜಿ ವಿರುದ್ಧ ಅವಹೇಳನಕಾರಿ ವಿಡಿಯೊವನ್ನು ಇನ್‌ಸ್ಟಗ್ರಾಂನಲ್ಲಿ ಪೋಸ್ಟ್ ಮಾಡಿದ ಆರೋಪದ ಮೇಲೆ ಸಂದೇಶ ಹುಟಗಿ ಎಂಬುವನನ್ನು ಹಳೇಹುಬ್ಬಳ್ಳಿ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

‘ಹಳೇಹುಬ್ಬಳ್ಳಿಯ ಆಯೋಧ್ಯ ನಗರ ನಿವಾಸಿ ಸಂದೇಶ ಹುಟಗಿ ಬಂಧಿತ. ಇನ್‌ಸ್ಟಗ್ರಾಂನಲ್ಲಿ ಅವಹೇಳನಕಾರಿ ವಿಡಿಯೊ ಪೋಸ್ಟ್ ಮಾಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸಮೀಕ್ಷೆ ಯಶಸ್ಸು, ಬಿಜೆಪಿಯ ಸೋಲು’

ತಾಂತ್ರಿಕ ತೊಂದರೆ ದೂರ: ಹಿಂದುಳಿದವರ ಪ್ರಗತಿಯೇ ಸಮೀಕ್ಷೆ ಉದ್ದೇಶ – ಮಧು ಬಂಗಾರಪ್ಪ



ನಿಗದಿತ ಅವಧಿಗಿಂತ ಮೊದಲೇ ಸಮೀಕ್ಷೆ ಪೂರ್ಣಗೊಳಿಸಿದ ಶಿಕ್ಷಕರನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ಶುಕ್ರವಾರ ಶಿವಮೊಗ್ಗದಲ್ಲಿ ಸನ್ಮಾನಿಸಿದರು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಾಜ್ಯ ಸರ್ಕಾರ ನಡೆಸುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಯಶಸ್ಸು ಬಿಜೆಪಿಯ ಸೋಲು’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಪ್ರತಿಪಾದಿಸಿದ್ದಾರೆ.

‘ಸಮೀಕ್ಷೆಯನ್ನು ವಿರೋಧಿಸುತ್ತಿರುವ ರಾಜ್ಯದ ಬಿಜೆಪಿ ನಾಯಕರು ಸಂವಿಧಾನಬಾಹಿರ ನಡೆ ಪ್ರದರ್ಶಿಸುತ್ತಿದ್ದಾರೆ. ಅವರ ವಿರುದ್ಧ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ (ಸುಮೊಟೊ) ಪ್ರಕರಣ ದಾಖಲಿಸಿಕೊಳ್ಳಲಿ’ ಎಂದು ಅವರು ಶುಕ್ರವಾರ ಇಲ್ಲಿ ಒತ್ತಾಯಿಸಿದರು.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆಯನ್ನು ಐದು ದಿನಗಳಲ್ಲೇ ಪೂರ್ಣಗೊಳಿಸಿದ 25 ಜನ ಶಿಕ್ಷಕರನ್ನು ಶುಕ್ರವಾರ ಸನ್ಮಾನಿಸಿ ಅವರು ಮಾತನಾಡಿದರು.

‘ಚಿಕ್ಕ ಸಮುದಾಯಗಳು, ಆರ್ಥಿಕವಾಗಿ ಹಿಂದುಳಿದವರ ಪ್ರಗತಿ ಸಮೀಕ್ಷೆಯ ಉದ್ದೇಶ. ಆದರೆ ಅದಕ್ಕೆ ವಿರೋಧಿಸುತ್ತಿರುವ ಬಿಜೆಪಿಯ ತೇಜಸ್ವಿ ಸೂರ್ಯ, ಪ್ರಲ್ಹಾದ ಜೋಶಿ, ವಿಜಯೇಂದ್ರ, ಆರ್.ಅಶೋಕ ಅವರ ಹಿನ್ನೆಲೆ ಏನು? ಅವರ ಪ್ರಕಾರ ಆರ್ಥಿಕವಾಗಿ ಹಿಂದುಳಿದವರು, ತಳ ಸಮುದಾಯದವರು ಇರುವ ಸ್ಥಿತಿಯಲ್ಲೇ ಇರಬೇಕೇ? ಎಂದು ಕಟುವಾಗಿ ಪ್ರಶ್ನಿಸಿದರು.

‘ಸಮೀಕ್ಷೆ ನೆಪದಲ್ಲಿ ಸರ್ಕಾರ ಜನರ ದತ್ತಾಂಶ ಕದಿಯುತ್ತಿದೆ’ ಎಂದು ಆರ್. ಅಶೋಕ ಹೇಳಿದ್ದಾರೆ. ಇಷ್ಟು ದಿನ ದೇಶದ ಜನರ ದತ್ತಾಂಶ ಕದ್ದು ಅದಾನಿ ಮತ್ತು ಅಂಬಾನಿಯವರಿಗೆ ಮಾರಿರುವ ಬಿಜೆಪಿಯವರಿಂದ ಇಂತಹ ಹೇಳಿಕೆ ಸಹಜ’ ಎಂದೂ ತಿರುಗೇಟು ನೀಡಿದರು.

‘ಸಮೀಕ್ಷೆಯ ಮಹತ್ವ ಗೊತ್ತಿರುವುದರಿಂದಲೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ವಿರೋಧ ವ್ಯಕ್ತಪಡಿಸಿಲ್ಲ. ಹೀಗಿದ್ದಾಗ ಬಿಜೆಪಿಯ ಉಳಿದ ನಾಯಕರು ಏನೂ ತಿಳಿವಳಿಕೆ ಇಲ್ಲದಂತೆ ಮಾತಾಡುತ್ತಿರುವುದೇಕೆ?’ ಎಂದೂ ಪ್ರಶ್ನಿಸಿದರು.

‘ಈ ಸಮೀಕ್ಷೆ ಮೂಲಕ ಸಿದ್ದರಾಮಯ್ಯ ಅವರು ಜಾತಿ, ಧರ್ಮ ಒಡೆಯುತ್ತಿದ್ದಾರೆ ಎಂದು ವಿಜಯೇಂದ್ರ ಹೇಳಿದ್ದಾರೆ. ರಾಜ್ಯದಲ್ಲಿ ಮೊದಲು ಜಾತಿ ರಾಜಕಾರಣ ಆರಂಭಿಸಿದವರು ಯಡಿಯೂರಪ್ಪ ಎಂಬುದನ್ನು ಅವರು ನೆನಪು ಮಾಡಿಕೊಳ್ಳಲಿ. ಆರ್ಥಿಕವಾಗಿ ಹಿಂದುಳಿದವರು, ದುರ್ಬಲ ವರ್ಗದವರ ಸ್ಥಿತಿಗತಿ ಬಗ್ಗೆ ಕಿಂಚಿತ್ ಮಾಹಿತಿ ಇಲ್ಲದೆಯೇ ಸಮೀಕ್ಷೆ ವಿರೋಧಿಸುತ್ತಿರುವ ವಿಜಯೇಂದ್ರ ಇನ್ನೂ ಬಚ್ಚಾ’ ಎಂದು ವ್ಯಂಗ್ಯವಾಡಿದರು.

ಸಮೀಕ್ಷಕರಿಗೆ ಮಾಹಿತಿ ಕೊಡುವುದಿಲ್ಲ ಎಂಬ ಹೇಳಿಕೆಯನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಾಪಸು ಪಡೆಯಲಿ. ವಿರೋಧ ಪಕ್ಷದವರಾಗಿ ಸಮೀಕ್ಷೆ ಯಶಸ್ಸಿಗೆ ಅಗತ್ಯ ಸಲಹೆ ಕೊಡಲಿ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಹೇಳಿಕೆ ದಾಖಲಿಸಿದ ಜಯಂತ್ ಪತ್ನಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆ ಸಂಬಂಧಿಸಿ ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಆರೋಪ ಪ್ರಕರಣದಲ್ಲಿ ಸೌಜನ್ಯಾ ಪರ ಹೋರಾಟಗಾರ ಜಯಂತ್ ಟಿ ಅವರ ಪತ್ನಿ ಎಸ್‌ಐಟಿ ಕಚೇರಿಯಲ್ಲಿ ಶುಕ್ರವಾರ ಹೇಳಿಕೆ ನೀಡಿದ್ದಾರೆ.

ಜಯಂತ್ ಅವರ ಪತ್ನಿ ಬೆಂಗಳೂರಿನಿಂದ ಬೆಳಿಗ್ಗೆ ಬೆಳ್ತಂಗಡಿಗೆ ಬಂದು ಮಧ್ಯಾಹ್ನ 12 ಗಂಟೆಗೆ ಎಸ್‌ಐಟಿ ಅಧಿಕಾರಿಗಳ ಬಳಿಗೆ ತೆರಳಿದ್ದರು. ಸಂಜೆ 4.30ರ ವರೆಗೂ ಮಾಹಿತಿ ಪಡೆದುಕೊಳ್ಳಲಾಯಿತು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಜಯಂತ್, ‘ನೋಟಿಸ್ ಬಂದಿತ್ತು. ನಾನು ಕೆಲವು ದಿನಗಳ ಹಿಂದೆ ಹೇಳಿಕೆ ದಾಖಲಿಸಿದ್ದೆ. ಪತ್ನಿಗೆ ಅನಾರೋಗ್ಯ ಇದ್ದ ಕಾರಣ ಸ್ವಲ್ಪ ತಡವಾಯಿತು. ಎಂಜಿನಿಯರಿಂಗ್ ಓದುತ್ತಿರುವ ಮಗನೊಂದಿಗೆ ತೆರಳಿ ಅವರು ಹೇಳಿಕೆ ಕೊಟ್ಟಿದ್ದಾರೆ’ ಎಂದು ತಿಳಿಸಿದರು.

‘ಬೇರೆ ಊರಿನಿಂದ ಹೋರಾಟಗಾರರು ಯಾರು ಬಂದರೂ ಅವರಿಗೆ ಊಟ, ಆಶ್ರಯ ನೀಡುವ ಸಂಪ್ರದಾಯ ಬೆಳೆಸಿಕೊಂಡಿದ್ದೇವೆ. ಸಾಕ್ಷಿ ದೂರುದಾರನಿಗೂ ಹಾಗೇ ಊಟ ಹಾಕಿದ್ದೆವು. ಎಸ್‌ಐಟಿಯವರು ಕರೆದಾಗ ಹೋಗುವುದು ನಮ್ಮ ಕರ್ತವ್ಯ. ಆದ್ದರಿಂದ ಮೂವರೂ ಹೇಳಿಕೆ ಕೊಟ್ಟಿದ್ದೇವೆ’ ಎಂದು ಅವರು ತಿಳಿಸಿದರು.

ಮಧ್ಯಂತರ ವರದಿ ಇಲ್ಲ: ‘ಹಿರಿಯ ಅಧಿಕಾರಿಗಳಿಂದ ನಿರ್ದೇಶನಗಳಿಗಾಗಿ ಕಾಯುತ್ತಿದ್ದೇವೆ. ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸುವ ಸಿದ್ಧತೆ ನಡೆದಿದೆ ಎಂಬುದು ವದಂತಿಯಷ್ಟೆ. ಪ್ರಕರಣದ ಎಲ್ಲ ಆಯಾಮಗಳನ್ನೂ ಪರಿಶೀಲಿಸಿ ಸಮರ್ಪಕವಾದ ತನಿಖೆ ನಡೆಸಿದ ನಂತರ ಅಂತಿಮ ವರದಿ ಸಲ್ಲಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡುವವರಿಗೆ ಸರ್ಕಾರ ಪರೋಕ್ಷವಾಗಿ ಮನ್ನಣೆ ನೀಡುತ್ತಿದೆ. ಅಪಪ್ರಚಾರಕರ ವಿರುದ್ಧ ಕ್ರಮ ತೆಗೆದುಕೊಳ್ಳುವ ದಿಟ್ಟತನ ತೋರಿಸಲಿ

ಸುನಿಲ್ ಕುಮಾರ್, ಶಾಸಕ

ರಥೋತ್ಸವ...

ಪ್ರಜಾವಾಣಿ ಚಿತ್ರ: ಕೆ.ಎನ್.ರಾಘವೇಂದ್ರ



ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಶಾರದಾಂಬೆ ಮಹಾರಥೋತ್ಸವ ಮತ್ತು ವಿಧುಶೇಖರಭಾರತೀ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು

ಸಮೀಕ್ಷೆ: ಆದೇಶ ಸ್ವೀಕರಿಸದ ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಉಡುಪಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನೇಮಕಗೊಂಡಿದ್ದರೂ ನೇಮಕಾತಿ ಆದೇಶ ಸ್ವೀಕರಿಸದ ಕಾರಣಕ್ಕೆ ಬ್ರಹ್ಮಾವರ ಶೆಟ್ಟಿಬೆಟ್ಟು ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ವೆಂಕಟೇಶ್ ಪಿ. ಬಿ. ಅವರನ್ನು ಅಮಾನತು ಮಾಡಲಾಗಿದೆ.

ಹಲವು ಬಾರಿ ದೂರವಾಣಿ ಮೂಲಕ ಸಂಪರ್ಕಿಸಿದರೂ ನೇಮಕಾತಿ ಆದೇಶ ಪ್ರತಿಯನ್ನು ಸ್ವೀಕರಿಸಲು ಅವರು ನಿರಾಕರಿಸಿದ್ದಾರೆ. ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಈವರೆಗೂ ನೋಟಿಸ್‌ಗೆ ಸಮಜಾಯಿಷಿ ನೀಡಿಲ್ಲ. ಈ ಕಾರಣಕ್ಕೆ ಅವರನ್ನು ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಸಮೀಕ್ಷೆ: ತುಮಕೂರಿನ ಭೀಮಸಂದ್ರದಲ್ಲಿ ಘಟನೆ

ಮುಸ್ಲಿಂ ಶಿಕ್ಷಕಿ ವಿರುದ್ಧ ಗಲಾಟೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಮೀಕ್ಷೆಗೆ ಹೋಗಿದ್ದ ಮುಸ್ಲಿಂ ಸಮುದಾಯದ ಶಿಕ್ಷಕಿಯೊಬ್ಬರ ಮೇಲೆ ಕೆಲವರು ಗಲಾಟೆ ಮಾಡಿರುವ ಘಟನೆ ನಗರದ ಹೊರವಲಯ ಭೀಮಸಂದ್ರದಲ್ಲಿ ನಡೆದಿದ್ದು, ಅದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮುಸ್ಲಿಂ ಸಮುದಾಯದ ಶಿಕ್ಷಕಿ ಎಂಬ ಕಾರಣಕ್ಕೆ ಸಮೀಕ್ಷೆಗೆ ಅವಕಾಶ ನೀಡದೆ ಗಲಾಟೆ ಮಾಡುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

‘ಮುಸ್ಲಿಂ ಆಗಿ ಸಮೀಕ್ಷೆಗೆ ಹೇಗೆ ಮನೆ ಬಳಿ ಬಂದಿದ್ದೀಯಾ? ಸಮೀಕ್ಷೆ ಮಾಡಲು ನೀರು ಯಾರು? ಮುಸ್ಲಿಮರ ಮನೆ ಹತ್ತಿರ ಬಿಟ್ಟುಕೊಳ್ಳಬಾರದು. ಮನೆ ಬಳಿಗೆ ಏಕೆ ಬರುತ್ತೀರಾ? ಸಮೀಕ್ಷೆಗೆ ಬರುವಾಗ ಗುರುತಿನ ಕಾರ್ಡ್ ಏಕೆ ತಂದಿಲ್ಲ?’ ಎಂದೆಲ್ಲ ಪ್ರಶ್ನಿಸಲಾಗಿದೆ.

‘ನಮ್ಮ ಮನೆ ಸಮೀಪದಲ್ಲೇ ಇದ್ದು, ಐ.ಡಿ ಕಾರ್ಡ್ ತರುತ್ತೇನೆ. ಸಮೀಕ್ಷೆಗೆ ಅವಕಾಶ ಮಾಡಿಕೊಡಿ’ ಎಂದು ಶಿಕ್ಷಕಿ ಮನವಿ ಮಾಡಿದ್ದಾರೆ. ಈ ಬಗ್ಗೆ ಇಲಾಖೆ ಅಧಿಕಾರಿಗಳಿಗೆ ಶಿಕ್ಷಕಿ ದೂರು ನೀಡಿದ್ದಾರೆ. ಈ ಕುರಿತು ಮಾಹಿತಿ ಪಡೆಯಲು ಯತ್ನಿಸಿದರೂ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಸಂಪರ್ಕಕ್ಕೆ ಸಿಗಲಿಲ್ಲ.

ಸಮೀಕ್ಷೆಗೆ ನಿಯೋಜಿಸಿದ್ದ ಶಿಕ್ಷಕಿ ಸಾವು



ದಾನಮ್ಮ

ರಾಂಪುರ (ಬಾಗಲಕೋಟೆ ಜಿಲ್ಲೆ): ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮುಗಿಸಿ, ಮಗನೊಂದಿಗೆ ಬೈಕ್‌ನಲ್ಲಿ ಮರಳುತ್ತಿದ್ದ ಶಿಕ್ಷಕಿ ದಾನಮ್ಮ (55) ಬಿದ್ದು ಮೃತಪಟ್ಟ ಘಟನೆ ಬೋಡನಾಯ್ಕದಿನ್ನಿ ಕ್ರಾಸ್ ಬಳಿ ನಡೆದಿದೆ.

‘ಆಶ್ರಯ ಕಾಲೊನಿಯ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ದಾನಮ್ಮ ನಂದರಗಿ ಅವರು ಬಾಗಲಕೋಟೆಯ ಕಂಠಿ ಬಡಾವಣೆಯಲ್ಲಿ ವಾಸವಿದ್ದರು. ಎಂದು ಬಾಗಲಕೋಟೆ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

₹ 1 ಕೋಟಿ ಪರಿಹಾರಕ್ಕೆ ಒತ್ತಾಯ: ‘ದಾನಮ್ಮ ಕುಟುಂಬಕ್ಕೆ ₹ 1 ಕೋಟಿ ಪರಿಹಾರ ಧನ ನೀಡಬೇಕು’ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ನುಗ್ಗಿ ಒತ್ತಾಯಿಸಿದ್ದಾರೆ.

ನಾಯಿ ದಾಳಿ: ಸಮೀಕ್ಷೆ ಸ್ಥಗಿತ

ಸುಳ್ಯ (ದಕ್ಷಿಣ ಕನ್ನಡ): ಸಮೀಕ್ಷೆಗೆ ತೆರಳಿದ್ದ ಶಿಕ್ಷಕಿ ಮೇಲೆ ಮನೆಯ ನಾಯಿ ದಾಳಿ ಮಾಡಿದ ಘಟನೆ ಕೊಡಿಯಾಲ ಗ್ರಾಮದ ನಿಡ್ಮಾರು ಎಂಬಲ್ಲಿ ಶುಕ್ರವಾರ ನಡೆದಿದ್ದು, ಭಯಗೊಂಡ ಶಿಕ್ಷಕಿ ಸಮೀಕ್ಷೆ ಸ್ಥಗಿತಗೊಳಿಸಿ ವಾಪಸಾದರು.

ಕೊಡಿಯಾಲದ ಮೂವಪ್ಪೆ ಶಾಲೆ ಶಿಕ್ಷಕಿ ನಿರ್ಮಲ ಅವರು ಸಮೀಕ್ಷೆ ನಡೆಸಲು ನಿಡ್ಮಾರು ಎಂಬಲ್ಲಿನ ಮನೆಗೆ ತೆರಳಿದ್ದಾಗ ಘಟನೆ ನಡೆದಿದೆ. ನಾಯಿ ದಾಳಿಯಿಂದ ಉಡುಪು ಹರಿದಿದೆ. ಬ್ಯಾಗು ಎಳೆದು ಹಾಕಿದೆ. ನಾಯಿ ಕಚ್ಚಲು ಬಂದಾಗ ಮನೆಯವರು ಹಿಡಿದುಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ತಪ್ಪುಮಾಹಿತಿ ನಮೂದು: ಗ್ರಾಮಸ್ಥರ ವಾಗ್ವಾದ

ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನ ಅಣಜೂರುವಿನಲ್ಲಿ ಸಾಮಾಜಿಕ ಸಮೀಕ್ಷೆ ನಡೆಸುತ್ತಿದ್ದ ಶಿಕ್ಷಕರೊಬ್ಬರು, ಫಲಾನುಭವಿಗಳು ಹೇಳಿದಂತೆ ಜಾತಿ ವಿವರ ನಮೂದಿಸದೆ ತಮಗೆ ತೋಚಿದಂತೆ ದಾಖಲಿಸಿದ್ದಾರೆ ಎಂದು ಆರೋಪಿಸಿ, ಗ್ರಾಮಸ್ಥರು ಶಿಕ್ಷಕನೊಂದಿಗೆ ವಾಗ್ವಾದ ನಡೆಸಿದರು.

ಶಿಕ್ಷಕ, ಒಂದೇ ಸಮುದಾಯದ 80ಕ್ಕೂ ಅಧಿಕ ಮನೆಗಳಿರುವಲ್ಲಿಗೆ ಸಮೀಕ್ಷೆಗೆ ಬಂದಿದ್ದು, ಧರ್ಮ ಇಸ್ಲಾಂ, ಜಾತಿ ಮುಸ್ಲಿಂ, ಉಪ ಜಾತಿ ಬ್ಯಾರಿ ಮುಸ್ಲಿಂ, ಭಾಷೆ ಬ್ಯಾರಿ ಎಂದು ನಮೂದಿಸಬೇಕಿತ್ತು. ಆದರೆ, ಶಿಕ್ಷಕ ಆರಂಭದಲ್ಲಿ ಮುಸ್ಲಿಂ, ನಂತರ ಬ್ಯಾರಿ ಎಂದು ನಮೂದಿಸಿದ್ದಾರೆ ಎಂಬುದು ದೂರು.

‘ನಿಮಗೆ ತೋಚಿದಂತೆ ನಮೂದಿಸಿದರೆ ಧರ್ಮಕ್ಕೆ ಅನ್ಯಾಯ ಮಾಡಿದಂತೆ ಆಗುತ್ತದೆ. ನಡೆಸಿರುವ ಸಮೀಕ್ಷೆ ರದ್ದುಪಡಿಸಿ ಮತ್ತೆ ಮಾಡಬೇಕು. ಇಲ್ಲವಾದರೆ ಸಮೀಕ್ಷೆ ನಡೆಲು ಬಿಡುವುದಿಲ್ಲ’ ಎಂದು ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರಾಜೇಶ್ ಅವರಿಗೆ ಕರೆ ಮಾಡಿ ದೂರು ನೀಡಿದ್ದಾರೆ.

ಶಿಕ್ಷಕನ ವಿರುದ್ಧ ತಹಶೀಲ್ದಾರ್ ಅವರಿಗೆ ದೂರು ನೀಡಿ, ‘ಸಮೀಕ್ಷರನ್ನು ಅಮಾನತು ಪಡಿಸಿ, ಸಮೀಕ್ಷೆ ರದ್ದುಪಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಬೀರೂರು ಪಟ್ಟಣದ ಶ್ರೀಮೈಲಾರಲಿಂಗ ಸ್ವಾಮಿ ಕಾರಣಿಕ

‘ವಿಶ್ವಕ್ಕೆ ಶಾಂತಿಯ ಭಂಗವಾಯಿತು...’

ಪ್ರಜಾವಾಣಿ ವಾರ್ತೆ

ಕಡೂರು (ಚಿಕ್ಕಮಗಳೂರು): ‘ಧರ್ಮ-ಅಧರ್ಮ ಸಂಕಟವಾಯಿತು, ವಿಶ್ವಕ್ಕೆ ಶಾಂತಿ ಭಂಗ ಆಯಿತು, ಧರೆಗೆ ವರುಣನ ಆಗಮನವಾಯಿತು, ಸರ್ವರೂ ಎಚ್ಚರದಿಂದಿರಬೇಕಲೇ ಪರಾಕ್’.

ಇದು ಬೀರೂರು ಪಟ್ಟಣದ ಶ್ರೀಮೈಲಾರಲಿಂಗ ಸ್ವಾಮಿ ಅವರು ನುಡಿದ ಕಾರಣಿಕ.

ಮೈಲಾರಲಿಂಗೇಶ್ವರ ಸ್ವಾಮಿಯ ಕಾರಣಿಕ ಮಹೋತ್ಸವ ಮಹಾನವಮಿ ಅಂಗವಾಗಿ ಬೀರೂರಿನ ಬಯಲಿನಲ್ಲಿ ಶುಕ್ರವಾರ ನೆರವೇರಿತು.

‘ಧರ್ಮ- ಅಧರ್ಮ ಸಂಕಟವಾಯಿತು ಎಂದರೆ ಜನರಲ್ಲಿ ಪಾಪಪ್ರಜ್ಞೆ ಕಡಿಮೆಯಾಗುತ್ತಿದೆ. ಧರ್ಮಾಚರಣೆಯಲ್ಲಿ ಆಡಂಬರಕ್ಕೆ ಒತ್ತು ನೀಡಲಾಗುತ್ತಿದ್ದು, ಶ್ರದ್ಧೆಗೆ ನಂತರದ ಸ್ಥಾನ ನೀಡಲಾಗುತ್ತಿದೆ. ಯಾವುದು ಒಳ್ಳೆಯದು, ಕೆಟ್ಟದ್ದು ಎನ್ನುವುದರ ನಡುವಿನ ವಿಶ್ಲೇಷಣೆಯ ಗೆರೆ ತೆಳುವಾಗಿರುವುದು. ವಿಶ್ವಕ್ಕೆ ಶಾಂತಿಯ ಭಂಗವಾಯಿತು ಎಂದರೆ, ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿರುವ ದೇಶಗಳ ವಿರುದ್ಧ ಬಲಾಢ್ಯ ದೇಶಗಳು ಬಲ ಪ್ರಯೋಗಿಸುವುದು. ಧರೆಗೆ ವರುಣನ ಆಗಮನವಾಯಿತು ಎಂದರೆ ಈವರೆಗೆ ಮುಂಗಾರಿನ ಅಬ್ಬರ ನಿರಂತರವಾಗಿದ್ದು, ಸಾಕಷ್ಟು ಹಾನಿಯೂ ಸಂಭವಿಸಿದೆ. ಹಿಂಗಾರು ಮಳೆ ಕೂಡಾ ಉತ್ತಮವಾಗಿ ಸುರಿಯಲಿದೆ ಎನ್ನುವುದು ಕಾರಣಿಕ ನುಡಿಯ ಅರ್ಥ’ ಎಂದು ಭಕ್ತರು ವಿಶ್ಲೇಷಿಸಿದ್ದಾರೆ.



ಮೈಲಾರಲಿಂಗಸ್ವಾಮಿಯ ಕಾರಣಿಕ ಮಹೋತ್ಸವ ಶುಕ್ರವಾರ ನಡೆಯಿತು


ಮಾಳ ಮಲ್ಲೇಶ್ವರ ಕಾರ್ಣಿಕ

ಸಿರುಗುಪ್ಪ (ಬಳ್ಳಾರಿ): ‘ಹಾಲು ಹರಿದಾಡೀತು ಎಚ್ಚರ, ಗಂಗೆ ಹೊಳೆದಂಡೆಗೆ ನಿಂತಾಳ, ಉತ್ತರ ಭಾಗಕ್ಕೆ ಹೊಂಟಾಳ

7700 - ನಗೆಹಳ್ಳಿ(ಹತ್ತಿ), 3400 - ಹೊಕ್ಕುಳ ಜೋಳ, 3-6 , 6-3 ಆದಿತು ಪರಾಕ್” ಎಂದು ದೇವರಗಟ್ಟ ಉತ್ಸವದಲ್ಲಿ ಕರ್ಣಿಕ ಭವಿಷ್ಯ ನುಡಿದಿದೆ. ಇದನ್ನು ವಿವರಿಸಿರುವ ದೇಗುಲದ ಅರ್ಚಕ ಮಲ್ಲಯ್ಯ, ‘ಜೋಳದ ಬೆಲೆ ₹3,400, ಹತ್ತಿ ಬೆಲೆ ₹7,200 ಆಗಲಿದೆ. ಉತ್ತರದ ಮೇಲ್ಭಾಗದಲ್ಲಿ ತಾಯಿ ಗಂಗಮ್ಮ ಕುಳಿತಿದ್ದಾಳೆ. ಉತ್ತಮ ಮಳೆಯಾಗಲಿದೆ’ ಎಂದು ಹೇಳಿದ್ದಾರೆ.

ರಂಗ ಕಲಾವಿದೆ ಡಿ.ಹನುಮಕ್ಕ ನಿಧನ

ಪ್ರಜಾವಾಣಿ ವಾರ್ತೆ



ಡಿ.ಹನುಮಕ್ಕ

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ರಂಗ ಕಲಾವಿದೆ ಡಿ.ಹನುಮಕ್ಕ (58) ಅವರು ಅನಾರೋಗ್ಯದಿಂದ ಶುಕ್ರವಾರ ಕೊಪ್ಪಳ ತಾಲ್ಲೂಕಿನ ಇರಕಲ್‌ಗಡದಲ್ಲಿ ನಿಧನರಾದರು.

ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿ ಪಟ್ಟಣದ ನಿವಾಸಿಯಾದ ಅವರು ಸಹೋದರಿಯರ ಜೊತೆಗಿದ್ದರು. ಒಂದು ವರ್ಷದಿಂದ ಮಿದುಳಿನ ಗಡ್ಡೆ ಕಾಯಿಲೆಯಿಂದ ಬಳಲುತ್ತಿದ್ದರು. ಎರಡು ತಿಂಗಳಿನಿಂದ ಕೋಮಾವಸ್ಥೆಯಲ್ಲಿದ್ದರು.

ಹೆಗ್ಗೋಡಿನ ‘ನೀನಾಸಂ’ ಪದವೀಧರೆಯಾದ ಹನುಮಕ್ಕ, ಬಿ.ವಿ.ಕಾರಂತ, ಕೆ.ವಿ.ಸುಬ್ಬಣ್ಣ, ಸಿಜಿಕೆ, ಸಿ.ಬಸವಲಿಂಗಯ್ಯ, ಮೇಕಪ್ ನಾಣಿ, ಕೀರ್ತಿನಾಥ ಕುರ್ತಕೋಟಿ, ಯು.ಆರ್. ಅನಂತಮೂರ್ತಿ, ಕೀ.ರಂ.ನಾಗರಾಜ ಮತ್ತಿತರ ಮಾರ್ಗದರ್ಶನದಲ್ಲಿ ಬೆಳೆದವರು. ‘ತುಘಲಕ್’, ‘ಅಗ್ನಿ ಮತ್ತು ಮಳೆ’, ‘ಬೆರಳ್‌ಗೆ ಕೊರಳ್’, ‘ನಾಗಮಂಡಲ’, ‘ಚಿರಬಂದೆವಾಡೆ’, ‘ಸ್ಮಶಾನ ಕುರುಕ್ಷೇತ್ರ’ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದರು.

ರಂಗ ನಿರಂತರ, ರೂಪಾಂತರ, ಕನ್ನಡ ಕಲಾ ಸಂಘ ತಂಡಗಳಲ್ಲೂ ಅಭಿನಯಿಸಿದ್ದರು. ಅವರು ವಸ್ತ್ರವಿನ್ಯಾಸ, ರಂಗನಿರ್ವಹಣೆಯಲ್ಲೂ ನಿಷ್ಣಾತರಾಗಿದ್ದರು. ‘ಫೈಲ್ ನಂ.11’ ಎಂಬ ನಾಟಕ ನಿರ್ದೇಶಿಸಿದ್ದರು. ‘ಕುಬುಸ’ ಸೇರಿ ಕೆಲ ಚಲನಚಿತ್ರದಲ್ಲಿ ನಟಿಸಿದ್ದರು.


ರಂಗಕರ್ಮಿ ದುರ್ಗಾದಾಸ ಅವರ ನಾಲ್ಕನೇ ಪುತ್ರಿಯಾದ ಹನುಮಕ್ಕ ಅವರು 2017ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದರು. ಮುಂಬೈ ಕನ್ನಡ ಸಂಘದ ಸ್ಪರ್ಧೆ ಹಾಗೂ ರಾಜ್ಯ ನಾಟಕ ಸ್ಪರ್ಧೆಯಲ್ಲಿ ತಲಾ ಎರಡು ಬಾರಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಪಾತ್ರರಾಗಿದ್ದರು. ಕನ್ನಡ ಕಲಾ ಸಂಘದ ಟಿ.ಪಿ.ಕೈಲಾಸಂ ಪ್ರಶಸ್ತಿ, ಕೊಟ್ಟೂರು ಮತ್ತು ಕೂಡ್ಲಿಗಿಯಲ್ಲಿ ರಂಗ ಗೌರವ ಸಂದಿತ್ತು. 2023ನೇ ಸಾಲಿನ ಜೋಳದರಾಶಿ ದೊಡ್ಡನಗೌಡ ರಂಗತೋರಣ ಪುರಸ್ಕಾರ ಪಡೆದಿದ್ದರು.

ಪರಿಹಾರ ಬಹಿರಂಗಕ್ಕೆ 48 ಗಂಟೆ ಗಡುವು

ಕಲ್ಯಾಣ ಕರ್ನಾಟಕದಲ್ಲಿ ಪ್ರವಾಹ: ಸಮಗ್ರ ಮಾಹಿತಿ ನೀಡಲು ದೇವೇಗೌಡ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕದ ನೆರೆಪೀಡಿತ ಜಿಲ್ಲೆಗಳಲ್ಲಿ ಏನೆಲ್ಲಾ ಪರಿಹಾರ ಒದಗಿಸಲಾಗಿದೆ ಎಂಬ ಮಾಹಿತಿಯನ್ನು 48 ಗಂಟೆಗಳಲ್ಲಿ ಜನರಿಗೆ ಮಾಹಿತಿ ನೀಡಬೇಕು' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಅವರು ರಾಜ್ಯ ಸರ್ಕಾರಕ್ಕೆ ಗಡುವು ನೀಡಿದರು.



ಎಚ್.ಡಿ. ದೇವೇಗೌಡ

'ನೆರೆ ಪರಿಹಾರ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕು. ಪ್ರವಾಹದಿಂದ ಜನರು ಅತೀವ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮುಂದಿನ 3-4 ದಿನಗಳಲ್ಲಿ ನಾನೂ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಈ ಸರ್ಕಾರ ಏನೆಲ್ಲಾ ಪರಿಹಾರವನ್ನು ಒದಗಿಸಿದೆ ಎಂಬುದನ್ನು ನೋಡುತ್ತೇನೆ' ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಹೇಳಿದರು.

'ನೆರೆಯಿಂದಾಗಿ 50ಕ್ಕೂ ಹೆಚ್ಚು ಜನರು ಜೀವ ಕಳೆದುಕೊಂಡಿದ್ದಾರೆ. ಅಪಾರ ಸಂಖ್ಯೆಯಷ್ಟು ಜಾನುವಾರುಗಳು ಮೃತಪಟ್ಟಿವೆ. ದೊಡ್ಡ ಪ್ರಮಾಣದಲ್ಲಿ ಆಸ್ತಿ, ಬೆಳೆ ನಷ್ಟವಾಗಿದೆ. ಮೂಲ ಸೌಕರ್ಯಗಳಲ್ಲಿ ರಸ್ತೆಗಳು, ಸೇತುವೆಗಳು ಕುಸಿದಿವೆ. ಮನೆಗಳಿಗೆ ನೆರೆ ನೀರು ನುಗ್ಗಿ ಜನರು ನಿರ್ಗತಿಕರಾಗಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

'ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸಾಧ್ಯವಿರುವ ಕಡೆಗಳಿಗೆ ರಸ್ತೆಯ ಮೂಲಕವೇ ತೆರಳಿ ನೆರೆ ಸಂತ್ರಸ್ತರನ್ನು ಭೇಟಿ ಮಾಡುತ್ತೇನೆ. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಕಣ್ಣಾರೆ ಕಂಡು ಅವರಿಂದ ಮಾಹಿತಿ ಪಡೆಯುತ್ತೇನೆ. ಆಗಿರುವ ನಷ್ಟದ ಬಗ್ಗೆ ವಿವರ ಪಡೆದು ಅದಕ್ಕೆ ತಕ್ಕಂತೆ ರಾಜ್ಯ ಸರ್ಕಾರ ನೆರವಿಗೆ ಬಂದಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುತ್ತೇನೆ. ಬಳಿಕ ಸಮಗ್ರ ವರದಿ ಸಿದ್ಧಪಡಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಿಸುತ್ತೇನೆ' ಎಂದು ಹೇಳಿದರು.

'ಎಲ್ಲಾ ಗೊತ್ತಿದೆ': 'ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ನನಗೆ ಎಲ್ಲಾ ಮಾಹಿತಿಯೂ ಇದೆ. ಭೂಸ್ವಾಧೀನಕ್ಕೆ ರೈತರು ವಿರೋಧ ಮಾಡುತ್ತಿದ್ದಾರೆ. ಸರ್ಕಾರ ಕಾಂಗ್ರೆಸ್ ಕೈಯಲ್ಲಿದೆ. ಚುನಾವಣೆ ಬಂದಾಗ ಜನ ತೀರ್ಪು ಕೊಡಬೇಕು. ಅಲ್ಲಿಯವರೆಗೂ ಕಾಯಬೇಕು' ಎಂದು ಹೇಳಿದರು.

'ಬಿಡದಿ ಟೌನ್‌ಶಿಪ್ ಯೋಜನೆಯ ಬಗ್ಗೆ ಬೇರೆಯವರ ಹೆಸರು ತೆಗೆದು ಚರ್ಚೆ ಮಾಡುವುದು ಬೇಡ. ಮೂರು ತಿಂಗಳ ಹಿಂದೆ ಮಾಧ್ಯಮಗಳು ಬೆಳಗ್ಗೆ ಆರರಿಂದ ರಾತ್ರಿ 10ರವರೆಗೂ ನಮ್ಮ ಮನೆ ಬಳಿಯೇ ಇರುತ್ತಿದ್ದವು. ಇದು ಯಾರ ಪ್ರೇರಣೆಯಿಂದ? ಅದರ ಹಿಂದೆ ಯಾರ ಶಕ್ತಿ ಇತ್ತು? ನನಗೆ ಗೊತ್ತಿದೆ. ಅದರ ಬಗ್ಗೆ ಚರ್ಚೆ ಬೇಡ. ನಮ್ಮದು ಸಣ್ಣ ರಾಜಕೀಯ ಪಕ್ಷ. ಇರಲಿ, ಎಲ್ಲವನ್ನೂ ಕಾಲವೇ ನಿರ್ಣಯಿಸುತ್ತದೆ' ಎಂದು ದೇವೇಗೌಡ ಹೇಳಿದರು.

ಅ.12ಕ್ಕೆ ಜೆಡಿಎಸ್ ಸಮಾವೇಶ

'ಬೆಂಗಳೂರಿನಲ್ಲಿ ಜೆಡಿಎಸ್ ಮಹಿಳಾ ಘಟಕದ ಸಮಾವೇಶವನ್ನು ಅಕ್ಟೋಬರ್ 12ರಂದು ಆಯೋಜಿಸಲಾಗುತ್ತದೆ' ಎಂದು ಎಚ್.ಡಿ. ದೇವೇಗೌಡ ಹೇಳಿದರು.

'ನಿಖಿಲ್ ಕುಮಾರಸ್ವಾಮಿ ಅವರು ನಡೆಸಿದ ಸದಸ್ಯತ್ವ ನೋಂದಣಿ ಅಭಿಯಾನ ಯಶಸ್ವಿಯಾಗಿದೆ. ಆದರೆ ಅಷ್ಟು ಸಾಲದು. ನಮ್ಮ ಶಕ್ತಿ ಎಷ್ಟು ಇದೆ ಎಂಬುದನ್ನು ತೋರಿಸಬೇಕಿದೆ' ಎಂದರು.

'ಮಹಿಳಾ ಘಟಕದ ವತಿಯಿಂದ ಸಮಾವೇಶದಲ್ಲಿ 50 ಸಾವಿರದಿಂದ 60 ಸಾವಿರ ಜನರನ್ನು ಸೇರಿಸಲಾಗುತ್ತದೆ. ಬೆಂಗಳೂರು ನಗರ ಪಾಲಿಕೆಗಳಿಗೆ ನಡೆಯುವ ಚುನಾವಣೆಗೆ ಇದು ನೆರವಾಗಲಿದ್ದು, ನಮ್ಮ ಪಕ್ಷವು 50–60 ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದೆ' ಎಂದರು.

'ಯಾವುದೇ ಚುನಾವಣೆ ಇರಲಿ, ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಮುಂದುವರೆಯುತ್ತದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಆತಂಕ ಬೇಡ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ತಮ್ಮನ್ನು ಜೈಲಿಗೆ ಕಳುಹಿಸಲು ದೇವೇಗೌಡ ಅವರ ಕುಟುಂಬ ಪ್ರಯತ್ನಿಸುತ್ತಲೇ ಇದೆ' ಎಂದು ಡಿ.ಕೆ. ಶಿವಕುಮಾರ್ ಅವರ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಆ ವ್ಯಕ್ತಿ ಮತ್ತು ಆ ವಿಷಯದ ಬಗ್ಗೆ ಮಾತನಾಡುವುದಿಲ್ಲ' ಎಂದರು.

'ರಾಜಕೀಯ ಮಾತನಾಡಲು ಬಯಸುವುದಿಲ್ಲ'

ಕೇಂದ್ರ ಸರ್ಕಾರವು ನೆರೆ ಪೀಡಿತ ಇತರ ರಾಜ್ಯಗಳಿಗೆ ಪರಿಹಾರ ಘೋಷಿಸಿದೆ. ಕರ್ನಾಟಕಕ್ಕೆ ಘೋಷಿಸಿಲ್ಲ. ಈ ಬಗ್ಗೆ ಪ್ರಧಾನಿ ಅವರ ಬಳಿ ಮಾತನಾಡುತ್ತೀರಾ ಎಂಬ ಸುದ್ದಿಗಾರರ ಪ್ರಶ್ನೆಗೆ, 'ಈ ಬಗ್ಗೆ ರಾಜಕೀಯ ಮಾತನಾಡಲು ಬಯಸುವುದಿಲ್ಲ' ಎಂದರು.

'ನೆರೆ ವಿಷಯದಲ್ಲಿ ಯಾರೂ ರಾಜಕೀಯ ಮಾಡಬಾರದು. ಸರ್ಕಾರ ಇದನ್ನು ತುರ್ತು ಆದ್ಯತೆ ಎಂದು ಪರಿಗಣಿಸಬೇಕು. ಆದರೆ ಖಜಾನೆಯಲ್ಲಿ ಹಣವಿಲ್ಲ ಎಂದು ಆ ಪಕ್ಷದ (ಕಾಂಗ್ರೆಸ್) ಶಾಸಕರೇ ಹೇಳುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಹಣ ನೀಡುತ್ತಿರುವುದರಿಂದ ನೆರೆ ಪೀಡಿತ ಜಿಲ್ಲೆಗಳಿಗೆ ಹಣವಿಲ್ಲ ಎನ್ನುತ್ತಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಉಂಟಾಗಿರುವ ತೀವ್ರ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರದ ಬಳಿ ಹಣವಿಲ್ಲ ಎಂಬುದು ಆ ಪಕ್ಷದ ಶಾಸಕರ ಅಭಿಪ್ರಾಯ. ನನ್ನದಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಸವ ಸಂಸ್ಕೃತಿ: ನಾಳೆ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವಗುರು ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಸರ್ಕಾರ ಘೋಷಿಸಿ ಒಂದು ವರ್ಷ ಪೂರೈಸಿದ ಪ್ರಯುಕ್ತ ಲಿಂಗಾಯತ ಮಠಾಧಿಪತಿಗಳ ಒಕ್ಕೂಟವು ರಾಜ್ಯದ 30 ಜಿಲ್ಲೆಗಳಲ್ಲಿ ಸೆ.1ರಿಂದ ನಡೆಸಿದ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭ ಅ.5ರಂದು ಬೆಳಿಗ್ಗೆ 10.30ಕ್ಕೆ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ 300ಕ್ಕೂ ಅಧಿಕ ಮಠಾಧೀಶರು ಹಾಗೂ 20 ಸಾವಿರಕ್ಕೂ ಹೆಚ್ಚು ಬಸವ ಅನುಯಾಯಿಗಳು ಭಾಗವಹಿಸಲಿದ್ದಾರೆ ಎಂದು ಅಥಣಿ ಮೋಟಗಿಮಠದ ಪ್ರಭುಚನ್ನಬಸವ ಸ್ವಾಮೀಜಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಸವ ಸಂಸ್ಕೃತಿ ಅಭಿಯಾನವು ಜಾಗೃತಿ ಅಭಿಯಾನವಾಗಿದ್ದು, ಬಸವತತ್ವದಲ್ಲಿ ಜನರು ಹೆಜ್ಜೆ ಇಡುವಂತೆ ಮಾಡುವುದು ಇದರ ಉದ್ದೇಶವಾಗಿತ್ತು. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಮಾರೋಪ ಸಮಾರಂಭದಲ್ಲಿ ಸನ್ಮಾನಿಸಲಾಗುವುದು' ಎಂದರು.

'ಇದೊಂದು ರಾಜಕೀಯೇತರ ಕಾರ್ಯಕ್ರಮ ಇದರಲ್ಲಿ ವಿವಿಧ ಮಠಾಧೀಶರು ಅಭಿಯಾನದಲ್ಲಿನ ತಮ್ಮ ಅನುಭವ ಗಳನ್ನು ಹೇಳಿಕೊಳ್ಳಲಿದ್ದಾರೆ. ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ನಾಡಿನ ಜನಪ್ರತಿನಿಧಿಗಳು, ಸಾಹಿತಿಗಳು, ಚಿಂತಕರು, ಬಸವಪರ ಸಂಘಟಕರು ಭಾಗವಹಿಸಲಿದ್ದಾರೆ' ಎಂದು ಒಕ್ಕೂಟದ ಅಧ್ಯಕ್ಷರಾದ ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು ತಿಳಿಸಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, 'ಒಂದು ತಿಂಗಳ ಅಭಿಯಾನ ಸಮಾರೋಪಗೊಳ್ಳಬಹುದು. ಆದರೆ, ಜನಜಾಗೃತಿ ಕಾರ್ಯಕ್ರಮ ನಿರಂತರವಾಗಿ ಮುಂದುವರಿಯಲಿದೆ. ಬಸವ ಪ್ರಜ್ಞೆ ಮೂಡಿಸುವ ಎಲ್ಲ ಕಾರ್ಯಗಳಿಗೆ ಇದು ಪ್ರೇರಣೆಯಾಗಿದೆ' ಎಂದರು.

ಬಸವ ಧರ್ಮಪೀಠದ ಗಂಗಾದೇವಿ, ಬೆಳಗಾವಿಯ ನಾಗನೂರು ಮಠದ ಅಲ್ಲಮಪ್ರಭು ಸ್ವಾಮೀಜಿ, ಬೆಂಗಳೂರು ಗುರುವಣ್ಣದೇವರ ಮಠದ ನಂಜುಂಡ ಸ್ವಾಮೀಜಿ, ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಇದ್ದರು.



ಬೆಂಗಳೂರು ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭದ ಸಿದ್ಧತೆಗಳನ್ನು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ನೇತೃತ್ವದಲ್ಲಿ ವಿವಿಧ ಸ್ವಾಮೀಜಿಗಳು ಪರಿಶೀಲಿಸಿದರು

ಬೆಂಗಳೂರಿನಲ್ಲಿ ಬಸವ ರಥ ಇಂದು

ರಾಜ್ಯದಾದ್ಯಂತ ಸಂಚರಿಸಿರುವ 'ಬಸವ ರಥ' ಯಾತ್ರೆ ಬೈಕ್ ರ‍್ಯಾಲಿಯೊಂದಿಗೆ ಅ.4ರಂದು ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಸಂಚರಿಸಲಿದೆ.

ಬೆಳಿಗ್ಗೆ 8ಕ್ಕೆ ನೆಲಮಂಗಲ ದಿಂದ ಹೊರಡಲಿರುವ ರಥವು ಬಸವೇಶ್ವರ ನಗರ, ರಾಜಾಜಿನಗರ, ವಿಜಯನಗರ ಮುಂತಾದೆಡೆ ಸಂಚರಿಸಿ ಜಾಗೃತಿ ಮೂಡಿಸಲಿದೆ ಎಂದು ಒಕ್ಕೂಟ ತಿಳಿಸಿದೆ.

ದೇವರಿಗಾಗಿ ಕಾಳಗ: ಇಬ್ಬರ ಸಾವು

ಒಂದನೇ ಪುಟದಿಂದ...

ಈ ಆಚರಣೆಯನ್ನು ಸ್ಥಳೀಯವಾಗಿ 'ಬನ್ನಿ ಉತ್ಸವಂ' ಅಥವಾ 'ದೇವರಗಟ್ಟು ಕಟ್ಟಲ ಸಮರಂ' ಎನ್ನುತ್ತಾರೆ. ಮಧ್ಯರಾತ್ರಿ 1ರಿಂದ 3ರವರೆಗೆ ದೊಣ್ಣೆಗಳ ಕಾಳಗ ನಡೆಯುತ್ತದೆ. ಇದನ್ನು ನೋಡಲು ಸಾವಿರಾರು ಜನರು ಬರುತ್ತಾರೆ' ಎಂದು ಸ್ಥಳೀಯರು ತಿಳಿಸಿದರು.

ಇಂಥ ಆಚರಣೆ ನಡೆಯುತ್ತದೆ. ಸಾವು ಸಂಭವಿಸುತ್ತದೆ ಎಂಬುದು ಇಲ್ಲಿನ ಸರ್ಕಾರಕ್ಕೂ ಗೊತ್ತು. ಆದರೂ ನಿಷೇಧ ಹೇರಲಾಗಿಲ್ಲ ಎಂದು ಗ್ರಾಮಸ್ಥರೊಬ್ಬರು ದೂರಿದರು. ಆದರೆ, ಮುಂಜಾಗ್ರತೆಯಾಗಿ ಆಂಬುಲೆನ್ಸ್, ಆಸ್ಪತ್ರೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿತ್ತು ಎಂದರು.

ಈ ಸಲವೂ ಹಿಂಸೆ ತಡೆಗೆ 800 ಪೊಲೀಸರನ್ನು ನಿಯೋಜಿಸಲಾಗಿತ್ತು. ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿ, ಡ್ರೋನ್ ಬಳಸಲಾಗಿತ್ತು. ಆದರೂ ಅವಘಡ ಸಂಭವಿಸಿದೆ. ಕಳೆದ ವರ್ಷ ಮೂವರು ಮೃತಪಟ್ಟು, 70 ಮಂದಿಗೆ ಗಾಯವಾಗಿತ್ತು.

ರಸ್ತೆಯಲ್ಲಿ ದೇವರಿಟ್ಟು ಪ್ರತಿಭಟನೆ

ಒಂದನೇ ಪುಟದಿಂದ...

ವಶಕ್ಕೆ ಪಡೆದುಕೊಂಡ ಮೂವರು ಯುವಕರನ್ನು ಬಿಡುಗಡೆಗೊಳಿಸುವಂತೆ ಒತ್ತಾಯಿಸಿದರು.

ಬೇಡಿಕೆಗೆ ಒಪ್ಪದ ಉಳ್ಳಾಲ ಪೊಲೀಸರು, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಎಸಿಪಿ ವಿಜಯಕ್ರಾಂತಿ, ಡಿಸಿಪಿ ಮಿಥುನ್ ಎಚ್.ಎನ್. ಭೇಟಿ ನೀಡಿ ಮನವೊಲಿಸಲು ಯತ್ನಿಸಿದರೂ ಸಫಲವಾಗಲಿಲ್ಲ.

ಬಂಧಿತರ ಬಿಡುಗಡೆಗೆ ಪೊಲೀಸರು ಒಪ್ಪದೆ ಇದ್ದಾಗ ನೀವೇ ಮುಂದಿನ ಪರಿಣಾಮ ಎದುರಿಸಿರಿ ಎಂದು ಮುಖಂಡರು ಹೊರನಡೆದರು.

ಪಟ್ಟುಬಿಡದ ಭಕ್ತರು ಪ್ರತಿಭಟನೆ ಮುಂದುವರಿಸಿದಾಗ ನಸುಕಿನ 4.30ರ ಸುಮಾರಿಗೆ ಆಶೀಶ್, ಅಶ್ವತ್ ಅವರನ್ನು ಬಿಡುಗಡೆಗೊಳಿಸಿದರು. ರಕ್ಷಿತ್ ವಿರುದ್ಧ ಪ್ರಕರಣಗಳಿದ್ದು, ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಅಂತಿಮವಾಗಿ ಬೆಳಿಗ್ಗೆ ವೇಳೆಗೆ ಶಾರದಾ ಮೂರ್ತಿಯ ವಿಸರ್ಜನೆ ನಡೆಯಿತು.

ಡಿವೈಎಸ್‌ಪಿ ಸೇರಿ ಇಬ್ಬರಿಗೆ ಗಾಯ

ಮಡಿಕೇರಿ: ದಸರಾ ದಶಮಂಟಪಗಳಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಶುಕ್ರವಾರ ಗಲಾಟೆಯಾಗಿದೆ. ತಳ್ಳಾಟದಲ್ಲಿ ಡಿವೈಎಸ್‌ಪಿ ಸೂರಜ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆಡ್‌ಕಾನ್‌ಸ್ಟೆಬಲ್ ಉದಯ್ ಅವರಿಗೂ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಹುಮಾನ ಘೋಷಣೆ ಆದಂತೆ ಕೆಲವರು 'ಮೋಸ ಮೋಸ' ಎಂದು ಕೂಗಿ ವೇದಿಕೆ ಏರಿದ್ದು, ಪೀಠೋಪಕರಣ ಧ್ವಂಸಗೊಳಿಸಿದರು. ಈ ಹಂತದಲ್ಲಿ ಲಘು ಲಾಠಿ ಪ್ರಹಾರ ನಡೆಸಿದ್ದು, ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಡಿವೈಎಸ್‌ಪಿ ಸೂರಜ್ ಅವರ ತಲೆ, ಕಾಲಿಗೆ ತೀವ್ರ ಗಾಯಗಳಾಗಿವೆ. ಆರೋಪಿ ಯಕ್ಷಿತ್‌ನನ್ನು ಬಂಧಿಸಲಾಗಿದೆ. ವೇದಿಕೆ ಏರಿದ್ದ ಅಷ್ಟೂ ಜನರ ಮೇಲೆ ಪ್ರಕರಣ ದಾಖಲಿಸಲಾಗುವುದು' ಎಂದು ಕೊಡಗು ಎಸ್‌ಪಿ ಕೆ.ರಾಮರಾಜನ್, 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ತಿಳಿಸಿದರು.

ಗೋಣಿಕೊಪ್ಪಲಿನಲ್ಲೂ ಗುರುವಾರ ತಡರಾತ್ರಿ ಶೋಭಾಯಾತ್ರೆ ವೇಳೆ ಡಿ.ಜೆ ಬಳಕೆಗೆ ಅನುಮತಿಗೆ ಒತ್ತಾಯಿಸಿ ಸಂಘಟಕರು 2 ಗಂಟೆ ರಸ್ತೆಯಲ್ಲಿ ಧರಣಿ ನಡೆಸಿದ್ದರು. ಕುಣಿತಕ್ಕೆ ಕೊಡಗಿನ ವಾಲಗ ಬಳಸಲು ಪೊಲೀಸರು ಅನುಮತಿ ನೀಡಿದ ನಂತರ ಮೆರವಣಿಗೆ ಮುಂದುವರಿಯಿತು.

ಪತ್ರಕರ್ತ ಟಿಜೆಎಸ್ ಜಾರ್ಜ್ ನಿಧನ

ಬೆಂಗಳೂರು: ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಸಮೂಹದ ಸಂಪಾದಕೀಯ ಸಲಹೆಗಾರ ಮತ್ತು ನಿರ್ದೇಶಕರಾಗಿದ್ದ ಪತ್ರಕರ್ತ ಟಿಜೆಎಸ್ ಜಾರ್ಜ್ (97) ಅವರು ಬೆಂಗಳೂರಿನಲ್ಲಿ ನಿಧನರಾದರು.



ಟಿಜೆಎಸ್ ಜಾರ್ಜ್

'ಕೆಲ ದಿನಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದ ಜಾರ್ಜ್ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಶುಕ್ರವಾರ ಸಂಜೆ ಹೃದಯಾಘಾತದಿಂದ ಅವರು ನಿಧನರಾದರು. ಬೆಂಗಳೂರಿನಲ್ಲಿ ಭಾನುವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ' ಎಂದು ಪುತ್ರಿ ಶೀಬಾ ತಿಳಿಸಿದ್ದಾರೆ.

ಕೇರಳದಲ್ಲಿ 1928ರ ಮೇ 7ರಂದು ಜನಿಸಿದ್ದ ಥಾಯಿಲ್ ಜಾಕೋಬ್ ಸೋನಿ ಜಾರ್ಜ್ ಅವರು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಪದವಿ ಪೂರೈಸಿ ಮುಂಬೈನಲ್ಲಿ ಪತ್ರಕರ್ತ ವೃತ್ತಿ ಜೀವನವನ್ನು 'ಫ್ರೀ ಪ್ರೆಸ್ ಜರ್ನಲ್' ಮೂಲಕ (1950) ಆರಂಭಿಸಿದರು. ನಂತರ ಪಟ್ನಾದ 'ಸರ್ಚ್‌ಲೈಟ್', ನ್ಯೂಯಾರ್ಕ್‌ನ 'ದ ಯುನೈಟೆಡ್ ನೇಷನ್ಸ್'ನಲ್ಲಿ, ಹಾಂಗ್‌ಕಾಂಗ್‌ನಲ್ಲಿ ಏಷಿಯಾವೀಕ್‌ನ ಸಂಸ್ಥಾಪಕ ಸಂಪಾದಕರಾಗುವ ಮೊದಲು 'ದ ಫಾರ್ ಈಸ್ಟರ್ನ್ ಎಕಾನಮಿಕ್ ರಿವ್ಯೂ'ದಲ್ಲೂ ಕಾರ್ಯನಿರ್ವಹಿಸಿದ್ದರು.

ಇದಾದ ಬಳಿಕ ಹೆಚ್ಚು ಕಾಲ ಬೆಂಗಳೂರಿನಲ್ಲಿಯೇ ಕಳೆದಿದ್ದ ಅವರು 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಕಾರ್ಯನಿರ್ವಹಿಸಿದ್ದರು. ಆ ಪತ್ರಿಕೆಯಲ್ಲಿ ಅವರು ಎರಡೂವರೆ ದಶಕ ಕಾಲ ಬರೆದ 'ಪಾಯಿಂಟ್ ಆಫ್ ವ್ಯೂ' ಎನ್ನುವ ಅಂಕಣ ಜನಪ್ರಿಯವಾಗಿತ್ತು. ರಾಜಕೀಯ, ಪ್ರಸಕ್ತ ವಿದ್ಯಮಾನಗಳ ಕುರಿತು ವಸ್ತುನಿಷ್ಠ ಬರಹಗಾರರಾಗಿ ಅವರು ಗುರುತಿಸಿಕೊಂಡಿದ್ದರು. ಜಾರ್ಜ್ ಅವರ ಹಲವು ಕೃತಿಗಳು ಜನಪ್ರಿಯವಾಗಿವೆ.

2007ರಲ್ಲಿ ಅವರಿಗೆ ಕನ್ನಡ ರಾಜ್ಯೋತ್ಸವ, 2011ರಲ್ಲಿ ಪದ್ಮಭೂಷಣ ಪ್ರಶಸ್ತಿ ಸಂದಿತ್ತು. ಈ ವರ್ಷಾರಂಭದಲ್ಲಿ ಪತ್ನಿ ಅಮ್ಮು ಜಾರ್ಜ್ ನಿಧನರಾಗಿದ್ದರು. ಪುತ್ರ ಜೀತ್ ತಾಯಿಲ್ ಕೂಡ ಪತ್ರಕರ್ತ.

ವಿ.ಕೆ.ಕೃಷ್ಣ ಮೆನನ್, ನಟಿ ನರ್ಗೀಸ್, ಸಂಗೀತ ವಿದುಷಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಜೀವನ ಚರಿತ್ರೆಗಳನ್ನು ಒಳಗೊಂಡಂತೆ ಹಲವು ಮಹತ್ವದ ಕೃತಿಗಳನ್ನು ಅವರು ರಚಿಸಿದ್ದಾರೆ

'ಟಿಜೆಎಸ್ ಜಾರ್ಜ್ ಅವರು ಮೊನಚಾದ ಬರವಣಿಗೆ ಮೂಲಕ ಆರು ದಶಕಗಳ ಕಾಲ ಭಾರತೀಯ ಪತ್ರಿಕೋದ್ಯಮಕ್ಕೆ ಶಕ್ತಿ ತುಂಬಿದವರು. ಓದುಗರು ಮರು ಚಿಂತನೆ ಮಾಡುವ, ಪ್ರಶ್ನಿಸುವ, ಸಾರ್ವಜನಿಕವಾಗಿ ತೊಡಗಿಕೊಳ್ಳುವಂತೆ ಜಾರ್ಜ್ ತಮ್ಮ ಲೇಖನಗಳ ಮೂಲಕ ಪ್ರೇರಣೆ ನೀಡಿದ್ದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೆನಪಿಸಿಕೊಂಡಿದ್ದಾರೆ.

'ಜಾರ್ಜ್ ಅವರು ಅಂಕಣಕಾರರಾಗಿ ವಿದ್ಯಮಾನಗಳ ವಿಶ್ಲೇಷಣೆ ಮೂಲಕ ರಾಜಕೀಯ ವ್ಯವಸ್ಥೆಯನ್ನು ಸದಾ ಜಾಗೃತಗೊಳಿಸಿದ್ದರು. ಸಾಮಾಜಿಕ ಅಸಮಾನತೆ, ಭ್ರಷ್ಟಾಚಾರದ ವಿರುದ್ಧ ತಮ್ಮ ಲೇಖನಿ ಮೂಲಕ ಧ್ವನಿ ಎತ್ತುವ ಕೆಲಸ ಮಾಡಿದ್ದರು' ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕಸಾಪ ವಾರ್ಷಿಕ ಸಾಮಾನ್ಯ ಸಭೆ ಮುಂದೂಡಿಕೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಕಲ್ಹಳ್ಳಿ ಗ್ರಾಮದ ಸತ್ಯಕಾಮ ಪ್ರತಿಷ್ಠಾನದ ಸುಮ್ಮನೆ ಸಭಾಭವನದಲ್ಲಿ ಅ.5ರಂದು ನಡೆಯಬೇಕಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಹಾಗೂ 2023-24ನೇ ವಾರ್ಷಿಕ ಸಾಮಾನ್ಯ ಸಭೆ ಮುಂದೂಡಲಾಗಿದೆ.

'ಕಲ್ಹಳ್ಳಿಯಲ್ಲಿ ಈಚೆಗೆ ಕೋಮು ಗಲಭೆ ನಡೆದಿದ್ದು, 22 ಜನರನ್ನು ಬಂಧಿಸಲಾಗಿದೆ. ಇದೇ ಗ್ರಾಮದಲ್ಲಿ ವೆಂಕಟೇಶ್ವರ ದೇವಸ್ಥಾನದ ಜಾತ್ರೆ ಇದೆ. ಹೀಗಾಗಿ ಸಭೆ ನಡೆಸಲು ಸೂಕ್ತ ಸ್ಥಳವಲ್ಲ' ಎಂದು ತಹಶೀಲ್ದಾರ ಅನೀಲ ಬಡಿಗೇರ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಕಾಲದ ಪ್ರಜ್ಞೆ ಇಲ್ಲದವನಿಗೆ ಗಡಿಯಾರ ಬರಿಯ ಅಲಂಕಾರವಷ್ಟೆ.

-ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಯಥಾಸ್ಥಿತಿಯಲ್ಲಿ ಉಳಿದ ರೆಪೊ ದರ ಭವಿಷ್ಯದ ಕುರಿತು ಎಚ್ಚರಿಕೆಯ ನಡೆ

ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) 'ಹಣಕಾಸು ನೀತಿ ಸಮಿತಿ' (ಎಂಪಿಸಿ) ಸಭೆಯ ನಿರ್ಣಯ, ಜಾಗತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಕಾದು ನೋಡುವ ಎಚ್ಚರದ ನಡೆಯಾಗಿದೆ. ಈ ಬಾರಿಯೂ ರೆಪೊ ದರವನ್ನು ಶೇ 0.25ರಷ್ಟು ಕಡಿತಗೊಳಿಸಬಹುದು ಎಂದು ಎಸ್‌ಬಿಐ ರಿಸರ್ಚ್ ವರದಿ ಹೇಳಿತ್ತು. ಆದರೆ, ಯಾವುದೇ ಬದಲಾವಣೆಯಿಲ್ಲದೆ ಶೇ 5.5ರಲ್ಲಿಯೇ ರೆಪೊ ದರವನ್ನು ಉಳಿಸಿಕೊಳ್ಳಲು 'ಎಂಪಿಸಿ' ಸಭೆ ನಿರ್ಧರಿಸಿದೆ. ಸತತ ಎರಡು ಸಭೆಯಲ್ಲಿ ರೆಪೊ ದರ ಯಾವುದೇ ಬದಲಾವಣೆಗೆ ಒಳಗಾಗದೆ ಯಥಾಸ್ಥಿತಿಯಲ್ಲಿ ಉಳಿದಿದೆ. ದೇಶದ ಆರ್ಥಿಕತೆ ಬೆಳವಣಿಗೆಯ ಬಗ್ಗೆ ಇರುವ ಆಶಾವಾದ ಹಾಗೂ ಮುಂದಿನ ದಿನಗಳಲ್ಲಿ ಚಿಲ್ಲರೆ ಹಣದುಬ್ಬರ ಏರಿಕೆ ಆಗಬಹುದೆಂಬುದನ್ನು ಗಮನದಲ್ಲಿಟ್ಟುಕೊಂಡು ಆರ್‌ಬಿಐ ಈ ನಿಲುವು ತಳೆದಿದೆ. ಪ್ರಸಕ್ತ ವರ್ಷದಲ್ಲಿ ಸತತ ಮೂರು ಬಾರಿ ರೆಪೊ ದರವನ್ನು ಕಡಿತಗೊಳಿಸಲಾಗಿತ್ತು. ಇದರಿಂದ ಶೇ 6.5ರಷ್ಟಿದ್ದ ರೆಪೊ ದರದಲ್ಲಿ ಶೇ 1ರಷ್ಟು ಕಡಿತವಾಗಿತ್ತು. ಪ್ರಸ್ತುತ 'ಎಂಪಿಸಿ' ತಳೆದಿರುವ ನಿಲುವು, ಪ್ರತಿಕೂಲ ಸಂದರ್ಭದಲ್ಲೂ ದೇಶದ ಆರ್ಥಿಕತೆ ಬೆಳವಣಿಗೆ ಬಗೆಗಿನ ಆಶಾವಾದ ಹಾಗೂ ಆತ್ಮವಿಶ್ವಾಸದ ಸಂಕೇತವಾಗಿದೆ. ಈ ಧನಾತ್ಮಕ ಸ್ಥಿತಿಗೆ, ಉತ್ತಮ ಮುಂಗಾರು ಹಾಗೂ ದಸರಾ ಕೊಡುಗೆಯ ರೂಪದಲ್ಲಿ ಘೋಷಣೆಗೊಂಡ ಜಿಎಸ್‌ಟಿ ಪರಿಷ್ಕರಣೆಯ ಪಾಲೂ ಇದೆ.



ರೆಪೊ ದರವನ್ನು ಶೇ 5.5ರಲ್ಲಿಯೇ ಉಳಿಸಿಕೊಳ್ಳುವ ನಿರ್ಧಾರ, ಪ್ರತಿಕೂಲ ಸನ್ನಿವೇಶಗಳ ನಡುವೆಯೂ ಆರ್ಥಿಕ ಬೆಳವಣಿಗೆಯ ಬಗ್ಗೆ ಆರ್‌ಬಿಐ ಹೊಂದಿರುವ ಆಶಾವಾದದ ಸಂಕೇತದಂತಿದೆ.

ಆರ್ಥಿಕತೆ ಬೆಳವಣಿಗೆಯ ಆಶಾವಾದಕ್ಕೆ ಆರ್‌ಬಿಐನ ಲೆಕ್ಕಾಚಾರಗಳ ಜೊತೆಗೆ, ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಹೇಳಿಕೆಗಳೂ ಪುಷ್ಟಿ ಒದಗಿಸುವಂತಿವೆ. ಜಿಎಸ್‌ಟಿ ಪರಿಷ್ಕರಣೆಯು ಹಣದುಬ್ಬರ ಪ್ರಮಾಣವನ್ನು ಕಡಿಮೆ ಮಾಡಲು ಸಹಕಾರಿಯಾಗಲಿದೆ. ಜೊತೆಗೆ, ಬೇಡಿಕೆ ಮತ್ತು ಬೆಳವಣಿಗೆಯನ್ನು ಹೆಚ್ಚಿಸಲು ನೆರವಾಗಲಿದೆ ಎಂಬ ಆಶಾಭಾವವನ್ನು ಅವರು ಹೊಂದಿದ್ದಾರೆ.

2025-26ನೇ ಆರ್ಥಿಕ ಸಾಲಿನ ಭಾರತದ ಆರ್ಥಿಕತೆ ಬೆಳವಣಿಗೆಯನ್ನು ಆರ್‌ಬಿಐ ಪರಿಷ್ಕರಿಸಿದ್ದು, ಶೇ 6.8ರಷ್ಟು ದಾಖಲಾಗಲಿದೆ ಎಂದು ಅಂದಾಜು ಮಾಡಿದೆ. ಇದು, ಆಗಸ್ಟ್ ತಿಂಗಳಲ್ಲಿ ಅಂದಾಜಿಸಿದ್ದ ಶೇ 6.5ಕ್ಕಿಂತಲೂ ಹೆಚ್ಚಿನದಾಗಿದೆ. ಇದರ ಜೊತೆಗೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 2.6ಕ್ಕೆ ತಗ್ಗಲಿದೆ ಎಂದು ಅಂದಾಜಿಸಿದೆ. ಆಗಸ್ಟ್‌ನಲ್ಲಿ ನಡೆದ ಸಭೆಯಲ್ಲಿ ಹಣದುಬ್ಬರವು ಶೇ 3.1ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಲಾಗಿತ್ತು. ಆರ್ಥಿಕತೆ ಬೆಳವಣಿಗೆಯು ಚಲನಶೀಲ ಆಗಿದ್ದಾಗ ಹಾಗೂ ಹಣದುಬ್ಬರವು ಮಂದಗತಿಯಲ್ಲಿದ್ದಾಗ ಆರ್‌ಬಿಐಗೆ ತನ್ನ ಗುರಿ ಸಾಧಿಸಲು ಹಣಕಾಸಿನ ಸಲಕರಣೆಗಳನ್ನು ಬಳಸುವ ಪ್ರಮೇಯ ಎದುರಾಗುವುದಿಲ್ಲ. ದೇಶೀಯ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳಿಗೆ ಆರ್‌ಬಿಐ ಎಚ್ಚರಿಕೆಯಿಂದ ಪ್ರತಿಕ್ರಿಯಿಸುತ್ತಿರುವುದನ್ನೂ ರೆಪೊ ದರದ ಯಥಾಸ್ಥಿತಿ ನಿರ್ಧಾರವು ಸೂಚಿಸುವಂತಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಸುಂಕ ಸಮರ ನೀತಿ ಭಾರತದ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಇದರ ಜೊತೆಗೆ, ಪ್ರಸ್ತುತ ನಡೆಯುತ್ತಿರುವ ವಿವಿಧ ದೇಶಗಳ ನಡುವಣ ಸಂಘರ್ಷಗಳು ಹಾಗೂ ವಿಶ್ವ ಹಣಕಾಸು ಮಾರುಕಟ್ಟೆಗಳಲ್ಲಿನ ಅಸ್ಥಿರತೆಯು, ಭಾರತದ ಆರ್ಥಿಕತೆ ಬೆಳವಣಿಗೆಗೆ ಗಂಭೀರ ತೊಡಕುಗಳನ್ನು ಉಂಟು ಮಾಡಬಲ್ಲದು. ಹೀಗಾಗಿ, ಹಣದುಬ್ಬರವನ್ನು ನಿಯಂತ್ರಿಸುವ ಮೂಲಕ ದೇಶದ ಆರ್ಥಿಕತೆ ಬೆಳವಣಿಗೆಯ ಸ್ಥಿರತೆಗೆ ಒತ್ತು ನೀಡುವುದು ಆರ್‌ಬಿಐನ ಪ್ರಮುಖ ಗುರಿಯಾಗಿದೆ. ಈ ದಿಸೆಯಲ್ಲಿ ತನ್ನ 'ತಟಸ್ಥ' ನೀತಿಯಲ್ಲೂ 'ಎಂಪಿಸಿ' ಯಾವುದೇ ಬದಲಾವಣೆ ಮಾಡಿಲ್ಲ ಎಂದು ಆರ್‌ಬಿಐ ಗವರ್ನರ್ ಹೇಳಿದ್ದಾರೆ. ರೆಪೊ ದರದಲ್ಲಿ ಬದಲಾವಣೆ ಮಾಡದಿರುವ ಎಂಪಿಸಿ ನಿರ್ಧಾರವು, ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ಮತ್ತು ಸುಂಕಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಆಗಬಹುದಾದ ಬದಲಾವಣೆಗಳನ್ನು ಎಚ್ಚರಿಕೆಯಿಂದ ಗಮನಿಸಿ ಮುಂದಿನ ನಡೆಯನ್ನು ನಿರ್ಧರಿಸುವ ನಡವಳಿಕೆಯಾಗಿದೆ.

ಕೀರ್ತಿಪತಾಕೆಯ ಹಿಂದೆ...



ನಾಡು-ನುಡಿ ಮತ್ತು ಸಿನಿಮಾ ಪ್ರೇಮಿಗಳು ಮಾಡಬೇಕಿರೋದು ಇಷ್ಟೇ. ಟಿಕೆಟ್ ಬೆಲೆ ಕಡಿಮೆ ಆಗೋವರೆಗೂ ಮಲ್ಟಿಪ್ಲೆಕ್ಸ್ ಕಡೆ ತಿರುಗಿ ನೋಡಬೇಡಿ. ಟಿಕೆಟ್ಟಿಗೆ ಒಂದು ಸಾವಿರ ರೂಪಾಯಿ ತಗೊಂಡು ಅವರು ನಮ್ಮ ನಾಡಿನ ಕೀರ್ತಿಪತಾಕೆ ಹಾರಿಸೋದೇನೂ ಬೇಡ.

ಟಿ.ಎಚ್. ಲವಕುಮಾರ್, 'ಫೇಸ್‌ಬುಕ್'ನಿಂದ

ಕಿಡಿನುಡಿ



ವೈಚಾರಿಕವಾಗಿರುವ ವಾಮಪಂಥೀಯರು, ರಾಜಕೀಯ ಶಕ್ತಿಗಳು ಶಬರಿಮಲೆಯಲ್ಲಿ ಸ್ವಲ್ಪ ರಕ್ತದ ರುಚಿ ನೋಡಿದರು. ಈಶ ಆಶ್ರಮದಲ್ಲಿ, ಶನಿ ಶಿಂಗ್ನಾಪುರದಲ್ಲೂ ರಕ್ತದ ರುಚಿ ನೋಡಿದರು. ಧರ್ಮಸ್ಥಳದಲ್ಲೂ ಅದನ್ನೇ ಪ್ರಯತ್ನಿಸುತ್ತಿದ್ದಾರೆ.

ಬಿ.ಎಲ್. ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಬುಧವಾರ, 4-10-2000

• ತೈಲ ಬೆಲೆ ಹೆಚ್ಚಳ ಭಾಗಶಃ ವಾಪಸ್: ಪ್ರಧಾನಿ ಭರವಸೆ

ಕಲ್ಕತ್ತಾ, ಅ. 3 (ಪಿಟಿಐ)– ತೈಲ ಉತ್ಪನ್ನಗಳ ಬೆಲೆ ಹೆಚ್ಚಿಸಿರುವುದನ್ನು ಭಾಗಶಃ ವಾಪಸು ತೆಗೆದುಕೊಳ್ಳುವ ಬಗ್ಗೆ ಪ್ರಧಾನಿ ನೀಡಿರುವ ಭರವಸೆಯನ್ನು ಅನುಲಕ್ಷಿಸಿ ಕೇಂದ್ರ ಸಚಿವ ಸಂಪುಟಕ್ಕೆ ನೀಡಿರುವ ರಾಜೀನಾಮೆ ಕೈಬಿಡುವ ಬಗ್ಗೆ ಮಮತಾ ಬ್ಯಾನರ್ಜಿ ಅವರು ಇಂದು ಇಲ್ಲಿ ಸ್ಪಷ್ಟ ಇಂಗಿತ ವ್ಯಕ್ತಪಡಿಸಿದರು.

ಅಡುಗೆ ಅನಿಲ, ಡೀಸೆಲ್ ಮತ್ತು ಸೀಮೆಎಣ್ಣೆಗೆ ಹೆಚ್ಚಿಸಿರುವ ಬೆಲೆ ಕಡಿಮೆ ಮಾಡುವ ಬಗ್ಗೆ ಇದೇ 6ರಂದು ಕರೆಯಲಾಗಿರುವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಪ್ರಧಾನಿ ವಾಜಪೇಯಿ ಭರವಸೆ ನೀಡಿದ್ದಾರೆ ಎಂದು ಮಮತಾ ಬ್ಯಾನರ್ಜಿ ಅವರು ಸುದ್ದಿಗಾರರಿಗೆ ತಿಳಿಸಿದರು.

• ಕಾಗವಾಡ: ದಳ(ಯು) ಗೆಲುವು

ಬೆಳಗಾವಿ, ಅ. 3– ಕಾಗವಾಡ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಜನತಾದಳ (ಸಂಯುಕ್ತ) ಪಕ್ಷದ ಭರಮಗೌಡ ಅಲಿಯಾಸ್ ರಾಜು ಕಾಗೆ ಅವರು, ತಮ್ಮ ಸಮೀಪದ ಪ್ರತಿಸ್ಪರ್ಧಿ ಆಡಳಿತಾರೂಢ ಕಾಂಗ್ರೆಸ್‌ನ ವಿಜಯಾತಾಯಿ ಪಾಟೀಲ ಅವರನ್ನು ಕೇವಲ 1,019 ಮತಗಳ ಅಂತರದಿಂದ ಸೋಲಿಸಿ ಗೆಲುವು ಸಾಧಿಸಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 4-10-1950

• ಯುದ್ಧದಿಂದ ಸಮಸ್ಯೆಗಳು ಬಗೆಹರಿಯಲಾರವು

ಲಕ್ನೋ, ಅ. 3– ಪೆಸಿಫಿಕ್ ಸಂಪರ್ಕ ಸಂಸ್ಥೆಯ ಹನ್ನೊಂದನೆಯ ಸಮ್ಮೇಳನವನ್ನು ಲಕ್ನೋ ನಗರದಲ್ಲಿ ಭಾರತದ ಮಹಾ ಪ್ರಧಾನಿ ಪಂಡಿತ್ ನೆಹರೂ ಅವರು ಉದ್ಘಾಟಿಸುತ್ತಾ, 'ಜನರು ಮೂರನೆಯ ಯುದ್ಧದ ಮಾತೆತ್ತುವಾಗ ಕಳೆದ ಮಹಾಯುದ್ಧದ ಪಾಠ ಪ್ರತಿಫಲಗಳೇನೆಂಬುದನ್ನರಿಯಬೇಕು. ಕಳೆದೆರಡು ಮಹಾ ಯುದ್ಧಗಳಿಂದ ವಿಶ್ವದ ಯಾವ ಸಮಸ್ಯೆಗಳೂ ಬಗೆಹರಿಯಲಿಲ್ಲ. ಬದಲಿಗೆ ಹಲವು ಹೊಸ ಸಮಸ್ಯೆಗಳು ಉದ್ಭವಿಸಿದವು' ಎಂದು ನುಡಿದರು.

ಮಾನವ ಕುಲಕ್ಕೆ ವಿನಾಶಕಾರಿ ಉಪದ್ರವವಾದ ಮೂರನೆಯ ಮಹಾ ಯುದ್ಧಕ್ಕೆ ಎಡೆಗೊಡುವಂತಹ ಸಾಹಸ ಕಾರ್ಯಗಳಲ್ಲಿ ತೊಡಗಲು ನಾವು ಉದ್ಯುಕ್ತರಾಗಬಾರದು ಎಂದು ನುಡಿದರು.

• ಮಧ್ಯಭಾರತದ ಹೊಸ ಮಂತ್ರಿ ಮಂಡಲ ರಚನೆ

ಇಂದೋರ್, ಅ. 3– ಮಧ್ಯಭಾರತ ಕಾಂಗ್ರೆಸ್ ಶಾಸನಸಭಾ ಪಕ್ಷದ ನೂತನ ನಾಯಕರಾಗಿ ಚುನಾಯಿತರಾಗಿರುವ ಶ್ರೀ ತಾಕಥ್‌ಮಲ್ ಜೈನ್ ಇಂದು ಬೆಳಿಗ್ಗೆ ಸರ್ದಾರ್ ಪಟೇಲರನ್ನು ಭೇಟಿ ಮಾಡಿ ಅವರೊಂದಿಗೆ ಹೊಸ ಸಚಿವ ಸಂಪುಟದ ರಚನೆ ಬಗ್ಗೆ ಮಾತುಕತೆ ನಡೆಸಿದರು.

'ನಾಗರಿಕ ದೇವೋಭವ' ಅಂದರೆ...



ಜನರಾಜಕಾರಣ

ಸಂದೀಪ್ ಶಾಸ್ತ್ರಿ

ದೇಶದ ಪ್ರಜೆಗಳನ್ನು ಉದ್ದೇಶಿಸಿ ಈಚೆಗೆ ದೂರದರ್ಶನದ ಮೂಲಕ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಹೊಸ ಘೋಷವಾಕ್ಯವನ್ನು ಬಳಸಿದರು. 'ನಾಗರಿಕ ದೇವೋಭವ' ಎನ್ನುವ ಮೂಲಕ ಅವರು ದೇಶದ ಪ್ರಜೆಗಳನ್ನು ದೇವರಿಗೆ ಸಮಾನರೆಂದು ಕರೆದರು. ಜಿಎಸ್‌ಟಿ ಸುಧಾರಣಾ ಕ್ರಮಗಳನ್ನು ಘೋಷಿಸುವ ಸಂದರ್ಭವನ್ನು ಅವರು ಜಾಗತಿಕ ಮಟ್ಟದಲ್ಲಿನ ಬೆಳವಣಿಗೆಗಳ ಬಗ್ಗೆ ಅವಲೋಕಿಸಲು, ಭಾರತವು ಆತ್ಮನಿರ್ಭರ ಆಗುವುದಕ್ಕೆ ಗಮನ ನೀಡಬೇಕಿರುವುದರ ಅಗತ್ಯವನ್ನು ಹೇಳಲು ಬಳಸಿದರು.

ಸುಂಕದ ವಿಚಾರವಾಗಿ ಅಮೆರಿಕ ಮತ್ತು ಭಾರತದ ನಡುವೆ ಸಂಘರ್ಷ ತೀವ್ರವಾದ ಹಿನ್ನೆಲೆಯಲ್ಲಿ ಈ ವಿಚಾರವು ಹೆಚ್ಚಿನ ಮಹತ್ವ ಪಡೆಯುತ್ತದೆ. ದೇಶದ ಆಂತರಿಕ ಶಕ್ತಿಗಳ ಮೇಲೆ ಹೆಚ್ಚು ಗಮನ ಹರಿಸಬೇಕು, ದೇಶದ ಕೆಲವು ಯೋಜನೆಗಳನ್ನು ಆ ದಿಸೆಯಲ್ಲಿ ಮರುಹೊಂದಿಸಬೇಕು ಎಂಬುದಕ್ಕೆ ದೇಶದ ನಾಯಕತ್ವವು ಗಮನಹರಿಸಿದೆ ಎಂಬುದನ್ನು ಮತ್ತೆ ಮತ್ತೆ ಸ್ಪಷ್ಟಪಡಿಸಲಾಗಿದೆ. ಇದಕ್ಕೆ ಇನ್ನಷ್ಟು ಹೆಚ್ಚು ಗಮನ ನೀಡಬೇಕಿದೆ. ಬಹಳ ಶಕ್ತಿಶಾಲಿಯಾದ ಮಾತುಗಳನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ವಾಸ್ತವಕ್ಕೆ ತರುವುದು ಹೇಗೆ? ಈ ಬರಹದ ಕೇಂದ್ರಬಿಂದು ಇದು.

ವಿಕಸಿತ ಭಾರತ ನಿರ್ಮಾಣಕ್ಕಾಗಿನ ಸಿದ್ಧತೆಗಳ ಕೇಂದ್ರದಲ್ಲಿ ಪ್ರಜೆಗಳು ಇದ್ದಾರೆ ಎಂದಾದರೆ, ಈ ಪರಿವರ್ತನೆಯಲ್ಲಿ ಮುಂಚೂಣಿ ಪಾತ್ರವನ್ನು ಅವರು ನಿರ್ವಹಿಸುವಂತಾಗಲು ನಾವು ಸಜ್ಜುಗೊಳಿಸಬೇಕಿರುವ ವ್ಯವಸ್ಥೆ ಹೇಗಿರಬೇಕು? ಈ ವಿಚಾರದ ಬಗ್ಗೆ ಅವಲೋಕನ ನಡೆಸಿದಾಗ ಭಗವದ್ಗೀತೆಯ ಜನಪ್ರಿಯ ಸಾಲುಗಳು ನೆನಪಿಗೆ ಬರುತ್ತವೆ. ಅದರಲ್ಲಿ ಭಗವಂತ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಸಲಹೆ ನೀಡುತ್ತಾನೆ: 'ಏನೆಲ್ಲ ಆಗಿದೆಯೋ ಅವೆಲ್ಲವೂ ಒಳ್ಳೆಯದಕ್ಕೆ ಆಗಿವೆ. ಈಗ ಆಗುತ್ತಿರುವುದು ಒಳ್ಳೆಯದಕ್ಕಾಗಿಯೇ. ಭವಿಷ್ಯದಲ್ಲಿ ಆಗುವುದು ಕೂಡ ಒಳ್ಳೆಯದಕ್ಕಾಗಿಯೇ'. ಕೃಷ್ಣನ ಈ ಮಾತುಗಳು ಭಾರತದ ಪರಿವರ್ತನೆಯನ್ನು ಕೂಡ ಪ್ರತಿಫಲಿಸುತ್ತವೆ.

ಸಮಕಾಲೀನ ಜಾಗತಿಕ ಸಂದರ್ಭದಲ್ಲಿ ಭಾರತದ ಇರುವಿಕೆಗೆ ಸಂಬಂಧಿಸಿದ ಚರ್ಚೆಯನ್ನು ಗಮನಿಸುವಾಗ, ನಾವು ತಳಮಟ್ಟದಿಂದ ಪರಿಶೀಲಿಸಲು ಮುಂದಾಗಬೇಕಾಗುತ್ತದೆ. ಪ್ರಜೆಗಳನ್ನು ದೇವರ ಸಮಕ್ಕೆ ಏರಿಸಬೇಕು ಎಂದಾದರೆ, ಈ ಪ್ರಜೆಗಳು ತಮ್ಮ ದೇಶವನ್ನು ಹೇಗೆ ಕಾಣಬೇಕು? 1992ರಲ್ಲಿ ಮೊದಲ ಬಾರಿಗೆ ವಿದೇಶಕ್ಕೆ ತೆರಳಿದ್ದಾಗ ನಡೆದಿದ್ದ ಒಂದು ಘಟನೆಯು ಈ ಲೇಖಕನಿಗೆ ಸ್ಪಷ್ಟವಾಗಿ ನೆನಪಿದೆ. 'ಭಾರತಕ್ಕೆ ಭವಿಷ್ಯವಿದೆಯೇ' ಎಂಬ ಪ್ರಶ್ನೆಯು ಆಗಾಗ ಕೇಳುತ್ತಿತ್ತು. ಆದರೆ, ಈ ಲೇಖಕ ಈ ವರ್ಷ ವಿದೇಶಕ್ಕೆ ತೆರಳಿದ್ದಾಗ 'ಭಾರತಕ್ಕೆ ಭವಿಷ್ಯವಿದೆ' ಎಂಬ ಮಾತು ಕೇಳಿಸಿತು. ಮೊದಲ ಮಾತು, ಮೂರು ದಶಕಗಳ ಹಿಂದೆ ವಿದೇಶಗಳಲ್ಲಿದ್ದ ಭಾವನೆಯನ್ನು ಹೇಳುತ್ತಿತ್ತು. ಈಗಿನ ಮಾತು, ಈಗ ಇರುವ ವಾಸ್ತವವನ್ನು ಹೇಳುತ್ತಿದೆ.

ಜಾಗತಿಕ ಭೂಪಟದಲ್ಲಿ ಭಾರತವು ಔನ್ನತ್ಯಕ್ಕೆ ಏರಿದ್ದುದು ಭಾರತದ ಜೊತೆಗಿನ ಕೊಡು-ಕೊಳ್ಳುವಿಕೆಯು ಹೆಚ್ಚುತ್ತಿರುವುದರಲ್ಲಿಯೂ ಕಾಣಿಸುತ್ತಿದೆ. ಈಚೆಗೆ ಈ ಲೇಖಕ ವಿದೇಶಕ್ಕೆ ಹೋಗಿದ್ದಾಗ ಸ್ಥಳೀಯರೊಬ್ಬರು ಸಿಕ್ಕಿದ್ದರು. 'ನಾನು ಭಾರತದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದು ಅವರು ಹೇಳಿದರು. 1990ರ ದಶಕದಲ್ಲಿ ಈ ಮಾತು ಕೇಳಲು ಆಗುತ್ತಿರಲಿಲ್ಲ. ಆದರೆ, ಈಗ ಇಂತಹ ಮಾತುಗಳು ಸಾಮಾನ್ಯವಾಗಿವೆ. ವಿದೇಶಗಳಲ್ಲಿನ ಜನ ಈಗ ಇನ್ಫೊಸಿಸ್, ವಿಪ್ರೊ, ಟಾಟಾ, ರಿಲಯನ್ಸ್, ಅದಾನಿ, ಭಾರ್ತಿ, ಕೋಟಕ್ ಮತ್ತು ಬಿರ್ಲಾದಂತಹ ಭಾರತದ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಭಾರತದ ಸರ್ಕಾರಿ ಸ್ವಾಮ್ಯದ ಮುಂಚೂಣಿ ಕಂಪನಿಗಳು ಕೈಗೆತ್ತಿಕೊಂಡ ಯೋಜನೆಗಳಲ್ಲಿ ಕೆಲಸ ಮಾಡಲು ಭಾರತೀಯರು ವಿದೇಶಗಳಲ್ಲಿ ನೆಲೆ ಕಂಡುಕೊಳ್ಳುವುದು ಈಗ ಅಪರೂಪವೇನೂ ಅಲ್ಲ. ದೇಶದ ಈ ಔದ್ಯಮಿಕ

> ಆತ್ಮನಿರ್ಭರ ಗಮ್ಯದ ಕಡೆಗಿನ ಪಯಣಕ್ಕೂ 'ನಾಗರಿಕ ದೇವೋಭವ' ಎನ್ನುವ ಮಾತಿಗೂ ಸಂಬಂಧವಿದೆ. ಪ್ರಜೆಗಳು ದೈವದ ಸ್ಥಾನಕ್ಕೆ ಏರುವುದು ಎಂದರೆ, ಯುವಜನರ ಸಬಲೀಕರಣದ ಮೂಲಕ ದೇಶದ ಅಭಿವೃದ್ಧಿಯ ಔನ್ನತ್ಯವನ್ನು ಸಾಧಿಸುವುದಾಗಿದೆ.

ಸಂಸ್ಥೆಗಳು ವಿದೇಶಗಳಲ್ಲಿ ಅಸ್ತಿತ್ವ ಹೊಂದಿರುವುದು ಜಾಗತಿಕ ಮಟ್ಟದಲ್ಲಿ ನಮ್ಮ ಇರುವಿಕೆಗೆ ಬಲ ನೀಡುವ ಕೆಲಸ ಮಾಡುತ್ತದೆ.

ಹೀಗಿದ್ದರೂ, ಇಲ್ಲಿ ಒಂದಿಷ್ಟು ಎಚ್ಚರಿಕೆಯ ಮಾತುಗಳನ್ನು ಆಡಬೇಕಾಗುತ್ತದೆ. ಏಕೆಂದರೆ ಇಲ್ಲಿ ಇರುವ ಸಂಕಥನವು ಭಾರತದ ಪ್ರಜೆಗಳ ಗೌರವಾರ್ಹತೆಗೆ ಸಂಬಂಧಿಸಿದ್ದು, ಅವರನ್ನು 'ದೈವತ್ವಕ್ಕೆ' ಏರಿಸುವುದಕ್ಕೆ ಸಂಬಂಧಿಸಿದ್ದು. ಈಚೆಗೆ ದೇಶದ ಬಹುತೇಕ ಪ್ರದೇಶಗಳನ್ನು ಒಳಗೊಂಡು ನಡೆದ ಒಂದು ಅಧ್ಯಯನದ ಮೂಲಕ ಎರಡು ಅಂಶಗಳು ಗೊತ್ತಾದವು. ನಾವು ರಫ್ತಿನ ಮೇಲೆ ಗಮನ ನೀಡುತ್ತಿರುವ ಹೊತ್ತಿನಲ್ಲೇ, ಅದರ ಬಗ್ಗೆ ಗಮನ ನೀಡುತ್ತಲೇ ದೇಶಿ ಮಾರುಕಟ್ಟೆಗಳನ್ನು ಬಲಪಡಿಸುವುದರ ಮಹತ್ವವನ್ನು ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರು ಹೇಳಿದರು. ಅಲ್ಲದೆ, ಜಾಗತಿಕ ಮಟ್ಟದಲ್ಲಿ ನಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ವಿಪರೀತ ಆದ್ಯತೆ ನೀಡುವುದಕ್ಕಿಂತ ಹೆಚ್ಚಾಗಿ ಆಂತರಿಕ ಸವಾಲುಗಳ ಬಗ್ಗೆ ಗಮನ ನೀಡಬೇಕು ಎಂಬುದನ್ನು ಅವರು ಮುಖ್ಯವಾಗಿ ಹೇಳಿದರು. ದೇಶಿ ಸವಾಲುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದಾಗ, ಅದರ ಫಲವಾಗಿ ಜಾಗತಿಕ ಮಟ್ಟದಲ್ಲಿ ನಮ್ಮ ಪ್ರತಿಷ್ಠೆಯೂ ಹೆಚ್ಚಾಗುತ್ತದೆ ಎಂಬ ಅಭಿಪ್ರಾಯವು ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರಿಂದ ವ್ಯಕ್ತವಾಯಿತು.

ದೇಶದ ಜನಸಂಖ್ಯೆಯ ಸ್ವರೂಪವನ್ನು ಗಮನದಲ್ಲಿ ಇರಿಸಿಕೊಂಡು ಜಾಗತಿಕವಾಗಿ ಸೃಷ್ಟಿಯಾಗುತ್ತಿರುವ ಅವಕಾಶಗಳು, ಸವಾಲುಗಳ ಬಗ್ಗೆ ಚರ್ಚೆ ನಡೆಯುತ್ತಿರುತ್ತದೆ. ಭಾರತದ ಜನಸಂಖ್ಯೆಯಲ್ಲಿ ಯುವಕರ ಪಾಲು ಹೆಚ್ಚಿದೆ. ಭಾರತೀಯರ ಸರಾಸರಿ ವಯಸ್ಸು ಈಗ 28.8 ವರ್ಷಗಳು. 2050ರ ಸುಮಾರಿಗೆ ಜಾಗತಿಕ ಮಟ್ಟದಲ್ಲಿ ಕೆಲಸ ಮಾಡುವವರಲ್ಲಿ ಶೇ 40ರಷ್ಟು ಮಂದಿ ಭಾರತ ಮೂಲದವರಾಗಿರುತ್ತಾರೆ. ಇದು ಭಾರತಕ್ಕೆ ಒಂದು ಅವಕಾಶ ಸೃಷ್ಟಿಸುತ್ತದೆ. ಆದರೆ ಆ ಪರಿಸ್ಥಿತಿಯ ಪ್ರಯೋಜನ ಪಡೆದುಕೊಳ್ಳಲು ನಾವು ಸಿದ್ಧತೆ ನಡೆಸುತ್ತಿದ್ದೇವೆಯೇ? ಇದು ನಮ್ಮ ಮುಖ್ಯ ಸವಾಲು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದ ಮುಂದೆ ಇರಿಸಿ, ಅದರ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, 'ಭವಿಷ್ಯಕ್ಕಾಗಿ ನಾವು ಸಿದ್ಧತೆ ನಡೆಸುತ್ತಿದ್ದೇವೆಯೇ' ಎಂಬ ಪ್ರಶ್ನೆ ಕೇಳಿದ್ದರು. 'ಯಾವುದನ್ನು ಕಲಿಯಬೇಕು' ಎಂಬ ಸ್ಥಿತಿಯಿಂದ 'ಹೇಗೆ ಕಲಿಯಬೇಕು' ಎಂಬ ಸ್ಥಿತಿಗೆ ಸಾಗುವುದಕ್ಕೆ ಅವರು ಒತ್ತು ನೀಡಿದ್ದರು. ಇದು ಜಾಗತಿಕ ಕಾರ್ಮಿಕ ಶಕ್ತಿಗೆ ನಮ್ಮ ದೇಶದ ಪ್ರಜೆಗಳು ಕೊಡುಗೆ ನೀಡುವುದಕ್ಕೆ ಹಾಗೂ ಅಲ್ಲಿ ಆಗುವ ಬದಲಾವಣೆಗಳಿಗೆ ಸೂಕ್ತವಾಗುವ ಬಗೆಯಲ್ಲಿ ಹೊಂದಿಕೊಳ್ಳುವುದಕ್ಕೆ ಮಹತ್ವದ್ದಾಗುತ್ತದೆ. ಎಲ್ಲ ಸಂದರ್ಭಗಳಲ್ಲಿಯೂ ತರಗತಿಗಳಿಂದ ಉತ್ತರ ಬಯಸದೆ ಸ್ವತಂತ್ರವಾಗಿ ಕಲಿಯುವುದಕ್ಕೆ ಅವರನ್ನು ಸಜ್ಜುಗೊಳಿಸುವುದು ಬಹುಮುಖ್ಯವಾಗುತ್ತದೆ.


2050ರ ವೇಳೆಗೆ ಜಗತ್ತಿನಲ್ಲಿ ಕಾರ್ಮಿಕರ ಬಲದಲ್ಲಿ ಭಾರತೀಯರ ಸಂಖ್ಯೆಯು ಅಂದಾಜು 100 ಕೋಟಿ ಇರಲಿದೆ. ಹೀಗಿರುವಾಗ ಮೂರು ಅಂಶಗಳು ಮತ್ತು ಅವುಗಳಿಗೆ ಸಂಬಂಧಿಸಿದ ಕೆಲವು ಕ್ಷೇತ್ರಗಳ ಮೇಲೆ ಗಮನ ನೀಡಬೇಕಿದೆ. ಜನಸಂಖ್ಯಾ ಸ್ವರೂಪದಲ್ಲಿ ಭಾರತ ಹೊಂದಿರುವ ಅನುಕೂಲವನ್ನು ದಕ್ಕಿಸಿಕೊಳ್ಳುವ ಅಗತ್ಯವನ್ನು ಗುರುತಿಸುವುದು, ದೇಶದ ಮಹತ್ವಾಕಾಂಕ್ಷೆಗಳಿಗೆ ಅನುಗುಣವಾಗಿ ಸ್ಪಂದಿಸುವುದು, ಆತ್ಮನಿರ್ಭರ ಭಾರತ ಗುರಿಯನ್ನು ಭಾರತದ ಮಾನಸಿಕ ವಿಮೋಚನೆಯ ದೃಷ್ಟಿಯಿಂದ ನೋಡುವುದು ಆ ಅಂಶಗಳು.

ಜನಸಂಖ್ಯಾ ಸ್ವರೂಪದ ಅನುಕೂಲವನ್ನು ನಾವು ಪಡೆದುಕೊಳ್ಳಬೇಕು ಎಂದಾದರೆ ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಬಹಳ ಜಾಗರೂಕವಾಗಿ ಸಂಘಟಿಸಬೇಕಾಗಿದೆ. ಇದರ ಬಗ್ಗೆ ಬಹಳಷ್ಟು ಮಾತುಗಳನ್ನು ಹೇಳಲಾಗಿದೆ. ಆದರೆ ಬದಲಾವಣೆಯ ಗತಿಯು ತಳಮಟ್ಟದಲ್ಲಿ ಬಹಳ ನಿಧಾನವಾಗಿದೆ. ಕೌಶಲ, ಸಾಮರ್ಥ್ಯ ಮತ್ತು ವಾಸ್ತವ ಕಲಿಕೆಯ ಮೇಲಿನ ಗಮನವು ಸ್ಥಿರವಾಗಿರಬೇಕು, ಕಲಿಕೆಯ ಮೇಲಿನ ಪ್ರೀತಿಯಿಂದ ಅದು ಹುಟ್ಟಬೇಕು.

ಉನ್ನತ ಶಿಕ್ಷಣ ವಲಯದಿಂದ ಸರ್ಕಾರಗಳು ಹಿಂದಕ್ಕೆ ಸರಿಯುತ್ತಿರುವುದು ಗೋಚರಿಸುತ್ತಿರುವಾಗ, ಖಾಸಗಿ ವಲಯ ಹಾಗೂ ಸರ್ಕಾರಿ ಸಂಸ್ಥೆಗಳ ನಡುವೆ ಅರ್ಥಪೂರ್ಣವಾದ ಪಾಲುದಾರಿಕೆಯೊಂದು ಈ ಹೊತ್ತಿನ ಅಗತ್ಯ ಎಂದು ಅನ್ನಿಸುತ್ತಿದೆ. ಯುವ ಭಾರತವು ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಹಾಗೆಯೇ ಯುವ ಭಾರತವು ಅಸಮಾನತೆಯನ್ನು ಒಳಗೊಂಡಿದೆ ಎಂಬುದೂ ಗೋಚರಿಸುತ್ತಿದೆ. ಮಹತ್ವಾಕಾಂಕ್ಷೆಗಳಿಗೆ ಸ್ಪಂದಿಸುವುದು ಹಾಗೂ ಸಾಮಾಜಿಕ ಸಮಾನತೆಯನ್ನು ಮತ್ತು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವುದು ಮುಂದೆ ನಾವು ಸಾಗಬೇಕಿರುವ ಹಾದಿಯಾಗಿ ಕಾಣುತ್ತಿದೆ.

ನಾವು ಸ್ವಾತಂತ್ರ್ಯದ 100ನೇ ವರ್ಷವನ್ನು ಆಚರಿಸುವ 2047ಕ್ಕೆ ಮೊದಲು ಆತ್ಮನಿರ್ಭರ ಭಾರತ ನಿರ್ಮಾಣ ಆಗಬೇಕು ಎಂಬ ಕರೆಯು ಹಲವು ಅಂಶಗಳಲ್ಲಿ ಸ್ವಾವಲಂಬನೆಯನ್ನು ಬಯಸುತ್ತದೆ. ಹೀಗೆ ಮಾಡುವುದರಿಂದ ಪ್ರಜೆಗಳ ಸಬಲೀಕರಣವು ನಿಜವಾಗಿಯೂ ಆಗುತ್ತದೆ. ಇದರಲ್ಲಿ ಮುಖ್ಯವಾದುದು ಮನಸ್ಸನ್ನು ಮುಕ್ತವಾಗಿಸುವುದು. ಭಗವದ್ಗೀತೆಯತ್ತ ಮತ್ತೆ ಮುಖ ಮಾಡಿದರೆ, ಅರ್ಜುನನಿಗೆ ಭಗವಂತ ಶ್ರೀಕೃಷ್ಣ ಹೇಳಿದ ಮುಖ್ಯವಾದ ಮಾತೊಂದು ಕಾಣುತ್ತದೆ. ತನ್ನ ಗುರುಗಳು, ತನ್ನ ಹಿರಿಯರು, ತನ್ನ ಸಂಬಂಧಿಕರನ್ನು ಯುದ್ಧದಲ್ಲಿ ಎದುರಿಸಬೇಕೇ ಎಂಬ ಗೊಂದಲದಲ್ಲಿ ಅರ್ಜುನ ಇದ್ದಾಗ ಶ್ರೀಕೃಷ್ಣ ಅವನಿಗೆ, ಮುಂದೆ ಸಾಗಬೇಕು ಎಂದಾದರೆ ಮನಸ್ಸನ್ನು ಮುಕ್ತವಾಗಿಸಬೇಕು ಎಂಬುದನ್ನು ಹೇಳಿದ. ಸ್ವಾವಲಂಬನೆ ಅಂದರೆ ಮನಸ್ಸನ್ನು ಮುಕ್ತಗೊಳಿಸುವುದೂ ಸೇರಿದೆ. ಪ್ರಜೆಗಳನ್ನು ದೈವತ್ವಕ್ಕೆ ಏರಿಸಬೇಕು ಎಂದಾದರೆ ನಮ್ಮ ಪ್ರಮುಖ ಗಮನವು ಇದರ ಮೇಲಿರಬೇಕು.

ಕೊನೆಯಲ್ಲಿ ದೂರದೃಷ್ಟಿಯ ನಾಯಕತ್ವದ ಶಕ್ತಿ, ಆಂತರಿಕ ಅನಿವಾರ್ಯಗಳನ್ನು ಪರಿಹರಿಸಿಕೊಳ್ಳುವುದು, ನಮ್ಮ ಮೃದು ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು, ದೇಶದ ಯುವಕರು ಭವಿಷ್ಯವನ್ನು ಎದುರಿಸಲು ಸಜ್ಜಾಗಿರುವಂತೆ ಮಾಡುವುದು ದೇಶದ ಪ್ರಜೆಗಳ ಸಶಕ್ತೀಕರಣದ ಕೇಂದ್ರಭಾಗದಲ್ಲಿ ಇರುತ್ತವೆ. ಸವಾಲುಗಳನ್ನು ಪರಿಹರಿಸಿಕೊಂಡು, ಜಾಗತಿಕ ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೆ ಇದೇ ಮಾರ್ಗ.



ವಾಚಕರ ವಾಣಿ

ಕಾಗದದಲ್ಲೇ ಉಳಿದಿರುವ ಘೋಷಣೆ

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲಾಗಿದೆ. ನಿಯಮ ಉಲ್ಲಂಘಿಸುವವರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಬಗ್ಗೆ ಎಚ್ಚರಿಕೆ ಫಲಕಗಳನ್ನೂ ಅಳವಡಿಸಲಾಗಿದೆ. ಶಿಕ್ಷಣ ಸಂಸ್ಥೆಗಳ 100 ಮೀ. ವ್ಯಾಪ್ತಿಯೊಳಗೆ ಬೀಡಿ, ಸಿಗರೇಟ್ ಹಾಗೂ ತಂಬಾಕು ಉತ್ಪನ್ನಗಳ ಮಾರಾಟ ನಿಷಿದ್ಧ. ಆದರೆ, ಫಲಶ್ರುತಿ ಶೂನ್ಯ. ದೇವಸ್ಥಾನ, ಆಸ್ಪತ್ರೆ ಆವರಣ, ಬಸ್‌ನಿಲ್ದಾಣ, ರೈಲು ನಿಲ್ದಾಣದ ಪಕ್ಕದಲ್ಲಿಯೇ ಬೀಡಿ, ಸಿಗರೇಟ್ ಮಾರಾಟ ಮಾಡಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ.

ಷಣ್ಮುಖ ಎಸ್.ಎಚ್., ಹಳೇ ಬಾತಿ

ಅರ್ಥಪೂರ್ಣವಾಗದ 'ಗಾಂಧಿ ಜಯಂತಿ'

ಅಕ್ಟೋಬರ್ ಅಂದರೆ 'ಗಾಂಧಿ ತಿಂಗಳು' ಎಂದು ಈ ಮೊದಲು ಭಾವಿಸುತ್ತಿದ್ದೆವು. ಈ ಭಾವನೆ ಪ್ರಸ್ತುತ ಕ್ಷೀಣಿಸುತ್ತಿರುವಂತೆ ಕಾಣಿಸುತ್ತಿದೆ. ಪ್ರತಿವರ್ಷ ಗಾಂಧಿ ಜಯಂತಿ ಅಂಗವಾಗಿ ಇಡೀ ತಿಂಗಳು ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗುತ್ತಿತ್ತು. ಶಾಲಾ-ಕಾಲೇಜುಗಳಲ್ಲಿ ಬಾಪುವಿನ ಆದರ್ಶಗಳ ಬಗ್ಗೆ ಕಾರ್ಯಕ್ರಮ, ಆರೋಗ್ಯ ತಪಾಸಣೆ ಶಿಬಿರಗಳನ್ನು ನಡೆಸಲಾಗುತ್ತಿತ್ತು. ಈ ವರ್ಷ ಇಂತಹ ಕಾರ್ಯಕ್ರಮಗಳು ವಿರಳವಾಗಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ, ಗಾಂಧೀಜಿಯನ್ನು ಮರೆತಿವೆ.

ಹರೀಶ್ ಅಮಲಗೊಂದಿ, ಶಿರಾ

'ದೀಪಿಕಾ': ಹೆಣ್ಣುಮಕ್ಕಳಿಗೆ ದೀವಟಿಗೆ

ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದು ಕೇವಲ ಕುಟುಂಬದ ಏಳಿಗೆಯಲ್ಲ, ಸಮಾಜದ ಪ್ರಗತಿಗೂ ಮೆಟ್ಟಿಲಾಗಲಿದೆ. ಅನೇಕ ಹೆಣ್ಣುಮಕ್ಕಳು ಆರ್ಥಿಕ ತೊಂದರೆಯಿಂದ ವಿದ್ಯಾಭ್ಯಾಸ ಮುಂದುವರಿಸಲು ಕಷ್ಟಪಡುತ್ತಾರೆ. ಕಾಲೇಜು ಶುಲ್ಕ ಕಟ್ಟಲಾಗದೆ ಮಧ್ಯದಲ್ಲೇ ಓದು ನಿಲ್ಲಿಸುತ್ತಾರೆ. ಪದವಿ ಅಥವಾ ಸ್ನಾತಕೋತ್ತರ ಶಿಕ್ಷಣವು ಕೆಲವರಿಗೆ ದುರ್ಲಭವಾಗಿದೆ. ಇಂತಹವರಿಗೆ ನೆರವಾಗಲು ರಾಜ್ಯ ಸರ್ಕಾರ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಹಯೋಗದಡಿ 'ದೀಪಿಕಾ ವಿದ್ಯಾರ್ಥಿ ವೇತನ' ಯೋಜನೆ ಜಾರಿಯಾಗಿದ್ದು, ಬಡ ಹೆಣ್ಣುಮಕ್ಕಳ ಪಾಲಿಗೆ ದಾರಿದೀಪವಾಗಿದೆ.

ಮಂಜುನಾಥ ಜಿ. ಪಾಲವ್ವನಹಳ್ಳಿ, ಚಿತ್ರದುರ್ಗ

ಜಾತಿ ನಮೂದು ಗೊಂದಲ ಬಗೆಹರಿಸಿ

ನಮ್ಮ ಹತ್ತಿರದ ಸಂಬಂಧಿಕರು, ಸ್ನೇಹಿತರು, ಅವರ ಮಕ್ಕಳು ಬೇರೆ ಬೇರೆ ಜಾತಿ, ಉಪಜಾತಿಯವರನ್ನು ಮದುವೆಯಾಗಿದ್ದಾರೆ. ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನರನ್ನು ಮದುವೆಯಾದವರೂ ಇದ್ದಾರೆ. ಅಲ್ಲದೆ, ವಿದೇಶಿಗರನ್ನೂ ಮದುವೆಯಾಗಿದ್ದಾರೆ. ಪ್ರಸ್ತುತ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಇವರೆಲ್ಲರ ಮಕ್ಕಳು, ಮೊಮ್ಮಕ್ಕಳು ಯಾವ ಜಾತಿಯಲ್ಲಿ ಗುರುತಿಸಿಕೊಳ್ಳಬೇಕು? ಮದುವೆ ಆಗದ, ಗಂಡನ ಹೆಸರನ್ನೂ ಗುರುತಿಸಿಕೊಳ್ಳದ ತಾಯಂದಿರು, ಐವಿಎಫ್‌ನಿಂದ ಜನಿಸಿದ ಮಕ್ಕಳ ಸಮಸ್ಯೆಯೂ ಇದೇ ಆಗಿದೆ. ಸರ್ಕಾರವು ಈ ಗೊಂದಲವನ್ನು ಬಗೆಹರಿಸಬೇಕಿದೆ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

ಭವ್ಯ ವಿಧಾನಸೌಧ ಮತ್ತು ಕಳಂಕಿತರು

ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರ ಸಚಿವ ಸಂಪುಟದಲ್ಲಿ ಟಿ. ಸಿದ್ದಲಿಂಗಯ್ಯ ಅವರು, ಮರಾಮತ್ ಇಲಾಖೆಯ (ಈಗಿನ ಲೋಕೋಪಯೋಗಿ ಇಲಾಖೆ) ಸಚಿವರಾಗಿದ್ದರು. ಅಧಿವೇಶನದ ಚರ್ಚೆಯೊಂದರಲ್ಲಿ ಮರಾಮತ್ ಇಲಾಖೆಯಲ್ಲಿ ವಿದ್ಯುತ್ ತಂತಿ ಖರೀದಿಗೆ ಸಂಬಂಧಿಸಿದಂತೆ ಅಧಿಕಾರಿಯೊಬ್ಬರ ಮೇಲೆ ಅವ್ಯವಹಾರದ ಆರೋಪ ಕೇಳಿಬರುತ್ತದೆ. ಸುದ್ದಿ ಕೇಳಿದ ತಕ್ಷಣವೇ ನೈತಿಕ ಹೊಣೆ ಹೊತ್ತು ಸಿದ್ದಲಿಂಗಯ್ಯ ರಾಜೀನಾಮೆ ಸಲ್ಲಿಸುತ್ತಾರೆ. ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅವರ ಮಂತ್ರಿಮಂಡಲದಲ್ಲಿ ಯಶೋಧರಮ್ಮ ದಾಸಪ್ಪ ಸಮಾಜ ಕಲ್ಯಾಣ ಸಚಿವೆಯಾಗಿದ್ದರು. ಆಗಿನ ಮೈಸೂರು ರಾಜ್ಯದಲ್ಲಿ ಪಾನ ನಿರೋಧ ಜಾರಿಗೆ ತರಬೇಕೆಂಬ ಉತ್ಕಟ ಆಕಾಂಕ್ಷೆ ಹೊಂದಿದ್ದ ಅವರು, ಜಾರಿಗೆ ಬರದಿದ್ದರೆ 'ರಾಜೀನಾಮೆ ಕೊಡಲು ಸಿದ್ಧ' ಎಂದಿದ್ದರು. ಕಾರಣಾಂತರಗಳಿಂದ ಅದು ಕೈಗೂಡದೆ ಹೋದಾಗ ಮಾತಿಗೆ ಕಟ್ಟುಬಿದ್ದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇಂತಹ ಭವ್ಯ ಪರಂಪರೆ ಹೊಂದಿರುವ ವಿಧಾನಸಭೆಗೆ ಪ್ರಸ್ತುತ ಆಯ್ಕೆಯಾಗಿ ಬರುತ್ತಿರುವ ಜನಪ್ರತಿನಿಧಿಗಳ ಮೇಲೆ ಒಂದಲ್ಲಾ ಒಂದು ಆರೋಪ ಕೇಳಿಬರುತ್ತಿದೆ. ಮುಂದೊಂದು ದಿನ ವಿಧಾನಸೌಧವು, ಕಾರಾಗೃಹ ಸೌಧವಾಗಿ ಪರಿವರ್ತನೆಯಾದರೂ ಅಚ್ಚರಿಪಡಬೇಕಿಲ್ಲ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ಅವರು ಇರೋದೇ ಹಾಗೆ ಸ್ವಾಮಿ...

'ಸಮೀಕ್ಷೆ: ಹಳ್ಳಿ, ಸ್ಲಂ ಜನರೇ ಮೇಲು' ಸುದ್ದಿ (ಪ್ರ.ವಾ., ಅ. 3) ಓದಿದಾಗ ಇದು ಸಾಮಾಜಿಕ ವ್ಯವಸ್ಥೆಯಲ್ಲಿರುವ ದೋಷವೇ ವಿನಾ, ವ್ಯಕ್ತಿಗತ ದೋಷವಲ್ಲ ಎನ್ನುವುದು ಮನದಟ್ಟಾಯಿತು. ಸಾಮಾನ್ಯವಾಗಿ ನಗರದವರು, ಪಟ್ಟಣಿಗರು ಹೊಸಬರನ್ನು ಅನುಮಾನದಿಂದಲೇ ನೋಡುತ್ತಾರೆ. ಇದು ಸರಿ ಕೂಡ. ಏಕೆಂದರೆ ಮೋಸ ಮಾಡುವ ಜನ ಯಾವ ವೇಷಧರಿಸಿ ಮನೆ ಬಾಗಿಲಿಗೆ ಬರುತ್ತಾರೋ ಗೊತ್ತಾಗುವುದಿಲ್ಲ. ಹಾಗಾಗಿ, ಸಮೀಕ್ಷಕರು ನಗರ, ಪಟ್ಟಣದ ಜನರ ಮಾನಸಿಕ ಸ್ಥಿತಿಯನ್ನು ಅರ್ಥ ಮಾಡಿಕೊಂಡರೆ, ಅವರ ಮನಸ್ಸಿಗೆ ಕಿರಿಕಿರಿಯಾಗುವುದಿಲ್ಲ.


ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಆನ್‌ಲೈನ್ ಸ್ನೇಹದಿಂದ ದೂರವಿರಿ

ಆನ್‌ಲೈನ್ ಸ್ನೇಹದಲ್ಲಿ ಸುರಕ್ಷತೆಯ ಕೊರತೆ ಎದ್ದು ಕಾಣುತ್ತದೆ. ಇಲ್ಲಿ ನೀವು ಯಾರೊಡನೆ ಸ್ನೇಹ ಮಾಡಿದ್ದೀರಿ ಎಂಬುದು ಸ್ಪಷ್ಟವಾಗಿಲ್ಲದ ಕಾರಣ, ಕೆಲವರು ನಿಮ್ಮ ವೈಯಕ್ತಿಕ ಮಾಹಿತಿಯ ಕಳವಿಗೆ ಪ್ರಯತ್ನಿಸಬಹುದು. ಕೆಲವೊಮ್ಮೆ ಆನ್‌ಲೈನ್‌ನಲ್ಲಿ ಮಾಡಿದ ಸ್ನೇಹಗಳು ಜಾಲತಂತ್ರದಿಂದ ಸೈಬರ್ ಅಪರಾಧಗಳಿಗೆ ಕಾರಣವಾಗಬಹುದು. ಯುವಜನತೆ ಆನ್‌ಲೈನ್ ಸ್ನೇಹದಿಂದ ದೂರವಿರಿ.

ಲಿಖಿತ ಬಸವರಾಜ್, ತುಮಕೂರು

ಚುರುಮುರಿ



ವಿಲ್ಲು-ಗುಲ್ಲು!

• ತುರುವೇಕೆರೆ ಪ್ರಸಾದ್

'**ಏಯ್** ಈ ವಿಲ್ ಯಾಕ್ರಲಾ ಮಾಡ್ತಾರೆ?' ಕೇಳಿದ ಗುದ್ಲಿಂಗ.

'ತಮ್ ಕಾಲ ಆದ್ಮೇಲೆ ತಮ್ಮ ಆಸ್ತಿ-ಪಾಸ್ತಿ ಬಗ್ಗೆ ಯಾರೂ ಸೋಲ್ ಎತ್ತದಂತೆ ವಿಲ್ ಮಾಡ್ತಾರೆ. ಕೆಲವು ಸಾರಿ ಈ ವಿಲ್ಲೂ ಗುಲ್ಲಾಗುತ್ತೆ'.

'ಈ ತರ ಗುಲ್ಲಾಗಿರೋ ಶಾನೆ ವಿಲ್ಗಳು ಇವೆಯಂತೆ! ಷೇಕ್ಸ್‌ಪಿಯರ್ ತನ್ನ ಹೆಂಡತಿ ಹಾಥ್ವೇಗೆ ತನ್ನ 'ಸೆಕೆಂಡ್ ಬೆಸ್ಟ್ ಬೆಡ್' ಕೊಟ್ಟು ಮಿಕ್ಕದ್ದನ್ನೆಲ್ಲಾ ಮಗಳ ಹೆಸರಿಗೆ ವಿಲ್ ಬರೆದಿದ್ನಂತೆ'.

'ಇನ್ನೊಬ್ರು ಬಿಲಿಯನೇರ್ ಲಿಯೋನ ಅನ್ನೋರು ತಮ್ಮ ನಾಯಿಗೆ 8 ಮಿಲಿಯನ್ ಡಾಲರ್ ಬರೆದು ಹೋಗಿದ್ರಂತೆ'.

'ಅಯ್ಯೋ, ಮನುಷ್ಯ ಜನ್ಮ ದೊಡ್ಡದು ಅನ್ನೋದೇ ಸುಳ್ಳು, ನಾಯಿ, ಬೆಕ್ಕುಗಳಿಂತ ಕಡೆ ನಮ್ ಬಾಳು' ಹಲುಬಿದ ಕಲ್ಲೇಶಿ.

'ಜಾಕ್ ಬೆನ್ನಿ ಅನ್ನೋ ಕಮಿಡಿಯನ್ ಬದುಕಿರುವಷ್ಟು ದಿವಸ ತನ್ನ ಹೆಂಡ್ತಿಗೆ ಒಂದು ಗುಲಾಬಿ ಹೂವು ಕೊಡೋ ತರ ವ್ಯವಸ್ಥೆ ಮಾಡಿ ವಿಲ್ ಮಾಡಿದ್ನಂತೆ'.

'ಇಲ್ ವಿಲ್ ಬರೆಯೋದೇ ಬೇಡ, ಹಾಗೇ ಗುಲಾಬಿ ಕೊಡೋ ಜನ ಇದಾರೆ'.

'ಇದೆಲ್ಲಾ ಬಿಡಿ, ಹೌದಿನಿ ಅನ್ನೋ ಮೆಜಿಶಿಯನ್ ತನ್ನ ಹೆಂಡ್ತಿ ಪ್ರತಿವರ್ಷ ತನ್ನ ಆತ್ಮನ ಕರೆದು ಸೀಆನ್ಸ್ ಮಾಡ್ಬೇಕು ಅಂತ ವಿಲ್ ಬರ್ದಿದ್ನಂತೆ! 10 ವರ್ಷ ಕರುದ್ರೂ ಬರ್ಲಿಲ್ಲ ಅಂತ ಅವನ ಹೆಂಡ್ತಿ ಅದನ್ನ ಕೈ ಬಿಟ್ಲಂತೆ'.

'ಏನೋ ಬರೆಯೋದು ಬರ್ದಿದಾನೆ... ಆಮೇಲೆ ಅವನ ಆತ್ಮಕ್ಕೆ ಹೆಂಡ್ತಿ ಮುಂದೆ ಬರೋಕೆ ಧೈರ್ಯ ಆಗಿಲ್ಲ ಅನ್ಸುತ್ತೆ'.

'ನಮ್ಮಲ್ಲಿ ಊರ್ನೇ ಒತ್ತರಿಸಿಕೊಂಡು ತಮ್ ಹೆಸರಿಗೆ ಬರುಸ್ಕೊಳೋರು ಇದಾರೆ. ಆದರೆ, ಒನ್ನಿ ನೂರ್ಮಿ ಅನ್ನೋನು ಬೂಟು ಕಂಪನೀಲಿದ್ದ ತನ್ನ 7,600 ಷೇರ್‌ನ ತನ್ನೂರಿಗೆ ಒಳ್ಳೇದು ಮಾಡಕ್ಕೆ ಬರೆದಿದ್ನಂತೆ, ನೀನೂ ಯಾಕ್ ಒಂದು ವಿಲ್ ಬರೀಬಾರದು ಪರಮಿ?'

'ಅಯ್ಯೋ! ಉಳ್ಳವರು ಬರೆಯುವರು ವಿಲ್ಲು? ನಾನೇನು ಬರೆಯಲಿ ಎಲ್ಲೆಲ್ಲೂ ಬರೀ ಸ್ಕಲ್ಲು (ಬುರುಡೆ)! ಈಗ ಕಂತೆಗಟ್ಟಲೆ ಇರೋ ಪುಸ್ತಕಗಳನ್ನ ಯಾರಿಗೆ ವಿಲ್ ಬರುದ್ರೂ ಮೂಸ್ ನೋಡಲ್ಲ' ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು

ಸಂಗತ

ಕೀಟನಾಶಕ: ತಪ್ಪು ಮಾಹಿತಿಯಿಂದ ಕಂಟಕ

ಬೆಳೆಗೆ ನೀರು ಹರಿಸುವಷ್ಟೇ ಸಲೀಸಾಗಿ ಕೀಟನಾಶಕಗಳನ್ನೂ ಸುರಿಯಲಾಗುತ್ತಿದೆ. ಇದರ ಪರಿಣಾಮ, ಕೃಷಿ ಉತ್ಪನ್ನಗಳನ್ನು ಸೇವಿಸುವವರ ಮೇಲೆ ಆಗುತ್ತದೆ.

• ಡಾ. ಮುರಳೀಧರ ಕಿರಣಕೆರೆ

ಅನ್ನನಾಳದ ಕ್ಯಾನ್ಸರ್‌ಗಾಗಿ ಕೀಮೊ ಚಿಕಿತ್ಸೆಯಲ್ಲಿದ್ದ ಯುವಕನೊಬ್ಬ ಮಾತಿಗೆ ಸಿಕ್ಕಿದ್ದನು. ಇಷ್ಟು ಸಣ್ಣ ವಯಸ್ಸಿಗೇ ಕ್ಯಾನ್ಸರ್ ಯಾಕೆ ಬಂತು? ಅವನಿಗೆ ಬೀಡಿ, ಸಿಗರೇಟ್ ಅಥವಾ ತಂಬಾಕು ಉತ್ಪನ್ನಗಳನ್ನು ತಿನ್ನುವ ಚಟವಿರಲಿಲ್ಲ. ಕೆದಕುತ್ತಾ ಹೋದಾಗ ಹೊರಬಿದ್ದ ಮಾಹಿತಿ ಆಘಾತಕಾರಿಯಾಗಿತ್ತು!

ಆತ ಬಾಳೆ ಬೆಳೆಗಾರ. 'ಬಾಳೆ ಹೂ ಬಿಟ್ಟ ನಂತರ ಮೂರು ಸಲ ಔಷಧ ಹೊಡೀತೀನಿ. ಇಲ್ಲದಿದ್ದರೆ ಕಾಯಿಗಳು ಮುರುಟಿಕೊಂಡು ಹೋಗ್ತವೆ, ಬೆಳವಣಿಗೆಯೇ ಇರಲ್ಲ. ಔಷಧದ್ದು ಕೆಟ್ಟ ವಾಸನೆ. ಹೊಟ್ಟೆಯೆಲ್ಲಾ ತೊಳ್ಸಿ ವಾಂತಿ ಬಂದ್ಹಾಗೆ ಆಗುತ್ತೆ. ಚರ್ಮಕ್ಕೆ ಹಾರಿದ್ರಂತೂ ವಿಪರೀತ ಉರಿ. ಅದಕ್ಕೇ ಮೂಗು, ಬಾಯಿಗೆಲ್ಲಾ ಬಟ್ಟೆ ಸುತ್ಕಂಡು, ಮೈಕೈ ಸರಿಯಾಗಿ ಮುಚ್ಗಂಡೇ ಔಷಧ ಸಿಂಪಡಿಸೋದು. ಆಮೇಲೆ ಮೂರು ದಿನ ತೋಟದ ಕಡೆ ಹೋಗಲ್ಲ, ಅಷ್ಟು ಘಾಟು ಇರುತ್ತೆ. ಆದರೆ, ಈ ಔಷಧಗಳ ರೇಟು ಕಡಿಮೆ' ಎನ್ನುತ್ತಾ ತನ್ನ ಕಾರ್ಯವನ್ನು ಉತ್ಸಾಹದಿಂದ ವಿವರಿಸತೊಡಗಿದ್ದ. 'ಅದು ಯಾವ ಔಷಧ, ಹೆಸರೇನು?' ಎಂಬ ಪ್ರಶ್ನೆಗೆ ಗೊತ್ತಿಲ್ಲವೆಂಬಂತೆ ತಲೆಯಾಡಿಸಿದ್ದ. 'ಕೃಷಿ ಅಂಗ್ಡೀಲಿ ಬಾಳೆಗೆ ಹೊಡ್ಯೋದು ಅಂದ್ರೆ ಕೊಡ್ತಾರೆ' ಎಂದ. 'ಹೋಗಲಿ, ಯಾವ ಪ್ರಮಾಣದಲ್ಲಿ ಉಪಯೋಗಿಸಬೇಕು ಗೊತ್ತಿದ್ಯಾ?' ಅಂತ ಕೇಳಿದ್ದಕ್ಕೆ, 'ಒಂದು ಬಕೆಟ್ ನೀರಿಗೆ ಎಷ್ಟು ಬಾಟ್ಲು ಹಾಕ್ಬೇಕು ಅಂತ ಅಂಗಡಿಯವನೇ ಕರೆಕ್ಟಾಗಿ ಹೇಳ್ತಾನೆ' ಎಂದಿದ್ದ.

ರೈತನ ಮಾತುಗಳನ್ನು ಕೇಳುತ್ತಿದ್ದಂತೆ ನನ್ನ ಆತಂಕ ಏರತೊಡಗಿತ್ತು! ಬಳಸುವವನಿಗೆ ಪೀಡೆನಾಶಕದ ಹೆಸರಾಗಲಿ, ಹೊಡೆಯಬೇಕಾದ ಸರಿಯಾದ ಪ್ರಮಾಣವಾಗಲಿ ಗೊತ್ತಿಲ್ಲ. ಅಂಗಡಿಯೋನು ಕೊಟ್ಟಿದ್ದೇ ಔಷಧ, ಅವನು ಹೇಳಿದ್ದೇ ವೇದವಾಕ್ಯ! ಈ ವಿಷಕ್ಕೆ ಪದೇ ಪದೇ ತೆರೆದುಕೊಂಡಿದ್ದೇ ಈತನ ಕಾಯಿಲೆಗೆ ಕಾರಣವಿರಬಹುದಾ? ಸಾಧ್ಯತೆಯಂತೂ ಇದ್ದೇ ಇದೆ. ಇನ್ನು ಕೀಟನಾಶಕದ ಮಟ್ಟ ಹೆಚ್ಚಿರುವ ಈ ಬಾಳೆಹಣ್ಣನ್ನು ನಾವು ತಿನ್ನುವುದು ಸುರಕ್ಷಿತವಾ? ಖಂಡಿತವಾಗಿಯೂ ಇಲ್ಲ.

ಇದು ಬಾಳೆಹಣ್ಣಿನ ಕಥೆಯಷ್ಟೇ ಅಲ್ಲ. ನಾವು ಪ್ರತಿನಿತ್ಯ ಉಪಯೋಗಿಸುವ ಬಹುತೇಕ ಹಣ್ಣು, ತರಕಾರಿ, ದವಸ-ಧಾನ್ಯಗಳ ಹಣೆಬರಹವೂ ಇದೇನೆ. ಮಣ್ಣಿನ ಸಾವಯವ ಅಂಶ, ಸತ್ವ ಕಡಿಮೆಯಾದಂತೆ ಬೆಳೆಯ ರೋಗನಿರೋಧಕ ಸಾಮರ್ಥ್ಯ ಕುಸಿಯುತ್ತದೆ. ಪ್ರಕೃತಿ ವೈಪರೀತ್ಯಗಳು, ಹವಾಮಾನ ಬದಲಾವಣೆಯಿಂದಲೂ ಫಸಲಿಗೆ ರೋಗ, ಕೀಟಬಾಧೆಗಳು ಹೆಚ್ಚು. ಉತ್ತಮ ಇಳುವರಿ ಪಡೆಯಬೇಕಿದ್ದರೆ ರಸಗೊಬ್ಬರ, ಕಳೆನಾಶಕ, ಕೀಟನಾಶಕ ಬಳಸುವುದು ಕೃಷಿಕರಿಗೆ ಅನಿವಾರ್ಯ. ಪ್ರಶ್ನೆಯಿರುವುದು, ತಾವು ಬಳಸುತ್ತಿರುವ ಕೀಟನಾಶಕಗಳು, ಅವುಗಳ ವಿಷದ ಘೋರತೆ, ಪರಿಣಾಮಗಳು, ಹಾನಿಯ ಬಗ್ಗೆ ರೈತರಿಗೆ ಅರಿವಿದೆಯೇ ಎನ್ನುವುದು.



ನಿಗದಿಪಡಿಸಿದ ಪ್ರಮಾಣವನ್ನು ಮೀರಿದ ಬಳಕೆ ಬೆಳೆಯನ್ನಷ್ಟೇ ಅಲ್ಲ, ಮಣ್ಣನ್ನೂ ವಿಷಮಯಗೊಳಿಸುತ್ತದೆ. ಮಣ್ಣಿನ ಸ್ವಾಸ್ಥ್ಯ ಕಾಪಾಡುವ ಸೂಕ್ಷ್ಮಾಣುಜೀವಿಗಳು, ಎರೆಹುಳುಗಳಿಗೆ ಮಾರಕವಾಗುತ್ತದೆ. ಇವುಗಳ ನಿರಂತರ ಬಳಕೆಯಿಂದ ಕೀಟಗಳು ಆ ವಿಷಕ್ಕೆ ಪ್ರತಿರೋಧ ಬೆಳೆಸಿಕೊಳ್ಳುತ್ತವೆ. ವಿಷ ಮತ್ತೆ ಮತ್ತೆ ಪರಿಸರಕ್ಕೆ ಸೇರುವುದರಿಂದ ಜನ, ಜಾನುವಾರು, ಜಲಚರಗಳ ಮೇಲೂ ಗಂಭೀರ ಪರಿಣಾಮವಾಗುತ್ತದೆ.

ಬಹುತೇಕ ವಿಷದ ರೂಪದಲ್ಲಿರುವ ಪೀಡೆನಾಶಕ ರಾಸಾಯನಿಕಗಳ ಪ್ರಮಾಣ, ಪರಿಣಾಮಗಳ ಬಗ್ಗೆ ಬೆಳೆಗಾರರಿಗೆ ಸರಿಯಾದ ಮಾಹಿತಿ ನೀಡುವ, ಮಾರ್ಗದರ್ಶನ ಮಾಡುವ ಅರ್ಹತೆ, ಪರಿಣತಿ ಮಾರಾಟಗಾರರಿಗೆ ಇದೆಯಾ? ಮಾರಾಟದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯಾ ಎಂದು ನೋಡಿದರೆ ಗಾಬರಿಯಾಗುತ್ತದೆ! ಒಂದು ಬಕೆಟ್, ಒಂದು ಡ್ರಮ್ ನೀರಿಗೆ ಕಾಲು ಬಾಟಲ್ ಹಾಕಿ, ಒಂದು ಬಾಟಲ್ ಸುರಿಯಿರಿ ಎಂದು ರೈತರಿಗೆ ಬೇಕಾಬಿಟ್ಟಿ ಸಲಹೆ ನೀಡಲಾಗುತ್ತಿದೆ. ಇಂತಿಷ್ಟೇ ಪ್ರಮಾಣದಲ್ಲಿ ಬಳಸಬೇಕು, ಜಾಸ್ತಿಯಾದರೆ ಅಪಾಯ ಎಂಬ ಎಚ್ಚರಿಕೆ ನೀಡುವುದಿಲ್ಲ. ಹೆಚ್ಚು ಮಾರಾಟವಾಗಲಿ ಎಂದು ಹಾಕಬೇಕಾದ ಪ್ರಮಾಣವನ್ನು ಹಿಗ್ಗಿಸಿ ಹೇಳುವುದೂ ಉಂಟು. ಎರಡು ಮೂರು ಬಳಸಿದರೆ ಇಳುವರಿ ಉತ್ತಮವಾಗಿರುತ್ತದೆ ಎಂದು ತಪ್ಪು ಮಾಹಿತಿ ನೀಡಿ ವ್ಯವಹಾರ ಹೆಚ್ಚಿಸಿಕೊಳ್ಳುವುದೂ ಉಂಟು. ಇದೆಲ್ಲದರ ಪರಿಣಾಮದಿಂದಲೇ ಇವತ್ತು ತಿನ್ನುವ ಆಹಾರ ವಿಷಮಯವಾಗಿ ನರ ಸಂಬಂಧಿತ ಸಮಸ್ಯೆಗಳು, ಚಯಾಪಚಯ ದೋಷಗಳು, ಹಾರ್ಮೋನ್‌ಗಳ ಅಸಮತೋಲನ, ಬಂಜೆತನ, ಕ್ಯಾನ್ಸರ್‌ನಂತಹ ಪ್ರಕರಣಗಳ ಸಂಖ್ಯೆ ಏರುತ್ತಿರುವುದು.

ಕೃಷಿ, ತೋಟಗಾರಿಕೆ ಇಲಾಖೆಗಳು, ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಶಿಫಾರಸು ಮಾಡಿದ ಕಳೆ, ಕೀಟನಾಶಕಗಳನ್ನು ನಿಗದಿಪಡಿಸಿದ ಪ್ರಮಾಣದಲ್ಲಿ ಮಾತ್ರ ಉಪಯೋಗಿಸುವಂತೆ ಕೃಷಿಕರಲ್ಲಷ್ಟೇ ಅಲ್ಲ, ಮಾರಾಟಗಾರರಲ್ಲೂ ನಿರಂತರವಾಗಿ ಅರಿವು ಮೂಡಿಸಬೇಕು. ರಾಸಾಯನಿಕಗಳ ದಾಸ್ತಾನು ಮತ್ತು ಮಾರಾಟದ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನಿಗಾ ವ್ಯವಸ್ಥೆಯಾಗಬೇಕು. ಕೀಟಗಳ ನೈಸರ್ಗಿಕ ನಿಯಂತ್ರಣ ಮತ್ತು ಜೈವಿಕ ಪೀಡೆನಾಶಕಗಳನ್ನು ಹೆಚ್ಚು ಹೆಚ್ಚು ಬಳಕೆಗೆ ತರುವ ನಿಟ್ಟಿನಲ್ಲಿ ಸಂಶೋಧನೆಗೆ ಉತ್ತೇಜನ ನೀಡಿ, ಕಡಿಮೆ ವೆಚ್ಚದ, ಪರಿಣಾಮಕಾರಿ ಪರಿಹಾರಗಳನ್ನು ಲಭ್ಯವಾಗಿಸುವುದು ಸರ್ಕಾರ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಜವಾಬ್ದಾರಿ. ಸಾವಯವ ಕೃಷಿಗೆ ಒತ್ತು ನೀಡುವುದರ ಜೊತೆಗೆ ರಾಸಾಯನಿಕಗಳ ಬಳಕೆಗೆ ಕಡಿವಾಣ ಹಾಕಬೇಕಿದೆ. ನಿಸರ್ಗಸ್ನೇಹಿ ಉಪಕ್ರಮಗಳು ಜಾರಿಯಾಗದಿದ್ದರೆ ಸಾಮಾಜಿಕ ಸ್ವಾಸ್ಥ್ಯ ಮರೀಚಿಕೆಯಾದೀತು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಫ್‌ಕೆಸಿಸಿಐಗೆ ಮೊದಲ ಬಾರಿಗೆ ಮಹಿಳಾ ಸಾರಥ್ಯ

‘ಮಹಿಳೆಯರು ತಮ್ಮ ಸಾಮರ್ಥ್ಯ ಸಾಬೀತುಪಡಿಸುತ್ತಲೇ ಇರಬೇಕು

ಸರ್ ಎಂ.ವಿಶ್ವೇಶ್ವರಯ್ಯ ಅವರು ಮೈಸೂರಿನ ದಿವಾನರಾಗಿದ್ದಾಗ ಸ್ಥಾಪಿಸಿದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಗೆ (ಎಫ್‌ಕೆಸಿಸಿಐ) ಶತಮಾನದ ಇತಿಹಾಸವಿದೆ. ಸಂಸ್ಥೆಯ ಅಧ್ಯಕ್ಷ ಸ್ಥಾನವು ಇದೇ ಮೊದಲ ಬಾರಿಗೆ ಮಹಿಳೆಗೆ ದೊರೆತಿದೆ. ಹೈಟೆಕ್ ಮ್ಯಾಗ್ನೆಟಿಕ್ಸ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಪ್ರೈ.ಲಿ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ **ಉಮಾ ರೆಡ್ಡಿ** ಅವರು ಸಂಸ್ಥೆಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ವಿವಿಧ ಸಮಾಜಮುಖಿ ಸಂಘಟನೆಗಳಲ್ಲಿ ಹೊಣೆ ನಿಭಾಯಿಸಿರುವ ಉಮಾ ಅವರು ಎಫ್‌ಕೆಸಿಸಿಐ ಅಧ್ಯಕ್ಷೆಯಾಗಿ ಆಯ್ಕೆ ಆಗಿರುವುದು ಸಹಜವಾಗಿಯೇ ಸುದ್ದಿಯಾಗಿದೆ. ಎಂಜಿನಿಯರಿಂಗ್ ಶಿಕ್ಷಣದ ಕೊನೆಯ ವರ್ಷದಲ್ಲಿ ಇದ್ದಾಗಲೇ ಉದ್ಯಮ ಆರಂಭಿಸಿದ ಉಮಾ ಅವರು ಮೊದಲ ತಲೆಮಾರಿನ ಉದ್ಯಮಿಯೂ ಹೌದು. ಅವರ ಜೊತೆ ‘ಪ್ರಜಾವಾಣಿ’ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ



ಚಿತ್ರ: ಪ್ರಶಾಂತ್ ಎಚ್.ಜಿ.

• ವಿಜಯ್ ಜೋಷಿ

ಪ್ರಜಾವಾಣಿ ಸಂದರ್ಶನ

• ಶತಮಾನದ ಇತಿಹಾಸವಿರುವ ಎಫ್‌ಕೆಸಿಸಿಐ ಮೊದಲ ಮಹಿಳಾ ಅಧ್ಯಕ್ಷರನ್ನು ಈಗ ಕಂಡಿದೆ. ನೀವು ಬಯಸಿದಂತೆ ಈ ಹುದ್ದೆ ಏರಿದ್ದು ಹೇಗೆ? ಮಹಿಳೆ ಈ ಸ್ಥಾನಕ್ಕೆ ಬರಲು ಇಷ್ಟು ತಡವಾಗಿದ್ದಕ್ಕೆ ಕಾರಣವೇನು?

ನಾನು 1980ರ ದಶಕದಲ್ಲಿ ಉದ್ದಿಮೆ ಆರಂಭಿಸಿದಾಗ ಉದ್ಯಮ ಕ್ಷೇತ್ರದಲ್ಲಿ ಇದ್ದ ಮಹಿಳೆಯರ ಪ್ರಮಾಣ ಅಂದಾಜು ಶೇಕಡ 10ರಷ್ಟು. ಆದರೆ, ನೋಂದಣಿ ಇಲ್ಲದ ಅಸಂಘಟಿತ ವಲಯದಲ್ಲಿ ಮಹಿಳೆಯರು ಹೆಚ್ಚಿದ್ದರು. 1992–94 ವೇಳೆಯಲ್ಲಿ ಎಫ್‌ಕೆಸಿಸಿಐನಿಂದ ನನಗೆ ಮಹಿಳಾ ಉದ್ಯಮಿಗಳ ಸಮಿತಿಗೆ ಸದಸ್ಯೆಯಾಗುವಂತೆ ಆಹ್ವಾನ ಬಂತು. ಆಗ ಇಲ್ಲಿ ಇದ್ದ ಹೆಚ್ಚಿನವರು ಪುರುಷರು. ನನ್ನ ಉದ್ಯಮವೂ ಆಗ ಹೊಸದು. ಮುಖ್ಯವಾಹಿನಿಯ ಉದ್ಯಮ ಸಂಘಟನೆಯಲ್ಲಿ ನನಗೆ ಎಲ್ಲವೂ ಆರಾಮ ಅನ್ನಿಸುವಂತೆ ಇರುತ್ತಿರಲಿಲ್ಲ. ಮುಖ್ಯವಾಹಿನಿಯ ಸಂಘಟನೆಯಲ್ಲಿ ನಾನು ಹೇಗಿರಬೇಕು ಎಂಬ ತರಬೇತಿಯೂ ಇರಲಿಲ್ಲ. ಅವೇಕ್‌ನವರು (ಮಹಿಳಾ ಉದ್ಯಮಿಗಳ ಸಂಘಟನೆ) ನನಗೆ 1990ರಲ್ಲಿ ಒಂದು ಪ್ರಶಸ್ತಿ ಪ್ರದಾನ ಮಾಡಿದರು. ಆಗ ಅಲ್ಲಿನ ಅಧ್ಯಕ್ಷರು, ‘ನಿಮಗೆ ಉದ್ದಿಮೆ ನಡೆಸುವುದು ಗೊತ್ತು. ಅದನ್ನು ಇನ್ನೊಬ್ಬ ಮಹಿಳೆ ಜೊತೆ ಹಂಚಿಕೊಂಡರೆ, ಅವರಿಗೆ ಉದ್ದಿಮೆ ಆರಂಭಿಸಲು ನೆರವಾಗುತ್ತದೆ’ ಎಂದರು.

ಇದು ಬಹಳ ಖುಷಿಯ ಕೆಲಸವಾಯಿತು. ಮೂರು ತಿಂಗಳಲ್ಲಿ ಅಲ್ಲಿ ನಾನು ಕಾರ್ಯದರ್ಶಿ ಆಗಿ ಚುನಾವಣೆಯಲ್ಲಿ ಆಯ್ಕೆಯಾದೆ. ಅಲ್ಲಿ ಇದ್ದವರೆಲ್ಲರೂ ಮಹಿಳೆಯರು. ಅಲ್ಲಿ ನನಗೆ ಕೆಲಸ ಮಾಡುವುದು ಆರಾಮ ಆಗುತ್ತಿತ್ತು. ಆಗ ನಾನು ಕ್ಲಿಕ್ (ಎಲೆಕ್ಟ್ರಾನಿಕ್ಸ್ ಉದ್ಯಮಗಳ ಒಕ್ಕೂಟ) ಪದಾಧಿಕಾರಿಯೂ ಆಗಿದ್ದೆ. ಅಲ್ಲಿ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಅದು ನಮ್ಮ ವಿಷಯಕ್ಕೆ ಸಂಬಂಧಿಸಿದ್ದಾಗಿತ್ತು. ಹಾಗಾಗಿ ಅಲ್ಲಿಯೂ ಕೆಲಸ ಮಾಡುವುದು ಸುಲಭವಾಗಿತ್ತು.

2005ರಲ್ಲಿ ನಾನು ಮತ್ತೆ ಎಫ್‌ಕೆಸಿಸಿಐಗೆ ಬಂದೆ. ಆಗ ಹೆಚ್ಚು ಆತ್ಮವಿಶ್ವಾಸ ಇತ್ತು. ಆವತ್ತಿನಿಂದ ಇದುವರೆಗೆ ಇಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದೇನೆ. ಒಂದು ಬಾರಿ ಒಬ್ಬರು ಮಾಜಿ ಅಧ್ಯಕ್ಷರು, ‘ಇಲ್ಲಿ ಮಹಿಳೆಯು ಅಧ್ಯಕ್ಷ ಸ್ಥಾನಕ್ಕೆ ಬರಬೇಕು’ ಎಂದಿದ್ದರು. ಆಗ ನನಗೂ ಹೌದಲ್ಲವೇ ಎಂದು ಅನ್ನಿಸಿತು, ಈ ಮಾತು ಮಹತ್ವಾಕಾಂಕ್ಷೆಯನ್ನು ಉದ್ದೀಪಿಸಿತು. ಆ ನಿಟ್ಟಿನಲ್ಲಿ ಕೆಲಸ ಮಾಡಲು ನಿರ್ಧರಿಸುವಂತೆ ಮಾಡಿತು.

• ಇಂತಹ ಹುದ್ದೆಗಳನ್ನು ಮಹಿಳೆಯರು ಪಡೆಯುವುದು ಸುಲಭವೇನೂ ಅಲ್ಲ. ನಿಮ್ಮ ಅನುಭವ ಹೇಗಿತ್ತು?

ಮಹಿಳೆಯರಿಗೆ ಇಂತಹ ಹುದ್ದೆಗಳಿಗೆ ನೇರ ಪ್ರವೇಶ ಕಲ್ಪಿಸುವ ವ್ಯವಸ್ಥೆ ಸಮಾಜದಲ್ಲಿಲ್ಲ. ಮಹಿಳೆಯರು ತಮ್ಮ ಸಾಮರ್ಥ್ಯವನ್ನು ನಿರಂತರವಾಗಿ ಸಾಬೀತು ಮಾಡುತ್ತಾ ಇರಬೇಕಾಗುತ್ತದೆ. ಇದು ಉದ್ಯಮವಷ್ಟೇ ಅಲ್ಲ; ಎಲ್ಲ ವಲಯಗಳಿಗೂ ಅನ್ವಯವಾಗುವ ಮಾತು. ನನ್ನದೇ ಉದ್ಯಮಕ್ಕೆ ಕರೆ ಮಾಡುವ ಕೆಲವರು, ತಾಂತ್ರಿಕ ಪರಿಣತರಿಗೆ ಕರೆ ವರ್ಗ ಮಾಡುವಂತೆ ಹೇಳುತ್ತಾರೆ! ನಾನೇ ಪರಿಣತೆ ಎಂದು ಅವರಿಗೆ ಹೇಳುತ್ತೇನೆ. ನಮ್ಮ ಸಮಾಜದ ಸ್ವಭಾವ ಇದು. ಇವೆಲ್ಲ ಸರಿಯಾಗಲು ಸಮಯ ಬೇಕಾಗುತ್ತದೆ.

ಈಗ ಎಫ್‌ಕೆಸಿಸಿಐನಲ್ಲಿನ ಸಮಿತಿಯ 72 ಮಂದಿ ಸದಸ್ಯರು ನನ್ನ ಪರವಾಗಿ ನಿಂತು, ಈ ಸ್ಥಾನಕ್ಕೆ ತಂದಿದ್ದಾರೆ. ಅವರೆಲ್ಲ ನನಗೆ ಒಕ್ಕೊರಲಿನಿಂದ ಈ ಸ್ಥಾನಕ್ಕೆ ಬರಲು ನೆರವಾಗಿದ್ದಾರೆ.

ಭಾರತದಲ್ಲಿ ಎಲ್ಲ ರಾಜ್ಯಗಳಲ್ಲೂ ಇಂತಹ ಒಕ್ಕೂಟ ಇದೆ. ನಾನು ಇಂತಹ ಸಂಘಟನೆಯೊಂದರ ಅಧ್ಯಕ್ಷ ಸ್ಥಾನಕ್ಕೆ ಬಂದಿರುವ ಮಹಿಳೆಯರ ಪೈಕಿ ಮೂರನೆಯವಳು. ಮುಂಬೈ, ಗೋವಾ ನಂತರ ಕರ್ನಾಟಕದಲ್ಲಿ ಮಾತ್ರ ಮಹಿಳೆಯು ಅಧ್ಯಕ್ಷ ಸ್ಥಾನಕ್ಕೆ ಬಂದಿದ್ದಾಳೆ. ಆದರೆ ಫಿಕ್ಕಿಯಲ್ಲಿ (ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ) ಮಹಿಳೆಯರು ಮೂರು ಬಾರಿ ಅಧ್ಯಕ್ಷರಾಗಿದ್ದಾರೆ. ಈಗ ಮಹಿಳೆಯರು ಈ ಬಗೆಯ ಜವಾಬ್ದಾರಿಯ ಹುದ್ದೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

• ಮುಂದಿನ ದಿನಗಳಲ್ಲಿ ಎಫ್‌ಕೆಸಿಸಿಐನಂತಹ ಉದ್ಯಮ ಸಂಘಟನೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದೊಡ್ಡ ಹುದ್ದೆಗಳಿಗೆ ಬರಬಹುದೇ?

ಹೌದು, ಖಂಡಿತ. ಇಷ್ಟು ದಿನ ನಮ್ಮಲ್ಲಿ ಐದು ಮಂದಿ ಮಹಿಳೆಯರು 72 ಜನರ ಆಡಳಿತ ಸಮಿತಿಯಲ್ಲಿ ಇರುತ್ತಿದ್ದರು. ಈ ವರ್ಷ ನಾನು ಆಹ್ವಾನಿತ ಸದಸ್ಯರ ವ್ಯವಸ್ಥೆಯಲ್ಲಿ ಒಂದಿಷ್ಟು ಬದಲಾವಣೆ ತರುತ್ತಿದ್ದೇನೆ. ವಿಶೇಷ ಆಹ್ವಾನಿತರಲ್ಲಿ ಐದು ಮಂದಿ ಮಹಿಳೆಯರು ಇರಬೇಕು ಎಂಬ ನಿಯಮ ಮಾಡುತ್ತಿದ್ದೇವೆ. ಆಗ ಒಟ್ಟು ಹತ್ತು ಮಂದಿ ಮಹಿಳೆಯರು ಸಮಿತಿಗೆ ಬರಲಿದ್ದಾರೆ. ಆಗ ಮಹಿಳೆಯರಿಗೆ ಎಫ್‌ಕೆಸಿಸಿಐ ಚಟುವಟಿಕೆಗಳನ್ನು ಹತ್ತಿರದಿಂದ ನೋಡಿದ ಅನುಭವ ಸಿಗುತ್ತದೆ. ಅದು ಅವರಿಗೆ ನಾಯಕತ್ವದ ಹೊಣೆ ಹೊರಲು ಅನುವು ಮಾಡಿಕೊಡುತ್ತದೆ.

ನಾನು ಹಿಂದೆ ಕೆಲವು ಬಾರಿ ಚುನಾವಣೆಯಲ್ಲಿ ಸೋತಿದ್ದೆ, ಇಲ್ಲಿ ಗೆಲ್ಲುವುದು ಸುಲಭವಲ್ಲ. ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಬೇಕು. ಎಫ್‌ಕೆಸಿಸಿಐ ಸಂಘಟನೆಯನ್ನು ಅವರು ನಡೆಸಬಲ್ಲರು ಎಂಬ ವಿಶ್ವಾಸ ಇತರರಿಗೂ ಬರಬೇಕು. ಈ ಸಂಘಟನೆಗೆ ಹೆಚ್ಚು ಸಮಯ ಕೊಡಲು ಮಹಿಳೆಗೆ ಸಾಧ್ಯವೇ ಎಂಬುದನ್ನೂ ಇತರರು ಗಮನಿಸುತ್ತಾರೆ. ನಾನು ಮಹಿಳಾ ಉದ್ಯಮಿ ಎಂಬ ಕಾರಣಕ್ಕೆ ಗ್ರಾಹಕರು ನಮ್ಮ ಉತ್ಪನ್ನ ಖರೀದಿಸುವುದಿಲ್ಲ. ಉತ್ಪನ್ನ ಗುಣಮಟ್ಟ ಹೊಂದಿರಬೇಕು. ಇಲ್ಲಿಯೂ ಹಾಗೇ. ಸಾಮರ್ಥ್ಯ ಸಾಬೀತುಪಡಿಸಬೇಕು. ನಾನು ಸೋತ ನಂತರ ಸುಮ್ಮನೆ ಇದ್ದಿದ್ದರೆ ಈ ಸ್ಥಾನಕ್ಕೆ ಬರುತ್ತಿರಲಿಲ್ಲ. ಮರಳಿ ಯತ್ನ ಎಂಬುದಿರಬೇಕು.

• ಎಫ್‌ಕೆಸಿಸಿಐನಲ್ಲಿ ಪುರುಷ ಸದಸ್ಯರಿಂದ ಸಂಪೂರ್ಣ ಸಹಕಾರ ಸಿಗುತ್ತದೆಯೇ?

ನಮ್ಮ ಯೋಜನೆಯಲ್ಲಿ ನಮಗೆ ನಂಬಿಕೆ ಇದ್ದರೆ, ಅದನ್ನು ಎಲ್ಲರಿಗೂ ವಿವರಿಸಲು, ಮನವೊಲಿಸಲು ಸಾಧ್ಯವಾದರೆ ಎಲ್ಲವೂ ಆಗುತ್ತದೆ. ಇಂತಹ ಕೆಲಸವನ್ನು ನಾನು ಹಿಂದೆಲ್ಲ ಮಾಡಿದ್ದೇನೆ. ನನಗೆ ನನ್ನ ಇಡೀ ಸಮಿತಿಯಿಂದ ಬೆಂಬಲ ಸಿಗುತ್ತದೆ ಎಂಬ ವಿಶ್ವಾಸ ಇದೆ.

• ಅಮೆರಿಕವು ಭಾರತದ ಸರಕುಗಳ ಮೇಲೆ ಹೇರಿರುವ ಭಾರಿ ಪ್ರಮಾಣದ ಸುಂಕದ ಪರಿಣಾಮ ಹೆಚ್ಚಿರುವ ಸಂದರ್ಭದಲ್ಲಿ ನೀವು ಅಧ್ಯಕ್ಷೆ ಆಗಿದ್ದೀರಿ. ಎಂಎಸ್ಎಂಇ ವಲಯಕ್ಕೆ ನೆರವಾಗಲು ಯಾವ ಬಗೆಯಲ್ಲಿ ನೀವು ಸರ್ಕಾರದ ಮಟ್ಟದಲ್ಲಿ ಕೆಲಸ ಮಾಡುತ್ತೀರಿ?

ಸುಂಕದಿಂದಾಗಿ ಜವಳಿ, ಸಮುದ್ರ ಉತ್ಪನ್ನಗಳ ಮೇಲೆ ಹೆಚ್ಚು ಪರಿಣಾಮ ಉಂಟಾಗಿದೆ. ಆದರೆ ಜವಳಿ ಉದ್ಯಮವು ಹೆಚ್ಚಿನ ಮಟ್ಟದಲ್ಲಿ ನಮ್ಮಲ್ಲಿಲ್ಲ. ಅದು ಬೇರೆ ರಾಜ್ಯಗಳಲ್ಲಿ ಹೆಚ್ಚಿದೆ. ಸಮುದ್ರ ಉತ್ಪನ್ನಗಳಲ್ಲಿ ಕೂಡ ನಾವು ಹೆಚ್ಚು ಪಾಲು ಹೊಂದಿಲ್ಲ. ಆದರೆ ನಮ್ಮ ಮನವಿಗಳನ್ನು ಸರ್ಕಾರಗಳಿಗೆ ಸಲ್ಲಿಸಿದ್ದೇವೆ.

ಚೀನಾದಲ್ಲಿ ಕಾಣುವಂತಹ ರಫ್ತು ಪ್ರಮಾಣ ನಮ್ಮಲ್ಲಿ ಇಲ್ಲ. ಇಲ್ಲಿನ ಎಂಎಸ್ಎಂಇ ಉತ್ಪನ್ನಗಳ ಶೇ 40ರಷ್ಟು ರಫ್ತಾಗುತ್ತವೆ, ಇನ್ನುಳಿದ ಶೇ 60ರಷ್ಟು ನಮ್ಮ ದೇಶದ ಮಾರುಕಟ್ಟೆಯಲ್ಲಿ ಬಿಕರಿ ಆಗುತ್ತವೆ. ನಮ್ಮ ಮಾರುಕಟ್ಟೆ ಕೂಡ ದೊಡ್ಡದಾಗಿದೆ. ಹಾಗೆಯೇ ಬೇರೆ ಮಾರುಕಟ್ಟೆಗಳನ್ನು ನಾವು ಇನ್ನೂ ಬಳಸಿಕೊಂಡಿಲ್ಲ. ಸುಂಕವು ನಮಗೆ ಪೆಟ್ಟು ಕೊಟ್ಟಿದೆ ಎಂಬುದು ನಿಜವಾದರೂ ಇದು ಸಾವು ಬದುಕಿನ ಪ್ರಶ್ನೆಯಾಗಿಲ್ಲ. ಕೋವಿಡ್ ಅವಧಿಯಲ್ಲಿ ಎದುರಾದ ಸಂಕಷ್ಟ ಈಗ ಇಲ್ಲ. ನಮಗೆ ಬೇರೆ ಮಾರುಕಟ್ಟೆಗಳೂ ಇವೆ. ಐರೋಪ್ಯ ಒಕ್ಕೂಟ, ಇತರ ದೇಶಗಳ ಜೊತೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ನಾವು ಮುಂದಾಗಿದ್ದೇವೆ. ಈಗಿನ ಪರಿಸ್ಥಿತಿಯು ನಮಗೆ ಇತರ ಮಾರುಕಟ್ಟೆಗಳನ್ನು ಅರಸಲು ನೆರವಾಗಿದೆ. ಸಂಕಟ ಹೇಳುವ ಪತ್ರಗಳೇನೂ ನಮಗೆ ಉದ್ಯಮಗಳ ಕಡೆಯಿಂದ ಬರುತ್ತಿಲ್ಲ. ಇದು ಸಮಾಧಾನಕರ. ❖

• ಮಹಿಳಾ ಉದ್ಯಮಿಗಳಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ನೀವೇನಾದರೂ ಕಾರ್ಯಕ್ರಮ ಆಯೋಜಿಸುವಿರಾ?

ಈಗ ಮಹಿಳಾ ಉದ್ಯಮಿಗಳ ಪ್ರಮಾಣ ಶೇ 15ರಷ್ಟು ಇರಬಹುದು. ಅಸಂಘಟಿತ ವಲಯದಲ್ಲಿ ಅವರು ಹೆಚ್ಚಿದ್ದಾರೆ. ಆದರೆ ಅದು ಲೆಕ್ಕಕ್ಕೆ ಸಿಗುವುದಿಲ್ಲ. ಮಹಿಳೆಯರು ಹಲವು ಕಾರಣಗಳಿಗಾಗಿ ವೃತ್ತಿಯಿಂದ ಹಿಂದೆ ಸರಿಯುತ್ತಾರೆ. ಆದರೆ ಉದ್ಯಮದಲ್ಲಿ ಹೀಗೆ ಹಿಂದೆ ಸರಿಯಲು ಅವಕಾಶವೇ ಇಲ್ಲ. ಹೀಗಾಗಿ ಮಹಿಳೆಯರು ಕಾರ್ಪೊರೇಟ್ ಉದ್ಯೋಗದ ಕಡೆ ಮುಖ ಮಾಡುತ್ತಿದ್ದಾರೆ. ಅವರಿಗೆ ಅಲ್ಲಿ ಕೌಟುಂಬಿಕ ಜವಾಬ್ದಾರಿ ನಿರ್ವಹಿಸುವ ಉದ್ದೇಶಕ್ಕೆ ವೃತ್ತಿಯಲ್ಲಿ ಚಿಕ್ಕ ವಿರಾಮ ತೆಗೆದುಕೊಳ್ಳಲು ಅವಕಾಶ ಇರುತ್ತದೆ. ಕೆಲವರು ಮಾತ್ರ ಒಂದು ವಿರಾಮ ಪಡೆದ ನಂತರ ಉದ್ಯಮಕ್ಕೆ ಬರುತ್ತಿದ್ದಾರೆ.

ದೇಶದಲ್ಲಿ ಆದರ್ಶ ಮಹಿಳಾ ಉದ್ಯಮಿಗಳ ಸಂಖ್ಯೆ ಕಡಿಮೆ. ಈಗ ಇಲ್ಲಿ ನಾನು ಅಧ್ಯಕ್ಷೆ ಎಂಬ ಕಾರಣಕ್ಕೆ ಎಲ್ಲ ಕಾರ್ಯಕ್ರಮಗಳನ್ನು ಮಹಿಳೆಯರಿಗಾಗಿಯೇ ರೂಪಿಸುವುದು ಸರಿಯಾಗದು. ಏಕೆಂದರೆ ಎಫ್‌ಕೆಸಿಸಿಐನ ಮೊದಲ ಕೆಲಸ ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರುವುದು. ಅದು ಇಡೀ ಉದ್ಯಮ ಸಮೂಹಕ್ಕೆ ಸಂಬಂಧಿಸಿರಬೇಕು. ನಮ್ಮ ಶೇ 90ರಷ್ಟು ಸದಸ್ಯರು ಎಂಎಸ್ಎಂಇಗಳು. ನನ್ನ ಆದ್ಯತೆ ಅವುಗಳ ಕಡೆ ಇರುತ್ತದೆ. ಆ ವಲಯದಲ್ಲಿನ ಮಹಿಳಾ ಉದ್ಯಮಿಗಳಿಗೆ ಏನೆಲ್ಲ ಅನುಕೂಲ ಮಾಡಿಕೊಡಲು ಸಾಧ್ಯವೋ ಅವೆಲ್ಲವನ್ನೂ ನಾನು ಮಾಡುವೆ. ಮಹಿಳಾ ಉದ್ಯಮಿಗಳಿಗೆ ಆದ್ಯತೆ ನೀಡುವ ಸಂಘಟನೆಗಳು ಬೇರೆ ಇವೆ. ಆದರೆ ಮಹಿಳಾ ಉದ್ಯಮಿಗಳ ಸಾಧನೆಯನ್ನು ಗುರುತಿಸುವ, ಪ್ರಶಸ್ತಿ ನೀಡಿ ಸನ್ಮಾನಿಸುವ ಕೆಲಸವನ್ನು ನಾವೂ ಮಾಡುತ್ತಿದ್ದೇವೆ. ಅಂತಹ ಪ್ರಶಸ್ತಿಗಳು ಇತರ ಮಹಿಳೆಯರಿಗೆ ಸ್ಫೂರ್ತಿಯಾಗುತ್ತವೆ.

ಮಹಿಳಾ ಉದ್ಯಮಿಗಳಿಗೆ ನಿಮ್ಮ ಕಿವಿಮಾತು ಏನು?

ನಿರಂತರ ಯತ್ನ ಬೇಕು. ಗುರಿಯನ್ನು ತಲುಪಲು ಸುಲಭದ ಮಾರ್ಗ ಇಲ್ಲ. ನಿಮ್ಮನ್ನು ನೀವು ಮತ್ತೆ ಮತ್ತೆ ಸಾಬೀತು ಮಾಡಿಕೊಳ್ಳಬೇಕು. ಏಕೆ ಹೀಗೆ ಎಂಬ ಭಾವನೆ ಇಟ್ಟುಕೊಳ್ಳಬಾರದು. ಕಷ್ಟಪಟ್ಟು ಕೆಲಸ ಮಾಡಬೇಕು. ನಮ್ಮ ಕೆಲಸದ ಮೇಲೆ ಗಮನ ಇಟ್ಟು ಮುಂದಡಿ ಇರಿಸಬೇಕು. ಹಾಗೆ ಮಾಡಿದಾಗ ಗುರಿ ತಲುಪಲು ಸಾಧ್ಯ. ಇದು ಸುಲಭದ ಕೆಲಸ ಅಲ್ಲ ಎಂಬುದು ನಿಜ. ಇದಕ್ಕೆ ಹಲವರ ಸಹಕಾರ ಬೇಕಾಗುತ್ತದೆ. ಮಹಿಳೆಯರಾಗಿ ನಾವು ಕಂದಕಗಳನ್ನು ಮುಚ್ಚಬೇಕು, ಸೇತುವೆಗಳನ್ನು ನಿರ್ಮಿಸಬೇಕು. ಮಹಿಳೆಯರಿಗೆ ಜನರ ಜೊತೆ ಸಂಪರ್ಕ ಸಾಧಿಸುವ ಸಾಮರ್ಥ್ಯ ಹುಟ್ಟಿನಿಂದಲೇ ಬಂದಿರುತ್ತದೆ. ಅದನ್ನು ನಾವು ನಮ್ಮ ಬೆಳವಣಿಗೆಗೆ ಬಳಸಿಕೊಳ್ಳಬೇಕು.

ಶೀತಲ್ ದೇವಿ ಯುವಭಾರತದ ರಾಯಭಾರಿ

ವ್ಯಕ್ತಿ ಚಿತ್ರ

• ರಘುನಾಥ ಚ.ಹ.

ಹೆಬ್ಬೆರಳು ಕಳೆದುಕೊಂಡ ಕಾರಣಕ್ಕಾಗಿ ಅಗ್ರಮಾನ್ಯ ಬಿಲ್ಲಾಳುವಾಗುವ ಅರ್ಹತೆ ಕಳೆದುಕೊಂಡ ಏಕಲವ್ಯನದು ಮಹಾಭಾರತದ ದುರಂತ ಕಥೆ. ಆಧುನಿಕ ಭಾರತದ ಶೀತಲ್ ದೇವಿ ಅವರಿಗೆ ಹೆಬ್ಬೆರಳಿರಲಿ, ಕೈಗಳೇ ಇಲ್ಲ! ಕಾಲುಗಳೇ ಆಕೆಯ ಪಾಲಿಗೆ ಕೈಗಳು. ಈಗ ಬಿಲ್ಲುಗಾರಿಕೆ ಜಗತ್ತಿನಲ್ಲಿ ಆಕೆಯ ಯಶೋಗಾಥೆ ರೂಪುಗೊಂಡಿದೆ.

ದಕ್ಷಿಣ ಕೊರಿಯಾದ ಗ್ವಾಂಗ್‌ಜುನಲ್ಲಿ ನಡೆದ ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನ ಕಾಂಪೌಂಡ್ ವೈಯಕ್ತಿಕ ವಿಭಾಗದ ಅಂತಿಮ ಪೈಪೋಟಿಯಲ್ಲಿ ಶೀತಲ್ ಅವರಿಗೆ ಎದುರಾಳಿ ಆಗಿದ್ದುದು ಟರ್ಕಿಯ ಒಝ್ನೂರ್ ಕ್ಯುರ್ ಗಿರ್ದಿ. ಆಕೆ ಆರ್ಚರಿ ಇತಿಹಾಸ ಕಂಡ ಅಸಾಮಾನ್ಯ ಬಿಲ್ಲುಗಾರ್ತಿಯರಲ್ಲಿ ಒಬ್ಬರು; ವಿಶ್ವದ ನಂಬರ್ 1 ಆರ್ಚರಿಪಟು. ರಸ್ತೆ ಅಪಘಾತದಲ್ಲಿ ಕಾಲಿನ ಚಲನೆ ಕಳೆದುಕೊಂಡರೂ, ಸಾಧನೆಯ ಹಾದಿಯಲ್ಲಿ ನಿರಂತರ ಚಲನಶೀಲತೆ ಉಳಿಸಿಕೊಂಡ ಜೀವನ್ಮುಖಿ. ಅಂತಿಮ ಗುರಿಯಲ್ಲಿ ಪೂರ್ಣ ಅಂಕಗಳು ದೊರೆತು ಗೆಲುವು ಖಚಿತವಾದಾಗ, ಮೊಗ್ಗಿನ ಪಕಳೆಗಳು ಬಿಚ್ಚಿಕೊಂಡು ಹೂವಾದಂತೆ ಶೀತಲ್‌ರ ಮೊಗದಲ್ಲಿ ಅವ್ಯಾಜ ನಗೆಮುಗುಳು. ಅಗ್ರ ಕ್ರಮಾಂಕದ ಕ್ಯುರ್ ಗಿರ್ದಿ ಅವರನ್ನು 146-143 ಅಂಕಗಳಿಂದ ಹಿಂದಿಕ್ಕಿದ ಚಾರಿತ್ರಿಕ ಸಾಧನೆಯ ಜೊತೆಗೆ, ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಕೈಗಳ ಸಹಾಯವಿಲ್ಲದೆ ಚಿನ್ನ ಗೆದ್ದ ಮೊದಲ ಮಹಿಳಾಸ್ಪರ್ಧಿ ಎನ್ನುವ ಅಗ್ಗಳಿಕೆ ಅವರದಾಯಿತು. ಶೀತಲ್ ಅವರ ಸಾಧನೆಗೆ ಕೋಚ್ ಬೆನ್ನುತಟ್ಟಿದರು; ಎದುರಾಳಿ ಗಿರ್ದಿ ಅವರೂ ತಲೆದೂಗಿದರು.

ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಶೀತಲ್ ಇತಿಹಾಸ ಸೃಷ್ಟಿಸಿದ್ದು ಸೆ. 27ರಂದು. ಅದರ ಮರುದಿನ, ಸೆ. 28ರಂದು ನಡೆದ ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತದ ಕ್ರಿಕೆಟಿಗರು ಚಾಂಪಿಯನ್ನರಾದರು. ಪಾಕಿಸ್ತಾನದ ವಿರುದ್ಧ ಜಯಸಾಧಿಸಿದ ಕ್ರಿಕೆಟಿಗರು ಕುಣಿದು ಕುಪ್ಪಳಿಸಿದರು; ಕ್ರೀಡಾಸ್ಫೂರ್ತಿ ಮಣ್ಣುಗೂಡಿಸಿದರು. ಒಂದೇ ದಿನದ ಅಂತರದಲ್ಲಿ ಕ್ರೀಡಾ ಸ್ಫೂರ್ತಿಯನ್ನು ಎತ್ತಿಹಿಡಿದ ಹಾಗೂ ಗಾಸಿಗೊಳಿಸಿದ ಘಟನೆಗಳಿಗೆ ಭಾರತದ ಆಟಗಾರರು ಸಾಕ್ಷಿಯಾದರು. ಕ್ರಿಕೆಟಿಗರಂತೆ ಶೀತಲ್ ಎದುರಾಳಿಯನ್ನು ಹೀನಾಯವಾಗಿ ಕಂಡಿರಲಿಲ್ಲ. ಗಿರ್ದಿ ಅವರ ಬಳಿ ಹೋಗಿ ಬೆಳುದಿಂಗಳಿನಂತಹ ಸ್ನೇಹದ ನಗು ಹಂಚಿಕೊಂಡಿದ್ದರು. ಕ್ರೀಡಾಸ್ಫೂರ್ತಿಯ ಹೊಳಪು ಹೆಚ್ಚಿಸಿದ್ದರು. ಸಾಧನೆಯಲ್ಲಷ್ಟೇ ಅಲ್ಲ; ನಡವಳಿಕೆಯಲ್ಲೂ ಶೀತಲ್ ಚಾಂಪಿಯನ್!

ಆಟದ ಅಂಗಳದಲ್ಲಿ ದ್ವೇಷ ಸಾಧನೆಗೆ ಶೀತಲ್ ಅವರಿಗೂ ನೆಪಗಳಿದ್ದವು. ಶೀತಲ್, ಭಾರತೀಯ ಸೇನೆ ಪೋಷಿಸಿರುವ ಪ್ರತಿಭೆ. ಇದರ ಜೊತೆಗೆ, ಗಿರ್ದಿ ಅವರ ಟರ್ಕಿಗೂ ಪಾಕಿಸ್ತಾನಕ್ಕೂ ಇನ್ನಿಲ್ಲದ ನಂಟು. ಟರ್ಕಿ ನಿರ್ಮಿತ ಡ್ರೋನ್‌ಗಳನ್ನು ಭಾರತದ ಮೇಲಿನ ದಾಳಿಯಲ್ಲಿ ಪಾಕಿಸ್ತಾನ ಬಳಸಿತ್ತು. ದ್ವೇಷ ಸಾಧನೆಗೆ ಇಷ್ಟು ನೆಪ ಸಾಕು. ಆದರೆ, ಆಟದ ಅಂಗಳಕ್ಕೂ ಕ್ರೀಡಾಂಗಣಕ್ಕೂ ಇರುವ ವ್ಯತ್ಯಾಸ ಶೀತಲ್ ಅವರಿಗೆ ತಿಳಿದಂತಿದೆ. ಹೆಸರಿನಲ್ಲಿನ ಶೀತಲತೆ ಅವರ ವ್ಯಕ್ತಿತ್ವದಲ್ಲೂ ಇರುವಂತಿದೆ. ‘ಪದಕಗಳನ್ನು ಗೆಲ್ಲುವುದಷ್ಟೇ ಯಶಸ್ಸಲ್ಲ; ಆಟದಿಂದ ದೊರೆಯುವ ಅನುಭವವೂ ಅಮೂಲ್ಯ’ ಎನ್ನುವ ಅವರ ನುಡಿಗೂ ನಡೆಗೂ ಸದ್ಯಕ್ಕಂತೂ ಹೆಚ್ಚಿನ ವ್ಯತ್ಯಾಸ ಇರುವಂತೆ ಕಾಣುತ್ತಿಲ್ಲ.

ಪ್ಯಾರಾ ಆರ್ಚರಿ ಕ್ಷೇತ್ರದ ಶೃಂಗದಲ್ಲಿ ನಿಂತಿರುವ ಶೀತಲ್ ಹುಟ್ಟಿದ್ದು, ಬೆಳೆದದ್ದು ಬಡ ಕುಟುಂಬದಲ್ಲಿ. ಅಮ್ಮ–ಅಪ್ಪ ರೈತ ಕಾರ್ಮಿಕರು. ಬಡತನದ ಜೊತೆಗೆ, ಹುಟ್ಟಿನಿಂದಲೇ ದೈಹಿಕ ಅಸಾಮರ್ಥ್ಯವನ್ನೂ ಶೀತಲ್ ಬಳುವಳಿಯಾಗಿ ಪಡೆಯಬೇಕಾಯಿತು. ಫೋಕೊಮೆಲಿಯಾ ಎಂಬ ವಿಚಿತ್ರ ಸಮಸ್ಯೆಯಿಂದ ಎರಡೂ ಕೈಗಳು ಅವರಿಗಿಲ್ಲ. ಬಡತನ, ಜನ್ಮದತ್ತ ಅಂಗವೈಕಲ್ಯ, ಮೇಲಾಗಿ ಹೆಣ್ಣು – ಬದುಕೊಂದು ಮುರುಟಲು ಇಷ್ಟು ಕಾರಣಗಳು ಸಾಲದೆ? ಆದರೆ, ಶೀತಲ್ ಗಟ್ಟಿಗಿತ್ತಿ. ಬೆಳೆಯುತ್ತಾ ಹೋದಂತೆ ಕಾಲುಗಳನ್ನೇ ಕೈಗಳನ್ನಾಗಿಸಿಕೊಂಡರು. ಕಾಲುಗಳನ್ನು ಬಳಸಿ ಮರಗಳನ್ನು ಏರುವುದು ಅವರಿಗೆ ಆಟದಂತಾಯಿತು. ಏನನ್ನಾದರೂ ಸಾಧಿಸಬೇಕು ಎನ್ನುವ ಛಲ ದೃಢವಾಯಿತು. ಆ ಕನಸುಗಳ ಹಾದಿಯಲ್ಲಿ ಅವರಿಗೆ ಆರ್ಚರಿ ಎನ್ನುವ ಆಟವೊಂದಿದೆ ಎನ್ನುವ ವಿಷಯ ಸಹೋದರಿಯ ಮೂಲಕ ತಿಳಿಯಿತು.

ಶೀತಲ್‌ರ ಎದೆಗೆ ಬಿದ್ದ ಕನಸಿಗೆ ನೀರೆರೆದದ್ದು, ಅವರ ಬದುಕಿನ ದಿಕ್ಕಿಗೆ ಸ್ಪಷ್ಟ ತಿರುವು ನೀಡಿದ್ದು ಭಾರತೀಯ ಸೇನೆ. ಜಿಲ್ಲಾಕೇಂದ್ರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸೇನಾ ಅಧಿಕಾರಿಗಳ ಕಣ್ಣಿಗೆ ಬಿದ್ದುದು ಶೀತಲ್‌ರ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಜಮ್ಮುವಿನ ಲೋಯಿಧರ್ (Loidhar) ಗ್ರಾಮ ಶೀತಲ್ ಅವರ ತವರು. ಅಲ್ಲಿಂದ ಇನ್ನೂರು ಕಿ.ಮೀ. ದೂರದಲ್ಲಿ ಸೇನೆ ನಡೆಸುತ್ತಿದ್ದ ಅಕಾಡೆಮಿಗೆ ಸೇರಿಕೊಂಡು, ಆರ್ಚರಿಯ ಸೂಕ್ಷ್ಮಗಳನ್ನು ಕಲಿತುಕೊಂಡರು. ವೈಷ್ಣೋದೇವಿ ಮಂದಿರದ ಕ್ರೀಡಾ ಸಮುಚ್ಚಯದಲ್ಲಿ ಕಿರಿಯ ಸೋದರಿಯೊಂದಿಗೆ ನೆಲಸಿ, ಅಭ್ಯಾಸ ನಡೆಸಿದರು. ಅಭಿಷೇಕ್ ಚೌಧರಿ ಮತ್ತು ಕುಲದೀಪ್ ವಧ್ವಾನ್ ಅವರ ಗರಡಿಯಲ್ಲಿ ಆರ್ಚರಿಪಟುವಾಗಿ ಶೀತಲ್ ಪ್ರತಿಭೆ ಅರಳಿತು.

ದಿನಕ್ಕೆ ಆರೇಳು ತಾಸಿನ ದುಡಿಮೆ. ಕಾಯಿಲೆಯಿಂದ ಬಳಲಿದ ದಿನಗಳನ್ನು ಹೊರತುಪಡಿಸಿದರೆ, ಅಭ್ಯಾಸಕ್ಕೆ ರಜೆಯೆಂಬುದೇ ಇಲ್ಲ. ಕಾಲಿನಿಂದ ಬಿಲ್ಲು ಹಿಡಿದು, ಭುಜ ಹಾಗೂ ಗಲ್ಲ ಬಳಸಿಕೊಂಡು ಬಾಣ ಪ್ರಯೋಗಿಸುವ ಪಟ್ಟುಗಳನ್ನು ಶೀತಲ್ ಮೈಗೂಡಿಸಿಕೊಂಡರು. 2021ರಲ್ಲಿ ತರಬೇತಿ ಆರಂಭಗೊಂಡಿತು. ಹನ್ನೊಂದೇ ತಿಂಗಳಲ್ಲಿ ಶೀತಲ್ ರಾಷ್ಟ್ರೀಯ, ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸತೊಡಗಿದರು. ಏಷ್ಯನ್ ಪ್ಯಾರಾಲಿಂಪಿಕ್ ಸಮಿತಿಯಿಂದ 2023ರ ಅತ್ಯುತ್ತಮ ಯುವ ಅಥ್ಲೀಟ್, ‘ಬಿಬಿಸಿ’ಯಿಂದ ‘ಉದಯೋನ್ಮುಖ ಅಥ್ಲೀಟ್–2025’ ಎನ್ನುವ ಗುರುತಿಸುವಿಕೆ ಶೀತಲ್‌ರ ಏರುಗತಿಯ ಬೆಳವಣಿಗೆಯನ್ನು ಸೂಚಿಸುವಂತಿದ್ದವು. 2023ರಲ್ಲಿ ‘ಅರ್ಜುನ ಪ್ರಶಸ್ತಿ’ಯೂ ಅವರ ಬತ್ತಳಿಕೆಗೆ ಸಂದಿತು.

ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಮಿಶ್ರ ಡಬಲ್ಸ್ ಮತ್ತು ಮಹಿಳಾ ಇಂಡಿವಿಜುಯಲ್ ಕಾಂಪೌಂಡ್‌ನಲ್ಲಿ ಚಿನ್ನ, ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ; ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಮಿಶ್ರ ಟೀಮ್ ಕಾಂಪೌಂಡ್‌ನಲ್ಲಿ ರಾಕೇಶ್ ಕುಮಾರ್ ಜೊತೆ ಕಂಚಿನ ಪದಕ–ಹೀಗೆ ಒಂದಾದ ನಂತರ ಮತ್ತೊಂದು ಪದಕ ಕೊರಳು ಸೇರುತ್ತಿದ್ದರೂ, ವಿಶ್ವ ಆರ್ಚರಿ ಪ್ಯಾರಾ ಚಾಂಪಿಯನ್ ಷಿಪ್‌ನಲ್ಲಿನ ಚಿನ್ನದ ಕನವರಿಕೆ ಶೀತಲ್ ಅವರನ್ನು ಕಾಡುತ್ತಲೇ ಇತ್ತು. ಆ ವಿಶ್ವದಾಖಲೆಯ ಚಿನ್ನವೂ ಎಟುಕಿತು. ಚಿನ್ನದ ಸಾಧನೆಗೆ ಮೊದಲು, ತೋಮನ್ ಕುಮಾರ್ ಜೊತೆಗೂಡಿ ಕಾಂಪೌಂಡ್ ಮಿಶ್ರ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದರು.

ಅಂಗವೈಕಲ್ಯವನ್ನು ಬದುಕಿನ ಮಿತಿಯೆಂದು ತಿಳಿದವರೇ ಹೆಚ್ಚು. ಆದರೆ, ಸಾಧನೆಯ ಮೂಲಕ ಬದುಕಿನ ಮಿತಿಗಳನ್ನು ಯಾವ ರೀತಿಯಲ್ಲಿ ದಾಟಬಹುದು ಎನ್ನುವುದಕ್ಕೆ ಶೀತಲ್ ಅವರ ಬದುಕು–ಸಾಧನೆ ನಿದರ್ಶನದಂತಿದೆ. ಅಂಗವಿಕಲರಿಗೆ ಅಥವಾ ಬಾಲಕಿಯರಿಗಷ್ಟೇ ಅವರು ಪ್ರೇರಣೆಯಲ್ಲ; ಯುವಜನರ ಕನಸುಗಳಿಗೆ ಕಣ್ಣು ಕೊಡಬಲ್ಲ ಶಕ್ತಿ ಅವರ ಸಾಧನೆಗಿದೆ. ಶೀತಲ್, ಯುವಭಾರತದ ಸಮರ್ಥ ರಾಯಭಾರಿ. ❖



ಶೀತಲ್ ದೇವಿ

ಪ್ರೇರಣಾದಾಯಿ ಶಿಕ್ಷಕಿ!

ಶೀತಲ್ ಈಗ ಹದಿನೆಂಟರ ಬಾಲೆ (ಜನನ; ಜ. 10, 2007). ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ ಕೈಗಳಿಲ್ಲದ ಏಕೈಕ ಸ್ಪರ್ಧಿ ಅವರು. ಈ ಮೊದಲು, ಪುರುಷರ ವಿಭಾಗದಲ್ಲಿ ಅಮೆರಿಕದ ಮ್ಯಾಟ್ ಸ್ಟುಟ್ಜ್‌ಮನ್ ಅವರು ಇಂಥದ್ದೇ ಸಾಧನೆ ಮಾಡಿದ್ದರು. ಶೀತಲ್‌ರಂತೆ ಸ್ಟುಟ್ಜ್‌ಮನ್ ಅವರೂ ಫೋಕೊಮೆಲಿಯಾ ಬಾಧೆಯಿಂದಾಗಿ ಕೈಗಳನ್ನು ಹೊಂದಿಲ್ಲ. ‘ದಿ ಆರ್ಮ್‌ಲೆಸ್ ಆರ್ಚರ್’ ಎಂದು ಪ್ರಸಿದ್ಧರಾದ ಸ್ಟುಟ್ಜ್‌ಮನ್ ಅವರ ವಿಶ್ವದಾಖಲೆಗಳೇ ಶೀತಲ್ ಅವರ ಸಾಧನೆಗೆ ಪ್ರೇರಣೆ.

‘ನಾನು ಆರ್ಚರಿಯನ್ನು ಆಯ್ಕೆ ಮಾಡಿಕೊಂಡೆ’ ಎಂದು ಶೀತಲ್ ಹೇಳುವುದಿಲ್ಲ. ‘ಆರ್ಚರಿಯೇ ತನ್ನನ್ನು ಆಯ್ಕೆ ಮಾಡಿಕೊಂಡಿತು’ ಎನ್ನುವುದರಲ್ಲಿ ಅವರಿಗೆ ಖುಷಿ. ಹಿಂದೊಮ್ಮೆ, ಶಿಕ್ಷಕಿ ಆಗಬೇಕೆಂದು ಅವರು ಕನಸು ಕಂಡಿದ್ದರು. ಆದುದು ಬಿಲ್ಲುಗಾರ್ತಿ, ಕ್ರೀಡಾಪಟು. ಸಾಧನೆಯ ಉತ್ತುಂಗದಲ್ಲಿ ಇರುವ ಅವರೀಗ ಯುವಸಮುದಾಯಕ್ಕೆ ಪ್ರೇರಣೆ ನೀಡುವ ಶಿಕ್ಷಕಿ! ‘ಸೋಲನ್ನು ಸುಲಭವಾಗಿ ಒಪ್ಪಿಕೊಳ್ಳಬೇಡಿ’ ಎನ್ನುವುದು ಈ ಶಿಕ್ಷಕಿ ಬಾಲಕಿಯರಿಗೆ ಹೇಳುವ ಕಿವಿಮಾತು. ಗೆಲುವಿನ ಸಂದರ್ಭದಲ್ಲಿ ಇರಬೇಕಾದುದು ವಿನಯವೇ ಹೊರತು, ಉನ್ಮಾದವಲ್ಲ ಎನ್ನುವುದು ಅವರ ನಡವಳಿಕೆಯಿಂದ ಯುವಜನ ಕಲಿಯಬೇಕಾದ ಪಾಠ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

04 ಅಕ್ಟೋಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ದ್ವಾದಶಿ ಗಂ. 17-10 **ನಕ್ಷತ್ರ:** ಧನಿಷ್ಠ ಗಂ. 9-10, **ಯೋಗ:** ಶೂಲ ಗಂ. 19-27 **ಕರಣ:** ಬವ ಗಂ. 5-57, ಬಾಲವ ಗಂ 17-10 ಕನ್ಯಾ ಮಾಸದ 17 ನೇ ದಿನ. **ಮಳೆ ನಕ್ಷತ್ರ:** ಹಸ್ತಾ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 10-30, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-15, ಮುಸ್ಲಿಂ ದಿನಾಂಕ: 11 ರಬಿಯುಸ್ಸಾನಿ, ಅದೃಷ್ಟ ಸಂಖ್ಯೆ: 7, 8

ಮೇಷ: ಗೃಹ ನಿರ್ಮಾಣ ಕಾರ್ಯಗಳ ಚಿಂತನೆ ಕಾರ್ಯಗತವಾಗಲಿದೆ. ಆದಾಯವು ಸಾಕಷ್ಟು ಕೂಡಿ ಬರಲಿದೆ. ಬಟ್ಟೆ ಉದ್ಯಮದವರಿಗೆ ಲಾಭ. ಗೃಹದಲ್ಲಿ ಶುಭ, ಮಂಗಳ ಕಾರ್ಯಗಳ ಚಟುವಟಿಕೆಗಳು ತೋರಿ ಬರುವವು.

ವೃಷಭ: ಕೆಲಸ ಕಾರ್ಯಗಳಲ್ಲಿ ಉತ್ಸಾಹ ಹೊಂದುವಿರಿ. ಒತ್ತಡಗಳಿಗೆ ಸಿಲುಕಬೇಡಿ. ಗುಣಾತ್ಮಕ ಕಾರ್ಯಗಳಿಗೆ ಹೆಚ್ಚಿನ ಮಹತ್ವ ನೀಡುವಿರಿ. ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ಕೆಲಸ ಸರಾಗವಾಗಿ ಸಾಗಲಿದೆ.

ಮಿಥುನ: ಋಣಬಾಧೆ, ಖರ್ಚು-ವೆಚ್ಚ, ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಎಲ್ಲಾದರಲ್ಲೂ ಹೆಚ್ಚಿನ ಜಾಗ್ರತೆ ವಹಿಸಿರಿ. ಸಹೋದರರ ಬಗ್ಗೆ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನ ಮಾಡಿ.

ಕರ್ಕಾಟಕ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ಸ್ನೇಹಿತರು ತಪ್ಪಿಸುವರು. ಯಂತ್ರೋಪಕರಣಗಳ ಮಾರಾಟದಿಂದ ಲಾಭ. ಮಕ್ಕಳ ವಿದ್ಯಾಭ್ಯಾಸವು ಒಳ್ಳೆಯ ಹಂತವನ್ನು ತಲುಪಲಿದೆ.

ಸಿಂಹ: ಸಂಬಂಧದಲ್ಲಿ ನಂಬಿಕೆಯನ್ನು ಕಳೆದುಕೊಳ್ಳಬೇಡಿ. ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ.

ಕನ್ಯಾ: ಉತ್ತಮ ಗುಣಮಟ್ಟವನ್ನು ನೋಡಿಯೇ ತೆಗೆದುಕೊಂಡ ಜಮೀನು ಈಗ ಕೈ ಕೊಡುವ ಸಾಧ್ಯತೆ ಇದೆ. ಮಧ್ಯಮ ಮಟ್ಟದ ಜೀವನಕ್ಕೆ ಹಣಕಾಸಿನ ತೊಂದರೆ ಕಾಣುವುದಿಲ್ಲ. ನಿಮ್ಮ ತೀರ್ಮಾನಗಳು ಭಾಗಶಃ ಸರಿಯಾಗಿರುವುದು.

ತುಲಾ: ಕೆಲಸಗಳು ಬೇಡವೆಂದುಕೊಂಡರೂ ಹೆಗಲೇರುವ ಸಾಧ್ಯತೆ ಇದೆ. ಉತ್ಸವಾದಿಗಳಲ್ಲಿ ಭಾಗವಹಿಸುವ ಮೂಲಕ ಮನಸ್ಸಿಗೆ ಒಂದು ರೀತಿಯ ದಿವ್ಯ ಅನುಭೂತಿಯು ದೊರೆಯುತ್ತದೆ.

ವೃಶ್ಚಿಕ: ಸ್ನೇಹಿತರಲ್ಲಿ ಮನಸ್ತಾಪಗಳು ಸರಿಯಾಗದ ಹೊರತು ಅಭಿವೃದ್ಧಿಗೆ ತೊಡಕು ಉಂಟಾಗಬಹುದು. ಸಾಮಾಜಿಕ ಚಟುವಟಿಕೆಗಳು ಹೆಚ್ಚಲಿವೆ. ಪಾಲುದಾರರಲ್ಲಿ ಒಮ್ಮತ ಮೂಡಿಸುವಲ್ಲಿ ಯಶಸ್ವಿಯಾಗುವಿರಿ.

ಧನು: ವೃತ್ತಿರಂಗದಲ್ಲಿ ಅನಿವಾರ್ಯವಾಗಿ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗುವುದು. ನೀವು ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದರು ಊರು ಮನೆಯವರ ವಿಶ್ವಾಸವನ್ನು ಉಳಿಸಿಕೊಳ್ಳುವುದು ಮುಖ್ಯ ಆಗುತ್ತದೆ.

ಮಕರ: ನಂಬಿಕೆ ಹಾಗೂ ದೃಢ ನಿರ್ಧಾರದಿಂದ ಮಾಡಿದ ಕೆಲಸಗಳು ನಿರೀಕ್ಷೆಯನ್ನು ನಿಸ್ಸಂಶಯವಾಗಿ ತಲುಪುತ್ತವೆ. ಉಡುಪು ವಿನ್ಯಾಸಗಾರರು ಕಂಡುಕೊಂಡ ಹೊಸ ಮಾದರಿಯು ಜನರ ಮನಸ್ಸನ್ನು ಗೆಲ್ಲಲಿದೆ.

ಕುಂಭ: ಸಾಂಸಾರಿಕವಾಗಿ ತುಸು ನೆಮ್ಮದಿಯ ಚೇತರಿಕೆಯ ದಿನವನ್ನು ಕಾಣುತ್ತೀರಿ. ಕಾಡಿನಲ್ಲಿ ಕೆಲಸ ಮಾಡುವಾಗ ವಿಷಪೂರಿತ ಜಂತುಗಳ ಮೇಲೆ ನಿಗಾ ಇರಲಿ. ಅಪೇಕ್ಷೆಯಂತೆ ಉತ್ತಮ ಪಾಲುದಾರರು ಸಿಗಲಿದ್ದಾರೆ.

ಮೀನ: ಹಿರಿಯರ ಕೆಲವು ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಯೋಚಿಸುವುದರಲ್ಲಿ ಪ್ರಯೋಜನವಿಲ್ಲ. ಗೃಹ ಪ್ರವೇಶವನ್ನು ಮುಂದುಹಾಕುವುದು ಅನಿವಾರ್ಯ. ನಡೆಯುವ ಸಣ್ಣ ವಿಷಯಗಳು ಜೀವನಕ್ಕೆ ಪಾಠಗಳಾಗುತ್ತವೆ.

ಪದಬಂಧ 6183


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚಿನ್ನದ ಗಣಿಗಾರಿಕೆಗೆ ಈ ಜಿಲ್ಲೆ ಪ್ರಸಿದ್ಧಿಯಾಗಿದೆ(3)
3.ಸೂರ್ಯನು ಹುಟ್ಟಿದ ಕಾಲದಿಂದ ಮುಳುವವರೆಗಿನಕಾಲ(3)
6.ವೃಕ್ಷದ ಹತ್ತಿರ ನಡೆದ ಯುದ್ಧ(3)
7.ಈತ ಆನೆಯನ್ನು ನಡೆಸುವವನು(3)
8.ಮಣ್ಣು ಬೆರೆತ ನೀರು(3)
11.ರಾಜನಿಲ್ಲದ ಸ್ಥಿತಿ(5)
14.ಈ ಪರಿ ಕಾಣುತ್ತಿರುವ ಆವರಣ ರೇಖೆ(3)
17.ಭವ ಕೊನೆಗಿದ್ದಾಗಿನ ಸಾಧ್ಯತೆ!(3)
18. ಮಾತು ಕೇಳಿಸಿಕೊಂಡಿರುವ ಸೋದರಮಾವ(3)
19. ತುಸು ಬೆಳಕಿರುವ ಮುಂಜಾನೆ(3)
20. ರಾಷ್ಟ್ರಧ್ವಜ ತಯಾರಿಸುವ ಈ ಗ್ರಾಮವು ಧಾರವಾಡ ಜಿಲ್ಲೆಯಲ್ಲಿದೆ(3)

ಮೇಲಿಂದ ಕೆಳಕ್ಕೆ

1.ಖಜಾನೆಯ ಮುಖ್ಯಾಧಿಕಾರಿ (4)
2.ದ್ರವ ಒಸರುವ ಜಿಹ್ವೆ(3)
3.ಹರನಿಗೆ ಸಲ್ಲಿಸಿದ ಮುಡಿಪು(3)
4.ತಲೆಗೆ ಸುತ್ತಿಕೊಳ್ಳುವ ಬಟ್ಟೆಯಿಲ್ಲಿ ಉಲ್ಟಾ ಆಗಿದೆ(3)
5. ಆಲೋಚನೆ ಈ ತರ ಬಂದಿದೆ(3)
9.ಸವೆದು ಹೋದುದು(4)
10.ತರಿಯನ್ನು ತರಲು ತೋರಿದ ಅರ್ಜೆಂಟು!(4)
12.ರಾಜಮಂತ್ರಿ ಕಾಲಾಳು ಮುಂತಾದ ಕಾಯಿಗಳಿಂದ ಆಡುವ ಒಳಾಂಗಣ ಆಟ(4)
13.ತತ್ಪರತೆಯಿಂದ ಮಾಡುವ ವಿದ್ಯಾಭ್ಯಾಸ (3)
14.ವನದ ಹತ್ತಿರ ಬೀಸಿದ ಗಾಳಿ (3)
15.ಸೊಕ್ಕು ಹೀಗೆ ಬಂದಿದೆ (3)
16.ರಾಜನ ಸಭೆಯಿದು (3)



6182ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಡಮರುಗ 3.ಮಳಿಗೆ
5.ಯಾತ್ರಿಕ 6.ಸದಾಚಾರ
8.ರಸಪೂರ್ಣ 10.ಅನುರಾಗ
12.ಮರಕತ 13.ಜಾತಕ
16.ವಸನ 17.ದಸಕತ್ತು

ಮೇಲಿಂದ ಕೆಳಕ್ಕೆ:

1.ಡಬ್ಬ 2.ಗಡಿಯಾರ
3.ಮಧುಕರ 4.ಗೆಣ್ಣು
7.ದಾಗೀನು 9.ಪೂರ್ವಿಕ
11.ಗಜಾನನ 12.ಮಕರಂದ
14.ಶವ 15.ತುತ್ತು

ಸುಡೊಕು 6567

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	7	9			3		8	1
				8				9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9	4	
	3		6		1		7	2

6566 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಚಿಟಿಕೆ ಸುದ್ದಿ

ಕೆಎಸ್‌ಆರ್‌ಟಿಸಿ 'ಶಕ್ತಿ' ವಿಶ್ವದಾಖಲೆ



ಬೆಂಗಳೂರು: ರಾಜ್ಯ ಸರ್ಕಾರದ ಮಹಿಳಾ ಸಬಲೀಕರಣ ಯೋಜನೆಯಾದ 'ಶಕ್ತಿ' ಯೋಜನೆಯಡಿ ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ಬಸ್‌ಗಳಲ್ಲಿ ಮಹಿಳೆಯರು 500 ಕೋಟಿ ಬಾರಿ ಉಚಿತವಾಗಿ ಪ್ರಯಾಣ ಮಾಡಿರುವುದು ವಿಶ್ವದಾಖಲೆಗೆ ಸೇರ್ಪಡೆಯಾಗಿದೆ.

ಇತ್ತೀಚೆಗಷ್ಟೇ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಸೇರ್ಪಡೆಯಾಗಿದ್ದ ಉಚಿತ ಪ್ರಯಾಣವು ಈಗ ಇಂಟರ್ ನ್ಯಾಷನಲ್‌ಬುಕ್ ಆಫ್ ರೆಕಾರ್ಡ್‌ನಲ್ಲಿ ವರ್ಲ್ಡ್ ರೆಕಾರ್ಡ್ ಆಫ್ ಎಕ್ಸೆಲೆನ್ಸ್ ಆಗಿ ದಾಖಲಾಗಿದೆ. ನಿಗಮಗಳ ಅಧಿಕಾರಿಗಳು, ನೌಕರರ ಪರಿಶ್ರಮ ಮತ್ತು ಪ್ರಯಾಣಿಕರ ಬೆಂಬಲದಿಂದ ಈ ಸಾಧನೆ ಆಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

6ಕ್ಕೆ ಗೋಪಾಲಗೌಡ ಅಭಿನಂದನಾ ಸಮಾರಂಭ

ಬೆಂಗಳೂರು: ವಿ.ಗೋಪಾಲಗೌಡ ಅಭಿನಂದನಾ ಸಮಿತಿಯು ಇದೇ 6ರಂದು ಸಂಜೆ 4.30ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರಿಗೆ 75ನೇ ವರ್ಷದ ಪ್ರಯುಕ್ತ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ಎನ್. ಪಿಳ್ಳಪ್ಪ, 'ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ. ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಕೆ. ಪಟ್ನಾಯಕ್, ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್, ಕಾನೂನು ಸಚಿವ ಎಚ್.ಕೆ. ಪಾಟೀಲ, ಸುಪ್ರೀಂ ಕೋರ್ಟ್ ವಕೀಲ ಗೋಪಾಲ ಸುಬ್ರಮಣ್ಯಂ ಅತಿಥಿಗಳಾಗಿ ಪಾಲ್ಗೊಳ್ಳುತ್ತಾರೆ. ಹೈಕೋರ್ಟ್ ವಕೀಲ ಎಂ.ಎನ್. ಶೇಷಾದ್ರಿ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ' ಎಂದು ಹೇಳಿದರು.

ನಾಳೆಯಿಂದ ಜ್ಞಾನಯಜ್ಞ ಆರಂಭ

ಬೆಂಗಳೂರು: ಕಬೀರ್ ಟ್ರಸ್ಟ್ ವತಿಯಿಂದ100 ದಿನಗಳ ಜ್ಞಾನ ಯಜ್ಞ ಕಾರ್ಯಕ್ರಮ ಅ.5ರಂದು ಜೆ.ಸಿ. ನಗರದಲ್ಲಿರುವ ಕಬೀರ್ ಆಶ್ರಮದಲ್ಲಿ ಆರಂಭಗೊಳ್ಳಲಿದೆ. 40ನೇ ವರ್ಷದ ಉಪನ್ಯಾಸ ತರಗತಿಗಳು ಇದಾಗಿದ್ದು, 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಈ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ.

ಮಾಹಿತಿಗೆ ಮೊಬೈಲ್: 9845193425 ಸಂಪರ್ಕಿಸಬಹುದು ಎಂದು ಕಬೀರ್ ಟ್ರಸ್ಟ್ ಅಧ್ಯಕ್ಷ ಟಿ. ಪ್ರಭಾಕರ್ ತಿಳಿಸಿದ್ದಾರೆ.

ಸರಣಿ ಸರ ಕಳ್ಳತನ: ಆರೋಪಿ ಸೆರೆ

ಗಿರಿನಗರ ಠಾಣೆ ಪೊಲೀಸರ ಕಾರ್ಯಾಚರಣೆ 80 ಗ್ರಾಂ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಬಳಿಯ ಈಶ್ವರಿನಗರದಲ್ಲಿ ಮಹಿಳೆಯರಿಬ್ಬರನ್ನು ಮಾರಕಾಸ್ತ್ರಗಳಿಂದ ಬೆದರಿಸಿ, 54 ಗ್ರಾಂ ಚಿನ್ನದ ಆಭರಣ ದೋಚಿ ಪರಾರಿಯಾಗಿದ್ದ ಆರೋಪಿಗಳ ಪೈಕಿ, ಪ್ರವೀಣ್ (28) ಎಂಬಾತನನ್ನು ಗಿರಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಯೋಗಾನಂದ್ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಮಹಿಳೆಯರ ಕುತ್ತಿಗೆಗೆ ಮಾರಕಾಸ್ತ್ರವಿಟ್ಟು ಆರೋಪಿಗಳು, ಸರಣಿ ಸರ ಕಳ್ಳತನ ಮಾಡಿದ್ದರು. ಆರೋಪಿಗಳಿಂದ 80 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.



ರಾಮನಗರ ಜಿಲ್ಲೆಯ ಪ್ರವೀಣ್ ಹಾಗೂ ಯೋಗಾನಂದ್ ಇಬ್ಬರೂ ಒಂದೇ ಬೈಕ್‌ನಲ್ಲಿ ತೆರಳಿ ಕಳ್ಳತನ ಮಾಡುತ್ತಿದ್ದರು. ಅಪರಾಧ ಹಿನ್ನೆಲೆಯುಳ್ಳ ಯೋಗಾನಂದ್, ಈ ಹಿಂದೆ ದರೋಡೆ ಪ್ರಕರಣದಲ್ಲಿ ಬಂಧಿತನಾಗಿ ರಾಮನಗರ ಜಿಲ್ಲಾ ಕಾರಾಗೃಹದಲ್ಲಿದ್ದ. ಪ್ರವೀಣ್ ಸಹ ಅಪರಾಧ ಪ್ರಕರಣವೊಂದರಲ್ಲಿ ಬಂಧಿತನಾಗಿ ಅದೇ ಜೈಲಿಗೆ ಹೋಗಿದ್ದ. ಆಗ ಅವರಿಬ್ಬರೂ ಪರಿಚಯವಾಗಿದ್ದರು. ಜೈಲಿನಿಂದ ಬಿಡುಗಡೆಯಾದ ಬಳಿಕ ಆರೋಪಿಗಳು ಸರಗಳವು ಕೃತ್ಯಕ್ಕೆ ಇಳಿದಿದ್ದರು ಎಂದು ಪೊಲೀಸರು ಹೇಳಿದರು.

ಯೋಗಾನಂದ್ ಮತ್ತು ಪ್ರವೀಣ್, ಸೆ.13ರಂದು ರಾತ್ರಿ ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಾ ಗಿರಿನಗರ, ಹನುಮಂತನಗರ, ಕೋಣನಕುಂಟೆ, ಕೊತ್ತನೂರು, ಇಂದಿರಾನಗರ ಠಾಣೆ ವ್ಯಾಪ್ತಿಯ ವಿವಿಧೆಡೆ ಕೆಲವೇ ತಾಸುಗಳ ಅಂತರದಲ್ಲಿ ಐವರು ಮಹಿಳೆಯರ ಸರಗಳನ್ನು ದೋಚಿದ್ದರು ಎಂದು ಪೊಲೀಸರು ಹೇಳಿದರು.

ಸೆ.13ರಂದು ವರಲಕ್ಷ್ಮಿ ಹಾಗೂ ಅವರ ಸ್ನೇಹಿತೆ ಬಿ.ಎಂ.ಉಷಾ ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಋಷಿಕೇಶ ನಗರದ ನಿವಾಸಿಗಳಾದ ಉಷಾ ಮತ್ತು ವರಲಕ್ಷ್ಮಿ ಅವರು ಈಶ್ವರಿ ನಗರದಲ್ಲಿ ಗಣೇಶಮೂರ್ತಿ ಪ್ರತಿಷ್ಠಾಪಿಸಿದ್ದ ಸ್ಥಳದಲ್ಲಿ ನಡೆಯುತ್ತಿದ್ದ ರಸಮಂಜರಿ ಕಾರ್ಯಕ್ರಮ ವೀಕ್ಷಿಸಲು ತೆರಳಿದ್ದರು. ಆಗ ಇಬ್ಬರು ಆರೋಪಿಗಳು, ಇಬ್ಬರು ಮಹಿಳೆಯರನ್ನು ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಹೋಗಿ ಅಡ್ಡಗಟ್ಟಿ, ಲಾಂಗ್‌ನಿಂದ ಬೆದರಿಸಿ ಉಷಾ ಅವರ 9 ಗ್ರಾಂ ಚಿನ್ನದ ಸರ ಕಿತ್ತುಕೊಂಡಿದ್ದರು. ನಂತರ, ವರಲಕ್ಷ್ಮಿ ಅವರ ಸರ ಕಿತ್ತುಕೊಳ್ಳಲು ಯತ್ನಿಸಿದ್ದರು. ಇದಕ್ಕೆ ವರಲಕ್ಷ್ಮಿಅವರು ಪ್ರತಿರೋಧ ತೋರಿದಾಗ ದುಷ್ಕರ್ಮಿಗಳು ಅವರ ಬಲಗೈಗೆ ಮಾರಕಾಸ್ತ್ರದಿಂದ ಹೊಡೆದು 45 ಗ್ರಾಂ ಚಿನ್ನದ ಸರ ದೋಚಿ ಪರಾರಿ ಆಗಿದ್ದರು ಎಂದು ಮೂಲಗಳು ಹೇಳಿವೆ.

ಸುಳಿವು ಕೊಟ್ಟ ಸಿಸಿಟಿವಿ ಕ್ಯಾಮೆರಾ: ಈಶ್ವರಿನಗರದಲ್ಲಿನ ಘಟನಾ ಸ್ಥಳದ ಸಿಸಿಟಿವಿ ಕ್ಯಾಮೆರಾದಲ್ಲಿ ಆರೋಪಿಗಳ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯ ವಿವರ ಸೆರೆಯಾಗಿತ್ತು. ಈ ಸುಳಿವು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ದೋಷಪೂರಿತ ನಂಬರ್ ಪ್ಲೇಟ್ ಆಟೊ ಚಾಲಕನ ವಿರುದ್ಧ ಎಫ್‌ಐಆರ್




ಬೆಂಗಳೂರು: ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿಕೊಂಡು ಸಂಚರಿಸುತ್ತಿದ್ದ ಆಟೊ ಚಾಲಕರೊಬ್ಬರ ವಿರುದ್ಧ ಮಾಗಡಿ ರಸ್ತೆ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಮಾಗಡಿ ರಸ್ತೆ ಠಾಣೆ ಎಎಸ್‌ಐ ಕೆ.ಆರ್.ಕುಮಾರ್ ಅವರು ನೀಡಿದ ದೂರಿನ ಮೇರೆಗೆ ಕೆ.ಜಿ.ಹಳ್ಳಿ ನಿವಾಸಿ, ಆಟೊ ಚಾಲಕ ಶಫೀಕ್ ಪಾಷಾ ಎಂಬುವವರ ವಿರುದ್ಧ ಬಿಎನ್‌ಎಸ್ 318(4) (ವಂಚನೆ) ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆಟೊ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಸೆ.29ರಂದು ರಾತ್ರಿ 9.30ರ ಸುಮಾರಿಗೆ ಎಎಸ್‌ಐ ಕುಮಾರ್ ಮತ್ತು ಸಿಬ್ಬಂದಿ ರಾತ್ರಿ ಗಸ್ತು ನಡೆಸುತ್ತಿದ್ದರು. ಆಗ ಬಾತ್ಮೀದಾರರ ಮಾಹಿತಿ ಮೇರೆಗೆ ರಾಜಾಜಿನಗರದ ಆರನೇ ಬ್ಲಾಕ್‌ನ ರಾಜಕುಮಾರ್ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಲಾಗಿದ್ದ ಆಟೊ ಗಮನಿಸಿದಾಗ, ನಂಬರ್ ಪ್ಲೇಟ್ ವಿರೂಪಗೊಳಿಸಿರುವುದು ಪತ್ತೆಯಾಗಿತ್ತು. ಆಗ ಆಟೊ ಚಾಲಕನನ್ನು ವಿಚಾರಣೆ ನಡೆಸಿದಾಗ, ಗೊಂದಲದ ಹೇಳಿಕೆ ನೀಡಿದ್ದರು. ನಂತರ, ಆಟೊ ಪರಿಶೀಲಿಸಿದಾಗ ಎರಡೂ ನಂಬರ್ ಪ್ಲೇಟ್‌ಗಳು ಬೇರೆ ಬೇರೆ ರೀತಿಯಲ್ಲಿದ್ದವು. ನಂಬರ್ ಪ್ಲೇಟ್ ತಿದ್ದಿರುವುದು ಪತ್ತೆಯಾಗಿತ್ತು.

'ಚಾಲಕನನ್ನು ಪ್ರಶ್ನಿಸಿದಾಗ ಮಕ್ಕಳು ಸ್ಕೆಚ್ ಪೆನ್‌ನಿಂದ ಈ ರೀತಿ ಮಾಡಿದ್ದಾರೆ' ಎಂದು ಸುಳ್ಳು ಹೇಳಿದ್ದರು. ಹೀಗಾಗಿ ಆಟೊವನ್ನು ಜಪ್ತಿ ಮಾಡಲಾಗಿದೆ. ಚಾಲಕನಿಗೆ ನೋಟಿಸ್ ಕೊಟ್ಟು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಕಳುಹಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಬೆಂಕಿ ಅವಘಡ: ₹30 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು ಭಸ್ಮ



ಬೆಂಗಳೂರು: ಉಲ್ಲಾಳ ಉಪನಗರ ಬಳಿಯ ಸರ್.ಎಂ.ವಿಶ್ವೇಶ್ವರಯ್ಯ ಲೇಔಟ್‌ನ ಮನೆಯೊಂದರಲ್ಲಿ ಶುಕ್ರವಾರ ಮುಂಜಾನೆ ಅಗ್ನಿ ಅವಘಡ ಸಂಭವಿಸಿದ್ದು, ಮನೆಯಲ್ಲಿದ್ದ ಪೀಠೋಪಕರಣಗಳು ಭಸ್ಮವಾಗಿವೆ.

ಬಾಲಾಜಿ ಅವರ ಮನೆಯಲ್ಲಿ ಅವಘಡ ಸಂಭವಿಸಿದೆ. ₹30 ಲಕ್ಷ ಮೌಲ್ಯದ ವಸ್ತುಗಳು ಭಸ್ಮವಾಗಿವೆ ಎಂದು ಅಂದಾಜಿಸಲಾಗಿದೆ.

ಬಾಲಾಜಿ ಅವರಿಗೆ ಸೇರಿದ ಮೂರು ಅಂತಸ್ತಿನ ಮನೆಯ ಮೊದಲ ಅಂತಸ್ತಿನಲ್ಲಿ ಶುಕ್ರವಾರ ಮುಂಜಾನೆ ನಾಲ್ಕು ಗಂಟೆ ಸುಮಾರಿಗೆ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ. ನಂತರ, ಎರಡು ಮತ್ತು ಮೂರನೇ ಅಂತಸ್ತಿಗೆ ಬೆಂಕಿ ವ್ಯಾಪಿಸಿದೆ. ಈ ವೇಳೆ ಎರಡನೇ ಅಂತಸ್ತಿನ ರೂಂನಲ್ಲಿ ಮಲಗಿದ್ದ ಬಾಲಾಜಿ ಅವರು ಕೂಡಲೇ ಮನೆಯಿಂದ ಹೊರಗೆ ಓಡಿ ಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಾಲಾಜಿ ಅವರು ಅಗ್ನಿಶಾಮಕ ನಿಯಂತ್ರಣ ಕೊಠಡಿಗೆ ಕರೆ ಮಾಡಿ, ಅಗ್ನಿ ಅನಾಹುತದ ವಿಷಯ ತಿಳಿಸಿದ್ದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತರುವಲ್ಲಿ ಯಶಸ್ವಿಯಾದರು. ಅಷ್ಟರಲ್ಲಿ ಪೀಠೋಪಕರಣಗಳು, ಎಲೆಕ್ಟ್ರಾನಿಕ್ ವಸ್ತುಗಳು, ಗೃಹೋಪಯೋಗಿ ವಸ್ತುಗಳು ಸುಟ್ಟು ಹೋಗಿದ್ದವು ಎಂದು ಸ್ಥಳೀಯರು ತಿಳಿಸಿದ್ದಾರೆ. ಅಗ್ನಿ ಅವಘಡಕ್ಕೆ ನಿಖರ ಕಾರಣ ಗೊತ್ತಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಜ್ಞಾನಭಾರತಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಸುದ್ದಿ 2 ನಿಮಿಷ

ಜಿಮ್ ತರಬೇತುದಾರನ ಮೇಲೆ ಹಲ್ಲೆ: ಮೂವರ ಸೆರೆ

ಬೆಂಗಳೂರು: ಜಿಮ್‌ಗೆ ನುಗ್ಗಿ ತರಬೇತುದಾರರೊಬ್ಬರಿಗೆ ಥಳಿಸಿದ್ದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹುಸ್ಕೂರಿನ ಗೌತಮ್(32), ಗೌತಮ್(30) ಮತ್ತು ಅರುಣ್(30) ಬಂಧಿತರು. ಜಿಮ್ ತರಬೇತುದಾರ, ಆನೇಕಲ್ ನಿವಾಸಿ ಸಂದೀಪ್ ಅವರ ಮೇಲೆ ಸೆ.23ರಂದು ಆರೋಪಿಗಳು ಹಲ್ಲೆ ನಡೆಸಿ ಪರಾರಿ ಆಗಿದ್ದರು. ಸಂದೀಪ್ ಅವರ ಸಂಬಂಧಿಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದರು.

ಸಂದೀಪ್ ಅವರು ಹೆಬ್ಬಗೋಡಿಯಲ್ಲಿ ಜಿಮ್ ನಡೆಸುತ್ತಿದ್ದಾರೆ. ಅರುಣ್ ಅವರ ಸಹೋದರಿಯನ್ನು ಪರಿಚಯಿಸಿಕೊಂಡಿದ್ದ ಸಂದೀಪ್, ಅವರೊಂದಿಗೆ ಚಾಟಿಂಗ್ ನಡೆಸುತ್ತಿದ್ದರು ಎನ್ನಲಾಗಿದೆ. ಈ ವಿಚಾರ ತಿಳಿದು ಅರುಣ್, ಸಂದೀಪ್ ಅವರಿಗೆ ಎಚ್ಚರಿಕೆ ನೀಡಿದ್ದ. ಆದರೂ ಸಂದೀಪ್ ಚಾಟಿಂಗ್ ಮುಂದುವರಿಸಿದ್ದರು. ಸೆ.23ರಂದು ತನ್ನ ಸ್ನೇಹಿತರ ಜತೆ ಜಿಮ್‌ಗೆ ಬಂದಿದ್ದ ಅರುಣ್, ಸಂದೀಪ್ ಅವರ ಮೇಲೆ ಹಲ್ಲೆ ನಡೆಸಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಸಂದೀಪ್ ಅವರನ್ನು ಜಿಮ್‌ನಲ್ಲಿದ್ದವರು ಆಸ್ಪತ್ರೆಗೆ ದಾಖಲಿಸಿದ್ದರು ಎಂದು ಮೂಲಗಳು ಹೇಳಿವೆ.



'ಸಂದೀಪ್ ಅವರು ಅಪಾಯದಿಂದ ಪಾರಾಗಿದ್ದಾರೆ. ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಹೆಬ್ಬಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಿಬಿಎ ವಾರ್ಡ್ ಕರಡಿನಲ್ಲಿ ಕೆಂಗೇರಿ ಹೆಸರಿಲ್ಲ'

ಕೆಂಗೇರಿ: 'ಜಿಬಿಎ ವಾರ್ಡ್ ವಿಂಗಡಣಾ ಕರಡು ಅಧಿಸೂಚನೆಯಲ್ಲಿ ಕೈಬಿಟ್ಟಿರುವ ಕೆಂಗೇರಿ ಹೆಸರನ್ನು ಮರು ಸೇರ್ಪಡೆಗೊಳಿಸಬೇಕು' ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ರುದ್ರೇಶ್ ಒತ್ತಾಯಿಸಿದರು.

'ನಗರದ ಗ್ರಾಮಾಂತರ ಜನರ ಪಾಲಿಗೆ ಕೇಂದ್ರ ಸ್ಥಾನದಂತಿದ್ದ ಕೆಂಗೇರಿಗೆ ಶತಮಾನಗಳ ಇತಿಹಾಸವಿದೆ. ಮೈಸೂರು ಅರಸರು ಭೇಟಿ ನೀಡುತ್ತಿದ್ದ ಬಂಡೇಮಠ, ಗಾಂಧೀಜಿ ಉದ್ಘಾಟಿಸಿದ್ದ ಬಾವಿ, ಕೆಂಗಲ್ ಹನುಮಂತಯ್ಯ ಓದಿದ ಶಾಲೆ, ನೊಬೆಲ್ ಪ್ರಶಸ್ತಿ ಪುರಸ್ಕೃತ ಸಿ.ವಿ.ರಾಮನ್ ಅವರ ತೋಟ ಇಲ್ಲಿದೆ. ಇತಿಹಾಸ ಹೊಂದಿರುವ ಕೆಂಗೇರಿ ಹಿರಿಮೆಯನ್ನು ನಿರ್ನಾಮ ಮಾಡಲಾಗುತ್ತಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಅಲ್ಪಸಂಖ್ಯಾತರು ಹಾಗೂ ಬಿಜೆಪಿ ವಿರೋಧಿ ಮತಗಳನ್ನು ಸಮೀಕರಿಸಿ ನಮ್ಮ ಪಕ್ಷದವರು ಗೆಲ್ಲದ ರೀತಿಯಲಿ ವಾರ್ಡ್ ರಚನೆ ಮಾಡಲಾಗಿದೆ. ಹಿಂದುತ್ವವಾದಿಗಳನ್ನು ಹಣಿಯಲು, ಬಿಜೆಪಿ ಮತಗಳನ್ನು ಒಡೆಯಲು ಸರ್ಕಾರ ವಾಮ ಮಾರ್ಗ ಅನುಸರಿಸುತ್ತಿದೆ' ಎಂದು ಆಪಾದಿಸಿದರು. ಪಾಲಿಕೆ ಮಾಜಿ ಸದಸ್ಯ ರ.ಆಂಜಿನಪ್ಪ ಮಾತನಾಡಿ, 'ಯಶವಂತಪುರ ಕ್ಷೇತ್ರದಲ್ಲಿ ಕೆಂಗೇರಿ ಹೋಬಳಿಯ ಶೇ 75ರಷ್ಟು ಮತದಾರರಿದ್ದಾರೆ. ಕೆಂಗೇರಿ ಹೋಬಳಿ ಭಾಗವಾಗಿರುವ ಮೈಲಸಂದ್ರ ಹೆಸರಿನಲ್ಲಿ ವಾರ್ಡ್ ರಚಿಸಿ ಕೆಂಗೇರಿಯನ್ನು ಅದರಲ್ಲಿ ವಿಲೀನಗೊಳಿಸಲಾಗಿದೆ' ಎಂದು ತಿಳಿಸಿದರು.

ಪಾಲಿಕೆ ಮಾಜಿ ಸದಸ್ಯರಾದ ಸತ್ಯನಾರಾಯಣ್, ಜಿ.ಮುನಿರಾಜು, ನಾಗರಾಜ್, ಬಿಜೆಪಿ ಮುಖಂಡರಾದ ಮೈಲಸಂದ್ರದ ಮುನಿರಾಜು, ಅನಿಲ್ ಚಳಗೇರಿ, ಜೆ.ರಮೇಶ್, ಸುಧೀರ್, ನಾಗರಾಜ್, ಜಯರಾಂ, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

'ಖಾಸಗಿ ಕ್ಷಣಗಳ ದೃಶ್ಯ ಸೆರೆ'

ಪತಿಯ ವಿರುದ್ಧ ಪತ್ನಿ ಆರೋಪ, ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿದೇಶದಲ್ಲಿರುವ ಸ್ನೇಹಿತರಿಗೆ ದೃಶ್ಯ ರವಾನೆ ಮಾಡಿರುವ ಆರೋಪ
- ನಾಲ್ವರ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ

ಬೆಂಗಳೂರು: ಪತ್ನಿಯೊಂದಿಗೆ ಕಳೆದ ಖಾಸಗಿ ಕ್ಷಣಗಳ ದೃಶ್ಯವನ್ನು ಮೊಬೈಲ್ ಹಾಗೂ ಕ್ಯಾಮೆರಾದಲ್ಲಿ ಸೆರೆ ಹಿಡಿದು ವಿದೇಶದಲ್ಲಿರುವ ತನ್ನ ಆಪ್ತರಿಗೆ ಕಳುಹಿಸಿದ್ದ ಆರೋಪದ ಅಡಿ ಪತಿ ಸೇರಿದಂತೆ ನಾಲ್ವರ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ನೆಲಸಿರುವ 35 ವರ್ಷದ ಮಹಿಳೆ ನೀಡಿರುವ ದೂರು ಆಧರಿಸಿ, ಅವರ ಪತಿ ಸೈಯದ್ ಇನಾಮುಲ್ ಹಕ್ ಹಾಗೂ ಅಮೀನ್ ಬೇಗ್, ಸೈಯದ್ ವಸೀಂ ಬೋಕರಿ, ಹೀನಾ ಕೌಸರ್ ಎಂಬುವವರ ವಿರುದ್ಧ ವರದಕ್ಷಿಣೆ ನಿಷೇಧ ಕಾಯ್ದೆ ಸೆಕ್ಷನ್ 3, 4 ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್‌ಗಳಾದ 351,(2), 85, 318, 77 ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಸೈಯದ್ ಇನಾಮುಲ್ ಹಕ್ ಅವರ ಜತೆಗೆ ಕಳೆದ ಡಿಸೆಂಬರ್ 15ರಂದು ಮಹಿಳೆಯ ವಿವಾಹ ನಡೆದಿತ್ತು. ವಿವಾಹದ ಸಂದರ್ಭದಲ್ಲಿ ಆರೋಪಿಗೆ ಒಂದು ಬೈಕ್, 340 ಗ್ರಾಂ ಚಿನ್ನಾಭರಣ ನೀಡಿ ಮಹಿಳೆಯ ಪೋಷಕರು ಮದುವೆ ಮಾಡಿ ಕೊಟ್ಟಿದ್ದರು. ಮದುವೆಯ ಸಂದರ್ಭದಲ್ಲಿ ಆರೋಪಿಯ ದೊಡ್ಡ ತಂಗಿಯ ಪತಿ ಅಮೀನ್ ಬೇಗ್ ಅವರು ಊಟದ ವಿಚಾರಕ್ಕೆ ಗಲಾಟೆ ಮಾಡಿದ್ದರು. ಮದುವೆಗೆ ಬಂದಿದ್ದ ಜನರ ಎದುರೇ ಗಲಾಟೆ ಮಾಡಿ ಅವಮಾನ ಮಾಡಿದ್ದರು. ಮದುವೆಯಾಗಿ ಕೆಲವು ದಿನಗಳು ಕಳೆದ ಬಳಿಕ ನನಗೆ ಈಗಾಗಲೇ ಮದುವೆಯಾಗಿದೆ. ನೀನು ಎರಡನೇ ಹೆಂಡತಿ ಎಂಬುದಾಗಿ ಸೈಯದ್ ಇನಾಮುಲ್ ಹಕ್ ಹೇಳಿದ್ದರು' ಎಂದು ಆರೋಪಿಸಿ ಮಹಿಳೆ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.



ಸೈಯದ್ ಇನಾಮುಲ್ ಹಕ್

'ದೂರುದಾರರ ಸಮ್ಮತಿಯಿಲ್ಲದೇ ಖಾಸಗಿ ಫೋಟೊ ಹಾಗೂ ವಿಡಿಯೊ ತೆಗೆದು ಅವುಗಳನ್ನು ವಿದೇಶದಲ್ಲಿರುವ ಸ್ನೇಹಿತರಿಗೆ ಸೈಯದ್ ಇನಾಮುಲ್ ಹಕ್ ಕಳುಹಿಸಿದ್ದರು. ವಿದೇಶದಲ್ಲಿರುವ ಸ್ನೇಹಿತರ ಜತೆಗೆ ದೈಹಿಕ ಸಂಬಂಧ ಹೊಂದುವಂತೆಯೂ ಒತ್ತಾಯಿಸಿದ್ದರು. ಅಲ್ಲದೇ ಖಾಸಗಿ ಕ್ಷಣಗಳಿರುವ ಫೋಟೊ ಹಾಗೂ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕುವುದಾಗಿಯೂ ಬೆದರಿಕೆ ಹಾಕಿದ್ದರು' ಎಂದು ಎಫ್‌ಐಆರ್ ನಲ್ಲಿ ಉಲ್ಲೇಖಿಸಲಾಗಿದೆ.

'ಮನೆ ಹಾಗೂ ಹೋಟೆಲ್‌ಗೆ ಕರೆದೊಯ್ದು ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಲಾಗಿದೆ. ಹಲ್ಲೆ ನಡೆಸಲಾಗಿದೆ. ವಿಚ್ಛೇದನ ನೀಡುವುದಾಗಿ ಪದೇ ಪದೇ ಬೆದರಿಕೆ ಹಾಕಿದ್ದರು. ತಂದೆ–ತಾಯಿ ನೋಡುವುದಕ್ಕೂ ಬಿಟ್ಟರಲಿಲ್ಲ' ಎಂದು ಮಹಿಳೆ ಆರೋಪಿಸಿದ್ದಾರೆ.

'ಮಲಗುವ ಕೋಣೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ಖಾಸಗಿ ಕ್ಷಣದ ದೃಶ್ಯವನ್ನು ಸೆರೆಹಿಡಿದು ಇಟ್ಟುಕೊಂಡಿದ್ದಾರೆ' ಎಂದು ಪತಿ ವಿರುದ್ಧ ಪತ್ನಿ ದೂರು ನೀಡಿದ್ದಾರೆ.

ವ್ಯೂಹಂ ಬಜಾರ್



ನಗರದ ಎಂ.ವಿ.ಜೆ ಪದವಿ ಕಾಲೇಜಿನಲ್ಲಿ ವ್ಯೂಹಂ ಮ್ಯಾನೇಜ್‌ಮೆಂಟ್ ಕ್ಲಬ್ ಆಯೋಜಿಸಿದ್ದ 'ವ್ಯೂಹಂ ಬಜಾರ್'ನಲ್ಲಿ ವಿದ್ಯಾರ್ಥಿಗಳು ತಯಾರಿಸಿದ್ದ ಕರಕುಶಲ ವಸ್ತುಗಳು, ಆಹಾರ ಖಾದ್ಯಗಳು ಗಮನ ಸೆಳೆದವು

ಅತಿಥಿ ಉಪನ್ಯಾಸಕ ಹುದ್ದೆಗೆ ಅರ್ಜಿ ಆಹ್ವಾನ



ಬೆಂಗಳೂರು: ನಗರದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ 2025-26ನೇ ಸಾಲಿನ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್ www.uvce.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಸಂಬಂಧಿಸಿದ ದಾಖಲೆಗಳ ಪ್ರತಿಗಳೊಂದಿಗೆ ಕುಲಸಚಿವರು, ಯುವಿಸಿಇ, ಕೆ.ಆರ್ ವೃತ್ತ, ಬೆಂಗಳೂರು- 560 001 ಇಲ್ಲಿಗೆ ಅಕ್ಟೋಬರ್ 14ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

₹3 ಲಕ್ಷಕ್ಕೆ ಬೇಡಿಕೆ: ಕಾಂಗ್ರೆಸ್ ಮುಖಂಡನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೋಟೊ ಹಾಗೂ ಮೊಬೈಲ್ ಸಂದೇಶಗಳನ್ನು ಇಟ್ಟುಕೊಂಡು ₹3 ಲಕ್ಷಕ್ಕೆ ಬೇಡಿಕೆ ಇಟ್ಟಿರುವ ಆರೋಪದ ಅಡಿ ಕಾಂಗ್ರೆಸ್ ಮುಖಂಡ ಧನಂಜಯ್ ಅವರ ವಿರುದ್ಧ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಲಗ್ಗೆರೆಯ ಕೆಂಪೇಗೌಡ ಲೇಔಟ್ ನಿವಾಸಿ ಯಶೋಧಾ ಸಿದ್ದೇಗೌಡ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ನಿಮ್ಮ ಮನೆಯವರ ವಿಡಿಯೊಗಳು ನನ್ನ ಬಳಿ ಇವೆ. ಅವರು ಬೇರೆ ಮಹಿಳೆಯವರಿಗೆ ಸಂದೇಶ ಕಳುಹಿಸಿರುವ ಸ್ಕ್ರೀನ್‌ಶಾಟ್‌ಗಳು ಇವೆ. ನಿಮ್ಮ ಯಜಮಾನರು ಚುನಾವಣೆಗೆ ನಿಂತರೆ ವಿಡಿಯೊಗಳನ್ನು ಬಿಡುಗಡೆ ಮಾಡುತ್ತೇನೆಂದು ಹಲವು ಬಾರಿ ಹೇಳಿದ್ದಾರೆ. ಬೆದರಿಸಿ ₹3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಾರೆ. ನನ್ನ ಮೊಬೈಲ್‌ಗೆ ಕೆಲ ಮೆಸೇಜ್‌ಗಳನ್ನು ಕಳುಹಿಸಿ ಡಿಲಿಟ್ ಮಾಡಿದ್ದಾರೆ' ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಕೃಷ್ಣ ಭವನಕ್ಕೆ ಸಾಗುವ ರಸ್ತೆಯಲ್ಲಿ ಅಡ್ಡಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಮಕ್ಕಳನ್ನು ಕೊಲೆ ಮಾಡುವ ಬೆದರಿಕೆ ಹಾಕಿದ್ದಾರೆ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಉತ್ತರ ನಗರ ಪಾಲಿಕೆ ಆಯುಕ್ತರಿಂದ ಫೋನ್ ಇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಪಾಲಿಕೆಯ ನಿಯಂತ್ರಣ ಕೊಠಡಿಯಲ್ಲಿ ಶುಕ್ರವಾರ ಫೋನ್ ಇನ್ ಕಾರ್ಯಕ್ರಮ ನಡೆಸಿದರು.



ಶ್ರೀನಿವಾಸ್ ಎಂಬುವವರು ಬೀದಿ ನಾಯಿಗಳ ಹಾವಳಿ ಬಗ್ಗೆ ದೂರು ನೀಡಿದ್ದು, ಆಯುಕ್ತರ ನಿರ್ದೇಶನದ ಮೇರೆಗೆ ಸುಗ್ಗಪ್ಪ ಲೇಔಟ್‌ನಲ್ಲಿ ಈಗಾಗಲೇ ಎರಡು ಬೀದಿ ನಾಯಿಗಳನ್ನು ಸೆರೆ ಹಿಡಿದಿದ್ದು, ಅವುಗಳ ನಡವಳಿಕೆಯನ್ನು ವೀಕ್ಷಣೆಗೆ ಒಳಪಡಿಸಲಾಗಿದೆ.

ಫೋನ್ ಇನ್ ಕಾರ್ಯಕ್ರಮದಲ್ಲಿ ಬಂದ ಬಹುಪಾಲು ದೂರುಗಳು ರಸ್ತೆ ಗುಂಡಿಗಳಿಗೆ ಸಂಬಂಧಿಸಿದ್ದಾಗಿದ್ದು, ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಹಾಗೂ ರಸ್ತೆ ದುರಸ್ತಿಯ ಕಾರ್ಯಗಳನ್ನು ಕೈಗೆತ್ತಿಕೊಂಡು, ನಾಗರಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ತ್ಯಾಜ್ಯ ನಿರ್ವಹಣೆ ಬಗ್ಗೆ ದೂರುಗಳು ಬಂದಿದ್ದು, ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಗೆ ತ್ವರಿತವಾಗಿ ಸಮಸ್ಯೆಗಳನ್ನು ಬಗೆಹರಿಸಿ, ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಮರ್ಪಕ ತ್ಯಾಜ್ಯ ನಿರ್ವಹಣೆ ಕಾರ್ಯವನ್ನು ನಡೆಸಲು ಹೇಳಿದರು.

ಫೋನ್ ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರ 41 ಕರೆಗಳಿಂದ, ಒಟ್ಟಾರೆಯಾಗಿ 64 ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಸದರಿ ಅಹವಾಲುಗಳನ್ನು ಸಹಾಯ ಪೋರ್ಟಲ್‌ನಲ್ಲಿ ದಾಖಲಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸಿ, ಸೂಕ್ತ ಕ್ರಮ ವಹಿಸಲು ಸೂಚಿಸಲಾಗಿದೆ.

ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಲು ನಗರ ಪಾಲಿಕೆಯ ಮಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ನಿಯಮಿತವಾಗಿ ಪರಿಶೀಲಿಸಲು ಪ್ರತಿ ಶುಕ್ರವಾರ ಆಯುಕ್ತರು ಫೋನ್ ಇನ್ ಕಾರ್ಯಕ್ರಮ ಮುಂದುವರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾಮಗಾರಿ ಪೂರ್ಣಗೊಳಿಸಲು ಸೂಚನೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಸಾಯಿ ಲೇಔಟ್ ಬಳಿಯ ಗೆದ್ದಲಹಳ್ಳಿ ರೈಲ್ವೆ ವೆಂಟ್ ಕಾಮಗಾರಿಯನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೆ.ಆರ್ ಪುರದ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಸಾಯಿ ಲೇಔಟ್ ಸುತ್ತಮುತ್ತಲ ಪ್ರದೇಶದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಯುವ ಸಲುವಾಗಿ ₹13.36 ಕೋಟಿ ವೆಚ್ಚದಲ್ಲಿ, ರೈಲ್ವೆ ಹಳಿ ಕೆಳಭಾಗದಲ್ಲಿ ಅಳವಡಿಸಲು 6 ಮೀಟರ್ ಅಗಲ ಹಾಗೂ 4.5 ಮೀಟರ್ ಎತ್ತರದ ಎರಡು ಬಾಕ್ಸ್ ಕಾಸ್ಟಿಂಗ್ ಪ್ರಗತಿಯಲ್ಲಿದೆ. ಕಾಸ್ಟಿಂಗ್ ಮುಗಿದ ಕೂಡಲೇ ಬಾಕ್ಸ್ ಪುಷಿಂಗ್ ಮಾಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು.

ಹೆಣ್ಣೂರು - ಬಾಗಲೂರು ರಸ್ತೆಯಲ್ಲಿ 5 ಕಿ.ಮೀ ವೈಟ್ ಟಾಪಿಂಗ್ ಕಾಮಗಾರಿಗೆ ವೇಗ ನೀಡಬೇಕು. ಬ್ಲೆಸ್ಸಿಂಗ್ ಗಾರ್ಡನ್ ರಸ್ತೆಯನ್ನು 24 ಮೀಟರ್‌ಗೆ ವಿಸ್ತರಿಸುವ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಬಿ-ಸ್ಮೈಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾಯಿ ಲೇಔಟ್ ಪ್ರದೇಶದಲ್ಲಿ ಕಸ ಸುರಿಯುವ ಸ್ಥಳಗಳು(ಬ್ಲ್ಯಾಕ್ ಸ್ಪಾಟ್) ನಿರ್ಮಾಣವಾಗಿದ್ದು, ಅವುಗಳನ್ನು ತೆರವುಗೊಳಿಸಬೇಕು ಎಂದು ಸೂಚಿಸಿದರು.

ಬೆಂಗಳೂರು ಉತ್ತರ ನಗರ ಪಾಲಿಕೆ: 72 ವಾರ್ಡ್‌ಗಳು

ವಾರ್ಡ್: ಪ್ರಮುಖ ಪ್ರದೇಶಗಳು

1. **ಚೌಡೇಶ್ವರಿ:** ಕಂಚೇನಹಳ್ಳಿ, ಕೆಇಬಿ ಲೇಔಟ್, ಫೆರಾರ್‌ನಗರ, ಹಾರೋಹಳ್ಳಿ, ಪುಟ್ಟೇನಹಳ್ಳಿ, ನಾಗೇನಹಳ್ಳಿ
2. **ವೆಂಕಟಾಲ:** ಮಾರುತಿನಗರ, ವೆಂಕಟಾಲ, ಶ್ರೀನಿವಾಸಪುರ
3. **ಕಟ್ಟಿಗೇನಹಳ್ಳಿ:** ದ್ವಾರಕಾನಗರ, ಬೆಲ್ಲಹಳ್ಳಿ, ಕಟ್ಟಿಗೇನಹಳ್ಳಿ, ಕೋಗಿಲು, ಪ್ರಕೃತಿನಗರ
4. **ಸಂಪಿಗೆಹಳ್ಳಿ:** ಅಗ್ರಹಾರ ಬಡಾವಣೆ, ಅರ್ಕಾವತಿ ಲೇಔಟ್ 2, 3, 4ನೇ ಬ್ಲಾಕ್, ಸಂಪಿಗೆಹಳ್ಳಿ, ಚೊಕ್ಕನಹಳ್ಳಿ, ಶಿರಡಿ ಸಾಯಿನಗರ
5. **ಜಕ್ಕೂರು:** ರಾಯಲ್ ಎನ್‌ಕ್ಲೇವ್, ಶ್ರೀರಾಂಪುರ, ಅರ್ಕಾವತಿ ಲೇಔಟ್ 1, 7ನೇ ಬ್ಲಾಕ್, ಜಕ್ಕೂರು, ಟೆಲಿಕಾಂ ಲೇಔಟ್, ದಾಸರಹಳ್ಳಿ, ರಾಚೇನಹಳ್ಳಿ, ಡಾ. ಶಿವರಾಮಕಾರಂತ ನಗರ
6. **ಕೆಂಪೇಗೌಡ:** ಸುರಭಿ ಲೇಔಟ್, ಗಾಂಧಿನಗರ, ಯಲಹಂಕ
7. **ಚಿಕ್ಕಬೊಮ್ಮಸಂದ್ರ:** ಚಿಕ್ಕಬೊಮ್ಮಸಂದ್ರ, ಜ್ಯುಡಿಷಿಯಲ್ ಲೇಔಟ್
8. **ಯಲಹಂಕ ಉಪಗ್ರಹ ಪಟ್ಟಣ:** ಮಾತೃ ಲೇಔಟ್, ಯಲಹಂಕ ನ್ಯೂ ಟೌನ್, ಸೆಕ್ಟರ್ ಎ, ಬಿ, ಎಲ್‌ಐಜಿ 3ನೇ ಹಂತ
9. **ದೊಡ್ಡಬೆಟ್ಟಹಳ್ಳಿ:** ಸೆಕ್ಟರ್ 3, 5ಎ ಹಂತ, ಅನಂತಪುರ, ದೊಡ್ಡಬೆಟ್ಟಹಳ್ಳಿ, ಐಸಾಕ್ ಲೇಔಟ್
10. **ಅಟ್ಟೂರು:** ಕಾವೇರಿ ಲೇಔಟ್, ಎಎಂಎಸ್ ಲೇಔಟ್, ಅಟ್ಟೂರು, ಆದಿತ್ಯನಗರ
11. **ತಿಂಡ್ಲು:** ತಿಂಡ್ಲು, ರಾಜೀವ್‌ಗಾಂಧಿ ನಗರ, ಕೆನರಾ ಬ್ಯಾಂಕ್ ಲೇಔಟ್
12. **ಬ್ಯಾಟರಾಯನಪುರ:** ಡಿಫೆನ್ಸ್ ಲೇಔಟ್, ಸಹಕಾರನಗರ, ಜಕ್ಕೂರು ಪ್ಲಾಂಟೇಷನ್, ಭುವನೇಶ್ವರಿ ನಗರ, ಅಮೃತನಗರ, ಬ್ಯಾಟರಾಯನಪುರ
13. **ಅಮೃತಹಳ್ಳಿ:** ಅರ್ಕಾವತಿ ಲೇಔಟ್ 9ನೇ ಬ್ಲಾಕ್, ಅಮೃತಹಳ್ಳಿ, ಜಕ್ಕೂರು ಬಡಾವಣೆ
14. **ಥಣಿಸಂದ್ರ:** ಅರ್ಕಾವತಿ ಲೇಔಟ್ 11–16ನೇ ಬ್ಲಾಕ್, ಸಂಚಾರ ನಗರ, ಥಣಿಸಂದ್ರ, ಅಶ್ವತ್ಥನಗರ
15. **ಕೆಂಪಾಪುರ:** ಅರ್ಕಾವತಿ ಲೇಔಟ್ 22ನೇ ಬ್ಲಾಕ್, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ಜೋಗಪ್ಪ ಲೇಔಟ್, ಸಾರಾಯಿ ಪಾಳ್ಯ
16. **ರಾಜೀವ್ ನಗರ:** ಭದ್ರಪ್ಪ ಬಡಾವಣೆ, ಪಾಪಣ್ಣ ಲೇಔಟ್, ಮಾರುತಿ ನಗರ, ಸರೋವರ ಲೇಔಟ್
17. **ಕೊಡಿಗೆಹಳ್ಳಿ:** ಕೊಡಿಗೆಹಳ್ಳಿ, ಟಾಟಾ ನಗರ
18. **ದೊಡ್ಡಬೊಮ್ಮಸಂದ್ರ:** ದೊಡ್ಡಬೊಮ್ಮಸಂದ್ರ, ಬಿಇಎಲ್ ಕಾಲೊನಿ
19. **ವಿದ್ಯಾರಣ್ಯಪುರ:** ಬಿಇಎಲ್ ಲೇಔಟ್, ಎಚ್‌ಎಂಟಿ ಲೇಔಟ್, ಚಾಮುಂಡೇಶ್ವರಿ ಬಡಾವಣೆ, ಗುರುದರ್ಶನ ಲೇಔಟ್, ನಂಜಪ್ಪ ಬಡಾವಣೆ
20. **ಸಿಂಗಾಪುರ:** ಎಂ.ಎಸ್. ಪಾಳ್ಯ, ವಿದ್ಯಾರಣ್ಯಪುರ, ಸಿಂಗಾಪುರ, ವಿನಾಯಕ ನಗರ, ವೈಷ್ಣವಿ ಲೇಔಟ್, ನರಸೀಪುರ ಬಡಾವಣೆ
21. **ಅಬ್ಬಿಗೆರೆ:** ಕಿರ್ಲೋಸ್ಕರ್ ಲೇಔಟ್, ಕಾನ್ಶಿರಾಂ ನಗರ, ಗೆಳೆಯರ ಬಳಗ, ಸೆಕ್ಟರ್ 7
22. **ಸಿಡೇದಹಳ್ಳಿ:** ಬಾಗಲಗುಂಟೆ, ಎಂಇಐ ಲೇಔಟ್, ಸೌಂದರ್ಯ ಲೇಔಟ್, ಎಜಿಬಿ ಲೇಔಟ್
23. **ಬಾಗಲಗುಂಟೆ:** ಮಂಜುನಾಥ ನಗರ
24. **ನೆಲೆ ಮಹೇಶ್ವರಮ್ಮ ದೇವಸ್ಥಾನ:** ಹೆಸರಘಟ್ಟ ಮುಖ್ಯರಸ್ತೆ, ಜೈನ ದೇವಾಲಯ ರಸ್ತೆ
25. **ದಾಸರಹಳ್ಳಿ:** ಕೊಕೊನಟ್ ಗಾರ್ಡನ್, ಮೌಂಟ್ಸ್ ಕಾಲೊನಿ, ವಿಜಯ ಬ್ಯಾಂಕ್ ಎಕ್ಸ್‌ಟೆನ್ಷನ್
26. **ಮಲ್ಲಸಂದ್ರ:** ಮಾತೃಶ್ರೀ ಲೇಔಟ್, ಶಾಂತಿ ಲೇಔಟ್, ಶಾಂತಿನಗರ, ಸಿದ್ದೇಶ್ವರ ನಿಲಯ, ಮಲ್ಲಸಂದ್ರ
27. **ಶೆಟ್ಟಿಹಳ್ಳಿ:** ಕಾವೇರಿ ಲೇಔಟ್, ಎಐಆರ್ ಲೇಔಟ್, ಬಾಬಣ್ಣ ಲೇಔಟ್, ರಂಗಪ್ಪ ಲೇಔಟ್, ಡಿಫೆನ್ಸ್ ಕಾಲೊನಿ
28. **ಕಮ್ಮಗೊಂಡನಹಳ್ಳಿ:** ಅಬ್ಬಿಗೆರೆ, ರಾಘವೇಂದ್ರ ಕಾಲೊನಿ, ವಿಶ್ವೇಶ್ವರಯ್ಯ ಎನ್‌ಕ್ಲೇವ್
29. **ಜಾಲಹಳ್ಳಿ:** ಬಾಹುಬಲಿ ನಗರ, ಜಾಲಹಳ್ಳಿ, ಸಿದ್ಧಾರ್ಥ ನಗರ
30. **ಕುವೆಂಪುನಗರ:** ಕುವೆಂಪುನಗರ 1–2ನೇ ಹಂತ, ಕಮ್ಮಗೊಂಡನಹಳ್ಳಿ
31. **ಎಚ್‌ಎಂಟಿ:** ಎಚ್‌ಎಂಟಿ ಕಾಲೊನಿ, ಸುಂದರ ನಗರ, ಎಚ್‌ಎಂಟಿ ವಾಚ್ ಫ್ಯಾಕ್ಟರಿ, ಗೋಕುಲ
32. **ಜೆ.ಪಿ ಪಾರ್ಕ್:** ಮೋಹನ್ ಕುಮಾರ್ ನಗರ
33. **ಯಶವಂತಪುರ:** ಯಶವಂತಪುರ
34. **ಬೃಂದಾವನ ನಗರ:** ಮತ್ತಿಕೆರೆ
35. **ಗೆದ್ದಲಹಳ್ಳಿ:** ಎಂಎಲ್‌ಎ ಲೇಔಟ್, ಲೊಟ್ಟೆಗೊಲ್ಲಹಳ್ಳಿ, ಗೆದ್ದಲಹಳ್ಳಿ, ಆರ್.ಎಂ.ವಿ. 2ನೇ ಹಂತ-2ನೇ ಬ್ಲಾಕ್, ಡಾಲರ್ಸ್ ಕಾಲೊನಿ, ಐಎಎಸ್ ಲೇಔಟ್
36. **ನಾಗಶೆಟ್ಟಿಹಳ್ಳಿ:** ಸಂಜಯನಗರ, ಆರ್‌ಎಂವಿ 2ನೇ ಹಂತ, ನಾಗಶೆಟ್ಟಿಹಳ್ಳಿ

38. **ಹೆಬ್ಬಾಳ:** ಆನಂದ ನಗರ- ಕಾಲೊನಿ, ಹೆಬ್ಬಾಳ,
39. **ವಿಶ್ವನಾಥ ನಾಗೇನಹಳ್ಳಿ:** ಕನಕನಗರ, ಚೋಳನಾಯಕನಹಳ್ಳಿ, ವಿಶ್ವನಾಥ ನಾಗೇನಹಳ್ಳಿ, ಅಮರಜ್ಯೋತಿ ನಗರ, ತಿಮ್ಮಕ್ಕ ಲೇಔಟ್
40. **ನಾಗವಾರ:** ವೀರಣ್ಣಪಾಳ್ಯ, ಗೋವಿಂದಪುರ
41. **ಹೆಣ್ಣೂರು:** ಎಚ್.ಬಿ.ಆರ್ ಲೇಔಟ್ 4-5ನೇ ಬ್ಲಾಕ್, ನಾಗವಾರ, ಟೆಲಿಕಾಂ ಲೇಔಟ್ 10ನೇ ಬ್ಲಾಕ್
42. **ಎಚ್.ಬಿ.ಆರ್. ಲೇಔಟ್:** ಗ್ರೇಸ್ ಟೌನ್, ಹೆಣ್ಣೂರು ಗಾರ್ಡನ್ಸ್, ಎಚ್.ಬಿ.ಆರ್. ಲೇಔಟ್, ಹೆಣ್ಣೂರು
43. **ಗೋವಿಂದಪುರ:** ರಶದ್ ನಗರ
44. **ಶಾಂಪುರ:** ಶಾಂಪುರ, ಕಾವೇರಿನಗರ, ಆದರ್ಶ ನಗರ, ಎಲ್.ಆರ್. ಬಂಡೆ, ಚಿನ್ನಣ್ಣ ಲೇಔಟ್



45. **ಮನೋರಾಯನಪಾಳ್ಯ:** ಸುಲ್ತಾನ್ ಪಾಳ್ಯ, ಭುವನೇಶ್ವರಿನಗರ
46. **ಆರ್.ಟಿ. ನಗರ:** ಪೂವಣ್ಣ ಬ್ಲಾಕ್, ಮುನಿರಾಮಣ್ಣ ಬ್ಲಾಕ್, ಎಕ್ಸ್ ಸರ್ವಿಸ್ ಮ್ಯಾನ್ ಕಾಲೊನಿ, ಬಾಬುರೆಡ್ಡಿ ಲೇಔಟ್, ಆರ್.ಟಿ. ನಗರ
47. **ಬಾಲಗಂಗಾಧರ:** ಕೆಂಚಪ್ಪ ಗಾರ್ಡನ್ ರೆಸಿಡೆನ್ಶಿಯಲ್ ಲೇಔಟ್, ವೆಂಕಟಸ್ವಾಮಿ ಲೇಔಟ್, ಗುಂಡಪ್ಪ ರೆಡ್ಡಿ ಲೇಔಟ್
48. **ಗಂಗಾನಗರ:** ಗಂಗಾನಗರ, ಎಚ್.ಎಂ.ಟಿ ಲೇಔಟ್, ಆರ್‌ಬಿಐ ಕಾಲೊನಿ, ನಂಜಪ್ಪ ಬ್ಲಾಕ್, ವಿವಿ ನಗರ
49. **ಗಂಗೇನಹಳ್ಳಿ:** ಜಡ್ಜಸ್ ಕಾಲೊನಿ, ಕೃಷ್ಣಪ್ಪ ಬ್ಲಾಕ್,ಎಂಎಲ್‌ಎ ಲೇಔಟ್
50. **ಜಯ ಚಾಮರಾಜೇಂದ್ರ ನಗರ:** ಚುಂಚಪ್ಪ ನಾರಾಯಣ ಗಾರ್ಡನ್, ಎಸ್.ಜಿ ಪಾಳ್ಯ, ವಿಜಯಶ್ರೀ ಲೇಔಟ್, ಮೋತಿನಗರ, ಮುನೇಶ್ವರ ಬ್ಲಾಕ್
51. **ವರಲಕ್ಷ್ಮಿ ನಗರ:** ಮೋದಿ ಗಾರ್ಡನ್
52. **ಕಾವಲ್ ಬೈರಸಂದ್ರ:** ದಿಣ್ಣೂರು, ಮುನಿರಂಗಪ್ಪ ಬಡಾವಣೆ, ಕಾವಲ್ ಬೈರಸಂದ್ರ
53. **ಸಮಾಧಾನ ನಗರ:** ಹಿದಾಯತ್ ನಗರ
54. **ಕೆ.ಜಿ. ಹಳ್ಳಿ:** ಮುನಿಸ್ವಾಮಪ್ಪ ಬಡಾವಣೆ, ಕಾಡುಗೊಂಡನಹಳ್ಳಿ
55. **ಲಿಂಗರಾಜಪುರ;** ಕೆಎಸ್‌ಎಫ್‌ಸಿ ಲೇಔಟ್, ಎಚ್.ಬಿ.ಆರ್. ಲೇಔಟ್ 1ನೇ ಬ್ಲಾಕ್, ಕರಿಯಣ್ಣನಪಾಳ್ಯ
56. **ಕಾಚರಕನಹಳ್ಳಿ:** ಎಚ್.ಆರ್.ಬಿ.ಆರ್. ಲೇಔಟ್ 2-3 ನೇ ಬ್ಲಾಕ್, ಕಾಚರಕನಹಳ್ಳಿ
57. **ಕಲ್ಯಾಣನಗರ:** ಕಲ್ಯಾಣನಗರ
58. **ಬಾಣಸವಾಡಿ:** ಎಚ್.ಆರ್.ಬಿ.ಆರ್. ಲೇಔಟ್ 1ನೇ ಬ್ಲಾಕ್, ವಿಜಯಬ್ಯಾಂಕ್ ಕಾಲೊನಿ, ಬಾಣಸವಾಡಿ, ಒ.ಎಂ.ಬಿ.ಆರ್. ಲೇಔಟ್
59. **ಸುಬ್ಬಯ್ಯನಪಾಳ್ಯ:** ಜೈಜವಾನ್ ನಗರ, ಸುಬ್ಬಯ್ಯನಪಾಳ್ಯ, ರಾಮಸ್ವಾಮಿಪಾಳ್ಯ
60. **ಎಚ್‌ಆರ್‌ಬಿಆರ್ ಲೇಔಟ್:** ಅರವಿಂದ ನಗರ, ಕಮ್ಮನಹಳ್ಳಿ, ಕೆಎಫ್‌ಎಸ್‌ಸಿ ಲೇಔಟ್
61. **ಕಮ್ಮನಹಳ್ಳಿ:** ಎಂ.ಎಸ್. ನಗರ, ಮುನಿಕಲ್ಲಪ್ಪ ಗಾರ್ಡನ್ 8ನೇಬ್ಲಾಕ್
62. **ಜೀವನಹಳ್ಳಿ;** ನಾಗಯ್ಯನಪಾಳ್ಯ, ಎನ್. ತ್ಯಾಗರಾಜು ಲೇಔಟ್, ಜೀವನಹಳ್ಳಿ, ಹೀರಾಚಂದ್ ಲೇಔಟ್, ಸತ್ಯನಗರ, ಎಂ.ಎಸ್.ಒ ಕಾಲೊನಿ, ಐಟಿಸಿ ಕಾಲೊನಿ
63. **ಮಾರುತಿಸೇವಾ ನಗರ:** ಸೇಂಟ್ ಥಾಮಸ್ ಟೌನ್, ಬಾಲಾಜಿ ಲೇಔಟ್, ಡಿಕೋಸ್ಟಾ ಸ್ಕ್ವೇರ್, ವಿವೇಕಾನಂದ ನಗರ, ಮಾರುತಿ ಸೇವಾ ನಗರ, ಕುಕ್ ಟೌನ್, ಲಿಂಗರಾಜಪುರ
64. **ಸಗಾಯಪುರ:** ಸಗಾಯಪುರ, ಹೊಸ ಬಾಗಲೂರು ಬಡಾವಣೆ, ರಿಚರ್ಡ್ಸ್ ಟೌನ್
65. **ಪಿ ಆ್ಯಂಡ್ ಟಿ ಕಾಲೊನಿ:** ಪೋಸ್ಟಲ್ ಮತ್ತು ಟೆಲಿಕಾಂ ಕಾಲೊನಿ, ಪಿಳ್ಳಣ್ಣ ಗಾರ್ಡನ್
66. **ಶಕ್ತಿ ನಗರ:** 3ನೇ ಬ್ಲಾಕ್ ವಿಶ್ವೇಶ್ವರಯ್ಯ ನಗರ
67. **ಅರುಣಾ ಆಸಿಫ್ ಅಲಿ:** ಮುನೀಶ್ವರ ನಗರ, ಸಯೀದ್ ನಗರ, ಎಚ್.ಬಿ.ಆರ್. ಲೇಔಟ್ 5ನೇ ಬ್ಲಾಕ್
68. **ಪೆರಿಯಾರ್ ನಗರ:** ಪೆರಿಯಾರ್ ನಗರ, ಪಿ ಆ್ಯಂಡ್ ಟಿ ಕಾಲೊನಿ
69. **ಕುಶಾಲನಗರ:** ಪಿಳ್ಳಣ್ಣ ಗಾರ್ಡನ್ 1-2ನೇ ಹಂತ
70. **ದೊಡ್ಡಣ್ಣನಗರ:** ದೇವರಜೀವನಹಳ್ಳಿ
71. **ಎಸ್.ಕೆ. ಗಾರ್ಡನ್:** ಪಾಟರಿ ಟೌನ್, ಐಟಿಐ ಲೇಔಟ್, ಎಸ್.ಕೆ. ಗಾರ್ಡನ್
72. **ಪುಲಕೇಶಿ ನಗರ:** ಸಿಂಧಿ ಕಾಲೊನಿ, ಲಾಜರ್ ಲೇಔಟ್, ಕ್ಲೀವ್ ಲ್ಯಾಂಡ್ ಟೌನ್, ಫ್ರೇಜರ್ ಟೌನ್

ಚಿಟಿಕೆ ಸುದ್ದಿ

ನಾಗರಾಜಮೂರ್ತಿಗೆ 'ಶಂಕರಗೌಡ ರಂಗಭೂಮಿ ಪ್ರಶಸ್ತಿ'



ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಕೆ.ವಿ.ಶಂಕರಗೌಡ ರಂಗಭೂಮಿ ಪ್ರಶಸ್ತಿ'ಗೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರೂ ಆಗಿರುವ ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಸುನೀಲ್ ಕುಮಾರ್ ಸಿಂಗ್ ಮತ್ತು ಕೃಷ್ಣ ಅರುಣಾಚಲಂ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಇದೇ 12ರಂದು ಬೆಳಿಗ್ಗೆ 10.30ಕ್ಕೆ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಸಂಸ್ಕೃತಿ ಪೋಷಕ ಕೆ. ಮೋಹನ್‌ದೇವ್ ಆಳ್ವ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

9 ರಂದು 'ನೀರಿದ್ದರೆ ನಾಳೆ' ಕಾರ್ಯಕ್ರಮ

ಬೆಂಗಳೂರು: ರಾಜ್ಯದ ಜಲ ಮೂಲಗಳನ್ನು ರಕ್ಷಿಸುವ ಉದ್ದೇಶದಿಂದ 'ನೀರಿದ್ದರೆ ನಾಳೆ' ಎನ್ನುವ ವಿಶೇಷ ಪರಿಕಲ್ಪನೆಯ ಕಾರ್ಯಕ್ರಮವನ್ನು ಇದೇ 9 ರಂದು ಆಯೋಜಿಸಲಾಗಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಇತರರು ಭಾಗವಹಿಸಿವರು.

ಯುವಪೀಳಿಗೆಯಲ್ಲಿ ನೀರಿನ ಸಮರ್ಪಕ ಬಳಕೆ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ನಟ ವಶಿಷ್ಟಸಿಂಹ ಅವರನ್ನು ಇಲಾಖೆ ರಾಯಭಾರಿಯನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ವಶಿಷ್ಟ ಸಿಂಹ ಅವರ ಜೊತೆಯಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕೆರೆ ಸಂರಕ್ಷಣೆ, ಮಳೆ ನೀರಿನ ಕೊಯ್ಲು ಸೇರಿದಂತೆ ಹಲವಾರು ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ವಶಿಷ್ಟ ಸಿಂಹ ಅವರು ಯಾವುದೇ ಸಂಭಾವನೆ ಪಡೆಯದೆ ಇಲಾಖೆಯ ಜಲ ಜಾಗೃತಿ ಕಾರ್ಯಕ್ರಮಗಳ ರಾಯಭಾರಿಯಾಗಲು ಒಪ್ಪಿಗೆ ನೀಡಿದ್ದಾರೆ ಎಂದಿದ್ದಾರೆ.

ಭಾರಿ ವಾಹನಗಳ 'ಅನಧಿಕೃತ' ಸಂಚಾರ

ಪಾಲನೆಯಾಗದ ನಿರ್ಬಂಧದ ಆದೇಶ ಸಂಚಾರ ದಟ್ಟಣೆ, ಅಪಘಾತ ಹೆಚ್ಚಳ

• ಆದಿತ್ಯ ಕೆ.ಎ.

ಬೆಂಗಳೂರು: ನಗರದೊಳಗೆ ಭಾರಿ ವಾಹನಗಳು 'ಅನಧಿಕೃತ'ವಾಗಿ ಸಂಚಾರ ನಡೆಸುತ್ತಿದ್ದು, ದಟ್ಟಣೆಯ ಜತೆಗೆ ಅಪಘಾತಕ್ಕೂ ಕಾರಣವಾಗುತ್ತಿವೆ.

ಬೆಳಿಗ್ಗೆ, ಸಂಜೆಯ ದಟ್ಟಣೆ ಅವಧಿಯಲ್ಲಿ ಟ್ರಕ್, ಟಿಪ್ಪರ್ ಹಾಗೂ ಲಾರಿಗಳಿಗೆ ನಗರದ ಒಳಗೆ ಪ್ರವೇಶಿಸುವುದನ್ನು ನಿರ್ಬಂಧಿಸಿ ಹಲವು ತಿಂಗಳೇ ಆಗಿದೆ. ಆದರೂ, ಭಾರಿ ವಾಹನಗಳು ಯಾವುದೇ ಲಗಾಮು ಇಲ್ಲದೇ ನಗರದೊಳಗೆ ಪ್ರವೇಶಿಸುತ್ತಿವೆ. ಅಡ್ಡಾದಿಡ್ಡಿ ಸಂಚಾರವನ್ನೂ ನಡೆಸುತ್ತಿವೆ. ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರ ಜೀವಕ್ಕೂ ಆಪತ್ತು ತರುತ್ತಿವೆ.

ದಟ್ಟಣೆ ಅವಧಿ ಹೆಚ್ಚಿರುವ, ನಿರ್ಬಂಧಿತ ಸಮಯದಲ್ಲಿ ಲಾರಿಗಳ ಅನಧಿಕೃತ ಸಂಚಾರದಿಂದಾಗಿ ಕಳೆದ ಒಂದು ತಿಂಗಳಲ್ಲಿ ಹಲವು ಅಪಘಾತಗಳು ಸಂಭವಿಸಿ, 10ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಕೆಲವರು ಶಾಶ್ವತ ಅಂಗವಿಕಲತೆಗೂ ಒಳಗಾಗಿದ್ದಾರೆ. ತಮ್ಮವರನ್ನು ಕಳೆದುಕೊಂಡಿರುವ ಕುಟುಂಬಗಳು ಕಣ್ಣೀರಿನಲ್ಲಿ ಕೈತೊಳೆಯುವ ಪರಿಸ್ಥಿತಿಯಿದೆ.

ಭಾರಿ ವಾಹನಗಳ ಸಂಚಾರ ನಿಷೇಧವು ಆದೇಶದಲ್ಲಿ ಮಾತ್ರವೇ ಇದೆ. ಆದರೆ, ಕಾರ್ಯರೂಪಕ್ಕೆ ಬರುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

2024ರ ಆಗಸ್ಟ್ 2ರಂದು ನಗರ ಸಂಚಾರ ಪೊಲೀಸರು ಹೊರಡಿಸಿದ್ದ ಆದೇಶದಂತೆ, ಬೆಳಿಗ್ಗೆ 7ರಿಂದ 11ರ ವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 10ರ ವರೆಗೆ ವಾರದ ಆರು ದಿನ ಭಾರಿ ವಾಹನಗಳು, ನಗರದ ಒಳಭಾಗಕ್ಕೆ ಪ್ರವೇಶಿಸುವುದಕ್ಕೆ ನಿರ್ಬಂಧ ಇರುತ್ತದೆ. ಶನಿವಾರ ಒಂದು ದಿನ ಮಾತ್ರ, ಬೆಳಿಗ್ಗೆ 10.30ರಿಂದ ಮಧ್ಯಾಹ್ನ 2.30 ಹಾಗೂ ಸಂಜೆ 4.30ರಿಂದ ರಾತ್ರಿ 9ರ ವರೆಗೆ ಭಾರಿ ವಾಹನಗಳು ನಗರದ ಒಳಗೆ ಪ್ರವೇಶಿಸುವಂತಿಲ್ಲ. ಆದರೆ, ಈ ಸಮಯದಲ್ಲೇ ಮಲ್ಟಿ ಆ್ಯಕ್ಸೆಲ್, ಟಿಪ್ಪರ್, ಲಾರಿ, ಟ್ರಕ್ ಹಾಗೂ ಸರಕು ಸಾಗಣೆಯ ವಾಹನಗಳು ಲಗಾಮು ಇಲ್ಲದೇ ಸಂಚಾರ ನಡೆಸುತ್ತಿವೆ ಎಂದು ಕಾರು ಹಾಗೂ ದ್ವಿಚಕ್ರ ವಾಹನ ಸವಾರರು ಆರೋಪಿಸಿದ್ದಾರೆ.

ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ರಾಜ್ಯದ ದಾವಣಗೆರೆ, ತುಮಕೂರು, ಹುಬ್ಬಳ್ಳಿ ಕಡೆಯಿಂದ ಬರುವ ಭಾರಿ ವಾಹನಗಳು, ರಾಷ್ಟ್ರೀಯ ಹೆದ್ದಾರಿಗಳ ಮೂಲಕ ದಿನದ ಯಾವುದೇ ಸಮಯದಲ್ಲೂ ಪೀಣ್ಯ ಕೈಗಾರಿಕಾ ಪ್ರದೇಶ, ಮೇಲ್ಸೆತುವೆ ಹಾಗೂ ಯಶವಂತಪುರ ಎಪಿಎಂಸಿ ಆವರಣವನ್ನು ಪ್ರವೇಶಿಸುತ್ತಿವೆ. ಅಷ್ಟೇ ಸುಲಲಿತವಾಗಿ ನಗರದಿಂದ ಹೊರಗೂ ಚಲಿಸುತ್ತಿವೆ. ಟ್ರಕ್ ಹಾಗೂ ಲಾರಿ ಚಾಲಕರಿಗೆ ಯಾವುದೇ ನಿರ್ಬಂಧ ಅನ್ವಯ ಆಗುತ್ತಿಲ್ಲ. ವೈಟ್ ಟಾಪಿಂಗ್ ಕಾಮಗಾರಿಗೆ ಅಗತ್ಯವಿರುವ ವಸ್ತುಗಳನ್ನೂ ನಿರ್ಬಂಧಿತ ಅವಧಿಯಲ್ಲೇ ಸಾಗಣೆ ಮಾಡುತ್ತಿರುವುದು ದಟ್ಟಣೆಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ.

ರಸ್ತೆ ಬದಿಯಲ್ಲೇ ನಿಲುಗಡೆ: ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ನಿವಾರಣೆಗೆ ಹಲವು ಸುಧಾರಣೆ ಕ್ರಮ ಕೈಗೊಂಡಿದ್ದರೂ ಆ ನಿಯಮಗಳು ಈಗ ಪಾಲನೆಯಾಗುತ್ತಿಲ್ಲ. ಪಾರ್ಲೆಜಿ ಫ್ಯಾಕ್ಟರಿ ಬಳಿಯ ಹೆದ್ದಾರಿ ಬಳಿಯೇ ಕಂಟೈನರ್‌ಗಳು ಎಲ್ಲೆಂದರಲ್ಲಿ ನಿಂತು ಸಮಸ್ಯೆ ಸೃಷ್ಟಿಸುತ್ತಿವೆ. ಹೆದ್ದಾರಿ ಪಕ್ಕದ ತಡೆಗೋಡೆಯ ಬಳಿಯೇ ಕೆಲವು ಕಂಟೈನರ್‌ಗಳನ್ನು ಅಡ್ಡಾದಿಡ್ಡಿಯಾಗಿ ನಿಲುಗಡೆ ಮಾಡಲಾಗುತ್ತಿದೆ.

'ನೈಸ್ ರಸ್ತೆಯ ಅಕ್ಕಪಕ್ಕದಲ್ಲಿ ಸ್ಥಳ ನೀಡಿದರೆ ಅಲ್ಲಿ ಕಂಟೈನರ್ ನಿಲುಗಡೆ ಮಾಡುತ್ತೇವೆ. ಜಾಗವಿಲ್ಲದ ಕಾರಣಕ್ಕೆ ಹೆದ್ದಾರಿ ಪಕ್ಕದಲ್ಲಿ ಭಾರಿ ವಾಹನಗಳನ್ನು ನಿಲುಗಡೆ ಮಾಡಬೇಕಾದ ಸ್ಥಿತಿಯಿದೆ' ಎಂದು ಚಾಲಕರು ಹೇಳಿದ್ದಾರೆ. 'ನಗರದ ಒಳಗೆ ಸಂಚರಿಸುವಾಗ ಭಾರಿ ವಾಹನಗಳ ಚಾಲಕರು ವೇಗದ ಮಿತಿ ಪಾಲನೆ ಮಾಡುತ್ತಿಲ್ಲ. ದ್ವಿಚಕ್ರ ವಾಹಗಳು ಭಾರಿ ವಾಹನಗಳಿಗೆ ಲೆಕ್ಕಕ್ಕೇ ಇಲ್ಲದಂತಾಗಿದೆ. ಬೈಕ್ ಸವಾರರಿಗೆ ಡಿಕ್ಕಿ ಹೊಡೆಸಿ ಅವರ ಮೈಮೇಲೆಯೇ ಹತ್ತಿಸುತ್ತಿದ್ದಾರೆ. ಇಂತಹ ಅಪಘಾತಗಳು ಮೇಲಿಂದ ಮೇಲೆ ಸಂಭವಿಸುತ್ತಿವೆ. ಆದರೂ, ನಿರ್ಬಂಧಿತ ಅವಧಿಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಕಡಿವಾಣ ಬಿದ್ದಿಲ್ಲ' ಎಂದು ಲಾರಿ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಸಂಬಂಧಿ ನರೇಂದ್ರ ಹೇಳಿದರು.


ನಿರ್ಬಂಧಿತ ಅವಧಿಯಲ್ಲೇ ನಗರದ ಒಳಗೆ ಪ್ರವೇಶಿಸಿರುವ ಭಾರಿ ವಾಹನ

ಪ್ರಕರಣ ದಾಖಲಿಸಲು ಸೂಚನೆ

ಮೂರು ಟನ್‌ಗಿಂತ ಹೆಚ್ಚಿನ ಭಾರ ಹೊರುವ ವಾಹನಗಳು ನಿಗದಿತ ಅವಧಿಯಲ್ಲಿ ನಗರವನ್ನು ಪ್ರವೇಶಿಸುವಂತಿಲ್ಲ. ನೀರು, ಕಸ, ಪೊಲೀಸ್, ಸೇನೆ ಹಾಗೂ ವೈದ್ಯಕೀಯ ಉಪಕರಣಗಳನ್ನು ಸಾಗಿಸುವ ವಾಹನಗಳಿಗೆ ವಿನಾಯಿತಿ ಇದೆ. ನಿರ್ಬಂಧಿತ ಅವಧಿಯಲ್ಲಿ ನಗರದ ಒಳಗೆ ಬಂದರೆ ಚಾಲಕರ ವಿರುದ್ಧ ಪ್ರಕರಣ ದಾಖಲಿಸುವಂತೆ ಸಂಚಾರ ವಿಭಾಗದ ಇನ್‌ಸ್ಪೆಕ್ಟರ್‌ಗಳಿಗ ಸೂಚನೆ ನೀಡಲಾಗಿದೆ ಎಂದು ಡಿಸಿಪಿಯೊಬ್ಬರು ತಿಳಿಸಿದ್ದಾರೆ.

ಲಾರಿ ಅಪಘಾತ ಪ್ರಕರಣಗಳು

- ನಂದಿನಿ ಲೇಔಟ್‌ನ ಕಂಠೀರವ ಸ್ಟುಡಿಯೊ ರಸ್ತೆಯಲ್ಲಿರುವ ರವಿತೇಜ ಪೆಟ್ರೋಲ್ ಬಂಕ್ ಬಳಿ ಮಿನು ಲಾರಿ ಹಾಗೂ ಬೈಕ್ ನಡುವೆ (ಸೆ.22) ಸಂಭವಿಸಿದ್ದ ಅಪಘಾತದಲ್ಲಿ ಖಾಸಗಿ ಕಂಪನಿ ಉದ್ಯೋಗಿ ಸ್ಥಳದಲ್ಲೇ ಮೃತಪಟ್ಟಿದ್ದರು
- ಹಾಸನದ ಮೊಸಳೆ ಹೊಸಹಳ್ಳಿಯಲ್ಲಿ ಗಣೇಶೋತ್ಸವದ ಮೆರವಣಿಗೆ ವೇಳೆ ಕ್ಯಾಂಟರ್ ನುಗ್ಗಿ ಸಂಭವಿಸಿದ್ದ ಅಪಘಾತದ ಮಾದರಿಯಲ್ಲೇ ನಗರದ ಸುಮನಹಳ್ಳಿ ಜಂಕ್ಷನ್‌ನಲ್ಲಿ ಸೆ.13ರಂದು ನಿಯಂತ್ರಣ ತಪ್ಪಿದ ಟ್ರಕ್‌ವೊಂದು ಆಟೊ, ಕಾರು ಹಾಗೂ ಎರಡು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದು ತಂದೆ ಹಾಗೂ ಪುತ್ರಿ ಸ್ಥಳದಲ್ಲೇ ಮೃತಪಟ್ಟಿದ್ದರು
- ಬೂದಿಗೆರೆ ಕ್ರಾಸ್ ಬಳಿ (ಸೆ.29) ರಸ್ತೆ ಗುಂಡಿ ತಪ್ಪಿಸುವ ಯತ್ನದಲ್ಲಿ ನಿಯಂತ್ರಣ ತಪ್ಪಿ ಬಿದ್ದಿದ್ದ ವಿದ್ಯಾರ್ಥಿನಿ ಮೇಲೆಯೇ ಲಾರಿ ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು
- ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾಂಕ್ರೀಟ್ ಮಿಶ್ರಣ ಲಾರಿ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದರು
- ಸಂಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಭದ್ರಪ್ಪ ಲೇಔಟ್‌ನಲ್ಲಿ ಸ್ಕೂಟರ್ ಹಾಗೂ ಸಿಮೆಂಟ್ ಮಿಶ್ರಣದ ಲಾರಿ ನಡುವೆ ಸಂಭವಿಸಿದ್ದ ಅಪಘಾತದಲ್ಲಿ ಮಹಿಳೆ ಅಸುನೀಗಿದ್ದರು

'ವಾರದಲ್ಲಿ 3 ದಿನ ಕಾವೇರಿ ಆರತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ನಡೆದ ಐತಿಹಾಸಿಕ ಕಾವೇರಿ ಆರತಿಯನ್ನು ಮುಂದೆಯೂ ವಾರದಲ್ಲಿ ಮೂರು ದಿನ ನಡೆಸಲಾಗುವುದು. ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮಂಡ್ಯ ಜಿಲ್ಲೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿಯನ್ನು ನೆರವೇರಿಸಿದ 55 ಪಂಡಿತ, ಪುರೋಹಿತರನ್ನು ಶಿವಕುಮಾರ್ ಅವರು ತಮ್ಮ ಸರ್ಕಾರಿ ನಿವಾಸದಲ್ಲಿ ಶುಕ್ರವಾರ ಸನ್ಮಾನಿಸಿದರು.

'ಪ್ರಯತ್ನಕ್ಕೆ ಸೋಲಾಗಬಹುದು, ಪ್ರಾರ್ಥನೆಗೆ ಸೋಲಾಗುವುದಿಲ್ಲ. ನಾವೆಲ್ಲರೂ ಸೇರಿ ಪ್ರಾರ್ಥನೆ ಸಲ್ಲಿಸೋಣ. ಆರತಿಗಾಗಿ ಸ್ಟೇಡಿಯಂ ಮಾದರಿ ಮಂಟಪ ನಿರ್ಮಾಣ ಮಾಡೋಣ' ಎಂದರು.

'ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಕಾವೇರಿ ಆರತಿ ನಡೆಯಲಿದೆ. ಇದರಿಂದ ಪುರೋಹಿತರಿಗೆ, ಸ್ಥಳೀಯರಿಗೆ ಉದ್ಯೋಗ ದೊರೆಯುತ್ತದೆ. ನಾನು ಅಥವಾ ಇನ್ಯಾರೋ ಪುರೋಹಿತರಾಗಲು ಸಾಧ್ಯವಿಲ್ಲ. ನೀವೇ ಆ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಬೆಳಿಗ್ಗೆ ಹೊತ್ತು ಭಕ್ತಾದಿಗಳು ಕಾವೇರಿಗೆ ಪೂಜೆ ಸಲ್ಲಿಸುವ ರೀತಿಯಲ್ಲೂ ವ್ಯವಸ್ಥೆ ಮಾಡಲಾಗುವುದು. ವಾರ ಪೂರ್ತಿ ಆರತಿ ಕಾರ್ಯಕ್ರಮ ನಡೆಯಬೇಕು ಎಂಬುದು ನನ್ನ ಆಸೆಯಾಗಿದೆ' ಎಂದು ಹೇಳಿದರು.

'ಕಾವೇರಿ ಆರತಿ ಅತ್ಯುತ್ತಮವಾಗಿ ನೆರವೇರಿದೆ. ಏನೇನು ತಪ್ಪುಗಳಾಗಿವೆ ಎಂದು ತಿಳಿದು, ಮುಂದೆ ಯಾವ ರೀತಿಯ ಸಾಂಸ್ಕೃತಿಕ- ಧಾರ್ಮಿಕ ಕೆಲಸಗಳು ನೆರವೇರಬೇಕು ಎಂಬುದನ್ನು ಗಮನಿಸಬೇಕು' ಎಂದು ಪಂಡಿತ, ಪುರೋಹಿತರಿಗೆ ತಿಳಿಸಿದರು.

ಶಾಸಕರಾದ ಶಿವಲಿಂಗೇಗೌಡ, ಮಹಾಂತೇಶ್ ಕೌಜಲಗಿ, ಶರತ್ ಬಚ್ಚೇಗೌಡ, ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ, ಕಾವೇರಿ ನೀರಾವರಿ ನಿಗಮದ ಎಂ.ಡಿ. ಮಹೇಶ್ ಪಾಲ್ಗೊಂಡಿದ್ದರು.

ಪುಣೆ ರೇಸ್

ಸೈಕಿಕ್ ಸ್ಟಾರ್ ಗೆಲ್ಲುವ ನಿರೀಕ್ಷೆ

ಥ್ರೆಪ್ಟಿನ್ ಫಿಲ್ಲೀಸ್ ಆ್ಯಂಡ್ ಮೇರ್ಸ್ ಸ್ಟೇಕ್ಸ್ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೈಕಿಕ್ ಸ್ಟಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೆನೆಕ 1, ಎಂಪವರ್ 3, ರಾಫೆಲ್ 4
2ನೇ ರೇಸ್: ಅಲ್ಟಿಮೊ 6, ಅಟಾಶ್ 2, ಸಿಂಗರ್ ಸಾರ್ಜೆಂಟ್ 5
3ನೇ ರೇಸ್: ಡಾಕ್ಟರ್ ಡಾಲಿ 3, ಬ್ಲ್ಯಾಕ್ ಥಂಡರ್ 5, ಕಿಂಗ್ ಕೆ 2
4ನೇ ರೇಸ್: ಡಾರ್ಸಿ 2, ಡಾನ್ ಜೂಲಿಯೊ 4, ಮಾಯ್ ಟಾಯ್ 3
5ನೇ ರೇಸ್: ಸೈಕಿಕ್ ಸ್ಟಾರ್ 1, ಥಲಸ್ಸ 5, ರೆಜಿನ ಮೆಮೋರಾಬಿಲಿಸ್ 4
6ನೇ ರೇಸ್: ಎಸ್ಕೇಪ್ ವೆಲಾಸಿಟಿ 3, ಸಿಲ್ವರ್ ಸ್ಟ್ರೈಕ್ 10, ಕಮ್ ಸೆಪ್ಟೆಂಬರ್ 7
7ನೇ ರೇಸ್: ವಿಂಗ್ಸ್ ಆಫ್ ಫ್ಯೂರಿ 4, ಟೈಮ್‌ಲೆಸ್ ಫಾರ್ಚೂನ್ 2, ಟ್ರೆಷರ್ ಗೋಲ್ಡ್ 1

ಉತ್ತಮ ಬೆಟ್: ಸೆನೆಕ

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ನಗರದಲ್ಲಿ ಇಂದು

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಜಿ. ಸತೀಶ್ ರೆಡ್ಡಿ, ನಿರಂಜನ ವಾನಳ್ಳಿ, ಉಪಸ್ಥಿತಿ: ಟಿ. ಸೋಮಶೇಖರ್, ಆಯೋಜನೆ: ಇಂಡಿಯನ್ ಅಕಾಡೆಮಿ ಡಿಗ್ರಿ ಕಾಲೇಜ್, ಸ್ಥಳ: ದಿ ಸ್ಕೂಲ್ ಆಫ್ ರಾಯ, ದಾಸನಾಯಕನಹಳ್ಳಿ, ಬೆಳಿಗ್ಗೆ 10

75ನೇ ವಾರ್ಷಿಕೋತ್ಸವದ ಅಂಗವಾಗಿ ಗಾಂಧಿ ವ್ಯಂಗ್ಯಚಿತ್ರ ಪ್ರದರ್ಶನ: ಉದ್ಘಾಟನೆ: ವೂಡೇ ಪಿ.ಕೃಷ್ಣ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಎಂ.ಜಿ. ರಸ್ತೆ, ಬೆಳಿಗ್ಗೆ 10

ಎಚ್.ಎನ್. ಫಣೀಶ್ ಅವರ 'ಮದರ್ ಟಂಗ್ ಎಜುಕೇಷನ್' ಪುಸ್ತಕ ಬಿಡುಗಡೆ: ಮುಖ್ಯ ಅತಿಥಿ: ಜನಾರ್ದನ್ ಚನ್ನಗಿರಿ, ಆಯೋಜನೆ: ಮುನ್ನೋಟ, ಸ್ಥಳ: ಬಿ.ಎಂ. ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಧ್ವನಿ–ಬಿಕೆಎಫ್ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಹಿಂದೂಸ್ತಾನಿ ಸಂಗೀತ ಉತ್ಸವ: ಎರಡು ಸಂಗೀತ ಕಛೇರಿ, 'ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್ ಸ್ಮಾರಕ' ಪ್ರಶಸ್ತಿ: ಎನ್. ರಾಜಮ್, ಅತಿಥಿಗಳು: ಸುಧಾಕರ್ ರಾವ್, ವಿ.ಎಸ್. ರೆಡ್ಡಿ, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಷನ್, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5

ಶತಾಬ್ದಿ ನಾದ ನೈವೇದ್ಯ: ಉಪಸ್ಥಿತಿ: ಸಿ.ಆರ್. ಮುಕುಂದ, ಬಿ.ಕೆ. ಸುಮಿತ್ರಾ, ವೇಲು, ಆನೂರು ಅನಂತ ಕೃಷ್ಣ ಶರ್ಮಾ, ಭೀಮ್‌ಶಾ ಆರ್ಯ, ಅಧ್ಯಕ್ಷತೆ: ಗುಬ್ಬಿಗೂರು ರಮೇಶ, ಆಯೋಜನೆ: ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರದರ್ಶಕ ಕಲಾ ವಿಭಾಗ, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಸಂಜೆ 5

25ನೇ ವರ್ಷದ ಪ್ರವಚನ ವಾಹಿನಿ: ಭರತನಾಟ್ಯ: ಅರ್ಚನಾ ಎಂ.ಸಿ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

ಕೋಮು ಗಲಭೆ: ಆರೋಪಿಗೆ ಮಧ್ಯಂತರ ಜಾಮೀನು

ಬೆಂಗಳೂರು: ಎರಡೂವರೆ ದಶಕಗಳಿಗೂ ಹಿಂದೆ ಸುರತ್ಕಲ್ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ನಡೆದಿದ್ದ ಕೋಮು ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗಷ್ಟೇ ಬಂಧನಕ್ಕೆ ಒಳಗಾಗಿದ್ದ ದಕ್ಷಿಣ ಕನ್ನಡ ಜಿಲ್ಲೆ ಹಳೆಯಂಗಡಿ ಮೂಲದ ಅನಿವಾಸಿ ಭಾರತೀಯ (ಸದ್ಯ ಮಸ್ಕತ್‌ನಲ್ಲಿ ವಾಸ) ಚಂದ್ರಹಾಸ ಕೇಶವ ಶೆಟ್ಟಿ ಅವರಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಚಂದ್ರಹಾಸ ಕೇಶವ ಶೆಟ್ಟಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಆಲಿಸಿದ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದ ಕಡತಗಳು ಮತ್ತು ದಾಖಲೆಗಳು ಲಭ್ಯವಿಲ್ಲ ಎಂಬ ಕಾರಣಕ್ಕೆ ಆರೋಪಿಯನ್ನು ಬಂಧನದಲ್ಲಿ ಇರಿಸುವುದು ಸೂಕ್ತವಲ್ಲ' ಎಂಬ ಅಭಿಪ್ರಾಯದೊಂದಿಗೆ ಮೂರು ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಿ ಆದೇಶಿಸಿತು.

'ಆರೋಪಿಯು ₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತ್ರಿ ನೀಡಬೇಕು ಮತ್ತು ವಿದೇಶಕ್ಕೆ ತೆರಳಬಾರದು' ಎಂಬುದೂ ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ. ಹೈಕೋರ್ಟ್ ವಕೀಲ ಸುಯೋಗ ಹೆರಳೆ ವಕಾಲತ್ತು ವಹಿಸಿದ್ದಾರೆ.


ಪ್ರಕರಣವೇನು?: ಸುರತ್ಕಲ್ ಸುತ್ತಲ ಪ್ರದೇಶದಲ್ಲಿ 1998ರ ಡಿಸೆಂಬರ್‌ನಲ್ಲಿ ಕೋಮು ಗಲಭೆ ನಡೆದಿತ್ತು. ಈ ಸಂಬಂಧ ದಾಖಲಾಗಿದ್ದ ದೂರಿನಲ್ಲಿ ಅರ್ಜಿದಾರರನ್ನು ಆರೋಪಿಯನ್ನಾಗಿ ಮಾಡಲಾಗಿತ್ತು. ಎಫ್‌ಐಆರ್ ಹಾಗೂ ದೋಷಾರೋಪ ಪಟ್ಟಿಯಲ್ಲಿ, 'ಆರೋಪಿ ತಲೆ ಮರೆಸಿಕೊಂಡಿದ್ದಾರೆ' ಎಂದು ನಮೂದಿಸಲಾಗಿತ್ತು.

ಚಂದ್ರಹಾಸ ಅವರು 1992ರಿಂದಲೂ ಕುಟುಂಬ ಸಮೇತ ಮಸ್ಕತ್ ನಲ್ಲಿ ನೆಲಸಿದ್ದಾರೆ. ತಾಯಿಯ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಸ್ಕತ್‌ನಿಂದ ತವರೂರಿಗೆ ಬರುವಾಗ ಮೂಲ್ಕಿ ಪೊಲೀಸರು 2025ರ ಆಗಸ್ಟ್ 28ರಂದು ಮುಂಬೈ ವಿಮಾನ ನಿಲ್ದಾಣದಲ್ಲಿ ಅವರನ್ನು ಬಂಧಿಸಿದ್ದರು.

ವಿಚಾರಣಾ ನ್ಯಾಯಾಲಯ ಇವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು.



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,836
ಇಂದಿನ ಅಂತ್ಯ:	24,894
ದಿನದ ಕನಿಷ್ಠ:	24,747
	57

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹444-631
ದ್ವಿತಳಿ (ಬಿ.ವಿ)	₹377-792

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹183.00
ಆರ್‌ಎಸ್‌ಎಸ್-5	₹178.00
ಗುಡ್ ಲಾಟ್	₹164.00

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹29,000
ಎಸಿ	₹15,260
ಆರ್‌ಪಿ	₹19,250
ಆರ್‌ಸಿ	₹11,000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1325 (1315)
ಸೋಯಾ (ರಿಫೈನ್ಡ್)	₹1280 (1270)
ಸೂರ್ಯಕಾಂತಿ (ರಿಫೈನ್ಡ್)	₹1430 (1425)
ಪಾಮೋಲಿನ್	₹1275 (1270)

ಮುಂಬೈ ಧಾರಣೆ (ಶೇಂಗಾ) 03-10-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1335 (1325)
ಒಂದು ವಾರದ ಡೆಲಿವರಿ	1330 (1320)
ಪಾಮ್ ವಾರದ ಡೆಲಿವರಿ	1273 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1370 (1360)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,17,000 (1,15,100)
ಬೆಳ್ಳಿ ಕೆ.ಜಿಗೆ	1,47,000 (1,46,000)

ಹಿಂದಿನ ದಿನದ ವಹಿವಾಟು ಲಭ್ಯವಿಲ್ಲ

‘ಚಿನ್ನದ ಬೆಲೆ ಅನಿಶ್ಚಿತತೆಯ ಮಾಪಕ’

ಕಚ್ಚಾ ತೈಲದ ಜಾಗದಲ್ಲಿ ಈಗ ಹಳದಿ ಲೋಹ: ಗವರ್ನರ್ ಸಂಜಯ್ ಮಲ್ಹೋತ್ರಾ ಅನಿಸಿಕೆ


ಸಂಜಯ್ ಮಲ್ಹೋತ್ರಾ

ನವದೆಹಲಿ (ಪಿಟಿಐ): ‘ಕಚ್ಚಾ ತೈಲದ ಬೆಲೆಯು ತೀರಾ ಈಚಿನವರೆಗೆ ಜಾಗತಿಕ ಅನಿಶ್ಚಿತತೆಗಳ ಮಾಪಕದಂತೆ ಕೆಲಸ ಮಾಡುತ್ತಿತ್ತು. ಈಗ ಆ ಸ್ಥಾನವನ್ನು ಚಿನ್ನದ ಬೆಲೆಯು ಆಕ್ರಮಿಸಿಕೊಂಡಿರುವಂತೆ ಕಾಣುತ್ತಿದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಶುಕ್ರವಾರ ಹೇಳಿದ್ದಾರೆ.

ವಿತ್ತೀಯ ದೃಷ್ಟಿಯಿಂದ ಈ ಸಂದರ್ಭದಲ್ಲಿ ಜಗತ್ತಿನ ಬಹುತೇಕ ದೇಶಗಳು ಒತ್ತಡಕ್ಕೆ ಸಿಲುಕಿವೆ. ಇಂದಿನ ವ್ಯಾಪಾರ ನೀತಿಗಳು ಕೆಲವು ದೇಶಗಳ ಆರ್ಥಿಕ ಬೆಳವಣಿಗೆಯನ್ನು ಹಾಳು ಮಾಡಬಹುದು. ಜಾಗತಿಕ ಮಟ್ಟದಲ್ಲಿ ಷೇರುಪೇಟೆಗಳಲ್ಲಿ ಒಂದಿಷ್ಟು ಕುಸಿತ ಎದುರಾಗಬಹುದು ಎಂದು ಮಲ್ಹೋತ್ರಾ ಅವರು ಎಚ್ಚರಿಕೆ ನೀಡಿದ್ದಾರೆ.

ರೆಪೊ ದರವನ್ನು ಶೇಕಡ 5.5ರ ಮಟ್ಟದಲ್ಲಿ ಕಾಯ್ದುಕೊಳ್ಳುವ ತೀರ್ಮಾನವನ್ನು ಬುಧವಾರ ತೆಗೆದುಕೊಂಡ ಸಂದರ್ಭದಲ್ಲಿ ಆರ್‌ಬಿಐ, ಜಾಗತಿಕ ಅರ್ಥ ವ್ಯವಸ್ಥೆಯು ನಿರೀಕ್ಷೆಗಿಂತ ಹೆಚ್ಚಿನ ಮಟ್ಟದಲ್ಲಿ ಗಟ್ಟಿತನವನ್ನು ತೋರಿಸಿದೆಯಾದರೂ, ಮುನ್ನೋಟವು ಅಷ್ಟೊಂದು ಸ್ಪಷ್ಟವಾಗಿಲ್ಲ ಎಂದು ಹೇಳಿದೆ.

‘ಹಿಂದಿನ ದಶಕದಲ್ಲಿ ಜಾಗತಿಕ ಮಟ್ಟದ ಬಿಕ್ಕಟ್ಟುಗಳು ಕಚ್ಚಾ ತೈಲ ಬೆಲೆ ಏರಿಕೆಗೆ ಕಾರಣವಾಗುತ್ತಿದ್ದವು. ಅಂತಹ ಬಿಕ್ಕಟ್ಟುಗಳು ಈಗ ಎದುರಾಗಿದ್ದರೂ, ಕಚ್ಚಾ ತೈಲದ ಬೆಲೆಯು ಒಂದು ಹಂತದಲ್ಲಿ ಮಾತ್ರ ಏರಿಳಿತ ಕಾಣುತ್ತಿದೆ. ದೇಶದ ಒಟ್ಟು ಜಿಡಿಪಿಯಲ್ಲಿ ಕಚ್ಚಾ ತೈಲದ ಮಹತ್ವವು ಕಡಿಮೆ ಆಗಿರುವುದು ಇದಕ್ಕೆ ಕಾರಣ ಆಗಿರಬಹುದು. ಇದು ಭಾರತದಲ್ಲಿ ಮಾತ್ರವಲ್ಲದೆ, ವಿಶ್ವದ ಇತರೆಡೆಗಳಲ್ಲಿಯೂ ಆಗಿದೆ’ ಎಂದು ಮಲ್ಹೋತ್ರಾ ಹೇಳಿದ್ದಾರೆ.

‘ಬಹುಶಃ ಈಗ ಚಿನ್ನದ ಬೆಲೆಯು ಜಾಗತಿಕ ಅನಿಶ್ಚಿತತೆಯ ಮಾಪಕದಂತೆ ಕೆಲಸ ಮಾಡುತ್ತಿದೆ’ ಎಂದು ಅವರು ಕೌಟಿಲ್ಯ ಅರ್ಥಶಾಸ್ತ್ರ ಸಮಾವೇಶದಲ್ಲಿ ಹೇಳಿದ್ದಾರೆ.

ತಂತ್ರಜ್ಞಾನ ವಲಯದ ಕೆಲವು ಷೇರುಗಳ ಬೆಲೆಯು ಜಾಗತಿಕ ಷೇರುಪೇಟೆಗಳ ಒಟ್ಟಾರೆ ಏರಿಕೆಗೆ ಕಾರಣವಾಗಿರುವ ಬಗ್ಗೆ ಅನಿಸಿಕೆ ಹಂಚಿಕೊಂಡ ಅವರು, ‘ಷೇರುಪೇಟೆಗಳಲ್ಲಿ ಕುಸಿತವೊಂದು ಎದುರಾಗಬಹುದು’ ಎಂದು ಎಚ್ಚರಿಸಿದ್ದಾರೆ.

ದೇಶದ ಅರ್ಥ ವ್ಯವಸ್ಥೆಯ ಮೂಲಭೂತ ಅಂಶಗಳು ಬಲಿಷ್ಠವಾಗಿ ಇವೆ. ಜಗತ್ತಿನಲ್ಲಿ ಅನಿಶ್ಚಿತತೆ ಇದ್ದರೂ ಭಾರತದಲ್ಲಿ ಸ್ಥಿರತೆ ಇದೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಹಣದುಬ್ಬರ ಕಡಿಮೆ ಇರುವುದು, ವಿದೇಶಿ ವಿನಿಮಯ ಸಂಗ್ರಹವು ಚೆನ್ನಾಗಿ ಇರುವುದು ಹಾಗೂ ಬ್ಯಾಂಕ್ ಮತ್ತು ಕಾರ್ಪೊರೇಟ್ ಕಂಪನಿಗಳ ಲೆಕ್ಕಪತ್ರವು ಸುಸ್ಥಿತಿಯಲ್ಲಿ ಇರುವುದು ಇದಕ್ಕೆ ಕಾರಣ ಎಂದಿದ್ದಾರೆ.

ಮುಸ್ಲಿಂ ಎಂಬ ಕಾರಣಕ್ಕೆ ಗರ್ಭಿಣಿಗೆ ಚಿಕಿತ್ಸೆ ನೀಡದ ವೈದ್ಯೆ

ಲಖನೌ: ಮುಸ್ಲಿಂ ಸಮುದಾಯದವರು ಎಂಬ ಕಾರಣಕ್ಕೆ ವೈದ್ಯೆಯೊಬ್ಬರು ಗರ್ಭಿಣಿಗೆ ಚಿಕಿತ್ಸೆ ನೀಡಲು ನಿರಾಕರಿಸಿದ ಅಮಾನುಷ ಘಟನೆಯೊಂದು ಉತ್ತರ ಪ್ರದೇಶದಲ್ಲಿ ನಡೆದಿದೆ.

‘ಅವರು ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಹಾಗಾಗಿ ನಾನು ಚಿಕಿತ್ಸೆ ನೀಡಲ್ಲ. ಅವರನ್ನು ಬೇರೆ ಎಲ್ಲಿಗಾದರೂ ಕರೆದುಕೊಂಡು ಹೋಗಿ’ ಎಂದು ವೈದ್ಯೆ ಹೇಳಿರುವುದಾಗಿ ಮಹಿಳೆಯ ಪತಿ ಆರೋಪಿಸಿದ್ದಾರೆ.

ಗರ್ಭಿಣಿ ಶಮಾ ಪರ್ವೀನ್ ಅವರನ್ನು ಅವರ ಪತಿ ನವಾಜ್ ಅವರು ಉತ್ತರಪ್ರದೇಶದ ಜೌನ್‌ಪುರದ ಜಿಲ್ಲಾ ಮಹಿಳಾ ಆಸ್ಪತ್ರೆಗೆ ಸೆಪ್ಟೆಂಬರ್ 30ರಂದು ಕರೆದುಕೊಂಡು ಬಂದಿದ್ದರು. ತನ್ನ ಪತ್ನಿಗೆ ಚಿಕಿತ್ಸೆ ನೀಡುವಂತೆ ಕರ್ತವ್ಯದಲ್ಲಿದ್ದ ವೈದ್ಯೆಗೆ ಮನವಿ ಮಾಡಿದರು. ಆದರೆ ಅವರು ಚಿಕಿತ್ಸೆ ನೀಡಲು ನಿರಾಕರಿಸಿದರು. ‘ನನ್ನನ್ನೂ ಸೇರಿದಂತೆ ಮುಸ್ಲಿಂ ಸಮುದಾಯದ ಇಬ್ಬರಿಗೆ ಚಿಕಿತ್ಸೆ ನೀಡಲು ವೈದ್ಯೆ ಹಿಂದೇಟು ಹಾಕಿ ಬೇರೊಬ್ಬರಿಗೆ ಚಿಕಿತ್ಸೆ ನೀಡಿದ್ದಾರೆ’ ಎಂದು ಶಮಾ ಅವರು ಆರೋಪಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಿಡಿಯೊ ಹರಿದಾಡಿದ ಬೆನ್ನಲ್ಲೇ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಹಿರಿಯ ಅಧಿಕಾರಿಗಳು ವೈದ್ಯರಿಂದ ಮಾಹಿತಿ ಕೇಳಿದ್ದಾರೆ. ಆರೋಪ ಸಾಬೀತಾದರೆ ವೈದ್ಯೆಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಯಲ್ಲಾಪುರ	
ಹೊಸಚಾಲಿ	45699-43589	ಬಿಳಿಗೋಟು	25399-34099	ರಾಶಿ	54899-53651
ಚಿಪ್ಪು	28569-33999	ಚಾಲಿ	38139-44799	ಬಿಳಿಗೋಟು	19410-36394
ಕೋಕ	9569-26009	ಕೋಕ	20319-29789	ಚಾಲಿ	37769-45869
ಫ್ಯಾಕ್ಟರಿ	6089-27070	ಕೆಂಪುಗೋಟು	27119-29899	ಕೋಕ	10009-29599
ಹಳೆಚಾಲಿ	39999-46001	ರಾಶಿ	46099-55199	ಕೆಂಪುಗೋಟು	21999-31899
ಶಿವಮೊಗ್ಗ		ತಟ್ಟಿಬೆಟ್ಟೆ	30319-45099	ರಾಶಿ	45109-62118
ಬೆಟ್ಟೆ	67599-70019	**ಶಿರಸಿ**		ತಟ್ಟಿಬೆಟ್ಟೆ	36000-44469
ಗೊರಬಲು	19010-41699	ಬೆಟ್ಟೆ	35989-49561	**ಬೆಳ್ತಂಗಡಿ**	
ಹೊಸತು	60699-61199	ಬಿಳಿಗೋಟು	28299-36623	ಕೋಕ	10000-21000
ರಾಶಿ	46669-64329	ಚಾಲಿ	41298-45601	ಹೊಸತು	28500-35000
ಸರಕು	58099-83159	ಕೆಂಪುಗೋಟು	24011-34099		

ಪಿಒಕೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ: ಭಾರತ ಆತಂಕ


ನವದೆಹಲಿ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ (ಪಿಒಕೆ) ಮುಗ್ಧ ಪ್ರತಿಭಟನಕಾರರ ಮೇಲೆ ದೌರ್ಜನ್ಯ ಎಸಗುವ ಮೂಲಕ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುವ ಹೊಣೆಗಾರಿಕೆಯನ್ನು ಪಾಕಿಸ್ತಾನ ಹೊರಬೇಕು ಎಂದು ಭಾರತ ಶುಕ್ರವಾರ ಆಗ್ರಹಿಸಿದೆ.

‘ಪಾಕಿಸ್ತಾನಿ ಪಡೆಗಳಿಂದ ಮುಗ್ಧ ಜನರ ಮೇಲಿನ ದೌರ್ಜನ್ಯ ಸೇರಿದಂತೆ ಪಿಒಕೆಯಲ್ಲಿ ಪ್ರತಿಭಟನೆಗಳು ನಡೆಯುತ್ತಿರುವ ಬಗ್ಗೆ ವರದಿಯಾಗುತ್ತಿದೆ. ಇದು ಪಾಕಿಸ್ತಾನದ ದಬ್ಬಾಳಿಕೆಯ ವಿಧಾನ. ಬಲವಂತವಾಗಿ ಹಾಗೂ ಅಕ್ರಮವಾಗಿ ವಶಪಡಿಸಿಕೊಂಡಿರುವ ಪ್ರದೇಶಗಳಲ್ಲಿನ ಸಂಪನ್ಮೂಲಗಳನ್ನು ಲೂಟಿ ಮಾಡಿರುವುದರ ಪರಿಣಾಮ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಮೂಲಭೂತ ಹಕ್ಕುಗಳು ಮತ್ತು ನ್ಯಾಯವನ್ನು ಒದಗಿಸುವಂತೆ ಹಾಗೂ ವ್ಯವಸ್ಥಿತ ದಬ್ಬಾಳಿಕೆಯನ್ನು ಕೊನೆಗೊಳಿಸುವಂತೆ ಆಗ್ರಹಿಸಿ ಪಿಒಕೆಯ ಹಲವು ಪ್ರದೇಶಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ.

ಅಧಿಕಾರಿಗಳಿಗೆ ಆದೇಶ ನೀಡಿದ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್

‘ಭಾರತದೊಂದಿಗೆ ವ್ಯಾಪಾರ– ಅಸಮತೋಲನ ಸರಿಪಡಿಸಿ’


ಮೋದಿ ಜೊತೆಗೆ ವ್ಲಾದಿಮರ್ ಪುಟಿನ್

ಮಾಸ್ಕೊ (ಪಿಟಿಐ): ಅಧಿಕ ಪ್ರಮಾಣದ ಕಚ್ಚಾತೈಲ ಖರೀದಿಸುತ್ತಿರುವ ಭಾರತದೊಂದಿಗೆ ವ್ಯಾಪಾರ ಅಸಮತೋಲನ ನಿವಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನ ಹಾಗೂ ಔಷಧವನ್ನು ಖರೀದಿಸಲು ಕ್ರಮ ಕೈಗೊಳ್ಳಬೇಕು ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ತನ್ನ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಇದೇ ಡಿಸೆಂಬರ್‌ನಲ್ಲಿ ನಡೆಯುವ ವಾರ್ಷಿಕ ಶೃಂಗಸಭೆಗೆ ಭಾರತಕ್ಕೆ ಭೇಟಿ ನೀಡುವುದನ್ನು ಖಚಿತಪಡಿಸಿದ ಬೆನ್ನಲ್ಲೇ ಪುಟಿನ್ ಈ ಘೋಷಣೆ ಮಾಡಿದ್ದಾರೆ.

ರಷ್ಯಾ ದಕ್ಷಿಣ ಭಾಗದ ಸೋಚಿ ಪಟ್ಟಣದಲ್ಲಿರುವ ‘ಬ್ಲ್ಯಾಕ್ ಸೀ’ ರೆಸಾರ್ಟ್‌ನಲ್ಲಿ ಗುರುವಾರ ತಡರಾತ್ರಿ ನಡೆದ ಭಾರತ ಸೇರಿದಂತೆ 140 ದೇಶದ ಭದ್ರತೆ ಹಾಗೂ ಭೌಗೋಳಿಕ ರಾಜಕೀಯ ತಜ್ಞರನ್ನು ಒಳಗೊಂಡ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಈ ನಿರ್ಧಾರ ಪ್ರಕಟಿಸಿದ್ದಾರೆ.

‘ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿರುವ ಭಾರತದ ಮೇಲೆ ಅಮೆರಿಕವು ಹೆಚ್ಚಿನ ಸುಂಕ ಹೇರಿದ್ದರಿಂದ ಉಂಟಾದ ನಷ್ಟಕ್ಕೆ ಪ್ರತಿಯಾಗಿ ಅಲ್ಲಿಂದ ಹೆಚ್ಚಿನ ವಸ್ತುಗಳನ್ನು ಖರೀದಿಸುವ ಮೂಲಕ ಸಮತೋಲನಗೊಳಿಸಲಾಗುತ್ತದೆ. ಆ ಮೂಲಕ ಸಾರ್ವಭೌಮ ರಾಷ್ಟ್ರ ಪ್ರತಿಷ್ಠೆಯೂ ಹೆಚ್ಚಲಿದೆ’ ಎಂದು ತಿಳಿಸಿದ್ದಾರೆ.

ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿರುವ ಭಾರತದ ಮೇಲೆ ಅಮೆರಿಕವು ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸುತ್ತಿದ್ದು, ಶೇಕಡಾ 50ರಷ್ಟು ತೆರಿಗೆ ವಿಧಿಸಿದಂತಾಗಿದೆ. ಇದರಿಂದ ಭಾರತದಿಂದ ಅಮೆರಿಕಕ್ಕೆ ರಫ್ತು ಮಾಡುವ ವಸ್ತುಗಳ ಮೇಲೆ ತೀವ್ರ ಪರಿಣಾಮ ಬೀರಲಿದೆ.

ಈ ವಿಚಾರವನ್ನು ಉಲ್ಲೇಖಿಸಿದ ಪುಟಿನ್, ‘ವ್ಯಾಪಾರ ಅಸಮತೋಲನ ತೆಗೆದುಹಾಕುವ ನಿಟ್ಟಿನಲ್ಲಿ ಭಾರತದ ಕೃಷಿ, ಔಷಧಗಳನ್ನು ಹೆಚ್ಚಿನ ಸಂಖ್ಯೆಯನ್ನು ಖರೀದಿಸಲಾಗುತ್ತದೆ. ಔಷಧ, ಔಷಧ ಉತ್ಪನ್ನಗಳ ವಿಚಾರದಲ್ಲಿ ನಮ್ಮ ಕಡೆಯಿಂದ ಕ್ರಮ ಕೈಗೊಳ್ಳಬಹುದು’ ಎಂದು ತಿಳಿಸಿದ್ದಾರೆ.

‘ಮೋದಿ ಬುದ್ಧಿವಂತ ನಾಯಕ’

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ರಾಷ್ಟ್ರೀಯವಾದಿ ಸರ್ಕಾರವನ್ನು ಶ್ಲಾಘಿಸಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಅವರು (ಮೋದಿ) ಸಮತೋಲಿತ, ಬುದ್ಧಿವಂತ ಹಾಗೂ ರಾಷ್ಟ್ರೀಯವಾದಿ ನಾಯಕ ಎಂದು ಬಣ್ಣಿಸಿದರು.

‘ಅಮೆರಿಕ ಸುಂಕ ಹೇರಿಕೆ ಬೆದರಿಕೆಗೆ ಪ್ರತಿಕ್ರಿಯಿಸಿದ ಅವರು, ದೇಶದ ಹಿತಾಸಕ್ತಿ ಹಾಗೂ ಆದ್ಯತೆಗಳಿಗೆ ವಿರುದ್ಧವಾದ ಯಾವುದೇ ಕಾರ್ಯತಂತ್ರವನ್ನು ಭಾರತೀಯರು ಸಹಿಸುವುದಿಲ್ಲ’ ಎಂದು ಹೇಳಿದ್ದಾರೆ ಎಂದು ಆರ್‌ಟಿ ನ್ಯೂಸ್ ಚಾನಲ್ ತಿಳಿಸಿದ್ದಾರೆ.

ಭಾರತವು ತನ್ನನ್ನು ಯಾರಿಂದಲೂ ಅವಮಾನಿಸಲು ಬಿಡುವುದಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಏನು ಎಂಬುದು ನನಗೆ ಗೊತ್ತಿದೆ. ಅವರೂ ಎಂದಿಗೂ ಇಂತಹ ನಿರ್ಧಾರ ತೆಗೆದುಕೊಳ್ಳಲ್ಲ’ ಎಂದು ತಿಳಿಸಿದ್ದಾರೆ.

ಹೊಸತನದಿಂದಷ್ಟೇ ಕಂಪನಿ ಗೆಲ್ಲಬಹುದು


ರಾಹುಲ್

ನವದೆಹಲಿ (ಪಿಟಿಐ): ದ್ವಿಚಕ್ರ ವಾಹನ ತಯಾರಿಕಾ ಸಂಸ್ಥೆಗಳಾದ ಬಜಾಜ್, ಹೀರೊ, ಟಿವಿಎಸ್ ಕೊಲಂಬಿಯಾದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತೀಯ ಕಂಪನಿಗಳು ನಾವೀನ್ಯದಿಂದ ಗೆಲುವು ಸಾಧಿಸಬಹುದೇ ವಿನಾ ಸ್ವಜನಪಕ್ಷಪಾತದಿಂದಲ್ಲ ಎನ್ನುವುದನ್ನು ಈ ಮೂಲಕ ತೋರಿಸುತ್ತಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ದಕ್ಷಿಣ ಅಮೆರಿಕದ ನಾಲ್ಕು ದೇಶಗಳ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಅವರು, ‘ಬಜಾಜ್ ಪಲ್ಸರ್ ಬೈಕ್ ಮುಂದೆ ನಿಂತಿರುವ ಫೋಟೊವನ್ನು ‘ಎಕ್ಸ್’ನಲ್ಲಿ ಶುಕ್ರವಾರ ಹಂಚಿಕೊಂಡಿದ್ದಾರೆ.

‘ಕೊಲಂಬಿಯಾದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬಜಾಜ್, ಹೀರೊ, ಟಿವಿಎಸ್ ನೋಡಲು ಹೆಮ್ಮೆಯಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

ಇಐಎ ವಿಶ್ವವಿದ್ಯಾಲಯದಲ್ಲಿ ವಿಚಾರಸಂಕಿರಣ ಉದ್ದೇಶಿಸಿ ಮಾತನಾಡಿದ ಅವರು, ಮೂರರಿಂದ ನಾಲ್ಕು ಉದ್ಯಮಿಗಳು ಇಡೀ ಅರ್ಥವ್ಯವಸ್ಥೆಯ ಮೇಲೆ ಹಿಡಿತ ಸಾಧಿಸುವ ಯೋಜನೆಯ ವಿರುದ್ಧ ವಾಗ್ದಾಳಿ ನಡೆಸಿದರು.

‘ಭಾರತದ ಬಗ್ಗೆ ಆಶಾವಾದವಿದೆ. ಆದರೆ, ಅಲ್ಲಿನ ವ್ಯವಸ್ಥೆಯಲ್ಲಿ ದೋಷಗಳ ಎಳೆಗಳಿವೆ. ಅದರಿಂದ ಹೊರಬರದಂತೆ ಮಾಡುವ ಅಪಾಯಕಾರಿ ಧೋರಣೆಗಳಿದ್ದು, ದೇಶವು ಅವುಗಳಿಂದ ಹೊರಬರಲೇಬೇಕಿದೆ. ಮೊದಲನೇ ಅತಿದೊಡ್ಡ ಪಾಯಕಾರಿ ಧೋರಣೆ ಎಂದರೆ ಪ್ರಜಾಪ್ರಭುತ್ವದ ಮೇಲಿನ ದಾಳಿ’ ಎಂದು ಹೇಳಿದರು.

ಪಿಎಲ್‌ಐ: ದಿನಾಂಕ ವಿಸ್ತರಣೆ

ನವದೆಹಲಿ (ಪಿಟಿಐ): ಜವಳಿ ವಲಯದ ಉದ್ದಿಮೆಗಳು ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿ ಹೊಸದಾಗಿ ಅರ್ಜಿ ಸಲ್ಲಿಸಲು ಇರುವ ಕಡೆಯ ದಿನಾಂಕವನ್ನು ಕೇಂದ್ರ ಸರ್ಕಾರವು ಡಿಸೆಂಬರ್ 31ರವರೆಗೆ ವಿಸ್ತರಿಸಿದೆ.

‘ಉದ್ಯಮ ವಲಯವು ತೋರಿರುವ ಉತ್ಸಾಹದ ಕಾರಣದಿಂದಾಗಿ ಸರ್ಕಾರವು ಇನ್ನೊಂದು ಅವಕಾಶವನ್ನು ಸಂಬಂಧಪಟ್ಟವರಿಗೆ ನೀಡುತ್ತಿದೆ’ ಎಂದು ಕೇಂದ್ರ ಜವಳಿ ಸಚಿವಾಲಯವು ಹೇಳಿದೆ.

ಪಿಎಲ್‌ಐ ಯೋಜನೆಯ ಬಗ್ಗೆ ಉದ್ಯಮ ವಲಯವು ಹೆಚ್ಚಿನ ಉತ್ಸಾಹ ತೋರಿಸಿರುವುದಕ್ಕೆ ಪ್ರತಿಯಾಗಿ ಅರ್ಜಿ ಸಲ್ಲಿಸಲು ಇರುವ ಕಡೆಯ ದಿನಾಂಕವನ್ನು ವಿಸ್ತರಿಸಲಾಗಿದೆ ಎಂದು ಸಚಿವಾಲಯ ಹೇಳಿದೆ. ಆಸಕ್ತರು ಅರ್ಜಿಗಳನ್ನು pli.texmin.gov.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದು.

ಮೊದಲ ಮಹಿಳಾ ಆರ್ಚ್ ಬಿಷಪ್ ಸೆರಾ


ಸೆರಾ ಮುಲ್ಲಲಿ

ಲಂಡನ್ (ಪಿಟಿಐ): ಮೊಟ್ಟ ಮೊದಲ ಬಾರಿಗೆ ಮಹಿಳಾ ಆರ್ಚ್‌ಬಿಷಪ್ ನೇಮಕ ಮಾಡುವ ಮೂಲಕ ಚರ್ಚ್ ಆಫ್ ಇಂಗ್ಲೆಂಡ್ ಇತಿಹಾಸ ನಿರ್ಮಾಣ ಮಾಡಿದೆ. ಕ್ಯಾಂಟರ್‌ಬರಿ ಚರ್ಚ್‌ನ ಆರ್ಚ್‌ಬಿಷಪ್ ಆಗಿ ಸೆರಾ ಮುಲ್ಲಲಿ ಅವರನ್ನು ಶುಕ್ರವಾರ ಘೋಷಣೆ ಮಾಡಲಾಗಿದೆ.

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಗುರಿಯಾಗಿ ರೆವರೆಂಡ್ ಜಸ್ಟಿನ್ ವಿಲ್ಬೆ ಅವರು ಕಳೆದ ವರ್ಷ ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ತೆರವಾಗಿತ್ತು. ಸೆರಾ ಅವರು 2018ರಿಂದ ಬಿಷಪ್ ಆಗಿದ್ದರು.

106ನೇ ಆರ್ಚ್‌ಬಿಷಪ್ ಆಗಿ ಸೆರಾ ಅವರ ನೇಮಕಕ್ಕೆ ಮೂರನೇ ಕಿಂಗ್ ಚಾರ್ಲ್ಸ್ ಅಧಿಕೃತ ಒಪ್ಪಿಗೆ ನೀಡಿದ್ದರು. ಶುಶ್ರೂಷಕಿಯಾಗಿದ್ದ ಸೆರಾ ಅವರ ನೇಮಕವನ್ನು ಇಂಗ್ಲೆಂಡ್ ಪ್ರಧಾನಿ ಕೀರ್ ಸ್ಟಾರ್ಮರ್ ಸ್ವಾಗತಿಸಿದ್ದಾರೆ.

63 ವರ್ಷದ ಸೆರಾ 106ನೇ ಆರ್ಚ್‌ಬಿಷಪ್ ಆಗಲಿದ್ದಾರೆ. ಮುಂದಿನ ವರ್ಷ ಜನವರಿಯಲ್ಲಿ ಅವರ ನೇಮಕವನ್ನು ದೃಢೀಕರಿಸಲಾಗುತ್ತದೆ.

ಪಾಟೀಲ್ ಆ್ಯಂಥ್ರೊಪಿಕ್‌ನ ಸಿಟಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಮೆರಿಕದ ಕಂಪನಿ ಆ್ಯಂಥ್ರೊಪಿಕ್‌ನ ಮುಖ್ಯ ತಂತ್ರಜ್ಞಾನ ಅಧಿಕಾರಿಯಾಗಿ (ಸಿಟಿಒ) ಬೆಂಗಳೂರು ಮೂಲದ ರಾಹುಲ್ ಪಾಟೀಲ್ ಅವರು ನೇಮಕ ಆಗಿದ್ದಾರೆ.

ಇವರು ಬೆಂಗಳೂರಿನ ಪಿಇಎಸ್ ಕಾಲೇಜಿನಲ್ಲಿ ಓದಿದವರು. ಈ ಹಿಂದೆ ಫಿನ್‌ಟೆಕ್ ಕಂಪನಿ ಸ್ಟ್ರೈಪ್‌ನಲ್ಲಿ ಸಿಟಿಒ ಆಗಿ ಕೆಲಸ ಮಾಡಿದ್ದಾರೆ. ಆ್ಯಂಥ್ರೊಪಿಕ್‌ನಲ್ಲಿ ಇವರು ಎಂಜಿನಿಯರಿಂಗ್ ಹಾಗೂ ಇತರ ಕೆಲವು ವಿಭಾಗಗಳ ನೇತೃತ್ವ ವಹಿಸಲಿದ್ದಾರೆ.

2002ರಲ್ಲಿ ಪಿಇಎಸ್‌ನಲ್ಲಿ ಬಿಇ (ಕಂಪ್ಯೂಟರ್ ವಿಜ್ಞಾನ) ಪಡೆದ ಇವರು ತಮ್ಮ ತರಗತಿಯ ಟಾಪ್–3 ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು. ನಂತರ ಅಮೆರಿಕದಲ್ಲಿ ಎಂಎಸ್ ವ್ಯಾಸಂಗ ಮಾಡಿದರು.

ದೇಶದ ಯಾವುದೇ ಐಐಟಿಯಲ್ಲಿ ಓದದೇ ಇದ್ದರೂ, ಅಮೆರಿಕದ ದೊಡ್ಡ ಕಂಪನಿಯೊಂದರ ಸಿಟಿಒ ಆಗಿರುವುದು ಇವರ ಹಿರಿಮೆ. ‘ನಮ್ಮೂರು ಬೆಂಗಳೂರು. ನನ್ನ ತಂದೆ ಬಾಗಲಕೋಟೆಯವರು. ಅಮ್ಮ ರಾಯಚೂರಿನವರು. ನಾನು ಹುಟ್ಟಿದ್ದು, ಬೆಳೆದಿದ್ದು ಬೆಂಗಳೂರಿನಲ್ಲಿ’ ಎಂದು ಪಾಟೀಲ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಮಲಬಾರ್ ಪರ ಹೈಕೋರ್ಟ್ ಮಧ್ಯಂತರ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಬ್ರಿಟನ್ನಿನಲ್ಲಿ ಹೊಸ ಮಳಿಗೆ ಆರಂಭಿಸಿರುವುದರ ವಿರುದ್ಧ ಪ್ರಕಟಿಸಲಾದ ಎಲ್ಲ ಅಪಮಾನಕರ ಪೋಸ್ಟ್‌ಗಳನ್ನು ಮತ್ತು ದುರುದ್ದೇಶದ ವಿವರಗಳನ್ನು ತೆಗೆಯಬೇಕು ಎಂದು ಸಾಮಾಜಿಕ ಜಾಲತಾಣಗಳಿಗೆ ಹಾಗೂ ಸುದ್ದಿಸಂಸ್ಥೆಗಳಿಗೆ ಬಾಂಬೆ ಹೈಕೋರ್ಟ್ ಆದೇಶ ನೀಡಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಲಂಡನ್‌ನಲ್ಲಿ ತನ್ನ ಬ್ರ್ಯಾಂಡ್‌ನ ಪ್ರಚಾರಕ್ಕೆ ಅಲ್ಲಿನ ಸಾಮಾಜಿಕ ಜಾಲತಾಣ ಇನ್‌ಫ್ಲ್ಯುಯೆನ್ಸರ್ ಸೇವೆಯನ್ನು ಬಳಸಿಕೊಂಡ ಕಂಪನಿಯ ವಿರುದ್ಧ ಜಾಲತಾಣಗಳ ಮೂಲಕ ದುರುದ್ದೇಶದಿಂದ ಅಭಿಯಾನ ನಡೆಸಲಾಯಿತು. ಈ ಅಭಿಯಾನ ವಿರುದ್ಧ ಕಂಪನಿಯು ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಇದರ ವಿಚಾರಣೆ ನಡೆಸಿದ ಹೈಕೋರ್ಟ್, ಕೆಲವು ಮಾಧ್ಯಮ ಸಮೂಹಗಳು ಹಾಗೂ ಸಾಮಾಜಿಕ ಜಾಲತಾಣ ಸಂಸ್ಥೆಗಳಿಗೆ ತಮ್ಮಿಂದ ಅಂತಹ ಮಾನಹಾನಿಕರ ಸುದ್ದಿ ಮತ್ತು ವರದಿಗಳನ್ನು ಹಿಂಪಡೆಯಲು ಮಧ್ಯಂತರ ಆದೇಶವನ್ನು ನೀಡಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಸ್ವದೇಶಿ ಚಳವಳಿ ಕುರಿತ ಪಠ್ಯ ಪರಿಚಯ

ನವದೆಹಲಿ (ಪಿಟಿಐ): ಭಾರತದ ಸ್ವದೇಶಿ ಚಳವಳಿಯನ್ನು ವಿವರಿಸುವ ಎರಡು ಹೊಸ ಪಠ್ಯಗಳನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪರಿಚಯಿಸಿದೆ. 1905ರಿಂದ ಆರಂಭಗೊಂಡು ಪ್ರಧಾನಿ ನರೇಂದ್ರ ಮೋದಿ ಅವರು ‘ಆತ್ಮನಿರ್ಭರ ಭಾರತ’ ಆಗುವ ಬಗ್ಗೆ ಕರೆ ನೀಡಿದವರೆಗಿನ ಮಾಹಿತಿಗಳನ್ನು ಪಠ್ಯಗಳಲ್ಲಿ ಅಳವಡಿಸಲಾಗಿದೆ.

6ರಿಂದ 8ನೇ ತರಗತಿವರೆಗೆ ‘ಸ್ವದೇಶಿ’: ವೋಕಲ್ ಫಾರ್ ಲೋಕಲ್’ ಮತ್ತು 9ರಿಂದ 12ನೇ ತರಗತಿವರೆಗೆ ‘ಸ್ವದೇಶಿ: ಆತ್ಮನಿರ್ಭರ ಭಾರತಕ್ಕಾಗಿ’ ಎಂಬ ಹೆಸರಿನ ಪಠ್ಯಗಳನ್ನು ಸೇರಿಸಲಾಗಿದೆ. ‘ಆತ್ಮನಿರ್ಭರ ಭಾರತಕ್ಕಾಗಿ’ ಪಠ್ಯದಲ್ಲಿ ಪ್ರಧಾನಿ ಮೋದಿ ಅವರು ಸ್ವಾತಂತ್ರ್ಯ ದಿನಾಚರಣೆಯಂದು ‘ವಿಕಸಿತ ಭಾರತ’ದ ಕುರಿತು ಮಾಡಿದ ಭಾಷಣದ ಆಯ್ದ ಭಾಗಗಳನ್ನು ಸೇರಿಸಲಾಗಿದೆ.

ರಾಷ್ಟ್ರೀಯ ಪುರಸ್ಕಾರ ಪಡೆದ ಶಿಕ್ಷಕರೊಂದಿಗೆ ಪ್ರಧಾನಿ ಮೋದಿ ಅವರು ಕಳೆದ ತಿಂಗಳು ಮಾತುಕತೆ ನಡೆಸಿದ್ದರು. ಈ ವೇಳೆ, ‘ನಾನು ನಿಮಗೆ ಹೋಂವರ್ಕ್ ನೀಡುತ್ತೇನೆ. ಸ್ವದೇಶಿ ವಸ್ತುಗಳ ಬಗ್ಗೆ ಮಕ್ಕಳೊಂದಿಗೆ ಸೇರಿಕೊಂಡು ಪ್ರಚಾರ ಅಭಿಯಾನ ನಡೆಸಿ’ ಎಂದಿದ್ದರು. ಈಗ ಎನ್‌ಸಿಇಆರ್‌ಟಿ ಈ ಹೊಸ ಪಠ್ಯಗಳನ್ನು ಪರಿಚಯಿಸಿದೆ.

ಪಠ್ಯಗಳಲ್ಲೇನಿದೆ?

* 1905ರಲ್ಲಿ ಬ್ರಿಟಿಷರು ಬಂಗಾಳವನ್ನು ವಿಭಜಿಸಿದ ಬಳಿಕ ಸ್ವದೇಶಿ ಚಳವಳಿ ಆರಂಭಗೊಂಡಿತು. ಈ ವೇಳೆ ದೇಶದ ಮಾರುಕಟ್ಟೆಯಲ್ಲಿ ಬ್ರಿಟಿಷರ ವಸ್ತುಗಳೇ ಅಧಿಕವಿದ್ದವು. ಇದರಿಂದ ಸ್ಥಳೀಯರು ಕೆಲಸ ಕಳೆದುಕೊಳ್ಳುತ್ತಿದ್ದರು. ಆದ್ದರಿಂದ ಸ್ವದೇಶಿ ವಸ್ತುಗಳ ಬಳಕೆಗೆ ಜನರು ಮುಂದಾದರು. ಈ ಬೆಳವಣಿಗೆಯಿಂದ 1901ರಲ್ಲಿ ಬಂಗಾಳ ಕೆಮಿಕಲ್ ಮತ್ತು ಫಾರ್ಮಸುಟಿಕಲ್ ವರ್ಕ್ಸ್ ಮತ್ತು 1907ರಲ್ಲಿ ಟಾಟಾ ಐರನ್ ಮತ್ತು ಸ್ಟೀಲ್ ಕಂಪನಿ ಸ್ಥಾಪನೆಯಾಯಿತು
* ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರದ ಯೋಜನೆಗಳಾದ ‘ಮೇಕ್ ಇನ್ ಇಂಡಿಯಾ’, ‘ಸ್ಟಾರ್ಟ್ ಅಪ್ ಇಂಡಿಯಾ’, ‘ಡಿಜಿಟಲ್ ಇಂಡಿಯಾ’, ‘ವೋಕಲ್ ಫಾರ್ ಲೋಕಲ್’ ಮತ್ತು ‘ಆತ್ಮನಿರ್ಭರ ಭಾರತ’ದ ಕುರಿತ ಮಾಹಿತಿ
* ಚಾಟ್‌ಜಿಪಿಟಿ, ಜೆಮಿನಿ ಅಂಥ ಎಐ ತಂತ್ರಜ್ಞಾನದ ಮೇಲಿನ ಅವಲಂಬನೆಯನ್ನು ತಗ್ಗಿಸಿಕೊಂಡು ದೇಶೀಯವಾದ ಇಂಥ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಕಡೆಗೆ ‘ಸ್ವದೇಶಿ ಚಳವಳಿ’ ಮುಂದುವರಿಯುತ್ತಿದೆ. ಇದಕ್ಕೆ ವಿಯೆಟ್ನಾಂ ಮತ್ತು ಇಸ್ರೇಲ್ ಉದಾಹರಣೆ

ಮಾರುತಿ ಸುಜುಕಿ: ಉತ್ಪಾದನೆ ಹೆಚ್ಚಳ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತಿಂಗಳಲ್ಲಿ ಮಾರುತಿ ಸುಜುಕಿ ಕಂಪನಿಯ ವಾಹನ ತಯಾರಿಕೆಯು ಶೇಕಡ 26ರಷ್ಟು ಹೆಚ್ಚಳ ಕಂಡಿದೆ.

ಹಿಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಕಂಪನಿಯು ಒಟ್ಟು 1.59 ಲಕ್ಷ ವಾಹನಗಳನ್ನು ತಯಾರಿಸಿತ್ತು. ಈ ವರ್ಷದ ಸೆಪ್ಟೆಂಬರ್‌ನಲ್ಲಿ ಅದು 2.01 ಲಕ್ಷಕ್ಕೆ ಏರಿಕೆ ಆಗಿದೆ ಎಂಬ ಮಾಹಿತಿಯನ್ನು ಕಂಪನಿಯು ಷೇರುಪೇಟೆಗೆ ನೀಡಿದೆ. ಸೆಪ್ಟೆಂಬರ್‌ನಲ್ಲಿ ಕಂಪನಿಯು ಸಿಯಾಜ್ ಕಾರುಗಳನ್ನು ತಯಾರಿಸಿಲ್ಲ.

ಶಾಂತಿ ಒಪ್ಪಂದಕ್ಕೆ ಸಹಿ: ಹಮಾಸ್‌ಗೆ ಗಡುವು

ವಾಷಿಂಗ್ಟನ್ (ರಾಯಿಟರ್ಸ್/ಎಎಫ್‌ಪಿ): ಗಾಜಾದಲ್ಲಿ ಯುದ್ಧ ಕೊನೆಗೊಳಿಸುವ ಉದ್ದೇಶದಿಂದ ಸಿದ್ಧಪಡಿಸಿರುವ 20 ಅಂಶಗಳ ಯೋಜನೆಗೆ, ಅಮೆರಿಕ ಕಾಲಮಾನದ ಪ್ರಕಾರ ಭಾನುವಾರ ಸಂಜೆ 6 ಗಂಟೆಯೊಳಗೆ (ಭಾರತೀಯ ಕಾಲಮಾನ ಸೋಮವಾರ ನಸುಕಿನ ಜಾವ 3.30) ಸಹಿ ಹಾಕಬೇಕು ಎಂದು ಹಮಾಸ್ ಸಂಘಟನೆಗೆ ಅಮೆರಿಕ ಅಧ್ಯಕ್ಷ ಟ್ರಂಪ್ ತಾಕೀತು ಮಾಡಿದ್ದಾರೆ.

‘ಇದು ಕೊನೆಯ ಅವಕಾಶ. ಒಂದು ವೇಳೆ ಹಮಾಸ್ ಈ ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಹಿಂದೆಂದೂ ಕಂಡಿರದಂತಹ ಭೀಕರ ದಾಳಿಗಳನ್ನು ಹಮಾಸ್ ಎದುರಿಸಬೇಕಾಗುತ್ತದೆ’ ಎಂದೂ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಅವರು ಪೋಸ್ಟ್ ಮಾಡಿದ್ದು, ‘ಅಮಾಯಕ ಪ್ಯಾಲೆಸ್ಟೀನಿಯನ್ನರು ಕೂಡಲೇ ಗಾಜಾದಿಂದ ಸುರಕ್ಷಿತ ಪ್ರದೇಶಗಳಿಗೆ ತೆರಳಬೇಕು’ ಎಂದೂ ಅವರು ಹೇಳಿದ್ದಾರೆ.

‘ಮುಸ್ಲಿಂ ರಾಷ್ಟ್ರಗಳ ಪ್ರಸ್ತಾವಕ್ಕೆ ಅನುಗುಣವಾಗಿಲ್ಲ’

ಇಸ್ಲಾಮಾಬಾದ್: ‘ಡೊನಾಲ್ಡ್ ಟ್ರಂಪ್ ಮಂಡಿಸಿದ 20 ಅಂಶಗಳ ಯೋಜನೆಯು ಮುಸ್ಲಿಂ ರಾಷ್ಟ್ರಗಳ ಗುಂಪು ಸಲ್ಲಿಸಿದ್ದ ಕರಡು ಪ್ರತಿಯಲ್ಲಿನ ಅಂಶಗಳಿಗೆ ಅನುಗುಣವಾಗಿಲ್ಲ’ ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಇಶಾಕ್ ಡಾರ್ ಶುಕ್ರವಾರ ಹೇಳಿದ್ದಾರೆ.

‘ಕಾಲಾವಕಾಶ ಅಗತ್ಯ’

ಗಾಜಾಪಟ್ಟಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಸ್ತಾಪಿಸಿರುವ 20 ಅಂಶಗಳ ಯೋಜನೆಯನ್ನು ಅಧ್ಯಯನ ನಡೆಸಲು ಇನ್ನಷ್ಟು ಕಾಲಾವಕಾಶ ಬೇಕು ಎಂದು ಹಮಾಸ್ ಸಂಘಟನೆ ಹೇಳಿದೆ. ‘ಟ್ರಂಪ್ ಅವರ ಯೋಜನೆ ಬಗ್ಗೆ ಹಮಾಸ್ ಸಮಾಲೋಚನೆ ನಡೆಸುತ್ತಿದೆ. ಇದಕ್ಕಾಗಿ ಸ್ವಲ್ಪ ಕಾಲಾವಕಾಶ ಅಗತ್ಯವಿರುವ ಬಗ್ಗೆ ಸಂಧಾನಕಾರರಿಗೆ ಮಾಹಿತಿ ನೀಡಲಾಗಿದೆ’ ಎಂದು ಹೆಸರು ಹೇಳಲು ಇಚ್ಛಿಸದ, ಹಮಾಸ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಗೃಹ, ಸಹಕಾರಿ ಖಾತೆ ಸಚಿವ ಅಮಿತ್ ಶಾ ಹೇಳಿಕೆ

‘ಹೈನುಗಾರಿಕೆ ಕ್ಷೇತ್ರದಲ್ಲಿ ಶೇ 70ರಷ್ಟು ವೃದ್ಧಿ’


ಹರಿಯಾಣದ ರೋಹ್ಟಕ್‌ನಲ್ಲಿ ಸಬರ್ ಡೇರಿ ಪ್ಲ್ಯಾಂಟ್ ಅನ್ನು ಉದ್ಘಾಟಿಸಿದ ಗೃಹ ಸಚಿವ ಅಮಿತ್ ಶಾ ಅವರನ್ನು ಸನ್ಮಾನಿಸಲಾಯಿತು. ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಈ ವೇಳೆ ಉಪಸ್ಥಿತರಿದ್ದರು —ಪಿಟಿಐ ಚಿತ್ರ

ರೋಹ್ಟಕ್, ಹರಿಯಾಣ (ಪಿಟಿಐ): ‘ಕಳೆದ ಹನ್ನೊಂದು ವರ್ಷಗಳಲ್ಲಿ ಹೈನುಗಾರಿಕಾ ಕ್ಷೇತ್ರವು ದೇಶದಲ್ಲಿ ಗಮನಾರ್ಹ ದಾಪುಗಾಲಿರಿಸಿದ್ದು, ಈ ಅವಧಿಯಲ್ಲಿ ಶೇಕಡಾ 70ರಷ್ಟು ಪ್ರಗತಿ ಸಾಧಿಸಿದೆ. ಈಗ ವಿಶ್ವದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಲಯವಾಗಿದೆ’ ಎಂದು ಕೇಂದ್ರ ಗೃಹ ಹಾಗೂ ಸಹಕಾರಿ ಖಾತೆ ಸಚಿವ ಅಮಿತ್ ಶಾ ತಿಳಿಸಿದರು.

₹325 ಕೋಟಿ ವೆಚ್ಚದಲ್ಲಿ ಇಲ್ಲಿ ನಿರ್ಮಿಸಲಾದ ದೇಶದಲ್ಲಿಯೇ ಅತಿ ದೊಡ್ಡದಾದ ‘ಸಾಬರ್ ಡೇರಿ’ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತೀಯ ಹೈನುಗಾರಿಕಾ ವಲಯವು ತನ್ನ ಸಾಮರ್ಥ್ಯವನ್ನು ಶೇಕಡಾ 70ರಷ್ಟು ವೃದ್ಧಿಸಿಕೊಂಡಿದೆ’ ಎಂದು ಹೇಳಿದರು.

‘ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಲ್ಲ ರಾಜ್ಯ ಸರ್ಕಾರಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. 2029ರ ಒಳಗಾಗಿ ದೇಶದ ಯಾವ ಗ್ರಾಮ ಪಂಚಾಯಿತಿ ಕೂಡ ಸಹಕಾರಿ ಸಮಿತಿಯಿಂದ ಹೊರಗುಳಿಯುವುದಿಲ್ಲ’ ಎಂದು ಶಾ ಭರವಸೆ ನೀಡಿದರು.

‘2014–15ರಲ್ಲಿ ಹಾಲು ಕೊಡುವ ಪ್ರಾಣಿಗಳು 8.6 ಕೋಟಿಯಷ್ಟಿದ್ದರೆ, ಈಗ 11.2 ಕೋಟಿಗೆ ಏರಿಕೆಯಾಗಿದೆ. ಅದೇ ರೀತಿ, ಹಾಲಿನ ಉತ್ಪಾದನೆಯಲ್ಲಿ 14.6 ಕೋಟಿ ಟನ್‌ಗಳಿಂದ 23.9 ಕೋಟಿ ಟನ್‌ಗೆ ಏರಿಕೆಯಾಗಿದೆ’ ಎಂದರು.

ನೂತನ ‘ಸಾಬರ್ ಡೇರಿ’ ಘಟಕವು ನಿತ್ಯವೂ 150 ಮೆಟ್ರಿಕ್ ಟನ್ ಮೊಸರು, 2 ಲಕ್ಷ ಲೀಟರ್ ಮಜ್ಜಿಗೆ ಹಾಗೂ 10 ಮೆಟ್ರಿಕ್ ಟನ್ ಸಿಹಿ ಉತ್ಪನ್ನಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ.

ಸಾಬರ್‌ಕಾಂತಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ‘ಸಾಬರ್ ಡೇರಿ’ ಎಂದು ಖ್ಯಾತಿ ಪಡೆದಿದೆ. ರಾಜಸ್ಥಾನ, ಹರಿಯಾಣ, ಮಹಾರಾಷ್ಟ್ರ, ಪಂಜಾಬ್, ಉತ್ತರಪ್ರದೇಶ ಹಾಗೂ ಬಿಹಾರದಲ್ಲಿಯೂ ತನ್ನ ಸೇವೆಯನ್ನು ನೀಡುತ್ತಿದೆ.

ನ್ಯಾಯ ಪ್ರಕ್ರಿಯೆ ಸರಳೀಕರಣ

‘ಹೊಸತಾಗಿ ಜಾರಿಗೆ ತಂದ ಮೂರು ಕ್ರಿಮಿನಲ್ ಕಾನೂನುಗಳು ನ್ಯಾಯ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿದ್ದು, ಕಾಲಮಿತಿಯಲ್ಲಿ ನ್ಯಾಯ ಒದಗಿಸಲಿದೆ’ ಎಂದು ಗೃಹ ಸಚಿವ ಅಮಿತ್ ಶಾ ತಿಳಿಸಿದರು.

ಹರಿಯಾಣದ ಕುರುಕ್ಷೇತ್ರದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್), ‘ಭಾರತೀಯ ನಾಗರಿಕ್ ಸುರಕ್ಷಾ ಸಂಹಿತಾ (ಬಿಎನ್‌ಎಸ್‌ಎಸ್) ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ (ಬಿಎಸ್‌ಎ) ಜಾರಿಯೂ ಇಡೀ ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನೇ ಬದಲಾಯಿಸಲಿದೆ. ಎಫ್‌ಐಆರ್ ದಾಖಲಾದ ಮೂರು ವರ್ಷದ ಒಳಗಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ’ ಎಂದರು. ‘ಹೊಸ ಕಾನೂನಿನ ಅನ್ವಯ ಇಡೀ ದೇಶದಲ್ಲಿ ಶೇ 53ರಷ್ಟು ಪ್ರಕರಣ ದಾಖಲಾಗಿದ್ದು, ಶೇ 65ರಷ್ಟು ಪ್ರಕರಣಗಳಲ್ಲಿ 60 ದಿನಗಳಲ್ಲಿ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ. ಹರಿಯಾಣದಲ್ಲಿ ಈ ಪ್ರಮಾಣವು ಶೇ 65ರಷ್ಟಿದ್ದು, ಶಿಕ್ಷೆಯ ಪ್ರಮಾಣವು ಶೇ 80ಕ್ಕೆ ಏರಿಕೆಯಾಗಿದೆ’ ಎಂದರು.

‘ಖಾದಿ ಮಾರುಕಟ್ಟೆ ಮರೆತ ಕಾಂಗ್ರೆಸ್’

‘ಸ್ವಾತಂತ್ರ್ಯ ಬಂದ ಬಳಿಕ ಖಾದಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸುವುದನ್ನು ಕಾಂಗ್ರೆಸ್ ಮರೆಯಿತು. ಮೋದಿ ನೇತೃತ್ವದ ಸರ್ಕಾರದ ನಿರಂತರ ಪ್ರೋತ್ಸಾಹದಿಂದ ‘ಖಾದಿ ಮತ್ತು ಗ್ರಾಮ ಕೈಗಾರಿಕಾ ಆಯೋಗದ ವಹಿವಾಟು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 2014–15ರಲ್ಲಿ ₹33 ಸಾವಿರ ಕೋಟಿಯಿಂದ ವಹಿವಾಟು ಸದ್ಯ ₹1.70 ಲಕ್ಷ ಕೋಟಿಗೆ ತಲುಪಿದೆ’ ಎಂದು ಗೃಹ ಸಚಿವ ಅಮಿತ್ ಶಾ ತಿಳಿಸಿದರು.

ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಲ್ಲಿ ನಡೆದ ‘ಖಾದಿ ಮಹೋತ್ಸವ’ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಇಂದು ದೊಡ್ಡ ಕಂಪನಿಗಳು ಕೂಡ ಮಾಡದಷ್ಟು ವಹಿವಾಟು ಅನ್ನು ಖಾದಿ ಸಂಸ್ಥೆಯು ನಡೆಸುತ್ತಿದೆ. ಮೊದಲಿನಿಂದಲೂ ಕಾಂಗ್ರೆಸ್ ಇದೇ ರೀತಿ ನಿಗಾ ಮಾಡಿದ್ದರೆ ಇವತ್ತು ನಿರುದ್ಯೋಗ ಸಮಸ್ಯೆಯೇ ದೇಶದಲ್ಲಿ ಇರುತ್ತಿರಲಿಲ್ಲ’ ಎಂದು ಅವರು ಹೇಳಿದರು.

‘ಖಾದಿ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರವು ನಿರ್ಲಕ್ಷ್ಯ ತಳೆದಿತ್ತು. ’ ಎಂದರು. ಕಾರ್ಯಕ್ರಮದಲ್ಲಿ 2200 ಕುಶಲಕರ್ಮಿಗಳಿಗೆ ಟೂಲ್ ಕಿಟ್‌ಗಳನ್ನು ವಿತರಿಸಲಾಯಿತು.



ರುಕ್ಮಿಣಿ ವಸಂತ್

ಗಳಿಕೆಯಲ್ಲಿ ಅಬ್ಬರಿಸುತ್ತಿರುವ ಕಾಂತಾರ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ; ಚಾಪ್ಟರ್–1' ಗುರುವಾರ ತೆರೆಕಂಡಿದೆ. ಪ್ರೇಕ್ಷಕರ ಮಿಶ್ರಪ್ರತಿಕ್ರಿಯೆಯ ನಡುವೆಯೂ ಗಳಿಕೆಯಲ್ಲಿ ಹಲವು ದಾಖಲೆಗಳನ್ನು ಬರೆಯುತ್ತಿದೆ. ಸುಮಾರು 5000ಕ್ಕೂ ಹೆಚ್ಚು ಪರದೆಗಳಲ್ಲಿ ಪ್ರದರ್ಶನಗೊಂಡಿರುವ ಚಿತ್ರ ಗುರುವಾರ ಬೃಹತ್ ಗಳಿಕೆ ಕಂಡಿದೆ. ಕಳೆದ 24 ಗಂಟೆಗಳಲ್ಲಿ ಬುಕ್‌ಮೈ ಶೋ ಒಂದರಲ್ಲಿಯೇ 12.8 ಲಕ್ಷ ಟಿಕೆಟ್‌ಗಳು ಮಾರಾಟಗೊಂಡಿವೆ ಎಂದು ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ. ಆದಾಗ್ಯೂ ಮೊದಲ ದಿನದ ಒಟ್ಟಾರೆ ಗಳಿಕೆ ಕುರಿತು ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

'ಕಾಂತಾರ; ಚಾಪ್ಟರ್–1' ಮೊದಲ ದಿನದ ಗಳಿಕೆಯಲ್ಲಿ ಈ ವರ್ಷದ ಬಾಲಿವುಡ್ ಸೂಪರ್ ಹಿಟ್ ಚಿತ್ರಗಳಾದ 'ಛಾವಾ', 'ಸೈಯಾರಾ' ಮೊದಲಾದ ಚಿತ್ರಗಳನ್ನು ಹಿಂದಿಕ್ಕಿದೆ ಎಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ.

ಚಿತ್ರತಂಡ ವಾರಗಳ ಹಿಂದೆಯೇ ಮುಂಗಡ ಬುಕ್ಕಿಂಗ್ ಪ್ರಾರಂಭಿಸಿತ್ತು. ದುಬಾರಿ ಟಿಕೆಟ್ ದರದ ನಡುವೆಯೂ ಭಾನುವಾರದವರೆಗೂ ಬಹುತೇಕ ಚಿತ್ರಮಂದಿರಗಳು ಭರ್ತಿಯಾಗಿವೆ. ವಾರದ ದಿನವಾದ ಶುಕ್ರವಾರ ಗಳಿಕೆ ತುಸು ಕುಗ್ಗಬಹುದೆಂದು ಅಂದಾಜಿಸಲಾಗಿದೆ. ವಾರಾಂತ್ಯದ ಶನಿವಾರ ಮತ್ತು ಭಾನುವಾರ ಬೃಹತ್ ಗಳಿಕೆ ನಿಶ್ಚಿತ.

ಬೆಂಗಳೂರಿನಲ್ಲಿಯೇ 600ಕ್ಕೂ ಹೆಚ್ಚು ಪರದೆಗಳಲ್ಲಿ ಚಿತ್ರ ಪ್ರದರ್ಶನ ಕಾಣುತ್ತಿದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಬೆಳಿಗ್ಗೆ 6.30 ರಿಂದಲೇ ಪ್ರದರ್ಶನ ಪ್ರಾರಂಭಗೊಂಡಿದ್ದು ರಾತ್ರಿ 10.30ರ ತನಕವೂ ದಿನಕ್ಕೆ ಸರಾಸರಿ 10 ಪ್ರದರ್ಶನಗಳಿವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಭಾನುವಾರದವರೆಗೂ ಟಿಕೆಟ್‌ಗಳು ಮಾರಾಟಗೊಂಡಿದ್ದು, ಏಕಪರದೆಯ ಕೆಲ ಚಿತ್ರಮಂದಿರಗಳಲ್ಲಷ್ಟೇ ಟಿಕೆಟ್ ಲಭ್ಯವಿದೆ.

ದುಬಾರಿ ಟಿಕೆಟ್ ದರ ಕೂಡ ಗಳಿಕೆ ಏರಿಕೆಗೆ ಮುಖ್ಯ ಕಾರಣ ಎನ್ನಲಾಗಿದೆ. ದೇಶದ ಬೇರೆ ಭಾಗಗಳಲ್ಲಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಮೊದಲ ಮೂರು ದಿನಗಳಲ್ಲಿ ₹200 ಕೋಟಿ ಗಳಿಕೆ ಅಂದಾಜಿಸಲಾಗಿದೆ. 'ಒಟ್ಟಾರೆ ₹1000 ಕೋಟಿ ಗಳಿಕೆ ನಿರೀಕ್ಷೆಯಲ್ಲಿ ನಿರ್ಮಾಣ ಸಂಸ್ಥೆಯಿದೆ' ಎಂದು ಚಿತ್ರತಂಡದ ಮೂಲಗಳು ಹೇಳಿವೆ.

ಈ ನಡುವೆ ಚಿತ್ರಕ್ಕೆ ಪೈರಸಿ ಭೀತಿ ಪ್ರಾರಂಭಗೊಂಡಿದೆ. 'ಪೈರಸಿಯಿಂದ ಈ ಕನಸನ್ನು ವ್ಯರ್ಥವಾಗಲು ಬಿಡಬೇಡಿ. ಚಿತ್ರದ ಯಾವುದೇ ತುಣುಕುಗಳನ್ನು ಹಂಚಿಕೊಳ್ಳಬೇಡಿ. ಚಿತ್ರಮಂದಿರಗಳಲ್ಲಿ ಯಾವುದೇ ದೃಶ್ಯಗಳನ್ನು ಚಿತ್ರೀಕರಿಸಬೇಡಿ. ಸಣ್ಣ ವಿಡಿಯೊ ತುಣುಕು ಸಿನಿಮಾದ ಅಸಲಿ ಮಾಯೆಯನ್ನು ಮಲಿನಗೊಳಿಸುತ್ತದೆ. ದೊಡ್ಡ ಪರದೆಯಲ್ಲಿಯೇ ಚಿತ್ರವನ್ನು ಆನಂದಿಸಿ' ಎಂದು ಹೊಂಬಾಳೆ ಸಂಸ್ಥೆ ಮನವಿ ಮಾಡಿಕೊಂಡಿದೆ.

2021ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಯಾರು ಯಾರಿಗೆ?

- 1) ಮೊದಲನೇ ಅತ್ಯುತ್ತಮ ಚಿತ್ರ: ದೊಡ್ಡಹಟ್ಟಿ ಬೋರೇಗೌಡ
  ನಿರ್ಮಾಪಕ: ಲೋಕೇಶ ಕೆ.ಎಂ; ನಿರ್ದೇಶಕ: ರಘು ಕೆ.ಎಂ
- 2) ಎರಡನೇ ಅತ್ಯುತ್ತಮ ಚಿತ್ರ : 777 ಚಾರ್ಲಿ
  ನಿರ್ಮಾಪಕ: ರಕ್ಷಿತ್ ಶೆಟ್ಟಿ; ನಿರ್ದೇಶಕ: ಕಿರಣ್ ರಾಜ್ ಕೆ.
- 3) ಮೂರನೇ ಅತ್ಯುತ್ತಮ ಚಿತ್ರ: ಬಿಸಿಲು ಕುದುರೆ
  ನಿರ್ಮಾಪಕ ಹಾಗೂ ನಿರ್ದೇಶಕ: ಹೃದಯ ಶಿವ
- 4) ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ: ಭಾರತೀಯ ಪ್ರಜೆಗಳಾದ ನಾವು
  ನಿರ್ಮಾಪಕ ಹಾಗೂ ನಿರ್ದೇಶಕ: ಕೃಷ್ಣಮೂರ್ತಿ ಚಮರಂ
- 5) ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ: ಯುವರತ್ನ
  ನಿರ್ಮಾಪಕ: ವಿಜಯ್ ಕಿರಗಂದೂರು; ನಿರ್ದೇಶಕ: ಸಂತೋಷ್ ಆನಂದ್ ರಾಮ್
- 6) ಅತ್ಯುತ್ತಮ ಮಕ್ಕಳ ಚಿತ್ರ: ಕೇಕ್
  ನಿರ್ಮಾಪಕ: ಪರೀಕ್ಷಿತ್ ಕೆ.ಐ; ನಿರ್ದೇಶಕ–ಕಿಶೋರ್ ಮೂಡಬಿದ್ರಿ
- 7) ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ: ಬಡವ ರಾಸ್ಕಲ್
  ನಿರ್ಮಾಪಕ: 'ಡಾಲಿ' ಧನಂಜಯ ಕೆ.ಎ; ನಿರ್ದೇಶಕ:ಶಂಕರ್ ಎಚ್. (ಶಂಕರ್ ಗುರು)
- 8) ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ: ನಾಡ ಪೆದ ಆಶಾ (ಕೊಡವ)
  ನಿರ್ಮಾಪಕಿ: ಹರಿಣಿ ಜೆ.ಸಿ; ನಿರ್ದೇಶಕ: ಪ್ರಕಾಶ್ ಕಾರ್ಯಪ್ಪ
- 9) ಅತ್ಯುತ್ತಮ ನಟ: ರಕ್ಷಿತ್ ಶೆಟ್ಟಿ; ಚಿತ್ರ: ಚಾರ್ಲಿ 777
- 10) ಅತ್ಯುತ್ತಮ ನಟಿ: ಅರ್ಚನಾ ಜೋಯಿಸ್; ಚಿತ್ರ: ಮ್ಯೂಟ್
- 11) ಅತ್ಯುತ್ತಮ ಪೋಷಕ ನಟ: ಪ್ರಮೋದ್; ಚಿತ್ರ: ರತ್ನನ್ ಪ್ರಪಂಚ
- 12) ಅತ್ಯುತ್ತಮ ಪೋಷಕ ನಟಿ: ಉಮಾಶ್ರೀ; ಚಿತ್ರ: ರತ್ನನ್ ಪ್ರಪಂಚ
- 13) ಅತ್ಯುತ್ತಮ ಕತೆ: ಮಂಜುನಾಥ್ ಮುನಿಯಪ್ಪ; ಚಿತ್ರ : 9 ಸುಳ್ಳು ಕಥೆಗಳು
- 14) ಅತ್ಯುತ್ತಮ ಚಿತ್ರಕತೆ: ರಘು ಕೆ. ಎಂ; ಚಿತ್ರ : ದೊಡ್ಡಹಟ್ಟಿ ಬೋರೇಗೌಡ
- 15) ಅತ್ಯುತ್ತಮ ಸಂಭಾಷಣೆ: ಬರಗೂರು ರಾಮಚಂದ್ರಪ್ಪ ಚಿತ್ರ : ತಾಯಿ ಕಸ್ತೂರ್ ಗಾಂಧಿ
- 16) ಅತ್ಯುತ್ತಮ ಛಾಯಾಗ್ರಹಣ: ಭುವನೇಶ್ ಪ್ರಭು; ಚಿತ್ರ: ಅಮ್ಮೆ ಸಂಸಾರ (ಕೊಂಕಣಿ)
- 17) ಅತ್ಯುತ್ತಮ ಸಂಗೀತ ನಿರ್ದೇಶನ: ಇಮ್ತಿಯಾಜ್ ಸುಲ್ತಾನ್; ಚಿತ್ರ: ಬಿಸಿಲು ಕುದುರೆ
- 18) ಅತ್ಯುತ್ತಮ ಸಂಕಲನ: ಪ್ರತೀಕ್ ಶೆಟ್ಟಿ; ಚಿತ್ರ : 777 ಚಾರ್ಲಿ
- 19) ಅತ್ಯುತ್ತಮ ಬಾಲ ನಟ: ಮಾಸ್ಟರ್ ಅತೀಶ್ ಶೆಟ್ಟಿ; ಚಿತ್ರ: ಕೇಕ್
- 20) ಅತ್ಯುತ್ತಮ ಬಾಲ ನಟಿ: ಬೇಬಿ ಭೈರವಿ
- 21) ಅತ್ಯುತ್ತಮ ಕಲಾನಿರ್ದೇಶನ: ರವಿ ಸಂತೇಹಕ್ಲು
- 22) ಅತ್ಯುತ್ತಮ ಹಿನ್ನೆಲೆ ಗಾಯಕ: ಅನೀಶ್ ಕೇಶವ್ ರಾವ್
- 23) ಅತ್ಯುತ್ತಮ ಹಿನ್ನೆಲೆ ಗಾಯಕಿ: ಸಹನಾ ಎಂ. ಭಾರದ್ವಾಜ್
- 24) ಅತ್ಯುತ್ತಮ ಗೀತ ರಚನೆ: ನಾಗಾರ್ಜುನ ಶರ್ಮಾ
- 25) ತೀರ್ಪುಗಾರರ ವಿಶೇಷ
- A) ಪ್ರಶಸ್ತಿ: ಚಿತ್ರ: ಭೈರವಿ
- B) ವಸ್ತ್ರವಿನ್ಯಾಸ: ಯೋಗಿ ಜಿ ರಾಜು
- C) ಪ್ರಸಾಧನ: ಶಿವಕುಮಾರ್
- ಅತ್ಯುತ್ತಮ ನಿರ್ಮಾಣ ನಿರ್ವಾಹಕ: ಶಿವಕುಮಾರ್ ಎಸ್.



'ಲ್ಯಾಂಡ್‌ಲಾರ್ಡ್'ನಲ್ಲಿ ಹೀಗಿದ್ದಾರೆ ರಚಿತಾ

'ಕಾಟೇರ' ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ, 'ದುನಿಯಾ' ವಿಜಯ್ ನಟಿಸಿರುವ 'ಲ್ಯಾಂಡ್‌ಲಾರ್ಡ್' ಸಿನಿಮಾದಲ್ಲಿ ನಾಯಕಿಯಾಗಿ ರಚಿತಾ ರಾಮ್ ಬಣ್ಣಹಚ್ಚಿದ್ದು, ಅವರ ಪಾತ್ರದ ಲುಕ್ ಶುಕ್ರವಾರ(ಅ.3) ಬಿಡುಗಡೆಯಾಗಿದೆ.

ಹಿಂದೆಂದೂ ಮಾಡಿರದಂಥ ಒಂದು ಭಿನ್ನವಾದ ಪಾತ್ರದಲ್ಲಿ ರಚಿತಾ ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. 18 ವರ್ಷದ ಮಗಳಿರುವ ತಾಯಿಯಾಗಿ ಅವರಿಲ್ಲಿ ಬಣ್ಣಹಚ್ಚಿದ್ದು, ಚಿತ್ರತಂಡ ಇವರಿಗೆ 'ಲೇಡಿ ಸೂಪರ್‌ಸ್ಟಾರ್' ಎಂಬ ಬಿರುದು ನೀಡಿ ಜನ್ಮದಿನದ ಶುಭಾಶಯ ಕೋರಿದೆ. ಎಲೆಅಡಿಕೆ ಜಗಿಯುತ್ತಾ, ಕೈಯಲ್ಲೊಂದು ಕತ್ತಿ ಹಿಡಿದು ರಚಿತಾ ಪ್ರವೇಶಿಸುವ ಟೀಸರ್ ಕೂಡಾ ಬಿಡುಗಡೆಗೊಂಡಿದೆ.

ಸಾರಥಿ ಫಿಲಂಸ್ ಬ್ಯಾನರ್‌ನಡಿಯಲ್ಲಿ ಹೇಮಂತ್ ಗೌಡ ಕೆ.ಎಸ್ ಹಾಗೂ ಕೆ.ವಿ ಸತ್ಯಪ್ರಕಾಶ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ವರ್ಷಾಂತ್ಯಕ್ಕೆ ಸಿನಿಮಾ ತೆರೆಕಾಣುವ ಸಾಧ್ಯತೆ ಇದೆ. ಚಿತ್ರದಲ್ಲಿ ವಿಜಯ್ ಅವರ ಮಗಳಾದ ರಿತನ್ಯ ನಟಿಸಿದ್ದು, ಸ್ವತಂತ್ರ ಭೂಮಿಯ ಕಲ್ಪನೆ, ಶಿಕ್ಷಣ, ಕೂಲಿಗೆ ತಕ್ಕ ಕಾಸು ಎಂಬ ವಿಷಯಗಳ ಕುರಿತು ಚಿತ್ರ ಕಥಾಹಂದರವಿದೆ.

ಚುನಾವಣಾ ಆಯೋಗದಿಂದ ಪರಿಶೀಲನೆ

ಬಿಹಾರ: ಮುಖ್ಯ ಆಯುಕ್ತರ ನೇತೃತ್ವದ ತಂಡದಿಂದ ಶನಿವಾರ, ಭಾನುವಾರ ಸಭೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಪಟ್ನಾ: ಬಿಹಾರ ವಿಧಾನಸಭಾ ಚುನಾವಣೆ ಸಂಬಂಧ ನಡೆದಿರುವ ಸಿದ್ಧತೆ ಕುರಿತು ಪರಿಶೀಲನೆ ನಡೆಸಲು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದಲ್ಲಿ ಚುನಾವಣಾ ಆಯೋಗದ ತಂಡ ಶನಿವಾರದಿಂದ ಎರಡು ದಿನಗಳವರೆಗೆ ಪಟ್ನಾಗೆ ಭೇಟಿ ನೀಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



243 ಸದಸ್ಯರನ್ನು ಒಳಗೊಂಡಿರುವ ಬಿಹಾರ ವಿಧಾನಸಭೆಯ ಅವಧಿ ನ. 22ಕ್ಕೆ ಕೊನೆಗೊಳ್ಳಲಿದೆ. ಹೀಗಾಗಿ ಆಯೋಗವು ಶೀಘ್ರದಲ್ಲಿಯೇ ಬಿಹಾರ ವಿಧಾನಸಭಾ ಚುನಾವಣೆಗೆ ದಿನಾಂಕ ನಿಗದಿಪಡಿಸುವ ನಿರೀಕ್ಷೆಯಿದೆ.

ರಾಜ್ಯದಲ್ಲಿ ಈ ತಿಂಗಳ ಅಂತ್ಯ ಮತ್ತು ನವೆಂಬರ್‌ನಲ್ಲಿ ಹಲವು ಹಂತಗಳಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಚುನಾವಣಾ ವೇಳಾಪಟ್ಟಿ ಪ್ರಕಟಿಸುವುದಕ್ಕೂ ಮುನ್ನ ಆಯೋಗದ ಅಧಿಕಾರಿಗಳ ತಂಡ ಚುನಾವಣೆ ನಡೆಯುವ ರಾಜ್ಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ವಾಡಿಕೆಯಾಗಿದೆ. ಇದರ ಭಾಗವಾಗಿಯೇ ಶನಿವಾರ ಮತ್ತು ಭಾನುವಾರ ಆಯೋಗದ ಅಧಿಕಾರಿಗಳು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.

ಈ ವೇಳೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಹಿರಿಯ ಪೊಲೀಸ್ ಮತ್ತು ಆಡಳಿತ ಅಧಿಕಾರಿಗಳು ಹಾಗೂ ಹಿರಿಯ ಚುನಾವಣಾ ಅಧಿಕಾರಿಗಳ ಜತೆಗೆ ಮುಖ್ಯ ಚುನಾವಣಾ ಆಯುಕ್ತರ ನೇತೃತ್ವದ ತಂಡ ಪರಿಶೀಲನಾ ಸಭೆ ನಡೆಸಲಿದೆ.

ಬಿಜೆಪಿ, ಕಾಂಗ್ರೆಸ್, ಜೆಡಿ(ಯು), ಆರ್‌ಜೆಡಿ ಮತ್ತು ಸಿಪಿಐ(ಎಂಎಲ್) ಪಕ್ಷಗಳು ತಲಾ ಮೂವರು ಪ್ರತಿನಿಧಿಗಳನ್ನು ಸಭೆಗೆ ಕಳುಹಿಸಬಹುದಾಗಿದೆ. ಚುನಾವಣಾ ಆಯುಕ್ತರಾದ ವಿವೇಕ್ ಜೋಶಿ, ಎಸ್.ಎಸ್.ಸಂಧು ಅವರೂ ಆಯೋಗದ ತಂಡದಲ್ಲಿರಲಿದ್ದಾರೆ.

ಆಯೋಗವು ಬಿಹಾರ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಜೂನ್‌ನಲ್ಲಿ ಕೈಗೊಂಡಿತ್ತು. ಅದನ್ನು ಆಧರಿಸಿ ಅಂತಿಮ ಮತದಾರರ ಪಟ್ಟಿಯನ್ನು ಸೆ.30ರಂದು ಪ್ರಕಟಿಸಿದೆ. ಅದರ ಪ್ರಕಾರ ರಾಜ್ಯದಲ್ಲಿ 7,42 ಕೋಟಿ ಮತದಾರರಿದ್ದಾರೆ.

ಚುನಾವಣಾ ವೀಕ್ಷಕರು ಪ್ರಜಾಪ್ರಭುತ್ವದ ದಾರಿದೀಪ: ಮುಖ್ಯ ಚುನಾವಣಾ ಆಯುಕ್ತ

ಚುನಾವಣಾ ವೀಕ್ಷಕರನ್ನು 'ಪ್ರಜಾಪ್ರಭುತ್ವದ ದಾರಿದೀಪಗಳು' ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಬಣ್ಣಿಸಿದರು.

ಬಿಹಾರ ವಿಧಾನಸಭಾ ಚುನಾವಣೆ ಮತ್ತು ಇತರ ರಾಜ್ಯಗಳಲ್ಲಿನ ಕೆಲ ಕ್ಷೇತ್ರಗಳ ಉಪ ಚುನಾವಣಾ ಕಾರ್ಯಕ್ಕೆ ನೇಮಕವಾಗಿರುವ 425 ಚುನಾವಣಾ ವೀಕ್ಷಕರ ಜತೆ ಶುಕ್ರವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಚುನಾವಣಾ ವೀಕ್ಷಕರು, ಖರ್ಚು–ವೆಚ್ಚ ವೀಕ್ಷಕರು ಆಯೋಗದ ಕಿವಿ ಮತ್ತು ಕಣ್ಣಿದ್ದಂತೆ. ಅವರು ಚುನಾವಣಾ ನಿಯಮ, ಕಾನೂನು, ಮಾರ್ಗಸೂಚಿಗಳನ್ನು ಚೆನ್ನಾಗಿ ತಿಳಿದುಕೊಂಡು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. 425 ಅಧಿಕಾರಿಗಳ ಪೈಕಿ 287 ಐಎಎಸ್, 58 ಐಪಿಎಸ್, 80 ಐಆರ್‌ಎಸ್/ಐಆರ್‌ಎಎಸ್/ಐಸಿಎಎಸ್ ಅಧಿಕಾರಿಗಳಾಗಿದ್ದಾರೆ.

ಬಿಹಾರ: ಜೆಡಿಯು ಶಾಸಕ ಆರ್‌ಜೆಡಿಗೆ

ಖಗಾಡಿಯಾ (ಬಿಹಾರ) (ಪಿಟಿಐ): ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಶಾಸಕ ಸಂಜೀವ್ ಕುಮಾರ್ ಅವರು ಶುಕ್ರವಾರ ಆಡಳಿತ ಪಕ್ಷ ತೊರೆದು, ವಿರೋಧ ಪಕ್ಷವಾದ ಆರ್‌ಜೆಡಿ ಸೇರಿದ್ದಾರೆ.

ಜೆಡಿಯು ಜತೆಗಿನ ಎರಡು ದಶಕಗಳ ನಂಟನ್ನು ಅಂತ್ಯಗೊಳಿಸಿರುವ ಪರಬತ್ತ ವಿಧಾನಸಭಾ ಕ್ಷೇತ್ರದ ಶಾಸಕ ಸಂಜೀವ್ ಅವರು, ಖಗಾಡಿಯಾದಲ್ಲಿ ನಡೆದ ರ್‍ಯಾಲಿಯಲ್ಲಿ ಆರ್‌ಜೆಡಿ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾದರು.

ಮುಖ್ಯಮಂತ್ರಿ ನಿತೀಶ್ ಅವರು ಕಳೆದ ವರ್ಷ ಎನ್‌ಡಿಎ ಕೂಟಕ್ಕೆ ಹಿಂದಿರುಗಿದಾಗ, ಅಸಮಾಧಾನ ವ್ಯಕ್ತಪಡಿಸಿದ್ದ ಸಂಜೀವ್ ಅವರು ಜೆಡಿಯುನಲ್ಲಿ ಬಿರುಕು ಮೂಡಿಸಲು ಯತ್ನಿಸಿದ್ದರು ಎಂಬ ಆರೋಪಗಳಿವೆ. ಆಗ ಅವರು ತೇಜಸ್ವಿ ಯಾದವ್ ಅವರನ್ನು ಬಿಹಾರದ ಪ್ರಬಲ ನಾಯಕ ಎಂದು ಕೊಂಡಾಡಿದ್ದರು.

ತೆರಿಗೆಗೆ ಜೈನರ ಕೊಡುಗೆ ಶೇ 24: ರಾಜನಾಥ್ ಸಿಂಗ್

ಹೈದರಾಬಾದ್ (ಪಿಟಿಐ): ಭಾರತದ ಜನಸಂಖ್ಯೆಯಲ್ಲಿ ಶೇ 0.5ರಷ್ಟಿರುವ ಜೈನ ಸಮುದಾಯದಿಂದ ಶೇ 24ರಷ್ಟು ತೆರಿಗೆ ಸಂಗ್ರಹವಾಗುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶುಕ್ರವಾರ ಹೇಳಿದ್ದಾರೆ.

ಮೂರು ದಿನಗಳ ಜೆಐಟಿಒ ಕನೆಕ್ಟ್ 2025 (ಜೈನ ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆ) ಅಧಿವೇಶನ ಉದ್ಘಾಟಿಸಿ ಮಾತನಾಡಿದ ಅವರು, ಜೈನ ಸಮುದಾಯವು ಜಗತ್ತಿನ ಅತ್ಯಂತ ಪರಿಶ್ರಮ ಜೀವಿಗಳಿರುವ ಸಮೃದ್ಧ ಸಮಾಜವೆಂದು ಪರಿಗಣಿಸಲಾಗಿದೆ ಎಂದು ಸಿಂಗ್ ಅವರು ತಿಳಿಸಿದರು.

ಈ ಸಮುದಾಯವು ಭಾರತೀಯ ಸಂಸ್ಕೃತಿಯೊಂದಿಗೆ ಆಳವಾಗಿ ಬೇರೂರಿದೆ. ಅದರ ಇತಿಹಾಸವು ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಉನ್ನತಿಗೆ ಅಮೂಲ್ಯ ಕೊಡುಗೆ ನೀಡಿದೆ ಎಂದು ಅವರು ಹೇಳಿದರು.

ಭಾರತದ ಆರ್ಥಿಕತೆಯಲ್ಲಿ ಜೈನ ಸಮುದಾಯದ ಕೊಡುಗೆ ಮಹತ್ವದ್ದು. ಔಷಧ, ಶಿಕ್ಷಣ ಮತ್ತು ವಾಯುಯಾನ ಕ್ಷೇತ್ರದಲ್ಲೂ ಜೈನರು ಮುಂದಿದ್ದಾರೆ ಎಂದು ಸಿಂಗ್ ಹೇಳಿದರು.



> ಪಾಕಿಸ್ತಾನ ವಿರುದ್ಧದ ದಾಳಿ ವೇಳೆ ಭಾರತ ಧರ್ಮವನ್ನು ನೋಡಿಲ್ಲ. ಪ್ರಜೆಗಳ ರಕ್ಷಣೆ, ದೇಶದ ಏಕತೆ– ಸಮಗ್ರತೆಗಾಗಿ ಯಾವುದೇ ಗಡಿ ದಾಟಬಲ್ಲದು
> **ರಾಜನಾಥ್ ಸಿಂಗ್**, ರಕ್ಷಣಾ ಸಚಿವ

ಗಾಯಕ ಜುಬಿನ್ ಸಾವಿನ ಪ್ರಕರಣ ಮತ್ತಿಬ್ಬರು 14 ದಿನ ಪೊಲೀಸರ ವಶಕ್ಕೆ

ಗುವಾಹಟಿ (ಪಿಟಿಐ): ಜನಪ್ರಿಯ ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿರುವ 'ಗರ್ಗ್ ಬ್ಯಾಂಡ್' ತಂಡದ ಸದಸ್ಯರಾದ ಶೇಖರ್‌ಜ್ಯೋತಿ ಗೋಸ್ವಾಮಿ ಮತ್ತು ಅಮೃತಪ್ರಭಾ ಮಹಾಂತ ಅವರನ್ನು 14 ದಿನಗಳವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿ ಇಲ್ಲಿನ ನ್ಯಾಯಾಲಯ ಶುಕ್ರವಾರ ಆದೇಶಿಸಿದೆ.

ಹೆಚ್ಚಿನ ವಿಚಾರಣೆ ಸಲುವಾಗಿ ಪೊಲೀಸ್ ವಶಕ್ಕೆ ಒಪ್ಪಿಸುವಂತೆ ಮಾಡಿದ್ದ ಮನವಿಯನ್ನು ಕಾಮರೂಪ ಜಿಲ್ಲೆಯ ಸಿಜೆಎಂ ನ್ಯಾಯಾಧೀಶರು ಮಾನ್ಯ ಮಾಡಿದ್ದಾರೆ ಎಂದು ಅಸ್ಸಾಂ ಸಿಐಡಿ ವಿಶೇಷ ಡಿಜಿಪಿ ಮುನ್ನಾ ಪ್ರಸಾದ್ ಗುಪ್ತಾ ಮಾಹಿತಿ ನೀಡಿದ್ದಾರೆ.



ಜುಬಿನ್ ಗರ್ಗ್

ಈ ಪ್ರಕರಣದಲ್ಲಿ ಈಗಾಗಲೇ ಜುಬಿನ್ ಅವರ ವ್ಯವಸ್ಥಾಪಕ ಸಿದ್ಧಾರ್ಥ್ ಶರ್ಮಾ ಮತ್ತು ಕಾರ್ಯಕ್ರಮದ ಆಯೋಜಕ ಶ್ಯಾಮಕಾನು ಮಹಾಂತ ಅವರನ್ನೂ ಬಂಧಿಸಲಾಗಿದ್ದು, ಅವರ ವಿರುದ್ಧ ಕೊಲೆ ಆರೋಪ ಹೊರಿಸಲಾಗಿದೆ. ಅವರೂ 14 ದಿನಗಳವರೆಗೆ ಪೊಲೀಸ್ ವಶದಲ್ಲಿದ್ದಾರೆ. ಈ ನಾಲ್ವರೂ ಆರೋಪಿಗಳ ವಿಚಾರಣೆ ನಡೆದಿದೆ ಎಂದು ಅವರು ವಿವರಿಸಿದ್ದಾರೆ.

ಕರೂರು ಕಾಲ್ತುಳಿತ: ಸಿಬಿಐ ತನಿಖೆಗೆ ಕೋರಿದ್ದ ಅರ್ಜಿ– ಹೈಕೋರ್ಟ್ ನಿರಾಕರಣೆ

ಚೆನ್ನೈ (ಪಿಟಿಐ): ಚಿತ್ರನಟ, ಟಿವಿಕೆ ಪಕ್ಷದ ಅಧ್ಯಕ್ಷ ವಿಜಯ್ ರ್‍ಯಾಲಿಯ ವೇಳೆ ನಡೆದ ಕಾಲ್ತುಳಿತ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆಗೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಕಾಲ್ತುಳಿತ ಘಟನೆಗೆ ಸಂಬಂಧಿಸಿ ಸರ್ಕಾರದ ನಿರ್ಲಕ್ಷ್ಯ ಸೇರಿದಂತೆ ಹಲವು ಅನುಮಾನಗಳು ಇವೆ ಎಂದು ಬಿಜೆಪಿ ನಾಯಕಿ ಉಮಾ ಆನಂದ್ ಅವರು ನ್ಯಾಯಾಲಯದ ಮೊರೆ ಹೋಗಿದ್ದರು.

ಅರ್ಜಿಯ ವಿಚಾರಣೆಗೆ ನಿರಾಕರಿಸಿದ ವಿಭಾಗೀಯ ಪೀಠವು, ಹೈಕೋರ್ಟ್‌ನ ಮದುರೈ ಪೀಠಕ್ಕೆ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ.

'ಎಸ್‌ಐಟಿ ರಚಿಸಿ': ಕಾಲ್ತುಳಿತ ಪ್ರಕರಣದ ತನಿಖೆ ನಡೆಸಲು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚನೆ ಮಾಡುವಂತೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿ ಆದೇಶ ಹೊರಡಿಸಿದೆ. ಉತ್ತರ ವಲಯದ ಐಜಿಪಿ ಅಸ್ರಾ ಗರ್ಗ್ ಅವರ ನೇತೃತ್ವದಲ್ಲಿ ತಂಡ ರಚಿಸಲು ಸೂಚಿಸಿದೆ.

ಸಂಕ್ಷಿಪ್ತ ಸುದ್ದಿ

ಪಂಜಾಬ್: ಐಎಸ್‌ಐ ನಂಟು ಹೊಂದಿದ್ದ ವ್ಯಕ್ತಿ ಸೆರೆ

ಚಂಡೀಗಢ (ಪಿಟಿಐ): ಪಾಕಿಸ್ತಾನ ಗುಪ್ತಚರ ಸಂಸ್ಥೆಯ (ಐಎಸ್‌ಐ) ಏಜೆಂಟ್‌ಗಳೊಂದಿಗೆ ಸಂಪರ್ಕದಲ್ಲಿದ್ದ ಪಂಜಾಬ್ ಮೂಲದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

'ತರಣ್‌ತರಣ್ ನಿವಾಸಿ ರವೀಂದರ್ ಸಿಂಗ್ ಅವರನ್ನು ಬಂಧಿಸಲಾಗಿದ್ದು, ಎರಡು ಗ್ರೆನೇಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. 'ಐಎಸ್‌ಐ ಜೊತೆ ನಂಟು ಹೊಂದಿದ್ದ ಬಂಧಿತ ಆರೋಪಿ ಗಡಿಯಾಚೆಯಿಂದ ಸರಕುಗಳನ್ನು ಪಡೆಯುತ್ತಿದ್ದುದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದೆ. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

₹3.5 ಲಕ್ಷಕ್ಕೆ ಬೇಡಿಕೆ ಅಧಿಕಾರಿ ಬಂಧನ

ನವದೆಹಲಿ (ಪಿಟಿಐ): ವಾಯುನೆಲೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಸಂಬಂಧ ಪೂರೈಕೆ ಆದೇಶಪತ್ರ ನೀಡಲು ₹3.5 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದಡಿ ರಕ್ಷಣಾ ಪಡೆಗಳ ಲೆಕ್ಕಪತ್ರ ಮಹಾನಿಯಂತ್ರಕ ಅಶೋಕ್ ಕುಮಾರ್ ಜಾದವ್ ಎಂಬವರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

₹2.5 ಕೋಟಿ ಮೊತ್ತದ ಗುತ್ತಿಗೆ ನೀಡಲು ₹4 ಲಕ್ಷ ಲಂಚಕ್ಕೆ ಅಶೋಕ್ ಕುಮಾರ್ ಜಾದವ್ ಹಾಗೂ ವಾಯುಪಡೆಯ ಸಾರ್ಜೆಂಟ್ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿ ಸಿ.ಸಿ.ಟಿ.ವಿ ಕ್ಯಾಮೆರಾ ಕಂಪನಿ ಮಾಲೀಕರು ಸಿಬಿಐ ಅಧಿಕಾರಿಗಳಿಗೆ ದೂರು ನೀಡಿದ್ದರು. ಆರೋಪಿಯನ್ನು ಅಹಮದಾಬಾದ್ ವಿಶೇಷ ನ್ಯಾಯಾಧೀಶರ ಎದುರು ಹಾಜರು ಪಡಿಸಿದ್ದು, ಅ.4ರವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ವಾಂಗ್ಚುಕ್ ಬಿಡುಗಡೆ– 'ಸುಪ್ರೀಂ'ಗೆ ಮೊರೆ

ನವದೆಹಲಿ (ಪಿಟಿಐ): ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಹೋರಾಡಿ ಬಂಧನದಲ್ಲಿರುವ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರ ಬಿಡುಗಡೆಗೆ ಕೋರಿ, ಅವರ ಪತ್ನಿ ಗೀತಾಂಜಲಿ ಆಂಗ್ಮೊ ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ.

ರಾಷ್ಟ್ರೀಯ ಭದ್ರತಾ ಕಾಯ್ದೆಯ (ಎನ್‌ಎಸ್‌ಎ) ಅನ್ವಯ ಸೆಪ್ಟೆಂಬರ್ 26ರಂದು ವಾಂಗ್ಚುಕ್ ಅವರನ್ನು ಬಂಧಿಸಲಾಗಿದ್ದು, ರಾಜಸ್ಥಾನದ ಜೋಧಪುರ ಜೈಲಿನಲ್ಲಿರಿಸಲಾಗಿದೆ. ವಾಂಗ್ಚುಕ್ ಅವರ ಬಂಧನವನ್ನು ಪ್ರಶ್ನಿಸಿರುವ ಅರ್ಜಿಯು, ಅವರ ತ್ವರಿತ ಬಿಡುಗಡೆಗೆ ಮನವಿ ಮಾಡಿದೆ. ಅಲ್ಲದೆ ಅವರ ವಿರುದ್ಧ ಎನ್‌ಎಸ್‌ಎ ಕಾಯ್ದೆಯಡಿ ಕ್ರಮ ತೆಗೆದುಕೊಂಡಿರುವುದನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಧಾನಿ ನರೇಂದ್ರ ಮೋದಿ ಚಾಲನೆ; ಬಿಹಾರಕ್ಕೆ ಹೆಚ್ಚಿನ ಒತ್ತು

ಯೋಜನೆಗಳ ಅನಾವರಣ ಇಂದು

ನವದೆಹಲಿ (ಪಿಟಿಐ): ಯುವ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ₹62 ಸಾವಿರ ಕೋಟಿ ವೆಚ್ಚದ ವಿವಿಧ ಕಾರ್ಯಕ್ರಮಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಅನಾವರಣ ಮಾಡಲಿದ್ದಾರೆ ಎಂದು ಅವರ ಕಚೇರಿ ತಿಳಿಸಿದೆ.

ಕೇಂದ್ರ ಸರ್ಕಾರ ಪ್ರಾಯೋಜಕತ್ವದ ₹60 ಸಾವಿರ ಕೋಟಿ ಹೂಡಿಕೆಯ 'ಪಿಎಂ–ಸೇತು' (ಉನ್ನತೀಕರಿಸಿದ ಐಟಿಐಗಳ ಮೂಲಕ ಪ್ರಧಾನ ಮಂತ್ರಿ ಕೌಶಲ ಹಾಗೂ ಉದ್ಯೋಗದ ರೂಪಾಂತರ) ಯೋಜನೆಗೂ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ.

'ಇದರ ಅನ್ವಯ, ದೇಶದ ಒಂದು ಸಾವಿರ ಸರ್ಕಾರಿ ಐಟಿಐಗಳನ್ನು ಮೇಲ್ದರ್ಜೆಗೇರಿಸಲಾಗುತ್ತದೆ. ಪ್ರತಿ ಘಟಕವೂ ಅತ್ಯಾಧುನಿಕ ಮೂಲಸೌಕರ್ಯ, ಆಧುನಿಕ ವ್ಯಾಪಾರ ಪದ್ಧತಿ, ಡಿಜಿಟಲ್ ಕಲಿಕಾ ವ್ಯವಸ್ಥೆ ಹಾಗೂ ಇನ್‌ಕ್ಯುಬೇಶನ್ ಸೌಕರ್ಯವನ್ನು ಒಳಗೊಂಡಿರಲಿದೆ. ಮಾರುಕಟ್ಟೆ ಬೇಡಿಕೆ ಆಧರಿಸಿ ಕಲಿಕಾರ್ಥಿಗಳಿಗೆ ಕೌಶಲ ಕಲಿಸಿಕೊಡಲಾಗುತ್ತದೆ. ಇದಲ್ಲದೇ, ನಾವೀನ್ಯ ಕೇಂದ್ರಗಳು, ತರಬೇತಿ ವ್ಯವಸ್ಥೆ, ಉತ್ಪಾದನಾ ಘಟಕ ಹಾಗೂ ಸ್ಥಳ ನಿಯುಕ್ತಿ ಸೇವೆಯೂ ಇರಲಿದೆ' ಎಂದು ಪಿಎಂಒ ತಿಳಿಸಿದೆ.



ನರೇಂದ್ರ ಮೋದಿ

'ಪಿಎಂ–ಸೇತು' ಯೋಜನೆಯು ಐಟಿಐ ಕಲಿಕಾ ಪರಿಸರ ವ್ಯವಸ್ಥೆಯನ್ನೇ ಮರು ವ್ಯಾಖ್ಯಾನಿಸಲಿದೆ. ವಿಶ್ವಬ್ಯಾಂಕ್ ಹಾಗೂ ಏಷ್ಯನ್ ಡೆವಲಪ್‌ಮೆಂಟ್ ಆರ್ಥಿಕ ಸಹಕಾರದೊಂದಿಗೆ ಸರ್ಕಾರ ಒಡೆತನದ ಸಂಸ್ಥೆಗಳನ್ನು ಕೈಗಾರಿಕಾ ಸಂಸ್ಥೆಗಳು ನಿರ್ವಹಣೆ ಮಾಡಲಿವೆ' ಎಂದು ತಿಳಿಸಲಾಗಿದೆ.

'ಮೊದಲ ಹಂತದಲ್ಲಿ ಬಿಹಾರದ ದರ್ಭಂಗ ಹಾಗೂ ಪಟ್ನಾದ ಐಟಿಐ ಕೇಂದ್ರಗಳಿಗೆ ವಿಶೇಷ ಆದ್ಯತೆ ನೀಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದೇ ವೇಳೆ ದೇಶದ 34 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿರುವ 400 ನವೋದಯ ವಿದ್ಯಾಲಯ ಹಾಗೂ 200 ಏಕಲವ್ಯ ಮಾದರಿ ವಸತಿಶಾಲೆಗಳಲ್ಲಿ ನಿರ್ಮಿಸಲಾದ 1,200 ವೃತ್ತಿಪರ ಕೌಶಲ ಕೇಂದ್ರಗಳನ್ನು ಪ್ರಧಾನಿ ಮೋದಿ ಉದ್ಘಾಟಿಸಲಿದ್ದಾರೆ.


ಬಿಹಾರದಲ್ಲಿ ಲೋಕಾರ್ಪಣೆ ಆಗಲಿರುವ ಯೋಜನೆಗಳ ವಿವರ

- 'ಮುಖ್ಯಮಂತ್ರಿ ನಿಶ್ಚಯ್ ಸ್ವಯಂ ಸಹಾಯತಾ ಭತ್ತಾ' (ಮುಖ್ಯಮಂತ್ರಿ ನಿಶ್ಚಯ ಸ್ವಯಂ ಸಹಾಯತೆ ಭತ್ಯೆ) ಯೋಜನೆಗೆ ಚಾಲನೆ–ಬಿಹಾರದ 5 ಲಕ್ಷ ಪದವೀಧರರಿಗೆ ಮಾಸಿಕ ₹1 ಸಾವಿರ ನೆರವು, ಉಚಿತ ಕೌಶಲ ತರಬೇತಿ ವ್ಯವಸ್ಥೆ
- ಬಿಹಾರದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಅಕಾಡೆಮಿಕ್, ಸಂಶೋಧನಾ ಕೇಂದ್ರಗಳ ಸ್ಥಾಪನೆ
- ಪಟ್ನಾದಲ್ಲಿ ಹೊಸತಾಗಿ ನಿರ್ಮಿಸಿದ ಎನ್‌ಐಟಿ ಕ್ಯಾಂಪಸ್ ಲೋಕಾರ್ಪಣೆ
- 4 ಸಾವಿರ ಮಂದಿಗೆ ಸರ್ಕಾರಿ ಉದ್ಯೋಗದ ನೇಮಕಾತಿ ಪತ್ರ ವಿತರಣೆ
- ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ₹450 ಕೋಟಿ ವಿದ್ಯಾರ್ಥಿವೇತನ ವಿತರಣೆ

ಜಿಬಿಎ: ನ.1ರಿಂದ ಮತದಾರರ ಪಟ್ಟಿ ಪರಿಷ್ಕರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಚುನಾವಣಾ ಆಯೋಗವು ನ.1ರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಆರಂಭಿಸಲು ತೀರ್ಮಾನಿಸಿದೆ.



ಜಿಬಿಎ ಮತದಾರರ ಪಟ್ಟಿಯ ಪರಿಷ್ಕರಣಾ ಕಾರ್ಯವನ್ನು ನ.30ರ ಒಳಗೆ ಮುಗಿಸಿ, ಮೀಸಲಾತಿ ಪಟ್ಟಿಯನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಹಾಗಾಗಿ, ಭಾರತ ಚುನಾವಣಾ ಆಯೋಗ ಕರ್ನಾಟಕ ದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವನ್ನು ಆರಂಭಿಸುವುದನ್ನು ಕಾದು ನೋಡದೆ ತನ್ನ ಕಾರ್ಯ ಆರಂಭಿಸಲು ರಾಜ್ಯ ಚುನಾವಣಾ ಆಯೋಗ ಮುಂದಾಗಿದೆ.

ಒಂದು ವೇಳೆ ನವೆಂಬರ್‌ನಲ್ಲೇ ಎಸ್‌ಐಆರ್ ಆರಂಭವಾದರೆ ಎರಡು ಕಾರ್ಯಗಳನ್ನು ಒಟ್ಟಿಗೆ ನಿಭಾಯಿಸಬೇಕಾದ ಅನಿವಾರ್ಯಕ್ಕೆ ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಸಿಲುಕಬಹುದು. ಹಾಗಾಗಿಯೇ, ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಅವರು ಸೆಪ್ಟೆಂಬರ್ 23ರಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದು ಕರ್ನಾಟಕದಲ್ಲಿ ಎಸ್‌ಐಆರ್ ಮುಂದೂಡಲು ವಿನಂತಿಸಿದ್ದರು. ಆದರೆ, ಇದುವರೆಗೂ ಪ್ರತಿಕ್ರಿಯೆ ಬಂದಿಲ್ಲ.

ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಾಗಿ ಮತದಾರರ ಪಟ್ಟಿ ಪರಿಷ್ಕರಣೆಯ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ರಾಜ್ಯ ಚುನಾವಣಾ ಆಯೋಗಕ್ಕೆ ನೀಡಿದೆ.

‘ಎಸ್‌ಐಆರ್ ಕುರಿತ ಭಾರತ ಚುನಾವಣಾ ಆಯೋಗದ ಪ್ರತಿಕ್ರಿಯೆಗೆ ಕಾಯುವುದಿಲ್ಲ. ಅವರಿಗೆ ತಕ್ಷಣವೇ ಕಾರ್ಯ ಆರಂಭಿಸಬೇಕು ಎನ್ನುವ ಒತ್ತಡವಿಲ್ಲ. ಸುಪ್ರೀಂ ಕೋರ್ಟ್ ಸೂಚನೆಯಂತೆ ಜಿಬಿಎ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಆರಂಭಿಸುತ್ತಿದ್ದೇವೆ. ರಾಜ್ಯ ಸರ್ಕಾರ ಅಗತ್ಯ ಸಿಬ್ಬಂದಿ ಒದಗಿಸಬೇಕು. ನೀಡದಿದ್ದರೆ ಕೋರ್ಟ್ ಗಮನಕ್ಕೆ ತರುತ್ತೇವೆ. ಅಧಿಕಾರಿಗಳು ಸಹಕರಿಸದಿದ್ದರೆ ಅದನ್ನೂ ವರದಿ ಮಾಡುತ್ತೇವೆ’ ಎಂದು ಜಿ.ಎಸ್. ಸಂಗ್ರೇಶಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಕಾಡಂಚಿನ ಗ್ರಾಮಗಳಿಗೆ ದೊರಕದ ವಿದ್ಯುತ್

ಕುದುರೆಮುಖ: ವಿದ್ಯುತ್ ಮಾರ್ಗಕ್ಕೆ ವನ್ಯಜೀವಿ ಮಂಡಳಿ ನಿರಾಕರಣೆ

● ಸಿ.ಎಂ ಸೂಚನೆ ನೀಡಿದರೂ ವಿದ್ಯುತ್ ಸಂಪರ್ಕ ಮರೀಚಿಕೆ

● ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಗೆ ಬರುವ ಮಲೆನಾಡು–ಕರಾವಳಿ ಭಾಗದ ಮೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿನ ಅರಣ್ಯದಂಚಿನ ಆದಿವಾಸಿ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವುದಕ್ಕೆ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯು ನಿರಾಕರಿಸಿದೆ. ಇದರಿಂದ ಕೆಲವು ಕುಟುಂಬಗಳ ಮನೆಗಳಲ್ಲಿ ವಿದ್ಯುದ್ದೀಪ ಕಾಣಲು ಇನ್ನಷ್ಟು ದಿನ ಕಾಯಬೇಕಾಗಿದೆ.

ಹಾಡಿ, ಮಜಿರೆಯಂತಹ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸಭೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿದ್ಯುತ್ ಕಂಪನಿಗಳು ಇಂತಹ ಜನವಸತಿ ಪ್ರದೇಶಗಳನ್ನು ಗುರುತಿಸಿ ವಿದ್ಯುತ್ ಸಂಪರ್ಕ ನೀಡಲು ಕ್ರಮ ವಹಿಸಬೇಕು. ಇದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ ಅನುದಾನವನ್ನು ಬಳಸಬೇಕು ಎಂದು ಸೂಚನೆ ನೀಡಿದ್ದರು. ಆ ನಂತರವೂ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ ಪ್ರಗತಿ ಕಂಡಿಲ್ಲ.

ಈಗಾಗಲೇ ಹಲವು ಜಿಲ್ಲೆಗಳ ಹಾಡಿಗಳಲ್ಲಿ ವಿದ್ಯುತ್ ಸಂಪರ್ಕ ನೀಡುವ ಚಟುವಟಿಕೆ ನಡೆದಿದೆ. ಆದರೆ ಉಡುಪಿ ಜಿಲ್ಲೆಯ ಕಾರ್ಕಳ, ಹೆಬ್ರಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಹಂಚಿ ಹೋಗಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಏಳು ಹಾಡಿಗಳಿಗೆ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಅರಣ್ಯ ನಾಶ, ಪುನರ್ವಸತಿ ಯೋಜನೆಯ ಕಾರಣ ನೀಡಿರುವ ವನ್ಯಜೀವಿ ಮಂಡಳಿ ಸಂಪರ್ಕಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ.

ನಕ್ಸಲ್ ಪೀಡಿತ ಎಂಬ ಹಣೆಪಟ್ಟಿಯನ್ನು ಪೊಲೀಸ್ ಇಲಾಖೆಯಿಂದ ಅಂಟಿಸಿಕೊಂಡಿರುವ ಈ ಪ್ರದೇಶಗಳು ಈಗಲೂ ಅಗತ್ಯ ಮೂಲಸೌಕರ್ಯದಿಂದ ವಂಚಿತವಾಗಿವೆ. ಅರಣ್ಯದಂಚಿನ ಗ್ರಾಮಗಳಲ್ಲಿ ವಿದ್ಯುತ್, ರಸ್ತೆ ಸೌಲಭ್ಯ ಕಲ್ಪಿಸಬೇಕೆಂಬ ಸರ್ಕಾರದ ಸೂಚನೆ ಇದ್ದರೂ, ಸಂಪರ್ಕ ವಿಳಂಬವಾಗುತ್ತಿರುವುದಕ್ಕೆ ಸ್ಥಳೀಯರೂ ಬೇಸರ ವ್ಯಕ್ತಪಡಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಎಮ್ಮೆಗುಂಡಿ, ಯಾದಗಾರು, ಹೊರಾನೆ ಪ್ರದೇಶ, ಉಡುಪಿ ಜಿಲ್ಲೆ ಹೆಬ್ರಿ ತಾಲ್ಲೂಕಿನ ತಿಂಗಳಮಕ್ಕಿ ಮತ್ತು ಮೂರಂಟೆಬೈಲು, ಕಾರ್ಕಳ ತಾಲ್ಲೂಕಿನ ಕನ್ಯಾಲ, ಬರ್ಕಳ, ಈದು ವ್ಯಾಪ್ತಿ ಹಾಗೂ ಬೆಳ್ತಂಗಡಿ ಭಾಗದಲ್ಲಿ ವಿದ್ಯುತ್ ಸಂಪರ್ಕ ನೀಡುವ ಪ್ರಸ್ತಾವ ದಶಕದಿಂದಲೂ ಇದೆ. ವಿದ್ಯುತ್ ಮಾರ್ಗಕ್ಕಾಗಿ ಅರಣ್ಯ ಕಡಿಯಬೇಕಾಗುತ್ತದೆ ಎನ್ನುವ ಆಕ್ಷೇಪವನ್ನು ಅರಣ್ಯ ಇಲಾಖೆ ಹಿಂದಿನಿಂದಲೂ ವ್ಯಕ್ತಪಡಿಸಲಾಗುತ್ತಿದೆ.

ಈಗಾಗಲೇ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ) ಗೌಡ್ಲು ಹಾಗೂ ಮಲೆಕುಡಿಯ ಆದಿವಾಸಿ ಕುಟುಂಬಗಳೇ ಹೆಚ್ಚಿರುವ ಈ ಭಾಗಗಳಿಗೆ 11 ಕೆವಿ ವಿದ್ಯುತ್ ಮಾರ್ಗ ಸ್ಥಾಪಿಸಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆ ರೂಪಿಸಿದೆ. ಆದರೆ, ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿರುವುದರಿಂದ ವನ್ಯಜೀವಿ ಮಂಡಳಿ ಅನುಮತಿ ಕಡ್ಡಾಯ.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಮಂಡಳಿಯ ಸ್ಥಾಯಿ ಸಮಿತಿ ಸಭೆಯಲ್ಲಿ ವಿದ್ಯುತ್ ಯೋಜನೆಗಳಿಗೆ ಅನುಮತಿ ನಿರಾಕರಿಸಲಾಗಿದೆ. ಭೂಮಿಯೊಳಗೆ ಕೇಬಲ್ ಅಳವಡಿಸಿ ವಿದ್ಯುತ್ ಸಂಪರ್ಕ ನೀಡಬಹುದೇ ಇಲ್ಲವೇ ಪರ್ಯಾಯ ಮಾರ್ಗ ರೂಪಿಸಬಹುದೇ ಎನ್ನುವುದನ್ನು ಪರಿಶೀಲಿಸಿ ವರದಿ ನೀಡುವಂತೆ ಇಲಾಖೆ ಹಾಗೂ ಮೆಸ್ಕಾಂಗೆ ಸೂಚನೆ ನೀಡಲಾಗಿದೆ.

ಈಗಾಗಲೇ ಕುದುರೆ ಮುಖ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ಪುನರ್ವಸತಿ ಯೋಜನೆ ನಡೆಯುತ್ತಿದೆ. ಈ ಕುಟುಂಬಗಳು ಪುನರ್ವಸತಿ ಯೋಜನೆಯಡಿ ಬಂದರೆ ಅರಣ್ಯದಲ್ಲಿ ವಿದ್ಯುತ್ ಮಾರ್ಗ ರೂಪಿಸುವ ಪ್ರಮೇಯವೇ ಬರುವುದಿಲ್ಲ. ಈ ಎಲ್ಲಾ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಬೇಕು ಎಂದು ಮಂಡಳಿ ಸೂಚಿಸಿದೆ.

‘ಕುದುರೆ ಮುಖ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯ ಕೆಲವು ಕಡೆ ವಿದ್ಯುತ್ ಮಾರ್ಗಕ್ಕೆ ವನ್ಯಜೀವಿ ಮಂಡಳಿ ಅನುಮತಿ ನೀಡಿಲ್ಲ. ಪರಿಸರ ಮಹತ್ವದ ಜತೆಗೆ ಈಗಾಗಲೇ ಜಾರಿಯಲ್ಲಿರುವ ಅರಣ್ಯ ಪುನರ್ವಸತಿ ಯೋಜನೆಯೂ ಇದಕ್ಕೆ ಕಾರಣವಿರಬಹುದು. ಪುನರ್ವಸತಿ ಯೋಜನೆಗೆ ಕೆಲವು ಕುಟುಂಬಗಳು ಒಪ್ಪಿಗೆ ನೀಡುತ್ತಿಲ್ಲ. ಅಂತವರ ಹೇಳಿಕೆ ದಾಖಲಿಸಿ ಅಗತ್ಯ ಇರುವವರಿಗೆ ವಿದ್ಯುತ್ ಸಂಪರ್ಕ ನೀಡಲು ಪರ್ಯಾಯ ಮಾರ್ಗಗಳ ಕುರಿತಾದ ವರದಿಯನ್ನು ಮಂಡಳಿಗೆ ಸಲ್ಲಿಸಲಾಗುತ್ತದೆ’ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ. ಶಿವರಾಮ ಬಾಬು ತಿಳಿಸಿದರು.

‘ಹಾಡಿ ವಿದ್ಯುದೀಕರಣ ಯೋಜನೆಗೆ ಮುಖ್ಯಮಂತ್ರಿ ಸೂಚಿಸಿದ ನಂತರ 7 ಹಾಡಿ, ಪ್ರಧಾನಮಂತ್ರಿ ಜುಗು ಯೋಜನೆಯಡಿ 9 ಮನೆಗಳನ್ನು ಗುರುತಿಸಿ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆ ನಡೆದಿದೆ. ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ. ಅರಣ್ಯ ಇಲಾಖೆ ಆಕ್ಷೇಪಣೆಗೂ ಉತ್ತರ ನೀಡಲಾಗುವುದು’ ಎಂದು ಮೆಸ್ಕಾಂ ತಾಂತ್ರಿಕ ನಿರ್ದೇಶಕ ಹರೀಶ್ ಕುಮಾರ್ ಮಾಹಿತಿ ನೀಡಿದರು.

‘ಸ್ಥಳೀಯ ವಾಸಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಅರಣ್ಯ ಇಲಾಖೆ ಪರ್ಯಾಯ ಮಾರ್ಗದೊಂದಿಗೆ ವಿದ್ಯುತ್ ಸಂಪರ್ಕಕ್ಕೆ ಅನುಮತಿ ಕೊಡಬೇಕು. ಬೇರೆ ಕಡೆ ನೀಡುವಾಗ ಇಲ್ಲಿನವರಿಗೆ ಈ ಸೌಲಭ್ಯ ಸಿಗಬೇಕು. ಅರಣ್ಯ ಇಲಾಖೆ ಪುನರ್ವಸತಿ ಯೋಜನೆ ಬೇಡ ಎಂದು ಅಲ್ಲೇ ಜೀವನ ನಡೆಸುವವರಿಗಾದರೂ ವಿದ್ಯುತ್ ಬೇಡವೇ’ ಎಂದು ಸ್ಥಳೀಯರು ಪ್ರಶ್ನಿಸಿದರು.


ಅಂಕಿ ಅಂಶಗಳು

7 ಹಾಡಿ ಯೋಜನೆ ಕುಟುಂಬಗಳು

1,300 ಕುದುರೆ ಮುಖ ಪುನರ್ವಸತಿ ಪಟ್ಟಿಯಲ್ಲಿರುವ ಕುಟುಂಬ


653 ಒಪ್ಪಿಗೆ ನೀಡಿದ ಕುಟುಂಬ

353 ಪುನರ್ವಸತಿ ಪಡೆದ ಕುಟುಂಬ



ಶೃಂಗೇರಿ ತಾಲ್ಲೂಕಿನ ಮುಂಡೋಡಿ ಬಳಿ ವಿದ್ಯುತ್ ಸಂಪರ್ಕಕ್ಕೆ ಕಾದಿರುವ ಕಂಬ

ವಿದ್ಯುತ್ ಸಂಪರ್ಕಕ್ಕೆ ಅನುದಾನದ ಕೊರತೆ



ಶೃಂಗೇರಿ ತಾಲೂಕಿನ ಮುಂಡೋಡಿ, ಕಚಿಗೆ ಭಾಗದಲ್ಲಿ ಇನ್ನೊಂದು ರೀತಿ ಸಮಸ್ಯೆಯಿದ್ದು, ವಿದ್ಯುತ್ ಸಂಪರ್ಕ ನೀಡಲು ವಿಳಂಬವಾಗುತ್ತಲೇ ಇದೆ. ಹಿಂದೆ ಸೋಲಾರ್ ಉಪಕರಣ ನೀಡಿದ್ದರೂ ಹಾಳಾಗಿವೆ.

‘ಚಿಕ್ಕಮಗಳೂರು ಜಿಲ್ಲಾಧಿಕಾರಿ ಸಭೆ ನಡೆಸಿದ್ದಾರೆ. ಕಂಬಗಳನ್ನು ಹಾಕಿ ವರ್ಷವೇ ಆಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೇಳಿದರೆ ಅನುದಾನ ಇಲ್ಲ ಎನ್ನುವ ಉತ್ತರ ಬರುತ್ತದೆ. ಸೌಲಭ್ಯಕ್ಕೆ ಇನ್ನು ಎಷ್ಟು ದಿನ ಜನ ಕಾಯಬೇಕು’ ಎಂದು ಸ್ಥಳೀಯರಾದ ಮಣಿ ಶೇಖರ್ ಪ್ರಶ್ನಿಸಿದರು.

ಹನೂರು: ಮತ್ತೊಂದು ಹುಲಿ ಹತ್ಯೆ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ವನ್ಯಧಾಮದ ಹನೂರು ಬಫರ್ ವಲಯ ವ್ಯಾಪ್ತಿಯ ಪಚ್ಚೆದೊಡ್ಡಿ ಗ್ರಾಮದ ಬಳಿ ಹೆಣ್ಣು ಹುಲಿಯನ್ನು ಮೂರು ಭಾಗಗಳಾಗಿ ತುಂಡರಿಸಿ ಹತ್ಯೆ ಮಾಡಲಾಗಿದೆ.

ಗುರುವಾರ ಸಂಜೆ ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ವೇಳೆ ಹುಲಿಯ ತಲೆ, ಮುಂಗಾಲಿನ ಭಾಗ ಮಣ್ಣಿನಲ್ಲಿ ಹುದುಗಿಸಿದ್ದು ಪತ್ತೆಯಾಗಿತ್ತು. ಶೋಧ ನಡೆಸಿದಾಗ ಉಳಿದ ಕಳೇಬರ ಸಿಕ್ಕಿದೆ.

ಹುಲಿಯ ಉಗುರು, ಹಲ್ಲು, ಚರ್ಮವನ್ನು ಹಾಗೆಯೇ ಬಿಡಲಾಗಿದ್ದು, ಹತ್ಯೆಗೆ ಕಾರಣ ತಿಳಿದುಬಂದಿಲ್ಲ. ದ್ವೇಷದಿಂದ ಹುಲಿಯ ಹತ್ಯೆ ನಡೆದಿರಬಹುದು ಎಂದು ಶಂಕಿಸಲಾಗಿದೆ.

ಕಳ್ಳ ಬೇಟೆ ಪ್ರಕರಣ ದಾಖಲಿಸಿಕೊಂಡಿರುವ ಅಧಿಕಾರಿಗಳು ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ತನಿಖೆಗೆ ಶ್ವಾನದಳದ ನೆರವು ಪಡೆಯಲಾಗಿದೆ ಎಂದು ಮಲೆ ಮಹದೇಶ್ವರ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ತಿಳಿಸಿದ್ದಾರೆ.

ತನಿಖೆಗೆ ಪಿಸಿಸಿಎಫ್ ನೇತೃತ್ವದ ತಂಡ: ಹುಲಿ ಹತ್ಯೆಯ ಪ್ರಕರಣದ ತನಿಖೆಗೆ ಪಿಸಿಸಿಎಫ್ ಸ್ಮಿತಾ ಬಿಜ್ಜೂರು ನೇತೃತ್ವದ ತಂಡ ರಚಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.


ಹತ್ಯೆ ನಡೆದ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಬೇಕು. 3 ವರ್ಷಗಳಲ್ಲಿ ದಾಖಲಾದ ಬೇಟೆ ಪ್ರಕರಣಗಳ ಬಗ್ಗೆ ಗಮನ ಹರಿಸಿ ತನಿಖಾ ವರದಿಗಳ ಪರಾಮರ್ಶಿಸಬೇಕು. ಕರ್ತವ್ಯ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಹಾಗೂ ಕಳ್ಳಬೇಟೆಗಾರರ ವಿರುದ್ಧ ಸೂಕ್ತ ಕ್ರಮದ ಶಿಫಾರಸು ವರದಿಯನ್ನು 8 ದಿನಗಳೊಳಗೆ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

‘ಘಟನೆ ಈ ವನ್ಯಜೀವಿ ಧಾಮದಲ್ಲಿ ನಿರಂತರವಾಗಿ ವನ್ಯಜೀವಿಗಳ ಬೇಟೆ ಆಗುತ್ತಿರುವುದನ್ನು ದೃಢಪಡಿಸುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇನ್ಮುಂದೆ ಇಂತಹ ಘಟನೆ ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದ್ದಾರೆ.

ಇತ್ತೀಚೆಗೆ, ಇದೇ ವನ್ಯಧಾಮದಲ್ಲಿ ಐದು ಹುಲಿಗಳನ್ನು ವಿಷವಿಕ್ಕಿ ಹತ್ಯೆ ಮಾಡಲಾಗಿತ್ತು.

ವಿಷಪ್ರಾಶನ ಶಂಕೆ: ಆರೋಪಿ ಸುಳಿವು

ಹುಲಿ ಹತ್ಯೆ ಪ್ರಕರಣದಲ್ಲಿ ಶಂಕಿತ ಆರೋಪಿ ತಲೆಮರೆಸಿಕೊಂಡಿದ್ದು ಶೋಧ ಕಾರ್ಯ ನಡೆಯುತ್ತಿದೆ. ಆರೋಪಿಯ ಬಂಧನದ ನಂತರ ಹತ್ಯೆಗೆ ನಿಖರ ಕಾರಣ ತಿಳಿದುಬರಲಿದೆ. ಅಂದಾಜು 12 ವರ್ಷದ ಹುಲಿಯ ಕೋರೆಹಲ್ಲುಗಳು ದುರ್ಬಲವಾಗಿದ್ದರಿಂದ ಜಾನುವಾರುಗಳನ್ನು ಬೇಟೆಯಾಡುತ್ತಿತ್ತು.



ಪಚ್ಚೆದೊಡ್ಡಿ ಗ್ರಾಮದ ಬಳಿ ಮೂರು ತುಂಡುಗಳಾಗಿ ಪತ್ತೆಯಾದ ಹುಲಿಯ ಕಳೇಬರ

ಮೇಲ್ನೋಟಕ್ಕೆ ವಿಷಪ್ರಾಶನದಿಂದ ಹುಲಿ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದ್ದು ವಿಧಿವಿಜ್ಞಾನ ಪ್ರಯೋಗಾಲದಿಂದ ವರದಿ ಬಂದ ಬಳಿಕ ದೃಢವಾಗಲಿದೆ. ಹುಲಿಯ ಮೇಲೆ ಗುಂಡು ಹಾರಿಸಲಾಗಿಲ್ಲ, ಅಂಗಾಂಗಗಳೂ ಕಾಣೆಯಾಗಿಲ್ಲ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಮಗಳ ನಗ್ನಚಿತ್ರ ಕೇಳಿದ್ದ ವ್ಯಕ್ತಿ: ನಟ ಅಕ್ಷಯ್‌ಕುಮಾರ್

ಮುಂಬೈ: ಆನ್‌ಲೈನ್ ಅಪರಾಧಗಳ ಕುರಿತು ಎಚ್ಚರಿಕೆ ವಹಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿರುವ ಬಾಲಿವುಡ್ ನಟ ಅಕ್ಷಯ್ ಕುಮಾರ್ ಅವರು, ತಮ್ಮ ಮಗಳು ವಿಡಿಯೊ ಗೇಮ್ ಆಡುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ನಗ್ನಚಿತ್ರ ಕಳುಹಿಸುವಂತೆ ಕೇಳಿರುವ ಸಂಗತಿಯನ್ನು ಬಹಿರಂಗಪಡಿಸಿದ್ದಾರೆ.

ಮುಂಬೈನಲ್ಲಿರುವ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ಸೈಬರ್ ಜಾಗೃತಿ ಮಾಸಾಚರಣೆ ಉದ್ಘಾಟನಾ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.


‘ಕೆಲವು ತಿಂಗಳ ಹಿಂದೆ ನನ್ನ ಮನೆಯಲ್ಲಿ ನಡೆದ ಘಟನೆಯಿದು. ಮಗಳು ವಿಡಿಯೊ ಗೇಮ್ ಆಡುತ್ತಿದ್ದಾಗ, ‘ಅದ್ಭುತ, ನೀವು ತುಂಬಾ ಚೆನ್ನಾಗಿ ಆಡಿದ್ದೀರಿ’ ಎಂಬಿತ್ಯಾದಿ ಸಂದೇಶಗಳು ಬಂದವು. ನೀವು ಗಂಡೋ, ಹೆಣ್ಣೋ ಎಂಬ ಸಂದೇಶ ಬಂತು. ಆಕೆ, ಹೆಣ್ಣು ಎಂದು ಉತ್ತರಿಸಿದ್ದಳು. ಆಗ, ನಗ್ನಚಿತ್ರ ಕಳುಹಿಸುವಂತೆ ಸಂದೇಶ ಬಂತು. ಮಗಳು ಕೂಡಲೇ ಫೋನ್ ಸ್ವಿಚ್ಡ್ ಆಫ್ ಮಾಡಿ ತಾಯಿಗೆ ವಿಷಯ ಮುಟ್ಟಿಸಿದಳು. ಇದು ಸಹ ಸೈಬರ್ ಜಗತ್ತಿನ ಒಂದು ಭಾಗವಾಗಿದೆ’ ಎಂದು ಹೇಳಿದರು.

‘ಒಂದು ಗಂಟೆಯೊಳಗೆ ದೂರು ನೀಡಿದರೆ, ವಂಚಕರಿಂದ ಹಣವನ್ನು ವಶಪಡಿಸಿಕೊಳ್ಳಲು ಹಾಗೂ ಅವರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದರು.

ಪದ್ಮರಾಜ ದಂಡಾವತಿ, ಚಿತ್ತ ಜಿನೇಂದ್ರಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲಿಗ್ರಾಮ ಜೈನ ಮಿತ್ರ ಮಂಡಳಿ ನೀಡುವ ‘ಸುಮಾ ವಸಂತ ಪ್ರಶಸ್ತಿ’ಗೆ ಪತ್ರಕರ್ತ ಪದ್ಮರಾಜ ದಂಡಾವತಿ ಹಾಗೂ ‘ಶ್ರೇಯೋಭದ್ರ ಪ್ರಶಸ್ತಿ’ಗೆ ಕಲಾವಿದ ಚಿತ್ತ ಜಿನೇಂದ್ರ ಆಯ್ಕೆಯಾಗಿದ್ದಾರೆ.



ಪದ್ಮರಾಜ ದಂಡಾವತಿ



ಚಿತ್ತ ಜಿನೇಂದ್ರ

ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದವರಿಗೆ ‘ಸುಮಾ ವಸಂತ ಪ್ರಶಸ್ತಿ’ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿದವರಿಗೆ ‘ಶ್ರೇಯೋಭದ್ರ ಪ್ರಶಸ್ತಿ’ ನೀಡಲಾಗುತ್ತಿದೆ. ಈ ಪ್ರಶಸ್ತಿಗಳು ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.

ಇದೇ 5ರಂದು ಮಂಡಳಿಯ ವಾರ್ಷಿಕೋತ್ಸವ ಆಚರಿಸಲಾಗುತ್ತಿದ್ದು, ಈ ವೇಳೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ ಎಂದು ಮಂಡಳಿಯ ಕಾರ್ಯದರ್ಶಿ ಪದ್ಮಿನಿ ನಾಗರಾಜು ತಿಳಿಸಿದ್ದಾರೆ.

ಮಕ್ಕಳಲ್ಲಿ ಕೆಮ್ಮು: ಔಷಧ ಶಿಫಾರಸು ಮಾಡದಂತೆ ಸೂಚನೆ

ಬೆಂಗಳೂರು: ‘ಕೆಮ್ಮು ಮತ್ತು ಶೀತಕ್ಕೆ ಸಂಬಂಧಿಸಿದಂತೆ ಎರಡು ವರ್ಷದೊಳಗಿನ ಮಕ್ಕಳಿಗೆ ಔಷಧ ಶಿಫಾರಸು ಮಾಡಬಾರದು. ಐದು ವರ್ಷದೊಳಗಿನ ಮಕ್ಕಳಿಗೂ ಸಾಮಾನ್ಯವಾಗಿ ಅಗತ್ಯ ಇರುವುದಿಲ್ಲ. ಅತಿ ಅಗತ್ಯವಾದರೆ ಮಾತ್ರ ಸೂಕ್ತ ಪ್ರಮಾಣದಲ್ಲಿ ಕಡಿಮೆ ಅವಧಿಗೆ ಒದಗಿಸಬೇಕು’ ಎಂದು ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ (ಡಿಜಿಎಚ್‌ಎಸ್) ಸೂಚಿಸಿದೆ.

ಶತಕಗಳ ಭರಾಟೆಯಲ್ಲಿ ಬಾಡಿದ ವಿಂಡೀಸ್

ಸ್ವದೇಶದಲ್ಲಿ ಎರಡನೇ ಶತಕ ದಾಖಲಿಸಿದ ರಾಹುಲ್ • ಜಡೇಜ–ಜುರೇಲ್ ಅಮೋಘ ಬ್ಯಾಟಿಂಗ್

• ಸಿದ್ದಿ ಕಿರಣ್

ಅಹಮದಾಬಾದ್: ದೀರ್ಘ ಸಮಯದ ನಂತರ ಕೆ.ಎಲ್. ರಾಹುಲ್ ಸ್ವದೇಶದಲ್ಲಿ ಶತಕ ಬಾರಿಸಿದರು. ಉಪನಾಯಕ ರವೀಂದ್ರ ಜಡೇಜ ಮತ್ತು 'ಹಂಗಾಮಿ' ವಿಕೆಟ್‌ಕೀಪರ್ ಧ್ರುವ ಜುರೇಲ್ ಅವರೂ ವೆಸ್ಟ್ ಇಂಡೀಸ್‌ನ ಮೊನಚಿಲ್ಲದ ಬೌಲಿಂಗ್ ಪುಡಿಗಟ್ಟಿದರು. ಶತಕ ಸಂಭ್ರಮ ಆಚರಿಸಿದರು.

ಸುರಿಕರನಾಡಿನ ಕುಸುರಿ ಕಲೆಯಂತೆ ರಾಹುಲ್ ಬ್ಯಾಟಿಂಗ್ ಮನಸೆಳೆಯಿತು. ಈಚೆಗೆ ಇಂಗ್ಲೆಂಡ್ ನೆಲದಲ್ಲಿ ಮಿಂಚಿದ್ದ ಕನ್ನಡಿಗ ಇಲ್ಲಿ 197 ಎಸೆತಗಳಲ್ಲಿ 100 ರನ್ ಗಳಿಸಿದರು. 2016ರ ಡಿಸೆಂಬರ್‌ನಲ್ಲಿ ಚೆನ್ನೈನಲ್ಲಿ ಇಂಗ್ಲೆಂಡ್ ವಿರುದ್ಧ 199 ರನ್ ಹೊಡೆದ ನಂತರ ಅವರು ಭಾರತದ ನೆಲದಲ್ಲಿ ಶತಕ ಗಳಿಸಿರಲಿಲ್ಲ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅವರು ತಮ್ಮ ಟೆಸ್ಟ್ ಕ್ರಿಕೆಟ್‌ನ 11ನೇ ಶತಕ ದಾಖಲಿಸಿದರು.

ಗಾಯಗೊಂಡಿರುವ ರಿಷಭ್ ಪಂತ್ ಅವರ ಬದಲಿಗೆ ಸ್ಥಾನ ಪಡೆದಿರುವ 24 ವರ್ಷದ ಜುರೇಲ್ 210 ಎಸೆತಗಳಲ್ಲಿ 125 ರನ್ ಗಳಿಸಿದರು. ಇದು ಅವರಿಗೆ ಚೊಚ್ಚಲ ಶತಕ. ಅವರ ಬ್ಯಾಟಿಂಗ್ ಆತ್ಮವಿಶ್ವಾಸದಿಂದ ಕೂಡಿತ್ತು. ಈಚೆಗೆ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ರಿಷಭ್ ಅವರ ಬಲಪಾದಕ್ಕೆ ಚೆಂಡು ಬಡಿದು ಮೂಳೆ ಮುರಿದಿತ್ತು. ಅದ್ದರಿಂದ ಅವರು ವಿಶ್ರಾಂತಿಯಲ್ಲಿದ್ದಾರೆ.

ಇನ್ನು 36 ವರ್ಷದ ಆಲ್‌ರೌಂಡರ್ ಜಡೇಜ ತಮ್ಮ ವೃತ್ತಿಜೀವನದ ಅಮೋಘ ಕಾಲಘಟ್ಟದಲ್ಲಿದ್ದಾರೆ. ಇಂಗ್ಲೆಂಡ್ ಎದುರಿನ ಸರಣಿಯಲ್ಲಿಯೂ ಮಹತ್ವದ ಕಾಣಿಕೆ ನೀಡಿದ್ದ ಅವರು ಇಲ್ಲಿಯೂ ಶತಕದ ರಂಗು ಚೆಲ್ಲಿದರು. 176 ಎಸೆತಗಳಲ್ಲಿ 104 ರನ್ ಗಳಿಸಿದರು. ಇದು ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಆರನೇ ಶತಕವಾಗಿದೆ.

ಇವರಿಬ್ಬರ ಭರ್ಜರಿ ಬ್ಯಾಟಿಂಗ್ ಫಲವಾಗಿ ವೆಸ್ಟ್ ಇಂಡೀಸ್ ಎದುರಿನ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ತಂಡವು 128 ಓವರ್‌ಗಳಲ್ಲಿ 5 ವಿಕೆಟ್‌ಗೆ 448 ರನ್ ಗಳಿಸಿತು. 286 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು. ಜಡೇಜ ಮತ್ತು ವಾಷಿಂಗ್ಟನ್ ಸುಂದರ್ (ಬ್ಯಾಟಿಂಗ್ 9) ಕ್ರೀಸ್‌ನಲ್ಲಿದ್ದಾರೆ.



ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ಎಎಫ್‌ಪಿ ಚಿತ್ರ

ಪಂದ್ಯದ ಮೊದಲ ದಿನವಾದ ಗುರುವಾರ ವಿಂಡೀಸ್ ತಂಡವು 44.1 ಓವರ್‌ಗಳಲ್ಲಿ 162 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ್ದ ಆತಿಥೇಯ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 2 ವಿಕೆಟ್‌ಗಳಿಗೆ 121 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ರಾಹುಲ್ ಮತ್ತು ಗಿಲ್ ಶುಕ್ರವಾರ ತಮ್ಮ ಜೊತೆಯಾಟ ಮುಂದುವರಿಸಿದರು. ಪ್ರವಾಸಿ ಬಳಗದ ವೇಗಿಗಳಾದ ಜೇಡನ್ ಸೀಲ್ಸ್ ಮತ್ತು ಜಸ್ಟಿನ್ ಗ್ರೀವ್ಸ್ ಅವರು ಬೆಳಗಿನ ಅವಧಿಯಲ್ಲಿ ಬ್ಯಾಟರ್‌ಗಳಿಗೆ ಒಂದಿಷ್ಟು ಬಿಸಿ ಮುಟ್ಟಿಸಿದರು. ರಾಹುಲ್ ಬ್ಯಾಟ್ ಅಂಚಿಗೆ ಸವರಿದ ಚೆಂಡು ಕೀಪರ್ ಹಾಗೂ ಸ್ಲಿಪ್ ಫೀಲ್ಡರ್ ಮಧ್ಯದ ಗ್ಯಾಪ್‌ನಲ್ಲಿ ಹಾದುಹೋಯಿತು. ಇನ್ನೊಂದು ಸಲ ರಾಹುಲ್ ಆಡಿದ ಚೆಂಡು ಗಲ್ಲಿ ಫೀಲ್ಡರ್ ಸಮೀಪದಲ್ಲಿ ಗಾಳಿಯಲ್ಲಿ ತೇಲಿ ಹೋಯಿತು. ಆದರೆ ರಾಹುಲ್‌ಗೆ 'ಅದೃಷ್ಟ' ಜೊತೆ ನೀಡಿತು.



ಶತಕ ಗಳಿಸಿ ಖಡ್ಗದಂತೆ ಬ್ಯಾಟ್ ಬೀಸಿ ಸಂಭ್ರಮಿಸಿದ ಜಡೇಜ ಎಎಫ್‌ಪಿ ಚಿತ್ರ

ಇದರಿಂದಾಗಿ ರಾಹುಲ್ ಶತಕದತ್ತ ಹೆಜ್ಜೆ ಹಾಕಿದರು. ಅಲ್ಲದೇ ಗಿಲ್ ಜತೆಗೆ ಜೊತೆಯಾಟ ಬೆಳೆಸಿದರು. ಆಗಾಗ ರಿವರ್ಸ್ ಸ್ವೀಪ್ ಕೂಡ ಪ್ರಯೋಗಿಸುವಲ್ಲಿ ರಾಹುಲ್ ಯಶಸ್ವಿಯಾದರು. ಆದರೆ ಗಿಲ್ ಅವರು ಅರ್ಧಶತಕದ ನಂತರ ರಾಸ್ಟನ್ ಚೇಸ್ ಬೌಲಿಂಗ್‌ನಲ್ಲಿ ರಿವರ್ಸ್ ಸ್ವೀಪ್ ಆಡಿದರು. ದೇಹದ ಸಮತೋಲನ ತಪ್ಪಿ, ಸ್ಲಿಪ್‌ನಲ್ಲಿದ್ದ ಗ್ರೀವ್ಸ್‌ಗೆ ಕ್ಯಾಚ್ ಕೊಟ್ಟರು.

ಆದರೆ ರಾಹುಲ್ ಆಟಕ್ಕೆ ಇದರಿಂದ ಭಂಗ ಬರಲಿಲ್ಲ. ಊಟದ ವಿರಾಮಕ್ಕೂ ಕೆಲವೇ ನಿಮಿಷಗಳ ಮುನ್ನ ಶತಕದ ಗಡಿ ಮುಟ್ಟಿದರು. ಕೈಬೆರಳುಗಳನ್ನು ಬಾಯಲ್ಲಿಟ್ಟುಕೊಂಡು ಸಂಭ್ರಮಿಸಿದರು. ತವರಿನಲ್ಲಿ ಶತಕದ ಬರ ನೀಗಿಸಿಕೊಂಡ ಸಂತೃಪ್ತಿಯ ಭಾವ ಅವರ ಮುಖದಲ್ಲಿತ್ತು. ಆದರೆ ಇದರ ನಂತರ ಅವರು ಕ್ರೀಸ್‌ನಲ್ಲಿ ಬಹಳ ಹೊತ್ತು ಇರಲಿಲ್ಲ. ಜೊಮೆಲ್ ವಾರಿಕನ್ ಎಸೆತವನ್ನು ಕವರ್‌ಡ್ರೈವ್ ಮಾಡುವ ಯತ್ನ ಅವರಿಗೆ ಕೈಕೊಟ್ಟಿತು. ಗ್ರೀವ್ಸ್ ಕ್ಯಾಚ್ ಪಡೆದು ಸಂಭ್ರಮಿಸಿದರು.

ರಾಹುಲ್ ಔಟಾಗಿದ್ದರಿಂದ ಭಾರತದ ಓಟಕ್ಕೆ ಕಡಿವಾಣ ಹಾಕಬಹುದು ಎಂಬ ವಿಂಡೀಸ್ ಆಟಗಾರರ ನಿರೀಕ್ಷೆ ಹುಸಿಯಾಯಿತು. ಜುರೇಲ್ ಮತ್ತು ಜಡೇಜ ಅವರ ಚುರುಕಿನ ಆಟಕ್ಕೆ ಬೌಲರ್‌ಗಳು ಪರದಾಡಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 206 ರನ್ ಗಳಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್ 162 (44.1 ಓವರುಗಳಲ್ಲಿ) ಭಾರತ 5 ವಿಕೆಟ್‌ಗೆ 448 (128 ಓವರುಗಳಲ್ಲಿ) (ಗುರುವಾರ: 2ಕ್ಕೆ 121)
ರಾಹುಲ್ ಸಿ ಗ್ರೀವ್ಸ್ ಬಿ ವಾರಿಕನ್ 100 (197ಎ, 4x12)
ಗಿಲ್ ಸಿ ಗ್ರೀವ್ಸ್ ಬಿ ಚೇಸ್ 50 (100ಎ, 4x5)
ಜುರೇಲ್ ಸಿ ಹೋಪ್ ಬಿ ಪಿಯರ್ 125 (210ಎ, 4x15, 6x3)
ಜಡೇಜ ಬ್ಯಾಟಿಂಗ್ 104 (176ಎ, 4x6, 6x5)
ಸುಂದರ್ ಬ್ಯಾಟಿಂಗ್ 9 (13ಎ)
ಇತರೆ: 17 (ಬೈ 12, ಲೆಗ್‌ಬೈ 3, ನೋಬಾಲ್ 1, ವೈಡ್ 1)
ವಿಕೆಟ್ ಪತನ: 3–188 (ಶುಭಮನ್ ಗಿಲ್, 56.6), 4–218 (ಕೆ.ಎಲ್. ರಾಹುಲ್, 67.5), 5–424 (ಧ್ರುವ್ ಜುರೇಲ್, 122.6).
ಬೌಲಿಂಗ್: ಜೇಡನ್ ಸೀಲ್ಸ್ 19–2–53–1; ಜೊಹಾನ್ ಲೇಯ್ನ್ 15–0–38–0; ಜಸ್ಟಿನ್ ಗ್ರೀವ್ಸ್ 12–4–59–0; ಜೊಮೆಲ್ ವಾರಿಕನ್ 29–5–102–1; ಖಾರಿ ಪಿಯರ್ 29–1–91–1; ರೋಸ್ಟನ್ ಚೇಸ್ 24–3–90–2.

ಸೇನೆಗೆ ಶತಕ ಸಮರ್ಪಿಸಿದ ಜುರೇಲ್

ಅಹಮದಾಬಾದ್ (ಪಿಟಿಐ): ಭಾರತ ತಂಡದ ವಿಕೆಟ್‌ಕೀಪರ್–ಬ್ಯಾಟರ್ ಧ್ರುವ ಜುರೇಲ್ ಅವರು ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ಗಳಿಸಿದ ಶತಕವನ್ನು ಭಾರತೀಯ ಸೇನೆಗೆ ಅರ್ಪಿಸಿದರು.

24 ವರ್ಷ ವಯಸ್ಸಿನ ಜುರೇಲ್ ಅವರು ಅರ್ಧಶತಕ ಗಳಿಸಿದಾಗ ಮತ್ತು ಶತಕದ ಗಡಿ ಮುಟ್ಟಿದಾಗ ಆರ್ಮಿ ಸೆಲ್ಯೂಟ್ ಮಾಡಿದರು. ಜುರೇಲ್ ಅವರ ತಂದೆ ನಿವೃತ್ತ ಸೇನಾಧಿಕಾರಿಯಾಗಿದ್ದಾರೆ. ಅವರು ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದರು.



ಸೇನೆಗೆ ಗೌರವ ಸಮರ್ಪಿಸಿದ ಭಾರತದ ಧ್ರುವ ಜುರೇಲ್ ಪಿಟಿಐ ಚಿತ್ರ

'ಅರ್ಧಶತಕ ಮುಟ್ಟಿದಾಗ ಮಾಡಿದ ಸೆಲ್ಯೂಟ್ ನನ್ನ ತಂದೆಗಾಗಿ ಆಗಿತ್ತು. ಶತಕ ಗಳಿಸಿದಾಗ ಮಾಡಿದ ಸೆಲ್ಯೂಟ್ ಭಾರತೀಯ ಸೇನೆಗಾಗಿ ಆಗಿತ್ತು. ಇದು ನನ್ನ ಮನದಲ್ಲಿ ಬಹಳ ದಿನಗಳಿಂದ ಇದ್ದ ಆಸೆಯಾಗಿತ್ತು. ಅಪ್ಪ ಸೇನೆಯಲ್ಲಿ ಇದ್ದವರು. ಆದ್ದರಿಂದ ನನಗೆ ಬಾಲ್ಯದಿಂದಲೂ ಸೇನೆಯ ನಂಟು ಇದೆ' ಎಂದು ಪಂದ್ಯದ ನಂತರ ಜುರೇಲ್ ಮಾಧ್ಯಮದವರಿಗೆ ಹೇಳಿದರು.

'ನಾವು ಮೈದಾನದಲ್ಲಿ ಆಡುವುದಕ್ಕೂ ಮತ್ತು ಸಮರಾಂಗಣದಲ್ಲಿ ಸೇನೆಯು ಕೆಲಸ ಮಾಡುವುದಕ್ಕೂ ಅಜಗಜಾಂತರವಿದೆ. ಸೇನೆಯ ಕೆಲಸ ಬಹಳ ಕಠಿಣವಾದುದು. ಆದ್ದರಿಂದ ಅವರ ಬಗ್ಗೆ ನನಗೆ ಅಪಾರ ಗೌರವ ಇದೆ. ಭವಿಷ್ಯದಲ್ಲಿ ನಾನು ಏನೇ ಸಾಧಿಸಿದರೂ ಅದು ಅವರಿಗೇ ಸಮರ್ಪಣೆ' ಎಂದೂ ಹೇಳಿದರು.



ಭಾರತದ ಮೀರಾಬಾಯಿ ಚಾನು 'ಎಕ್ಸ್' ಚಿತ್ರ

ವೇಟ್‌ಲಿಫ್ಟಿಂಗ್: ಮೀರಾಗೆ ಬೆಳ್ಳಿ

ಫೋರ್ಡೆ (ನಾರ್ವೆ), (ಪಿಟಿಐ): ಅನುಭವಿ ಮೀರಾಬಾಯಿ ಚಾನು ಅವರು ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಇದು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಅವರಿಗೆ ಮೂರನೇ ಪದಕ.

ಈ ಹಿಂದೆ 2017 ಮತ್ತು 2022ರಲ್ಲೂ ಅವರು ರಜತ ಪದಕ ಜಯಿಸಿದ್ದರು. ಅವರು ಒಟ್ಟು 199 ಕೆ.ಜಿ. ಭಾರ ಎತ್ತಿದರು. 31 ವರ್ಷ ವಯಸ್ಸಿನ ಚಾನು ಸ್ನ್ಯಾಚ್‌ನಲ್ಲಿ 84 ಕೆ.ಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 115 ಕೆ.ಜಿ ಎತ್ತಿದರು.

ಸ್ನಾಚ್ ಸ್ಪರ್ಧೆಯ ವೇಳೆ ಅವರು ಪರದಾಡಿದರು. 87 ಕೆ.ಜಿ. ಎತ್ತಲು ಹೋಗಿ ಎರಡು ಸಲ ವಿಫಲರಾದರು. ಆದರೆ ಕ್ಲೀನ್ ಮತ್ತು ಜರ್ಕ್‌ನಲ್ಲಿ ಅವರು ಮೂರೂ ಯತ್ನಗಳಲ್ಲಿ (109, 112 ಮತ್ತು 115 ಕೆ.ಜಿ) ಸರಾಗವಾಗಿ ಭಾರ ಎತ್ತಿದರು. ಅವರು 115 ಕೆ.ಜಿ. ಭಾರವನ್ನು ಇದಕ್ಕಿಂತ ಮೊದಲು ಟೋಕಿಯೊ ಒಲಿಂಪಿಕ್ಸ್‌ನಲ್ಲಿ (2021) ಎತ್ತಿದ್ದರು.

ಉತ್ತರ ಕೊರಿಯಾದ ರಿ ಸಾಂಗ್ ಗುಮ್ 213 ಕೆ.ಜಿ. ಭಾರ (91 ಕೆ.ಜಿ + 122 ಕೆ.ಜಿ) ಎತ್ತಿ ಚಿನ್ನ ಗೆದ್ದರಲ್ಲದೇ, ಆ ಹಾದಿಯಲ್ಲಿ ಕ್ಲೀನ್ ಆ್ಯಂಡ್ ಜರ್ಕ್ ಮತ್ತು ಒಟ್ಟು ತೂಕ ವಿಭಾಗದಲ್ಲಿ ನೂತನ ವಿಶ್ವ ದಾಖಲೆಯನ್ನು ಸ್ಥಾಪಿಸಿದರು.

ಥಾಯ್ಲೆಂಡ್‌ನ ಥಾನ್ಯಥಾನ್ ಸುಕ್ಚರೋನ್ ಒಟ್ಟು 198 ಕೆ.ಜಿ. ಭಾರ (88 + 110 ಕೆ.ಜಿ) ಎತ್ತಿ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಇರಾನಿ ಟ್ರೋಫಿ: ಉತ್ತಮ ಸ್ಥಿತಿಯಲ್ಲಿ ವಿದರ್ಭ

ನಾಗ್ಪುರ (ಪಿಟಿಐ): ರೆಸ್ಟ್ ಆಫ್ ಇಂಡಿಯಾ ತಂಡವನ್ನು 214 ರನ್‌ಗಳಿಗೆ ಕಟ್ಟಿಹಾಕಿದ ವಿದರ್ಭ ತಂಡವು ಇರಾನಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಇನಿಂಗ್ಸ್‌ನಲ್ಲಿ 128 ರನ್ ಮುನ್ನಡೆ ಪಡೆಯಿತು.

ಮೂರನೇ ದಿನವಾದ ಶುಕ್ರವಾರ 5 ವಿಕೆಟ್ ನಷ್ಟಕ್ಕೆ 142 ರನ್‌ಗಳೊಡನೆ ಆಟ ಮುಂದುವರಿಸಿದ ರೆಸ್ಟ್ ಆಫ್ ಇಂಡಿಯಾ ತಂಡವು ವಿದರ್ಭ ಬೌಲರ್‌ಗಳ ಸಂಘಟಿತ ದಾಳಿ ಎದುರಿಸುವಲ್ಲಿ ಎಡವಿತು. ನಾಯಕ ರಜತ್ ಪಾಟೀದಾರ್ (66; 125ಎ, 4x10) ಹೊರತುಪಡಿಸಿ ಉಳಿದ್ಯಾವ ಬ್ಯಾಟರ್‌ಗಳೂ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ವೇಗಿ ಯಶ್ ಠಾಕೂರ್ (66ಕ್ಕೆ4) ಅವರು ಪಾಟೀದಾರ್ ಬಳಗದ ಮಧ್ಯಮ ಕ್ರಮಾಂಕಕ್ಕೆ ಬಲವಾದ ಪೆಟ್ಟುಕೊಟ್ಟರು. ಎಡಗೈ ಸ್ಪಿನ್ನರ್‌ಗಳಾದ ಪಾರ್ಥ್ ರೇಖಡೆ (24ಕ್ಕೆ2) ಹಾಗೂ ಹರ್ಷ್ ದುಬೆ (58ಕ್ಕೆ2) ಅವರು ಯಶ್ ಅವರಿಗೆ ಉತ್ತಮ ಬೆಂಬಲ ನೀಡಿದರು.

ಎರಡನೇ ಇನಿಂಗ್ಸ್ ಆರಂಭಿಸಿದ ಅಕ್ಷಯ್ ವಾಡ್ಕರ್ ಪಡೆಯು ದಿನದಾಟದ ಅಂತ್ಯಕ್ಕೆ 2 ವಿಕೆಟ್‌ಗಳಿಗೆ 96 ರನ್ ಗಳಿಸಿದ್ದು, ಒಟ್ಟಾರೆ 224 ರನ್ ಮುನ್ನಡೆಯೊಂದಿಗೆ ಉತ್ತಮ ಸ್ಥಿತಿಯಲ್ಲಿದೆ. ಧ್ರುವ್ ಶೋರೆ (ಔಟಾಗದೇ 24) ಹಾಗೂ ಡ್ಯಾನಿಷ್ ಮಾಲೆವಾರ್ (ಔಟಾಗದೇ 16) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 101.4 ಓವರ್‌ಗಳಲ್ಲಿ 342. ರೆಸ್ಟ್ ಆಫ್ ಇಂಡಿಯಾ: 69.5 ಓವರ್‌ಗಳಲ್ಲಿ 214 (ರಜತ್ ಪಾಟೀದಾರ್ 66, ಯಶ್ ಠಾಕೂರ್ 66ಕ್ಕೆ4, ಪಾರ್ಥ್ ರೇಖಡೆ 24ಕ್ಕೆ2, ಹರ್ಷ್ ದುಬೆ 58ಕ್ಕೆ2) ಎರಡನೇ ಇನಿಂಗ್ಸ್: ವಿದರ್ಭ: 36 ಓವರ್‌ಗಳಲ್ಲಿ 2ಕ್ಕೆ 96 (ಅಮಾನ್ ಮೋಖಡೆ 37, ಧ್ರುವ್ ಶೋರೆ ಔಟಾಗದೇ 24, ಗುರ್ಪ್ರೀತ್ ಬ್ರಾರ್ 11ಕ್ಕೆ1)

ದಕ್ಷಿಣ ಆಫ್ರಿಕಾವನ್ನು ಸದೆಬಡಿದ ಇಂಗ್ಲೆಂಡ್

ಗುವಾಹಟಿ (ಪಿಟಿಐ): ಲಿನ್ಸೆ ಸ್ಮಿತ್ ನೇತೃತ್ವದ ಸ್ಪಿನ್ನರ್ ಪಡೆಯ ಪರಿಣಾಮಕಾರಿ ದಾಳಿಯಿಂದ ಇಂಗ್ಲೆಂಡ್ ತಂಡದವರು, ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಶುಕ್ರವಾರ 10 ವಿಕೆಟ್‌ಗಳಿಂದ ಸದೆಬಡಿದು ತಮ್ಮ ಅಭಿಯಾನವನ್ನು ಅಮೋಘವಾಗಿ ಆರಂಭಿಸಿದರು.

ಎಡಗೈ ಸ್ಪಿನ್ನರ್ ಲಿನ್ಸೆ ಸ್ಮಿತ್ (7 ಕ್ಕೆ3) ಆರಂಭದಲ್ಲೇ ಮೂರು ವಿಕೆಟ್ ಪಡೆದು ದಕ್ಷಿಣ ಆಫ್ರಿಕಾ ಕುಸಿತಕ್ಕೆ ಮುನ್ನುಡಿ ಬರೆದರು. ಮತ್ತೊಬ್ಬ ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಮತ್ತು ಚಾರ್ಲಿ ಡೀನ್ ತಲಾ 2 ವಿಕೆಟ್ ಪಡೆಯುವುದರೊಂದಿಗೆ ಇಂಗ್ಲೆಂಡ್



ವಿಕೆಟ್ ಪಡೆದ ನಂತರ ಇಂಗ್ಲೆಂಡ್ ಸ್ಪಿನ್ನರ್ ಲಿನ್ಸೆ ಸ್ಮಿತ್ ಅವರು ಸಹ ಆಟಗಾರ್ತಿಯರೊಡನೆ ಸಂಭ್ರಮಿಸಿದರು ಪಿಟಿಐ ಚಿತ್ರ

ಬರೇ 69 ರನ್ನಿಗೆ ಕುಸಿಯಿತು. ನಾಯಕಿ–ವೇಗಿ ನ್ಯಾಟ್ ಶಿವರ್ ಬ್ರಂಟ್ 2 ವಿಕೆಟ್ ಗಳಿಸಿದರು. ದಕ್ಷಿಣ ಆಫ್ರಿಕಾ ಕಡೆ ಸಿನೆಲೊ ಜಾಫ್ತ (22) ಬಿಟ್ಟರೆ ಉಳಿದರಾರೂ ಎರಡಂಕಿ ಮೊತ್ತ ಗಳಿಸಲಿಲ್ಲ.

ಇಂಗ್ಲೆಂಡ್ ಕೇವಲ 14.1 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 73 ರನ್ ಹೊಡೆಯಿತು. ವಿಕೆಟ್ ಕೀಪರ್– ಬ್ಯಾಟರ್ ಆ್ಯಮಿ ಜೋನ್ಸ್ 40 ರನ್(50ಎ, 4x6) ಗಳಿಸಿದರೆ, ಟಾಮಿ ಬ್ಯೂಮಾಂಟ್ 21 ರನ್ (35ಎ, 4x3) ಬಾರಿಸಿ ತಂಡ ಆರಾಮವಾಗಿ ಗುರಿತಲುಪಲು ನೆರವಾದರು.

ದಕ್ಷಿಣ ಆಫ್ರಿಕಾದ ಅನುಭವಿ ವೇಗದ ಬೌಲರ್ ಮರೈಝಾನ್ ಕಾಪ್ ಕೆಲವು ಉತ್ತಮ ಎಸೆತಗಳನ್ನು ಪ್ರಯೋಗಿಸಿದರೂ, ಅವುಗಳನ್ನು ಬ್ಯೂಮಾಂಟ್ ನಿಭಾಯಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20.4 ಓವರುಗಳಲ್ಲಿ 69 (ಸಿನೆಲೊ ಜಾಫ್ತ 22; ಲಿನ್ಸೆ ಸ್ಮಿತ್ 7ಕ್ಕೆ3, ನ್ಯಾಟ್ ಶಿವರ್ ಬ್ರಂಟ್ 5ಕ್ಕೆ2, ಸೋಫಿ ಎಕ್ಲೆಸ್ಟೋನ್ 19ಕ್ಕೆ2, ಚಾರ್ಲಿ ಡೀನ್ 14ಕ್ಕೆ2); ಇಂಗ್ಲೆಂಡ್: 14.1 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 73 (ಟಾಮಿ ಬ್ಯೂಮಾಂಟ್ ಔಟಾಗದೇ 21, ಆ್ಯಮಿ ಜೋನ್ಸ್ ಔಟಾಗದೇ 40).
ಪಂದ್ಯದ ಆಟಗಾರ್ತಿ: ಲಿನ್ಸೆ ಸ್ಮಿತ್

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

69 ಇದು ಐಸಿಸಿ ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾದ ಎರಡನೇ ಅತಿ ಕಡಿಮೆ ಮೊತ್ತ. 2019ರಲ್ಲಿ ಪಾಕಿಸ್ತಾನ ವಿರುದ್ಧ ಪೊಟ್ಚೆಫ್‌ಸ್ಟ್ರೂಮ್‌ನಲ್ಲಿ 63 ರನ್ನಿಗೆ ಉರುಳಿದ್ದು ಆ ತಂಡದ ಅತಿ ಕನಿಷ್ಠ ಮೊತ್ತವಾಗಿತ್ತು.

ಲಂಕಾಕ್ಕೆ ಇಂದು ಆಸ್ಟ್ರೇಲಿಯಾ ಸವಾಲು

ಕೊಲಂಬೊ (ಪಿಟಿಐ): ಶ್ರೀಲಂಕಾ ತಂಡ, ಐಸಿಸಿ ವಿಶ್ವಕಪ್ ಪಂದ್ಯದಲ್ಲಿ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಶನಿವಾರ ಎದುರಿಸಲಿದ್ದು, ತವರಿನಲ್ಲಿ ಆಡುವ ಅನುಕೂಲ ಪಡೆಯುವ ವಿಶ್ವಾಸದಲ್ಲಿದೆ. ತಂಡ ಬ್ಯಾಟಿಂಗ್ ಮತ್ತು ಫೀಲ್ಡಿಂಗ್‌ನ ಲೋಪಗಳನ್ನು ಸರಿಪಡಿಸಿಕೊಳ್ಳುವ ಭರವಸೆಯಲ್ಲೂ ಇದೆ.

ಭಾರತ ಎದುರು ಮೊದಲ ಪಂದ್ಯದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದರೂ, ಕ್ಷೇತ್ರರಕ್ಷಣೆ ಕಳಪೆಯಾಗಿತ್ತು. ನಂತರ ಉತ್ತಮ ಆರಂಭ ಪಡೆದರೂ, ನಂತರ ಕುಸಿದು 211 ರನ್ನಿಗೆ ಆಲೌಟಾಗಿತ್ತು.

ಈಗ ಚಾಮರಿ ಅಟಪಟ್ಟು ಸಾರಥ್ಯದ ತಂಡಕ್ಕೆ, ಆಸ್ಟ್ರೇಲಿಯಾ ಎದುರಿನ ಪಂದ್ಯ ಸತ್ವಪರೀಕ್ಷೆಯದ್ದಾಗಲಿದೆ. ಕಾಂಗರೂ ಪಡೆ, ಸಾಂಪ್ರದಾಯಿಕ ಎದುರಾಳಿ ನ್ಯೂಜಿಲೆಂಡ್ ತಂಡವನ್ನು ಬಗ್ಗುಬಡಿದು ಉತ್ತಮ ಆರಂಭ ಪಡೆದಿದೆ.

ಆಸ್ಟ್ರೇಲಿಯಾ 128ಕ್ಕೆ5 ರನ್ ಗಳಿಸಿ ಪರದಾಡುತ್ತಿದ್ದರೂ, ಆಶ್ಲೆ ಗಾರ್ಡನರ್ ಅವರು ಪ್ರತ್ಯಾಕ್ರಮಣ ನಡೆಸಿ ಹೊಡೆದ 115 ರನ್‌ಗಳ ನೆರವಿನಿಂದ 326 ರನ್ ಗಳಿಸಿತ್ತು. ಬೆತ್ ಮೂನಿ, ಫೋಬಿ ಲಿಚ್‌ಫೀಲ್ಡ್, ನಾಯಕಿ ಅಲಿಸಾ ಹೀಲಿ ಎಲ್ಲರೂ ಸಮರ್ಥ ಆಟಗಾರ್ತಿಯರು. ಬೌಲಿಂಗ್ ವಿಭಾಗವೂ ಅಷ್ಟೇ ಬಲಿಷ್ಠವಾಗಿದೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್: ಕಂಚು ಗೆದ್ದ ಪ್ರೀತಿ ಪಾಲ್

ನಿಶಾದ್ ಕುಮಾರ್, ಸಿಮ್ರನ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ನಿಶಾದ್ ಕುಮಾರ್ ಅವರು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಹೈಜಂಪ್ ಟಿ47 ಸ್ಪರ್ಧೆಯಲ್ಲಿ ಶುಕ್ರವಾರ ನೂತನ ಏಷ್ಯನ್ ದಾಖಲೆಯೊಡನೆ ಚಿನ್ನ ಗೆದ್ದರು. ಈ ಕೂಟದ ಏಳನೇ ದಿನ ಸಿಮ್ರನ್ ಶರ್ಮಾ ಅವರು ವೈಯಕ್ತಿಕ ಶ್ರೇಷ್ಠ ಅವಧಿಯೊಡನೆ ಮಹಿಳೆಯರ 100 ಮೀ. (ಟಿ12) ಸ್ಪರ್ಧೆಯಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು.



ನಿಶಾದ್

ಈ ಹಿಂದೆ ಹಲವು ಅಂತರ ರಾಷ್ಟ್ರೀಯ ಕೂಟಗಳಲ್ಲಿ ಎರಡನೇ ಸ್ಥಾನ ಗಳಿಸಿದ್ದ ನಿಶಾದ್ 2.14 ಮೀ. ಜಿಗಿಯುವ ಮೂಲಕ ಮೊದಲ ಬಾರಿ ವಿಶ್ವ ಕೂಟದಲ್ಲಿ ಚಿನ್ನ ಗೆದ್ದರು. ಅವರು ಟೋಕಿಯೊ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಮತ್ತು ಎರಡು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಬೆಳ್ಳಿ ಗೆದ್ದಿದ್ದರು. ಮೂರು ಬಾರಿಯ ವಿಶ್ವ ಚಾಂಪಿಯನ್ ಅಮೆರಿಕದ ರೊಡೆರಿಕ್ ಟೌನ್ಸೆಂಡ್ (2.03 ಮೀ.) ಎರಡನೇ ಸ್ಥಾನಕ್ಕೆ ಸರಿದರು.

ಇಲ್ಲಿ ಚಿನ್ನ ಖಚಿತವಾದ ನಂತರ ನಿಶಾದ್ ಅವರು ವಿಶ್ವ ದಾಖಲೆಗೆ ಯತ್ನಿಸಿದರೂ 2.18 ಮೀ. ಜಿಗಿಯಲು ಹೋಗಿ ವಿಫಲರಾದರು. ಮುಂಗೈ ಕಳೆದುಕೊಂಡ ಸ್ಪರ್ಧಿಗಳು ಈ ವಿಭಾಗದಲ್ಲಿ ಸ್ಪರ್ಧಿಸುತ್ತಾರೆ.

ಸಿಮ್ರನ್ 100 ಮೀ. ಓಟವನ್ನು 11.95 ಸೆ.ಗಳಲ್ಲಿ ಕ್ರಮಿಸಿದರು. ಈ ವಿಭಾಗದ ಅಥ್ಲೀಟುಗಳು ಭಾಗಶಃ ದೃಷ್ಟಿದೋಷ ಹೊಂದಿರುತ್ತಾರೆ.

ಭಾರತದ ಪ್ರೀತಿ ಪಾಲ್ 30.903 ಸೆ.ಗಳೊಂದಿಗೆ 200 ಮೀ. ಓಟದಲ್ಲಿ (ಟಿ35) ಕಂಚಿನ ಪದಕ ಗೆದ್ದುಕೊಂಡರು.

ಕೆನ್ಯಾ ಕೋಚ್‌ಗೆ ಕಚ್ಚಿದ ಬೀದಿನಾಯಿ

ಕೂಟಕ್ಕೆ ಬಂದಿದ್ದ ಕೆನ್ಯಾದ ಕೋಚ್ ಒಬ್ಬರಿಗೆ ಬೀದಿ ನಾಯಿ ಕಚ್ಚಿದ್ದು, ಶುಕ್ರವಾರ ಚರ್ಚೆಯ ವಿಷಯವಾಯಿತು. ಕೋಚ್ ಡೆನಿಸ್ ಅವರಿಗೆ ಕ್ರೀಡಾಂಗಣ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು.

ಅವರು ಬೆಳಿಗ್ಗೆ ಸುಮಾರು 10 ಗಂಟೆಯ ವೇಳೆಗೆ ಜವಾಹರಲಾಲ್ ಕ್ರೀಡಾಂಗಣದ ಆಚೆ ಕಾಲ್‌ರೂಮ್ ಬಳಿ ತಂಡದ ಅಥ್ಲೀಟ್ ಒಬ್ಬರ ಜೊತೆ ಮಾತನಾಡುತ್ತಿದ್ದಾಗ, ಇದ್ದಕ್ಕಿದ್ದಂತೆ ಬೀದಿನಾಯಿಯೊಂದು ಬಂದು ಕಚ್ಚಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜಿಸಿಟಿ: ಡ್ರಾ ಪಂದ್ಯದಲ್ಲಿ ಪ್ರಜ್ಞಾನಂದ–ಅರೋನಿಯನ್

ಸಾವೊಪೌಲೊ (ಪಿಟಿಐ): ಗ್ರ್ಯಾಂಡ್ ಚೆಸ್ ಟೂರ್ (ಜಿಸಿಟಿ) ಫೈನಲ್‌ನ ಮೂರನೇ ಸ್ಥಾನಕ್ಕೆ ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್. ಮತ್ತು ಅಮೆರಿಕದ ಲೆವೊನ್ ಅರೋನಿಯನ್ ನಡುವೆ ನಡೆಯುತ್ತಿರುವ ಪಂದ್ಯದ ಎರಡನೇ ಕ್ಲಾಸಿಕಲ್ ಆಟವೂ ಶುಕ್ರವಾರ ಡ್ರಾ ಆಯಿತು.



ಪ್ರಜ್ಞಾನಂದ

ಹೀಗಾಗಿ ವೇಗದ ಆಟಗಳ ಸುತ್ತುಗಳ ಮೂಲಕ ವಿಜೇತರ ನಿರ್ಧಾರ ಆಗಲಿದೆ. ಇಲ್ಲಿನ ವರ್ಲ್ಡ್ ಟ್ರೇಡ್ ಸೆಂಟರ್‌ನಲ್ಲಿ ಈ ಫೈನಲ್ ನಡೆಯುತ್ತಿದೆ.

ಇದೇ ವೇಳೆ ಚಾಂಪಿಯನ್ ಪಟ್ಟದ ನಿರ್ಧಾರಕ್ಕೆ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನ ನಡುವಣ ಪಂದ್ಯದ ಎರಡನೇ ಕ್ಲಾಸಿಕಲ್ ಆಟವೂ ಡ್ರಾ ಆಯಿತು. ಹೀಗಾಗಿ ಈ ಪಂದ್ಯದ ವಿಜೇತರನ್ನೂ ವೇಗದ ಆಟಗಳ ಸುತ್ತುಗಳ ಮೂಲಕ ನಿರ್ಧರಿಸಲಾಗುವುದು.

ರಾಜ್ಯ ಅಮೆಚೂರ್ ಚೆಸ್: ಮುನ್ನಡೆಯಲ್ಲಿ ನಾಲ್ವರು

ಬೆಂಗಳೂರು: ನಾಲ್ವರು ಆಟಗಾರರು, ಗೋಲ್ಡನ್ ಆರಾ ಕರ್ನಾಟಕ ರಾಜ್ಯ ಅಮೆಚೂರ್ ಚೆಸ್ ಚಾಂಪಿಯನ್‌ಷಿಪ್‌ನ ಐದನೇ ಸುತ್ತಿನ ನಂತರ ಸಂಭವನೀಯ ಐದು ಅಂಕಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಕೋಣನಕುಂಟೆಯ ಪ್ರೆಸ್ಟೀಜ್ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ನಾಲ್ಕು ದಿನಗಳ ಈ ಟೂರ್ನಿ ಗುರುವಾರ ಆರಂಭವಾಗಿತ್ತು. 450ಕ್ಕೂ ಹೆಚ್ಚು ಆಟಗಾರರು ಕಣದಲ್ಲಿದ್ದಾರೆ.

ಎರಡನೇ ದಿನದಾಟದ ನಂತರ, ಬೆಂಗಳೂರು ನಗರದ ಎ.ಯುವನೇಶ್, ವೆಂಕಟನಾಗ ಕಾರ್ತಿಕ್ ಮಲ್ಲಾದಿ, ಶಶಾಂಕ್ ಸಾವಂತ್ ಮತ್ತು ಬೆಂಗಳೂರು ಗ್ರಾಮಾಂತರದ ಎ.ಇಶಾನ್ ಅಗ್ರಸ್ಥಾನ ಹಂಚಿಕೊಂಡರು. ಮೊದಲ ಐದು ಶ್ರೇಯಾಂಕದ ಆಟಗಾರರು ಇವರಲ್ಲಿ ಸ್ಥಾನ ಪಡೆದಿಲ್ಲದಿರುವುದು ವಿಶೇಷ.

ಅಗ್ರಶ್ರೇಯಾಂಕದ ನಿರಂಜನ್ ಜೆ.ವಾರಿಯರ್, ಎರಡನೇ ಶ್ರೇಯಾಂಕದ ಅಯಾನ್ ಪುಟಾನೆ ಸೇರಿದಂತೆ 15 ಮಂದಿ ಆಟಗಾರರು ತಲಾ 4.5 ಅಂಕ ಸಂಗ್ರಹಿಸಿದ್ದಾರೆ. ರಾಜ್ಯ ಚೆಸ್ ಸಂಸ್ಥೆಯು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಬೆಂಬಲದೊಡನೆ ಈ ಚಾಂಪಿಯನ್‌ಷಿಪ್ ಹಮ್ಮಿಕೊಂಡಿದೆ.

ಕ್ರೀಡಾಂಗಣದಲ್ಲಿ ಹಾವು ಕಂಡು ಹೆದರಿದ ಮಹಿಳಾ ಕ್ರಿಕೆಟಿಗರು

ಕೊಲಂಬೊ (ಪಿಟಿಐ): ಭಾರತ ಮಹಿಳಾ ತಂಡದ ಆಟಗಾರ್ತಿಯರು ಶುಕ್ರವಾರ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಅಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಹಾವು ಕಾಣಿಸಿಕೊಂಡಿತು.

ಸಂಜೆ ಸೆಂಟರ್ ಪಿಚ್‌ನಲ್ಲಿ ಅಭ್ಯಾಸ ನಡೆಸಿದ ಆಟಗಾರ್ತಿಯರು ನೆಟ್ಸ್‌ನತ್ತ ತೆರಳುವಾಗ ಬೂದು–ಕಂದು ಮಿಶ್ರಿತ ಬಣ್ಣದ ಹಾವು ಮೈದಾನದ ಸ್ಟ್ಯಾಂಡ್ಸ್ ಸಮೀಪದ ಕಾಲುವೆಯ ಬಳಿ ಹರಿದಾಡುತ್ತಿತ್ತು. ಅದನ್ನು ನೋಡಿದ ಆಟಗಾರ್ತಿಯರು ಮತ್ತು ನೆರವು ಸಿಬ್ಬಂದಿ ಕೆಲಹೊತ್ತು ಭಯಭೀತರಾದರು. ಆಗ ಮೈದಾನದ ಸಿಬ್ಬಂದಿಯು 'ಅದು ಕೇರೆಹಾವು. ವಿಷಕಾರಿಯಲ್ಲ' ಎಂದು ಆಟಗಾರ್ತಿಯರಲ್ಲಿ ಧೈರ್ಯ ತುಂಬಿದರು.

'ಇಲಿಗಳನ್ನು ತಿನ್ನುವ ಹಾವು ಇದಾಗಿದ್ದು, ವಿಷಕಾರಿಯಲ್ಲ. ಇಲ್ಲಿ ಇಂತಹ ಹಾವುಗಳು ಸರ್ವೇಸಾಮಾನ್ಯ' ಎಂದೂ ಮೈದಾನದ ಸಿಬ್ಬಂದಿ ಹೇಳಿದರು.

ಭಾರತ ತಂಡವು ಭಾನುವಾರ ಇಲ್ಲಿ ನಡೆಯಲಿರುವ ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಈಚೆಗೆ ತನ್ನ ಮೊದಲ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಜಯಿಸಿತ್ತು.

ಸನಾ ಮೀರ್ ಸಮರ್ಥನೆ

ನವದೆಹಲಿ (ಪಿಟಿಐ): 'ನತಾಲಿಯಾ ಪರ್ವೇಜ್ ಅವರು ರಾಷ್ಟ್ರೀಯ ತಂಡದವರೆಗೂ ಬೆಳೆದು ಬರುವಲ್ಲಿ ಎದುರಿಸಿದ ಸವಾಲುಗಳ ಬಗ್ಗೆ ಮಾತನಾಡಿದ್ದೆ. ನನ್ನ ಹೇಳಿಕೆ ಪರ್ವೇಜ್ ಸಾಧನೆಯ ದೃಷ್ಟಿಯಿಂದ ನೀಡಿದ್ದಾಗಿತ್ತು' ಎಂದು ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ಆಟಗಾರ್ತಿ ಮತ್ತು ವೀಕ್ಷಕ ವಿವರಣೆಗಾರ್ತಿ ಸನಾ ಮೀರ್ ಅವರು ಸಮರ್ಥಿಸಿಕೊಂಡಿದ್ದಾರೆ.



ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಗುರುವಾರ ನಡೆದ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ನಡುವಣ ಪಂದ್ಯದ ವೇಳೆ ಸನಾ ಟಿ.ವಿ.ಯಲ್ಲಿ ವೀಕ್ಷಕ ವಿವರಣೆ ನೀಡುತ್ತಿದ್ದರು. ಆ ವೇಳೆ ಅವರು, 'ಪರ್ವೇಜ್ ಅವರು 'ಆಜಾದ್ ಕಾಶ್ಮೀರ' ಪ್ರದೇಶದಿಂದ ಬಂದವರು' ಎಂದು ಹೇಳಿದ್ದರು. ಇದು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಅದರಲ್ಲೂ ಭಾರತೀಯ ಕ್ರಿಕೆಟ್ ಅಭಿಮಾನಿಗಳು ಸನಾ ವಿರುದ್ಧ ಟೀಕೆ ಮಾಡಿದ್ದಾರೆ. 'ಅದು ಸ್ವತಂತ್ರ ಕಾಶ್ಮೀರ ಅಲ್ಲ. ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಎಂಬುದೇ ಸರಿಯಾದ ಪ್ರಯೋಗ. ಲೈವ್ ಟಿ.ವಿ.ಯಲ್ಲಿ ಸನಾ ಅವರು ರಾಜಕೀಯ ಹೇಳಿಕೆಯನ್ನು ನೀಡಿದ್ದಾರೆ' ಎಂದು ಟೀಕಿಸಿದ್ದರು.

ಅಲ್ಲದೇ ಐಸಿಸಿ ಮತ್ತು ಬಿಸಿಸಿಐಗೆ 'ಎಕ್ಸ್' ಸಂದೇಶ ಪೋಸ್ಟ್ ಮಾಡಿರುವ ಅಭಿಮಾನಿಗಳು 'ಕ್ರೀಡಾ ನೇರಪ್ರಸಾರವನ್ನು ರಾಜಕೀಯಗೊಳಿಸಲಾಗಿದೆ' ಎಂದು ಆರೋಪಿಸಿದ್ದಾರೆ.

ಡೆಲ್ಲಿ ಗೆಲುವಿನಲ್ಲಿ ಮಿಂಚಿದ ಆಶು ಮಲಿಕ್

ಚೆನ್ನೈ (ಪಿಟಿಐ): ನಾಯಕ ಆಶು ಮಲಿಕ್ ಗಳಿಸಿದ 14 ಪಾಯಿಂಟ್‌ಗಳ ನೆರವಿನಿಂದ ದಬಾಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶುಕ್ರವಾರ 43–26 ರಿಂದ ಯುಪಿ ಯೋಧಾಸ್ ತಂಡವನ್ನು ಸೋಲಿಸಿತು. 10 ಪಂದ್ಯಗಳಲ್ಲಿ ಒಂಬತ್ತನೇ ಜಯ ಆಚರಿಸುವ ಮೂಲಕ ಡೆಲ್ಲಿ ತಂಡ ಅಗ್ರಸ್ಥಾನವನ್ನು ಕಾಪಾಡಿಕೊಂಡಿತು.

ಅಜಿಂಕ್ಯ ಪವಾರ್ ಮತ್ತು ಫಜಲ್ ಅತ್ರಾಚಲಿ ತಲಾ ನಾಲ್ಕು ಪಾಯಿಂಟ್ಸ್ ಗಳಿಸಿ ಗೆಲುವಿಗೆ ಸಹಕರಿಸಿದರು. ಯೋಧಾಸ್ ಪರ ಕನ್ನಡಿಗ ಗಗನ್ ಗೌಡ 12 ಪಾಯಿಂಟ್ಸ್ ಗಳಿಸಿದರು. ಆದರೆ ಅವರಿಗೆ ಸಹ ಆಟಗಾರರಿಂದ ಬೆಂಬಲ ದೊರೆಯಲಿಲ್ಲ.



ದಬಾಂಗ್ ಡೆಲ್ಲಿ ತಂಡದ ರೇಡರ್‌ನನ್ನು ಹಿಡಿಯಲು ಯುಪಿ ಯೋಧಾಸ್ ಆಟಗಾರರು ವ್ಯೂಹ ರಚಿಸಿದ್ದು ಹೀಗೆ...

ಮಿಂಚಿದ ದೇಶ್ವಾಲ್: ದಿನದ ಎರಡನೇ ಪಂದ್ಯದಲ್ಲಿ ತಮಿಳ್ ತಲೈವಾಸ್ 45–33 ರಿಂದ ಹರಿಯಾಣ ಸ್ಟೀಲರ್ಸ್ ತಂಡದ ಮೇಲೆ ಗೆಲುವು ಪಡೆಯಿತು. ತಲೈವಾಸ್ ನಾಯಕ, ರೇಡರ್ ಅರ್ಜುನ್ ದೇಶ್ವಾಲ್ 21 ಟಚ್ ಪಾಯಿಂಟ್ಸ್ ಸೇರಿ 22 ಪಾಯಿಂಟ್ಸ್ ಕಲೆಹಾಕಿ ಗೆಲುವಿನಲ್ಲಿ ಮಿಂಚಿದರು.

ಪಿವಿಎಲ್: ಬೆಂಗಳೂರು ಟಾರ್ಪಡೋಸ್‌ಗೆ ರೋಚಕ ಜಯ

ಹೈದರಾಬಾದ್ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಬೆಂಗಳೂರು ಟಾರ್ಪಡೋಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್ (ಪಿವಿಎಲ್) ಪಂದ್ಯದಲ್ಲಿ 15–9, 11-15, 13-15, 17-15, 15-9ರಿಂದ ಗೋವಾ ಗಾರ್ಡಿಯನ್ಸ್ ತಂಡದ ಎದುರು ರೋಚಕ ಜಯ ಸಾಧಿಸಿತು.

ನಾಲ್ಕನೇ ಆವೃತ್ತಿಯ ಎರಡನೇ ದಿನವಾದ ಶುಕ್ರವಾರ ಬೆಂಗಳೂರು ತಂಡವು ಮೊದಲ ಸೆಟ್ ಮುನ್ನಡೆ ಸಾಧಿಸಿತ್ತು. ಬಳಿಕ ಸತತ ಎರಡು ಸೆಟ್‌ಗಳಲ್ಲಿ ಹಿನ್ನಡೆ ಅನುಭವಿಸಿತು. ಕೊನೆಯಲ್ಲಿ ಪುಟಿದೆದ್ದು ಗೆಲುವು ತನ್ನದಾಗಿಸಿಕೊಂಡಿತು.

ಬ್ಯಾಡ್ಮಿಂಟನ್ ತಾರೆ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಪಂದ್ಯ ವೀಕ್ಷಿಸಿ, ಬೆಂಗಳೂರು ತಂಡಕ್ಕೆ ಬೆಂಬಲ ಸೂಚಿಸಿದರು.


Festival HOTTEST Deals On BIGGER SCREENS
SONY LG Haier BPL Panasonic Hisense
QLED 100 inch
FESTIVAL PRICE ₹ 2,99,990/-
QLED 75 inch
FESTIVAL PRICE ₹ 79,990/-
QLED 65 inch
FESTIVAL PRICE ₹ 57,990/-
QLED 55 inch
FESTIVAL PRICE ₹ 38,990/-
ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್
gadget for every budget!
MISSED Dasara Shopping?
DON'T WORRY
Dasara SALE IS ON @ ADISHWAR
GET INSTANT CASH BACK UPTO ₹ 25,000/-
ON CREDIT & DEBIT CARD EMI
LG Haier SONY Whirlpool Panasonic IFB FABER Prestige BOSCH Godrej
Preethi BPL SAMSUNG A.O. Smith Butterfly iPhone ONEPLUS vivo mi oppo
SONY BRAVIA 2 | 4K ULTRA HD 75
EMI | ₹4,999/-
UPTO ₹7,500/- INSTANT CASH BACK ON YOUR CREDIT CARD EMI LOW DOWNPAYMENT LOW EMI
LG Life's Good QNED AI TV 75
EMI | ₹3,999/-
UPTO ₹10,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
Haier 4K ULTRA HD 75
EMI | ₹2,994/-
UPTO ₹8,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
SONY BRAVIA 3 | 4K ULTRA HD 65
EMI | ₹4,999/-
UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
Panasonic UHD 4K 55
EMI | ₹3,499/-
UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
LG Life's Good UHD 4K 55
EMI | ₹2,999/-
UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
BUY ANY SMART PHONE & GET
60 DAYS BREAK FREE Buy Back @50%
60 DAYS RISK FREE Buy Back @80%
60 DAYS SAFETY SHIELD
INSTANT CASHBACK Debit & Credit card
0 DOWN PAYMENT Paper Finance*
ASSURED GIFT On Every Phone
PRICE INCLUSIVE OF BANK OFFERS*
BAJAJ FINSERV IDFC FIRST Bank TVS CREDIT HDB FINANCIAL SERVICES
SAMSUNG ONEPLUS mi realme vivo oppo
T&C Apply*
ಚನ್ನಪಟ್ಟಣ
ಶಿರಸಿ
ಕೋಲಾರ
ಬೆಳಗಾವಿ
ಬಳ್ಳಾರಿ
ಚಿತ್ರದುರ್ಗ
ದಾವಣಗೆರೆ
ತಿಪಟೂರು
ತುಮಕೂರು
ಯಾದಗಿರಿ
ಗೋಣಿಕೊಪ್ಪ
ಕೊಪ್ಪಳ
ಬೀದರ್
ಕಲಬುರ್ಗಿ
ಕೆ.ಆರ್. ನಗರ
ಚನ್ನರಾಯಪಟ್ಟಣ
ವಿಜಯಪುರ
ಸಿಂಧನೂರ್
ಕುಶಾಲನಗರ
ಮಂಡ್ಯ
ಚಿಕ್ಕಮಗಳೂರು
ಶಹಾಪೂರ
ತೊಕ್ಕೊಟ್ಟು
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

RENTAL PROPERTIES

Accommodation Available

Commercial

BANASHANKARI 6TH_STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call_9945724472

Flats

NEW 2 BHK Rent 33K Telecom Layout, Jakkur, Sriramapura Including Maintenance, Electricity Water, Call: 9880315695

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500



REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA_Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

Bannerghatta Road

SALE: BDA SITE No.90, BTM 1st Stage, North Facing 40x60 Feet, Opp to: Subramanya Arcade 60Feet Road, Adjacent to JALA BHAVAN, Approx.,100 Mtr to Bannerghatta Main Road. Genuine Buyers Call: Muralidhar- 9741929567

4,800_&_2,400_SQFT RESIDENTIAL Plot Facing East and West for Sale in Arekere Shanthinikethan Layout. Call Owner 7483853190

Kempegowda Layout

SITE FOR-SALE KEMPEGOWDA LAYOUT 7th Block'L' Sectorattached,DC Convertion(BDA NOC) 30x40, 6300/-slightly negotiable. Contact:6364931135

DIRECT OWNER Near Metro Station, Kempegowda Layout, Vishweshwaraiah Layout, 30x40, 40x60, 50x80 Commercial: 9620696913/ 9880781399

Seshadripuram

SITE SALE, 40'x50' West Facing, Jawahar Street, Platform Road, Seshadripuram, Behind Swati Hotel & Apollo Hospital: 9343368313/ 9844009086

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

BDA 30X40 Site Sale Vishveshwaraiah Layout BDA Complex Near East Face 11500/- Negotiable Balaji: 8310003509

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Jayanagar

SALE 40X60 West Excellent Residential Property Jayanagar 4th T Block, Buyers Please Call: Ramesh 9844104958

Flat

Jigani

LIMITED 1 BHK flats sale. Operational senior living project. Jigani, Bangalore. All amenities. 45L (negotiable). 9742258578/ 7892256362

Sarjapur

THE PRESTIGE CITY, Sarjapur. Premium 1, 2, 3 & 4 BHK Apartments now available for Resale. Well planned community, Top class amenities. Call Resale Team: 9240275500.

House

Kengeri

RESIDENCIAL BUILDING SALE 30x50`BBMP E-katha 1 Lakh Rental`Income 2BHK:5units, 3BHK:1Unit Near Hoysala circle Kengeri Upanagar. Brokers`Excuse. Call 9738016535

Commerical

J P Nagar

COMMERCIAL BDA Site Sale JP.Nagar 8th Phase 2nd Block,40x60, North`Facing, 80ft Road`Near Lifestyle Apts.16500/- 9845600007

Kumarapark

COMMERCIAL SPACE- For SALE. Embassy Center, No. 213, 2nd Floor, Kumara Park East, Bengaluru- 560001. Area: 515 Sqft, Prime Location, Ideal for Office. Contact: 6366514777| 9448684033.

Koramangala

SALE: KORAMANGALA 5th Block COMMERCIAL 13,450 Sft. Rental Income 7Lacs. Sale: 15 Crores, Call: 98450-23695/ 98451-63280/ 98450-23696

Farm House/ Land/ Resorts

Dobaspet

MANAGED FARM Land- For SALE. Whispering Hills, Dabaspete. Plot No. 17. Total Area: 6,578 Sqft. Peaceful Environment. Perfect for Weekend Home. Contact: 6366514777| 9448684033.

Out-Station

KOTAGIRI, NILGIRIS, Tamil Nadu: 60 Acres Patta Land with Teak Wood for Sale Contact: 9848392893, 9052200009

Industrial & Factory

General

INDUSTRIAL SHED 30k sft, with 44k land, Gauribidnur KIADB, near Jockey. 200HP pwr wter prime loc-9590652999

Residential/ Commercial

Nagasandra

FOR SALE- Area- 13068.sft Residential Land for sale in Nagasandra Main Road towards Nelakadaranahalli. Call: 9071153337

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Security & Detectives

REQUIRED EX-MAN/ Experience Manager Marketing Manager Fd-Exe, Tally Clerk, Driver, R.T.Nagar Bangalore Ph:080-23437474 23437797 Mob:8892073262

PERSONAL

Change of Name

CHANGE OF NAME
I, **MARY REGINA SUKUMAR,** residing at No.882,Jalvayu Towers, NGEF Layout, Indiranagar Post, Bangalore - 560038 have changed my name to **REGINA SUKUMAR** vide affidavit dated 29-09-2025 before notary Y.B. Chandrasekar, Bangalore. Henceforth I shall be called as **REGINA SUKUMAR** only.

CHANGE OF NAME
I Suni Nambiar W/o. Santhosh Kumar Vadakayil R/o B-002, Keerthi Harmony Apts, Raghavendra Nagar, Horamavu Rd, Ramamurthy Nagar, Bangalore -16 Declare that my name in Passport (No.N3788235) is mentioned as Suni Chenichery Nambiar. both Names Pertain to Me, Vide Affidavit Dt: 29-9-25 Sworn Before Notary Ms. B Chitra, Bangalore.

I, AMIRITLAL SANDEEP KUMAR R/a#2328 3rd`Main Road, Hampinagar Vijayanagar, Bangalore North,Bangalore 560040 have`changed my`Name to SANDEEP KUMAR vide`affidavit dated:3.10.2025 before`Notary Mamatha.N.K. Bangalore.

PUBLIC NOTICE

PUBLIC NOTICE

This is to inform the general public that the property detailed here under is owned and possessed by the my clients **(1) Smt.Saraswathi Sastry** W/o Sri M.L.Nagabhushana Sastry and (2) **Sri M.L. Nagabhushana Sastry** S/o Late. Lakshmi Narasimha Sastry in common, having equal rights over the same. Except my above two clients, none other is entitled to claim or lay their hands over the schedule property. My clients hereby further inform that persons who are totally unconcerned with and have no semblance of interest are trying to meddle with the same by fraudulent and clandestine means to hamper unjustly and illegally the common proprietary rights of them. Hence the general public are hereby requested not to enter into any transactions etc., regarding the schedule mentioned property from others and if indulged-in, the same will be purely at their risk and those actions if any are going to be VOID against my clients and do not bind them regarding their ownership rights over the schedule property. The general public are further informed that such miscreants in this regard will be totally held responsible for all the civil and criminal actions etc., available to my clients under law including the costs, damages etc., Please avoid the precipitation of matters at the locality.

The General Public are also informed that if anybody deals with my clients' son Mr.M.N. Chandrashekhar, aged about 51/years (PAN:ADYPC5086F) in respect of the Schedule Property, the transaction is NULL and VOID and it will be on their sole and voluntary risk and responsibility our clients are not bound by such VOID TRANSACTION in this regard.

SCHEDULE

All the plece and parcel of Property House constructed on BDA bearing Site No.309, BBMP No.309, situated at 3rd Cross, 3rd Phase, 2nd Block, 3rd Stage, Banashankari, Bangalore-560085, presently comes under BBMP Limits, Ward No.54, PID No.54-29-309.

BOUNDED on: East by: Site No.308, **West by:** Site No.310, **North by:** Road, **South by:** Site No.282, together with the Building consists of Ground, First and Second Floor portions of RCC roofing and having all civic amenities.

B.M. CHANDRASHEKAR
Advocate & Notary Public
#5, B.D.A. Complex,
Koramangala,
BANGALORE-560 034.
Mob.: 9448104253

ಎಂ/ಎಸ್. ವನ್ಯಾ ಸ್ಟೀಲ್ಸ್ ಪ್ರೈವೇಟ್ ಲಿಮಿಟೆಡ್
ಸ್ಥಳ: ಹಿರೇಬಗನಾಳ ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ

ಸಾರ್ವಜನಿಕ ಸೂಚನೆ

ಪರಿಸರ ಅನುಮೋದನೆ ಮಂಜೂರು ಹಿಂದಿನ ಪರಿಸರ ಅನುಮೋದನೆಗಳನ್ನು ಒಂದಾಗಿಸಿ, ವಿಸ್ತರಣೆ ಮತ್ತು ಈಗಿರುವ ಸ್ಪಾಂಜ್ ಐರನ್ ಘಟಕವನ್ನು 'ಇಂಟಿಗ್ರೇಟೆಡ್ ಸ್ಟೀಲ್ ಪ್ಲಾಂಟ್' ಆಗಿ ಪರಿವರ್ತಿಸಲು ಪರಿಸರ ಅನುಮೋದನೆ ನೀಡಲಾಗಿದೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರಿಂದ ದಿನಾಂಕ 26-09-2025 ರಂದು ಪತ್ರ ಸಂಖ್ಯೆ IA-J -11011/453/2023-IA-II(IND-I)ಮೂಲಕ, ಎಂ/ಎಸ್. ವನ್ಯಾ ಸ್ಟೀಲ್ಸ್ ಪ್ರೈವೇಟ್ ಲಿಮಿಟೆಡ್ (ಹಿರೇಬಗನಾಳ ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ) ಇವರಿಗೆ ಪರಿಸರ ಅನುಮೋದನೆ ಮಂಜೂರಾಗಿದೆ.

ಈ ಅನುಮೋದನೆಗೆ ಒಳಪಟ್ಟಂತೆ: ಯೋಜನಾ ಪ್ರದೇಶದ ವಿಸ್ತರಣೆ, ಸ್ಪಾಂಜ್ ಐರನ್ ಘಟಕದ ಉತ್ಪಾದನಾ ಸಾಮರ್ಥ್ಯದ ಹೆಚ್ಚಳ, ಖನಿಜ ಶುದ್ಧೀಕರಣ ಘಟಕ, ಪೆಲ್ಲೆಟೈಸೇಶನ್ ಘಟಕ , ಇಂಡಕ್ಷನ್ ಫರ್ನೇಸ್, ಸಬ್ಮರ್ಜ್ಡ್ ಆರ್ಕ್ ಫರ್ನೇಸ್,ಬಿಲೆಟ್ ಕ್ಯಾಸ್ಟರ್, ರೋಲಿಂಗ್ ಮಿಲ್ ಪೈಪ್ ಮಿಲ್, ಗ್ಯಾಲ್ವನೈಸಿಂಗ್ ಘಟಕ , ಆಕ್ಸಿಜನ್ ಘಟಕ, ಸಿಮೆಂಟ್ ಗ್ರೈಂಡಿಂಗ್ ಯುನಿಟ್, ಕ್ಯಾಪ್ಟಿವ್ ಪವರ್ ಪ್ಲಾಂಟ್ ,ಇವುಗಳನ್ನು ಸೇರಿಸಲು ಹಾಗೂ ವಿಸ್ತರಿಸಲು ಅನುಮೋದನೆ ನೀಡಲಾಗಿದೆ.

ಪರಿಸರ ಅನುಮೋದನೆಯ ಪ್ರತಿಯನ್ನು **ವನ್ಯಾ ಸ್ಟೀಲ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ವೆಬ್ಸೈಟ್ನಲ್ಲಿ ಹಾಗೂ ಪಾರಿವೇಶ ಪೋರ್ಟಲ್ ಮೂಲಕವೂ ನೋಡಬಹುದು:**

www.vanyasteels.com
https://parivesh.nic.in

DS-MAX PROPERTIES

EXPERIENCE THE JOY OF LIVING

www.dsmaxproperties.com

DS MAX®

PRM/KA/RERA/1251/308/PR/160824/006973

DS-MAX SKYSANMAN

ಡಿಎಸ್-ಮ್ಯಾಕ್ಸ್ ಸ್ಕೈಸನ್ಮಾನ್

BANNERGHATTA RD

NEAR KOPPA GATE

Super Luxurious

2 & 3-BHK APARTMENTS | BDA APPROVED
G+14 FLOORS

2-BHK STARTS @ ₹ 56.64 L*

3-BHK STARTS @ ₹ 73.06 L*



2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622 **WHITEFIELD** ON SOUKYA ROAD ₹ 60.84 L - 1.30 Cr*	PRM/KA/RERA/1251/310/PR/151223/006489 **BANASHANKARI** OPP. NPS SCHOOL (3 & 4-BHK) ₹ 1.34 - 2.17 Cr*	PRM/KA/RERA/1250/301/PR/251024/007178 **YELAHANKA** 5 MINS. RAJANUKUNTE ₹ 49.36 - 88.53 Lakhs*	PRM/KA/RERA/1251/308/PR/160824/006972 **ELECTRONIC CITY** 10 MINS. HOSA ROAD METRO ₹ 67.92 L - 1.34 Cr*
PRM/KA/RERA/1251/310/PR/150223/005721 **MYSORE ROAD** NEAR CHALLAGHATTA METRO ₹ 59.56 - 87.47 Lakhs*	PRM/KA/RERA/1251/309/PR/060923/006244 **TUMKUR ROAD** 10 MINS. MADAVARA METRO ₹ 61.36 - 91.68 Lakhs*	PRM/KA/RERA/1251/310/PR/210324/006724 **SILKBOARD** NEAR SINGASANDRA METRO ₹ 83.97 L - 1.31 Cr*	PRM/KA/RERA/1251/308/PR/290122/004660 **SARJAPURA** SARJAPUR - ATTIBELE RD ₹ 58.08 - 83.25 Lakhs*
PRM/KA/RERA/1251/308/PR/280222/004739 **CHANDAPURA** 10 MINS. ELECTRONIC CITY ₹ 60.30 - 98.70 Lakhs*	PRM/KA/RERA/1251/472/PR/250225/007524 **AIRPORT ROAD** NAVARATHNA AGRAHARA ₹ 72.02 L - 1.21 Cr*	FOR PROJECT SPECIFIC INFORMATION **8880 758 758** www.dsmaxproperties.com	

FACILITY MANAGEMENT SERVICES



For Apartment & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN



Refer Us To Your Friends & Relatives
And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN



Refer Us To A Landowner For
JV / Outright Purchase In Any Part Of
Bengaluru And Get A 2-BHK
ABSOLUTELY FREE*

Residential Land | Commercial Land

*T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU


ಕಗ್ಗಲೀಪುರ
ಆಕರ್ಷಕ ಬೆಲೆಗಳಲ್ಲಿ
ವಸತಿ ನಿವೇಶನಗಳು ಲಭ್ಯ
" ಅನುಮೋದಿತ ಬಡಾವಣೆ "
ಮನೆ ಕಟ್ಟೋದು ಆಗಲೀ, ಇನ್ವೆಸ್ಟ್ ಮಾಡೋದು ಆಗಲೀ,
ಇದು ನಿಮ್ಮ ಫ್ಯೂಚರ್‌ಗಾಗಿ ಸೂಪರ್ ಆಯ್ಕೆ.
ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ
Electricity
Water
Tar Road
Park
Drainage
ನಾಳೆ ಬೆಲೆ
ಏರುವುದು ಖಚಿತ
ಭೂಮಿ ನಿಮ್ಮದಾಗಿಸೊ ಸಮಯ ಇದು!
ಬೆಲೆ ಕೇವಲ
₹10.2 ಲಕ್ಷ ದಿಂದ ಪ್ರಾರಂಭ
ಬಾಕಿ ಹಣವನ್ನು 3 ಕಂತುಗಳಲ್ಲಿ ಪಾವತಿಸಬಹುದು.
ಈ ವಾರಾಂತ್ಯದಲ್ಲಿ ಸೈಟ್‌ಗೆ ಬನ್ನಿ — ನೋಡಿ, ನೀವು ಖಂಡಿತಾ ಇಷ್ಟಪಡ್ತೀರಾ!
89700 56056